
... ವ ಲಯ ... ಥಸ ಪುಷ್ಪ

# ...ಂಗಳೂರ ... ಲ್ತಾನರ ಚರಿತ್ರೆ




www.bearyinfo.com

# ಸಮರ್ಪಣೆ



ನಾನು ಎಂಟನೆ ತರಗತಿಯಲ್ಲಿ ಕಲಿಯುತ್ತಿರುವಾಗಲೇ, ಉರ್ದು ಪತ್ರಿಕೆಗಳಿಂದ ರಾಷ್ಟ್ರೀಯ, ಸಾಮಾಜಿಕ ಹಾಗೂ ಧಾರ್ಮಿಕ ಲೇಖನಗಳನ್ನು ಆಯ್ದು, ತನ್ನ ಹರುಕು ಮುರುಕು ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಹೇಳುತ್ತಾ ನನ್ನಿಂದ ಕನ್ನಡ ಲೇಖನಗಳನ್ನು ಬರೆಯಿಸಿ, ಪತ್ರಿಕೆಗಳಲ್ಲಿ ಪ್ರಕಟಿಸಲು ನನಗೆ ಸಹಾಯ ಮಾಡಿ, ಚಿಕ್ಕ ಪ್ರಾಯದಿಂದಲೇ ನನಗೆ ಸಾಹಿತ್ಯ ಪತ್ರಿಕೋದ್ಯಮ
ಗಳಲ್ಲಿ ಅಭಿರುಚಿಯನ್ನು ಹುಟ್ಟಿಸಿದ ನನ್ನ ಪಿತ್ರುವರ್ಯರಾದ
ದಿವಂಗತ **ಜನಾಬ್ ಎಂ. ಕೆ. ಅಬ್ದುಲ್ಖಾದರ್ ಸಾಹೇಬ**
ಅವರ ಸವಿನೆನಪಿಗೆ ನನ್ನ ಈ ಮೊದಲ ಕೃತಿಯನ್ನು ಸಮರ್ಪಿಸುತ್ತೇನೆ.
ಅಲ್ಲಾಹನು ಅವರಿಗೆ ಉತ್ತಮ ಪರಲೋಕ ಜೀವನವನ್ನು ದಯಪಾಲಿಸಲಿ.

**ಸಂಪಾದಕ.**

www.bearyinfo.com

ಮೈಕಾಲ ಪ್ರಕಾಶನ ಮಾಲೆಯ ಪ್ರಥಮ ಪುಷ್ಪ

# ಮೈಕಾಲ

## ಮಂಗಳೂರ ಮುಸಲ್ಮಾನರ ಚರಿತ್ರೆ

(ಮೊದಲನೆ ಭಾಗ)

ಸಂಪಾದಕರು:

**ಅಬೂರೈಹಾನ್ ಅಹ್ಮದ್ ನೂರಿ,**

ಅದೀಬೆ-ಮಾಹಿರ್, (ಜಾಮಿಯಾ ಉರ್ದು) ಅಲಿಘರ್

ಪ್ರಕಾಶಕರು:

ಮೈಕಾಲ ಪ್ರಕಾಶನ

ಬೋಳಾರ, ಮಂಗಳೂರು-೧

1960

೧೦೦೦ ಪ್ರತಿಗಳು

ಕ್ರಯ: ಒಂದು ರೂಪಾಯಿ ಐವತ್ತು ನಯೆಪೈಸೆ.

www.bearyinfo.com

# ಅನುಕ್ರಮಣಿಕೆ


1. ಮುಖಚಿತ್ರ: ಮಂಗಳೂರು ಜುಮಾಮಸೀದಿಯ ಒಂದು ಮರದ ಕಂಬ. ಇದರ ಕೆತ್ತನೆಯ ಕೆಲಸವು ಟೀಪೂಸುಲ್ತಾನ್ ಶಹೀದರ ಕಾಲದಲ್ಲಿ ನಡೆಯಿತೆಂದು ಊಹಿಸಲಾಗಿದೆ.

ಪುಟ

2. ಸಂದೇಶಗಳು . . . . .
3. ಮುನ್ನುಡಿ . . . . .
4. ಪ್ರಸ್ತಾವನೆ . . . . .
5. ವೈಕಾಲ . . . . . 1
   - ಅರಬಿ-ಭಾರತೀಯ ಸಂಪರ್ಕ
   - ಇಸ್ಲಾಮಿನ ಆಗಮನ
   - ಕೇರಳ ಕರಾವಳಿಗೆ ಹಾಗೂ ತುಳುನಾಡಿಗೆ ಮುಸ್ಲಿಮರ ಆಗಮನ
   - ಚಕ್ರವರ್ತಿ ಚೇರಮಾನ್ ಪೆರುಮಾಳರ ಮತಾಂತರ
6. ನಮ್ಮ ಸಮಾಜದ ಚರಿತ್ರೆ . . . . 13
   - ಸಂಕ್ಷಿಪ್ತ ಹಿನ್ನೆಲೆ
   - ಮಂಗಳೂರಿಗೆ ಇಸ್ಲಾಮಿನ ಆಗಮನ
   - 'ವೈಕಾಲ' ಎಂಬ ಹೆಸರಿನ ಹಿನ್ನೆಲೆ
   - ಪಾಡ್ದೊನಗಳಲ್ಲಿ ಮುಸ್ಲಿಮರ ಸುದ್ದಿ
   - ಇಬ್ನ್ ಬತೂತರ ಕಾಲದಲ್ಲಿ
   - ನಮ್ಮ ವಿಶೇಷ ಭಾಷೆಯ ಉಗಮ
   - ಪೋರ್ಚುಗೀಸರ ಆಗಮನ
   - ನವಾಬ್ ಹೈದರಾಲಿಯ ಕಾಲದಲ್ಲಿ
   - ಸುಲ್ತಾನ್ ಟೀಪೂಶಹೀದರ ಕಾಲದಲ್ಲಿ
   - ಹತ್ತೊಂಬತ್ತನೇ ಶತಮಾನದಲ್ಲಿ
   - ಇಪ್ಪತ್ತನೆಯ ಶತಮಾನದಲ್ಲಿ
   - ವಿದ್ಯಾವಂತರ ನಾಯಕತ್ವದಲ್ಲಿ
   - ಮಾಯವಾದ ನಮ್ಮ ಸಂಘ-ಸಂಸ್ಥೆಗಳು
7. ನಮ್ಮ ಧಾರ್ಮಿಕ ಸಂಸ್ಥೆಗಳು . . . 50
8. ಮಾಯವಾದ ನೋಟಗಳು—ಮೊಹರಂ ಆಚಾರ . . 53
9. ಮರೆಯಲಾಗದ ಘಟನೆಗಳು—ಪ್ರಾರ್ಥನೆ ಮೂಲಕ ಮಳೆ . 58
10. ದಿವಂಗತ ಔಲಾಜಾರ್‌ರವರ ವ್ಯಕ್ತಿಪರಿಚಯ . . 60
11. ನನ್ನ ಕಾಲದ ವೈಕಾಲ-ಸಮಾಜದ ಹಿರಿಯ ಬಂಧುಗಳ ಹೇಳಿಕೆಗಳು . 62
12. ಕಣ್ಮರೆಯಾದ ನಮ್ಮ ಹಿರಿಯ ರತ್ನಗಳು . . . 72
13. 'ಈ ಗತಿಗೆಟ್ಟ ಸಮಾಜದ ಅಭ್ಯುದಯಕ್ಕಾಗಿ ಪ್ರಾರ್ಥಿಸಿರಿ'— . 75
14. ನಮ್ಮ ಸಮಾಜದ ಸುಧಾರಣೆಯ ಕುರಿತು ಕೆಲವು ಅಭಿಪ್ರಾಯಗಳು . 79
15. Bibliography . . . . . 115


www.bearyinfo.com

Arekal
Adi Raja Ahamed Koyama Thangal

"ABDURAHIMAN MAHAL"
CANNANORE,
Dated 18—7—1960.

# MESSAGE.

My Dear Noorie Saheb,

It gives me immense pleasure to learn that you are shortly publishing a historical treatise in Canarese under the title 'Mykala'. From what I have been able to gather regarding the book, it is an unique publication of great historical importance, dealing, as it does, with many important personages and events of the past. Publications pertaining to the ancient history of the West-Coast, especially those dealing with Muslim history are pitifully scarce, and you have by your present publication rendered an invaluable service to Canarese literature. I wish you every success in your laudable endeavour and hope that the local languages of this region will be enriched evermore by your valuable contributions in days to come.




Yours sincerely,

(Sd.) A. Koyama.

www.bearyinfo.com

# ಮಂಗಳೂರಿನ
# ಕೇಂದ್ರ ಜುಮಾ ಮಸ್ಜಿದ್ ಜೀನತ್ ಬಕ್ಷ್

ಇದರ ಮುಂಭಾಗದ ದೃಶ್ಯ




"ಮುಸಲ್ಮಾನರ ಮಸೀದಿಗಳು ಈ ಜಿಲ್ಲೆಯಲ್ಲಿ ಸಾವಿರಾರು ಇವೆ. ಆದರೆ ಇವುಗಳ ಕಟ್ಟೋಣದ ಚಂದವನ್ನು ನೋಡಬೇಕೆಂದು ಆಸೆ ಇರುವವರು ಮಂಗಳೂರು ಸುಲ್ತಾನ್‌ಪಳ್ಳಿಯನ್ನು ನೋಡಬೇಕಾಗಿದೆ. ಈ ಮಸೀದಿಯ ಕಂಬಗಳಲ್ಲಿಯೂ ಬೋಡಿಗೆಗಳಲ್ಲಿಯೂ ಮತ್ತು ಇತರ ಎಲ್ಲಾ ಭಾಗಗಳಲ್ಲಿಯೂ ಮರದಲ್ಲಿ ಕೆತ್ತಿದ ಸೂಕ್ಷ್ಮ ಕೆತ್ತನೆಯ ಕೆಲಸವು ದಕ್ಷಿಣ ಕನ್ನಡ ಜಿಲ್ಲೆಯ ಯಾವುದೊಂದು ಮಸೀದಿಯಲ್ಲಾಗಲೀ, ದೇವಸ್ಥಾನದಲ್ಲಾಗಲೀ ಬಸದಿಗಳಲ್ಲಾಗಲೀ ಇರುವುದಿಲ್ಲ."

—ಗಣಪತಿರಾವ್ ಐಗಳ್,

ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ.

www.bearyinfo.com



ಕಳೆದ ವರ್ಷದ ಮಿಾಲಾದೆನಬಿ ಸಮ್ಮೇಳನದಲ್ಲಿ ಸೇರಿದ್ದ ಜನಸ್ತೋಮವು ಅಲ್ಲೇ ಈದ್ಗಾ ಪ್ರಾರ್ಥನಾಲಯದಲ್ಲಿ **ಮಗ್ರಿಬ್ ನಮಾಜ್** ನಿರ್ವಹಿಸುವ ದೃಶ್ಯ.



ಸದ್ರಿ ಸಭೆಯಲ್ಲಿ ಭಾಗವಹಿಸಲು ಬಂದ ಮುಸ್ಲಿಮ್ ಬಾಂಧವರಲ್ಲನೇಕರು **ಈದ್ಗಾ ಪ್ರಾರ್ಥನಾಲಯ**ದಲ್ಲಿ ಸ್ಥಳ ಸಂಕೋಚವಿದ್ದುದರಿಂದ ಹೊರಗೆ ನಿಂತು ಭಾಷಣಗಳನ್ನು ಕೇಳಬೇಕಾಯಿತು.

www.bearyinfo.com


# ಕುದ್ರೋಳಿಯ ಮಸೀದಿಗಳು



ಎರಡು ಜಮಾತುಗಳ ಮಧ್ಯೆ ಉಂಟಾದ ಅನೈಕ್ಯದ ಕಾರಣದಿಂದ ಅಕ್ಕಪಕ್ಕದಲ್ಲಿ ನಿರ್ಮಿಸಲಾದ ಎರಡು ಹನಫೀ ಜಮಾತಿನ ಈ ಎರಡು ಮಸೀದಿಗಳು **ಜೋಡು ಮಸೀದಿ** ಎಂದು ಕರೆಯಲ್ಪಡುತ್ತವೆ.

**ನಡುಪಳ್ಳಿ ಮಸೀದಿ**

ಇದೂ ಪುರಾತನ ಮಸೀದಿಗಳಲ್ಲೊಂದು. ಒಂಧು ಕ್ರಮಬದ್ಧ ಜಮಾತು ಇದರ ಆಡಳಿತವನ್ನು ವಹಿಸಿಕೊಂಡು ಒಳ್ಳೇಯ ಶ್ರದ್ಧೆಯಿಂದ ಕೆಲಸ ನಿರ್ವಹಿಸುತ್ತಿದೆ.





ಹದಿನಾಲ್ಕನೆ ಶತಮಾನದಲ್ಲಿ ನಿರ್ಮಿಸಲ್ಪಾದುದೆಂದು ಊಹಿಸಬಹುದಾದ **ಮುಹಿಯುದ್ದೀನ್ ಮಸೀದಿ** ಇದರ 'ಹೌಸಿ'ನಲ್ಲಿ 1368 ಎಂದು ತಾರೀಕು ಬರೆಯಲ್ಪಟ್ಟಿದೆ.

www.bearyinfo.com


# ಮಂಗಳೂರ ಮುಸ್ಲಿಮ್ ಸಮಾಜದ ಎರಡು ಕಣ್ಣುಗಳು



1927ರಲ್ಲಿ ಸ್ಥಾಪಿತವಾದ **'ಮದ್ರಸತುಲ್ ಅಜ್ಹರಿಯು' ಅರೆಬಿಕ್ ಶಾಲೆ.** ಇದರ ಪಠನಾಕ್ರಮವು ಶೀಘ್ರದಲ್ಲೇ ಸುಧಾರಣೆ ಹೊಂದುವ ನಿರೀಕ್ಷೆ ಇದೆ. ಇದು ಒಂದು ಓರಿಯಂಟಲ್ ಕಾಲೇಜಾಗಿ ಪರಿವರ್ತನೆಗೊಳ್ಳುವ ಸುದಿನವನ್ನು ನಮ್ಮ ಸಮಾಜವು ಇದಿರು ನೋಡುತ್ತಿದೆ.

1924ರಲ್ಲಿ ಸ್ಥಾಪನೆಗೊಂಡ **'ಮದ್ರಸತುಲ್ ಬದ್ರಿಯಾ'** ಎಂಬ ಮಂಗಳೂರ ಮುಸ್ಲಿಮ್ ಸಮಾಜದ ಏಕಮಾತ್ರ ಹಯರ್ ಎಲಿಮೆಂಟರಿ ಶಾಲೆ ಇದು ಹಯರ್ ಎಲಿಮೆಂಟರಿ ಶಾಲೆಯಾಗಲು 32 ವರ್ಷಗಳು ಬೇಕಾದುವು. ಇದು ಯಾವಾಗ ಹೈಸ್ಕೂಲು' ಆಗುವುದೆಂದು ಮುಸ್ಲಿಮ್ ಸಮಾಜವು ಆತುರದಿಂದ ಕಾಯುತ್ತಿದೆ.





ಮಂಗಳೂರಿನ ಏಕಮಾತ್ರ **ಮುಸ್ಲಿಮ್ ಹಾಸ್ಟೆಲ್** ಎಂದು ಹೇಳಿಸಿಕೊಳ್ಳುವ ಪೋಲೀಸ್ ಲೈನ್ ಮಸೀದಿಯ ವಠಾರದಲ್ಲಿರುವ ಮುಸ್ಲಿಮ್ ವಿದ್ಯಾರ್ಥಿ ಭವನ. ಈ ಕಟ್ಟಡವನ್ನು ದಿವಂಗತ ಸಿ. ಮಹಮೂದ್ ಸಾಹೇಬರು ಕಟ್ಟಿಸಿ 'ಮುಸ್ಲಿಮ್ ಎಜ್ಯುಕೇಶನಲ್ ಎಸೋಸಿಯೇಶನ್' ಸಂಘಕ್ಕೆ 'ವಖ್ಫ್' ಮಾಡಿರುತ್ತಾರೆ.

www.bearyinfo.com



## ಪೋಲೀಸ್ ಲೈನ್ ಮಸೀದಿ

ತನ್ನನ್ನು ಈ ತೆರನಾಗಿ ಶೋಚನೀಯ ಅವಸ್ಥೆಯಲ್ಲಿ ಬಿಟ್ಟುದಕ್ಕಾಗಿ ಮಂಗಳೂರ ಮುಸ್ಲಿಮ್ ಸಮಾಜದ ವಿರುದ್ಧ ಅನು ದಿನವೂ ಅಲ್ಲಾಹನೊಡನೆ ವಿಲಾಪಿಸುವ ಈ ಮಸೀದಿಯ ರೋದನವನ್ನು ಕಿವಿ ಯಿದ್ದವರು ಕೇಳದಿರಲಾರರು.



## ಜಪ್ಪುವಿನ ಜಾಮಿಯ ಮುಹಿಯುದ್ದೀನ್ ಮಸೀದಿ

ಪುರಾತನ ಮಸೀದಿಗಳಲ್ಲಿ ಒಂದಾದ ಇದು ಸದ್ಯದಲ್ಲೇ ಜೀರ್ಣೋದ್ಧಾರ ಗೊಂಡು ಹೊಸ ಕಟ್ಟಡ ಇತ್ಯಾದಿಗಳಿಂದ ಅಲಂಕೃತವಾಗಿದೆ.



## ಬೋಳಾರದ ಜಾಮಿಯ ಮುಹಿಯುದ್ದೀನ್ ಮಸೀದಿ

ಮಂಗಳೂರಿನ ಅತಿ ಪುರಾತನ ಮಸೀದಿ ಗಳಲ್ಲೊಂದಾದ ಈ ಮಸೀದಿಯು ಇಂದೋ ನಾಳೆಯೋ ಬೀಳುವ ಪರಿಸ್ಥಿತಿ ಯಲ್ಲಿದ್ದು, ಇದರ ಕಡೆಗೆ ಯಾರ ಗಮನವೂ ಹರಿದಿರುವುದಿಲ್ಲವೆಂಬುದು ಶೋಚನೀಯ.

www.bearyinfo.com

# ಸಂದೇಶಗಳು

*Haji M. Kunjhammu*
**MERCHANT,**
*BUNDER, MANGALORE.*



*I am glad to learn that Mr. Noori is trying to publish a History of Mangalore Muslims in Kannada. This being the first time that such a book is coming out, I wish him every success in his efforts,*

**M. Kunjhammu**
24—5—60

www.bearyinfo.com

(MESSAGE)

**Syed Mohideen Shah**, M. A. L.T.,
*Principal*
*Govt. College, Madappalli*

BADAGARA,
28—4—1960



Glad to know that Janab Ahmed Noorie has written the book "Maikala" giving a history of the past and present of the Mangalore Muslims. Islam was brought to the West Coast by the early muslims and it was welcomed. The beauty of Islam attracted the local people and the religion spread. The way in which Islam was useful to the people and helped to make their life good has to be known by all and particularly the muslims themselves. This knowledge will guide them through life and inspire them to be successful. I commend the book and wish it be read widely and especially by the Muslims of Mangalore and the region where Kannada is spoken. I congratulate Mr. Noorie and wish him all success.

(Sd) **S. M. Shah**

www.bearyinfo.com

# ಮುನ್ನುಡಿ

ಒಂದು ಕಾಲದಲ್ಲಿ ನಡಿಯುವ ಆಗುಹೋಗುಗಳನ್ನು ಅದರ ಸತ್ಯಾಂಶದ ಪರಿಪೂರ್ಣತೆಯೊಂದಿಗೆ ಲಿಖಿತ ರೂಪದಲ್ಲಿ ಮುಂದಿನ ಪೀಳಿಗೆಗೆ ಸಿಗುವಂತೆ ಮಾಡುವ ಸಾಧನವು ಇತಿಹಾಸವು. ಅದು, ಒಂದು ಕಾಲದಲ್ಲಿರುವ ಒಂದು ರಾಷ್ಟ್ರ ಮತ್ತು ಜನಾಂಗದ ಉಗಮು, ಮೂಲ ಮತ್ತು ಸ್ಥಿತಿಗತಿ, ಸಾಮಾಜಿಕ ಸಂಪ್ರದಾಯದ ನಿಯಮ ಮತ್ತು ಸಂಸ್ಕೃತಿ, ಅಭಿವೃದ್ಧಿ ಮತ್ತು ಪತನಗಳನ್ನು ತಿಳಿಸಬಲ್ಲ ಮಾಧ್ಯಮವೆಂದರ್ಥ. ಆದ ಕಾರಣ ಇತಿಹಾಸವು ಒಂದು ಜನಾಂಗದ ಜೀವಾಳವೇ ಆಗಿರುತ್ತದೆಂದರೂ ತಪ್ಪಾಗದು. ಇಂತಹ ಇತಿಹಾಸವು, ಸತ್ಯಾಂಶ ದೊಡನೆ ಮಿಥ್ಯಾಂಶವು ಕಲೆಬೆರೆತು ಕಲುಷಿತವಾಗದಿರಬೇಕಾದರೆ ಆಯಾ ಜನಾಂಗದ ಇತಿಹಾಸವು ಆಯಾ ಜನಾಂಗದವರಿಂದಲೇ ಬರೆಯಲ್ಪಡಬೇಕಾದುದು ಮುಖ್ಯ. ಅಲ್ಲವಾದರೆ ಅದು ಸತ್ಯಕ್ಕೆ ಬಾಹಿರವಾದ ವಿಷಯಗಳ ಕಥೆಗಳಾಗು ವುದರಲ್ಲಿ ಸಂದೇಹವಿಲ್ಲ.

ಲೋಕದ ಬೇರೆ ಬೇರೆ ಜನಾಂಗದ ಇತಿಹಾಸವನ್ನು ನಾವಿಂದು ವಿಮರ್ಶಾ ತ್ಮಕ ದೃಷ್ಟಿಯಿಂದಲೂ, ನಿಷ್ಪಕ್ಷಪಾತ ಮನಸ್ಸಿನಿಂದಲೂ ತುಲನೆ ಮಾಡುವುದಾದರೆ ಮುಸ್ಲಿಮ್ ಜನಾಂಗದ ಚರಿತ್ರೆಯು ತುಂಬಾ ಆಘಾತಕ್ಕೊಳಗಾಗಿದೆಯೆಂದು ಧಾರಾಳವಾಗಿ ಹೇಳಬಹುದು. ಅರ್ವಾಚೀನ ಚರಿತ್ರೆಗಾರರ ಹಲವು ಸಂಶೋಧ ನಾತ್ಮಕ ಲೇಖನಗಳಲ್ಲಿ ಇವುಗಳಿಗೆ ಬೇಕಾದಷ್ಟು ಪುರಾವೆಗಳು ಸಿಗುತ್ತವೆ. ಆದರೆ ಪ್ರಾಚೀನ ಚರಿತ್ರೆಗಾರರು ಇದಕ್ಕೆ ಹೊಣೆಗಾರರೆಂದು ವಾದಿಸುವುದೂ ತಪ್ಪು. ಏಕೆಂದರೆ ಇವರಿಗೆ ಇತರ ಜನಾಂಗದವರ ಚರಿತ್ರಾರ್ಹವಾದ ವಿಷಯಗಳನ್ನು ಆ ಜನಾಂಗದವರಿಂದಲೇ ಕೇಳಿ ಕ್ರೋಢೀಕರಿಸುವ ನೇರ ಸಂಪರ್ಕದ ಅವಕಾಶವು ಸಿಗದಿದ್ದಲ್ಲಿ ಯೂ, ಕಾಲ, ಪರಿಸ್ಥಿತಿ, ಮತ್ತು ವಾತಾವರಣದ ಒತ್ತಡದಿಂದ ಪ್ರೇರಿತ ರಾದಲ್ಲಿ ಇಂತಹ ಕೊರತೆಗಳು ಅನಿವಾರ್ಯವಾಗಿ ಚರಿತ್ರೆಯಲ್ಲಿ ಬೆರೆತು ಹೋಗು ತ್ತವೆ. ಅದನ್ನು ಪರಿಶೋಧಿಸಿ, ತಿದ್ದುಪಡಿ ಮಾಡಿ ಸತ್ಯಾಂಶವನ್ನು ಲೋಕಕ್ಕೆ ಸಾರುವ ಮಹಾಕಾರ್ಯವು ಆಧುನಿಕ ಸಂಶೋಧನಾತ್ಮಕ ಚರಿತ್ರೆಗಾರರ ಮತ್ತು ವಿದ್ಯಾವಂತ ತರುಣರ ಪ್ರಥಮ ಕರ್ತವ್ಯವೆಂದರಿಯಬೇಕು.

ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ, ಮುಖ್ಯವಾಗಿ ಮಂಗಳೂರ ಮುಸ್ಲಿಮರ ವಿಷಯ. ಈ ಕ್ಷೇತ್ರದಲ್ಲಿ ಯಾವ ವ್ಯವಸಾಯವೂ ತಕ್ಕಷ್ಟು ಈ ವರೆಗೆ ಸಾಗಿಲ್ಲವೆಂಬುದು ಪರಮಾರ್ಥ. ನಮ್ಮ ಜನಾಂಗದಲ್ಲಿ ಸಾಧಾರಣ ಅರ್ಧ ಶತಮಾನದ ಹಿಂದೆ ವಿದ್ಯಾವಂತರು ಅಧಿಕ ಸಂಖ್ಯೆಯಲ್ಲಿ ಇಲ್ಲದಿರುವುದೇ ಇದಕ್ಕೆ

www.bearyinfo.com

ಮುಖ್ಯವಾದ ಕಾರಣ ಎಂದು ಹೇಳಬಹುದು. ಅಲ್ಲಲ್ಲಿ ಒಬ್ಬಿಬ್ಬರು ಇರಬಹುದಾಗಿದ್ದರೂ ಅಂತಹವರು. ಚರಿತ್ರೆಯ ಪ್ರಾಧಾನ್ಯತೆಯನ್ನು ಅರಿಯದೆ ಮೌನವಾಗಿದ್ದಿರಬೇಕು. ಮುಸ್ಲಿಮೇತರರಿಂದ ಬರೆಯಲ್ಪಟ್ಟ ಚರಿತ್ರೆ ಪುಸ್ತಕಗಳೂ ಕೂಡ ಕೇವಲ ಬೆರಳೆಣಿಕೆಯವು. ಇವುಗಳಲ್ಲಿ ಸಂ. 1923ರಲ್ಲಿ ಶ್ರೀ ಗಣಪತಿರಾವ್ ಐಗಳ್‌ರಿಂದ ಬರೆಯಲ್ಪಟ್ಟ "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ" ಎಂಬ ಪುಸ್ತಕದಲ್ಲಿ ಇಸ್ಲಾಮಿನ ಚರಿತ್ರೆಯ ಭಾಗವು ಐರೋಪ್ಯ ಪಾದ್ರಿಗಳ ಅಪಪ್ರಚಾರಕ್ಕೆ, ದುಷ್ಪ್ರೇರಣೆಗೆ ಒಳಗಾಗಿದೆಯೋ ಎಂಬಂತಿದೆ. ಇತ್ತೀಚೆಗಿನವುಗಳಲ್ಲಿ 1948ರಲ್ಲು ಪ್ರಕಟವಾದ ಶ್ರೀ ಕಾರ್ಕಳ ಕೇಶವ ಕೃಷ್ಣ ಕುಡುವರವರಿಂದ ಬರೆಯಲ್ಪಟ್ಟ 'ದಕ್ಷಿಣ ಕನ್ನಡದ ಇತಿಹಾಸ' ಎಂಬ ಪುಸ್ತಕ. ಇದರಲ್ಲಿಯೂ ಮುಸ್ಲಿಮ ಸಮಾಜವನ್ನು ಅದರ ನಾನಾ ಮುಖದೊಂದಿಗೆ ಚಿತ್ರೀಕರಿಸಲ್ಪಡಲಿಲ್ಲ. ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್‌ನವರಿಂದ ಪ್ರಕಾಶಿಸಲ್ಪಟ್ಟ 'ಮಂಗಳೂರು' ಎಂಬ ಹೊತ್ತಗೆಯು ಮುಸ್ಲಿಮ್ ಸಮಾಜದ ಕುರಿತು ಯಥಾರ್ಥತೆಯನ್ನು ಪ್ರತಿಬಿಂಬಿಸಲು ಸಮರ್ಥವಾಗಿಲ್ಲ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ–ಇದರಂತೆಯೇ ದಕ್ಷಿಣ ಕನ್ನಡ ಜಿಲ್ಲೆಯ ವಕೀಲ ಸಂಘದವರ ವತಿಯಿಂದ ಹೊರಬಿದ್ದ 'ಸೊವನೀರ್' ಸಂಚಿಕೆಯಲ್ಲಿ ಕೇವಲ ಹಿಂದುಗಳ ಮತ್ತು ಕ್ರೈಸ್ತರ ಚರಿತ್ರೆಯನ್ನು ಕೊಟ್ಟು ಜಿಲ್ಲೆಯ ೩ ಲಕ್ಷ ಜನಸಂಖ್ಯೆಯಿರುವ ಒಂದು ಸಮಾಜವನ್ನೇ ಕಡೆಗಣಿಸಿರುವುದು ಅತ್ಯಂತ ವಿಷಾದಕರ.

ಈ ಕೊರತೆಗಳನ್ನು ಮನಗಂಡು, ಅವಕ್ಕೊಂದು ಪರಿಹಾರವನ್ನು ನೀಡುವ ಉದ್ದೇಶದಿಂದ ನಮ್ಮ ಉತ್ಸಾಹಿ ಗೆಳೆಯರಾದ ಜನಾಬ್ ಎಮ್. ಕೆ. ಅಹ್ಮದ್‌ನೂರಿಯವರು ಕೈಕೊಂಡ ಸಾಹಸವು ಸ್ತುತ್ಯಾರ್ಹವೂ ಅನುಕರಣೀಯವೂ ಆಗಿರುತ್ತದೆ. ಶ್ರೀಯುತರು ಪಟ್ಟ ಅಹೋ ರಾತ್ರಿಯ ಕಷ್ಟ, ಪುಸ್ತಕಾಲಯಗಳಲ್ಲಿ ಮಾಡಿದ ಪರಿಶೋಧನೆ ಮತ್ತು ಊರಿನ ಹಿರಿಯ–ಕಿರಿಯರೊಂದಿಗೆ ಕಾಡಿ ಬೇಡಿ ಸಂಗ್ರಹಿಸಿದ ವಿಷಯಗಳು "ಮೈಕಾಲ" ಎಂಬ ಹೆಸರಿನಿಂದ ಇಂದು ಪುಸ್ತಕರೂಪದಲ್ಲಿ ಬೆಳಕನ್ನು ಕಾಣುವುದು ಅತ್ಯಂತ ಸಂತೋಷಕರ. ಮಂಗಳೂರ ಮುಸ್ಲಿಮರ ಚರಿತ್ರೆ, ಅವರ ಪ್ರಾರ್ಥನಾಲಯ, ಸಂಘಸಂಸ್ಥೆ, ಆಚಾರವಿಚಾರದಮೇಲೆ ಸಾಧ್ಯವಾದಷ್ಟು ಬೆಳಕನ್ನು ಬೀರುವಂತೆ ತುಂಬಾ ಶ್ರಮಿಸಿದ್ದಾರೆ. ಇದು ಪರಿಪೂರ್ಣತೆಯನ್ನು ಹೊಂದಿದೆ ಎಂದು ನಾವು ಹೇಳಬಯಸುವುದಿಲ್ಲವಾದರೂ, ಮುಂದೆ ಈ ದಿಸೆಯಲ್ಲಿ ವ್ಯವಸಾಯವನ್ನು ಮುಂದುವರಿಸಲಿಚ್ಛಿಸುವ ವಿದ್ಯಾವಂತ ತರುಣರಿಗೆ ಇದೊಂದು ಊರುಗೋಲಿನಂತೆ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ. ಇಂತಹ ಪುಸ್ತಕ ಭಂಡಾರವು ನಮ್ಮಲ್ಲಿ ತುಂಬಾ ಬೆಳೆಯಬೇಕು. ತರುಣರು ಈ ಕ್ಷೇತ್ರದಲ್ಲಿ ವ್ಯವಸಾಯ ಮಾಡಿ ಮುಸ್ಲಿಮ್ ಸಮಾಜದ ಯಥಾರ್ಥ ಚರಿತ್ರೆಯನ್ನು ಜನತೆಯ ಮುಂದಿಟ್ಟು ಇತರ

www.bearyinfo.com

ಮತಸ್ಥರಲ್ಲಿ ಬೇರೂರಿರಬಹುದಾದ ತಪ್ಪಭಿಪ್ರಾಯಗಳನ್ನು ನೀಗಿಸುವ ಪವಿತ್ರ ಕಾರ್ಯದಲ್ಲಿ ಪ್ರವೃತ್ತರಾದಲ್ಲಿ ಮಾತ್ರ ಪರಸ್ಪರ ದ್ವೇಷಾಸೂಯೆಗಳು ಮಾಯವಾಗಿ ದೇಶದಲ್ಲಿ ಸ್ನೇಹಸೌಹಾರ್ದತೆಯು ಮೂಡಿ ಶಾಂತಿಯು ನೆಲೆಯೂರುವುದು.

"ಮೈಕಾಲ"ವು ಈ ಭಾಗದಲ್ಲಿ ಆಶಾಕಿರಣದಂತಿರುವುದು. ಇದು ಸರ್ವರಿಗೂ ಮಾರ್ಗದರ್ಶಕವೂ ಸ್ಫೂರ್ತಿದಾಯಕವೂ ಆಗಿ ಸದಾ ಬೆಳಗಲಿ! ಸಂಗ್ರಾಹಕರಾದ ಜನಾಬ್ 'ನೂರಿ'ಯವರ ಶ್ರಮವು ಶ್ರೇಯಸ್ಕರವೂ ಫಲಪ್ರದವೂ ಆಗಲಿ! ಇವರಿಂದ ಸಮಾಜಕ್ಕೆ ತುಂಬಾ ಸೇವೆ ಸಲ್ಲಿಸಲ್ಪಡುವಂತೆ ಸರ್ವಶಕ್ತನಾದ ಅಲ್ಲಾಹನು ಅನುಗ್ರಹಿಸಲಿ! ಆಮೀನ್ !!

ಜಪ್ಪು, ಮಂಗಳೂರು
18—3—60

**ಡಾ। ಎಮ್. ಎಮ್. ಸಾಲಿಹ್,**
ಕಾರ್ಯದರ್ಶಿ
ಮುಸ್ಲಿಮ್ ವೆಲ್ಫೇರ್ ಕಮಿಟಿ, ಮಂಗಳೂರು.

www.bearyinfo.com

**ಪರಮ ದಯಾಮಯನೂ ಕರುಣಾನಿಧಿಯೂ ಆದ**
**ಅಲ್ಲಾಹನ ನಾಮದಿಂದ**

# ಪ್ರಸ್ತಾವನೆ

ನಮ್ಮೀ ಲೋಕವು ಕ್ರಾಂತಿಯ ನೆಲೆವೀಡು. ಇಲ್ಲಿ ಶಾಶ್ವತ ನೆಲೆಯೆಂಬುದು ಯಾರಿಗೂ ಇರುವುದಿಲ್ಲ. ಹಲವು ವರ್ಷಗಳ ಹಿಂದೆ ಪುರೋಗತಿಯ ಉತ್ತುಂಗ ಸೋಪಾನವನ್ನು ಏರುತ್ತಿದ್ದ ಜನಾಂಗವು ಈಗ ಅಧೋಗತಿಯ ರಸಾತಳಕ್ಕೆ ನುಗ್ಗುತ್ತಿರಬಹುದು. ಅಂತೆಯೇ, ನಿನ್ನೆ ಪ್ರತಿಯೊಂದು ಜನಾಂಗದ ನಿಂದೆಗೂ, ಅನಾದರಕ್ಕೂ ಗುರಿಯಾದ ಸಮಾಜವು ಇಂದು ಸರ್ವರ ಪ್ರೀತ್ಯಾದರಗಳಿಗೆ ಪಾತ್ರವಾಗಿ ಮೆರೆಯುತ್ತಿರಲೂಬಹುದು. ಜನಾಂಗಗಳ ಉತ್ಥಾನಪತನಗಳ ವಿವರಣೆಯೇ ಚರಿತ್ರೆ.

ಚರಿತ್ರೆಯೆಂಬುದು ಮಾನವತೆಯ ಜ್ಞಾಪಕಶಕ್ತಿ. ಅದು ಸಮಾಜ, ಜನಾಂಗಗಳ ಮಾತ್ರವಲ್ಲ, ಅಖಿಲ ಮಾನವ ಕೋಟಿಯ ಗತಾನುಭವಗಳ ದಾಖಲೆಯನ್ನು ಸುರಕ್ಷಿತವಾಗಿಟ್ಟು ಮನುಷ್ಯನ ಮುಂದೆ ಇರಿಸುತ್ತದೆ. ಈ ಅನುಭವಗಳ ಬೆಳಕಿನಲ್ಲಿ ಮನುಷ್ಯನು ತನ್ನ ಪ್ರಕೃತದ ಸ್ಥಿತಿಗತಿಗಳನ್ನು ಪರಿಶೀಲಿಸಿ, ತನ್ನ ಭವಿಷ್ಯವನ್ನು ಅನುಭವಸಿದ್ದ ಒಳಿತಗಳಿಂದ ಸುಧಾರಿಸಿಕೊಂಡು, ಅನುಭವಸಿದ್ಧ ಕೇಡುಗಳಿಂದ ಸಂರಕ್ಷಿಸುವರೆ ಪ್ರಯತ್ನಿಸುವನು. ಚರಿತ್ರೆಯು ಈ ಕಾರ್ಯದಲ್ಲಿ ಅವನಿಗೆ ಸಹಾಯ ನೀಡುತ್ತದೆ.

ಚರಿತ್ರೆಯ ಈ ಸಹಾಯದಿಂದ ನಮಗೆ ತುಂಬಾ ಉಪಕಾರವಿದೆ. ಅಖಿಲ ಮಾನವ ಕೋಟಿಯ, ಮಾತ್ರವಲ್ಲ, ಸ್ವತಃ ನಮ್ಮ ಸಮಾಜ ಸಂಘಟನೆಗಳ ದಾಖಲೆಗಳಿಂದ ನಾವು ಪರಿಚಿತರಾಗಿಲ್ಲವಾದರೆ, ನಮ್ಮ ಸಾಮೂಹಿಕ ಜೀವನವು ಅಪರಾಧಗಳ ಹಾಗೂ ತಪ್ಪು ಭಾವನೆಗಳ ಸಮೂಹವಾಗಿ ಬಿಡುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಚರಿತ್ರೆಯನ್ನು ಮರೆತುಬಿಡುವ ಜನಕೂಟವು ಪತನಹೊಂದುವುದು ನಿಶ್ಚಯ. ಚರಿತ್ರೆಯು ಮೃತಹೃದಯಗಳಲ್ಲಿ ಒಂದು ನವೀನ ಆತ್ಮವನ್ನೇ ಸೃಷ್ಟಿಸುತ್ತದೆ. ಜೀವನದಲ್ಲಿ ಓಜಸ್ಸು ತೇಜಸ್ಸನ್ನು ತುಂಬುತ್ತದೆ. ಹಿರಿಯರ ಸದ್ಗುಣ—ಸತ್ಕರ್ಮಗಳನ್ನು ಹಿಂಬಾಲಿಸಲು ಪ್ರೇರೇಪಿಸುತ್ತದೆ. ಚರಿತ್ರೆಯಿಂದಲೇ ಜನಾಂಗಗಳ ಉಗಮ; ಚರಿತ್ರೆಯಿಂದಲೇ ಅವುಗಳ ಉತ್ಥಾನ-ಪತನ; ಚರಿತ್ರೆಯಿಂದಲೇ ನಮ್ಮ ಹಿರಿಯರ ಕುರಿತು, ಅವರು ಯಾವ ಯಾವ ಸಂದರ್ಭಗಳಲ್ಲಿ ಏನೇನು

www.bearyinfo.com

ಧೋರಣೆಯನ್ನು ವಹಿಸಿದ್ದರು, ಎಲ್ಲಿ ನೇರ ಮಾರ್ಗವನ್ನು ಅವಲಂಬಿಸಿದ್ದರು. ಎಲ್ಲಿ ಎಡವಿಬಿದ್ದರು ಎಂದು ಗೊತ್ತಾಗುವುದು. ಆದ್ದರಿಂದಲೇ ಚರಿತ್ರೆಯು ನಿಜ ಮಾರ್ಗದ ದೀವಟಿಗೆಯು. ಎಡವಿಬೀಳುವುದರಿಂದ ಅದು ರಕ್ಷಿಸುತ್ತದೆ. ಜನಾಂಗ ಗಳನ್ನು ಸಜೀವ ಉಳಿಸಲು ಚರಿತ್ರೆಗಿಂತ ಮೇಲಾದ ಒಂದು ವಿದ್ಯೆಯಿಲ್ಲ. ಚರಿತ್ರೆಯ ಮೂಲಕವೇ ಒಂದು ಸಮಾಜದ ವೈಶಿಷ್ಟಗಳು ಸಜೀವ ಹಾಗೂ ಸುರಕ್ಷಿತವಾಗುವುವು.

ಆದರೆ ಪಾಶ್ಚಿಮಾತ್ಯರ ಪ್ರಭಾವವು ಚರಿತ್ರೆಯನ್ನು ಇಂದಿನ ಕಾಲದಲ್ಲಿ ಯಥಾರ್ಥ ಸಂಭವಗಳ ನಿಜಕನ್ನಡಿಯಾಗುವ ಬದಲು 'ಪ್ರೋಪಗಾಂಡ'ದ ಒಂದು ಪ್ರಬಲ ಕೈಗೊಂಬೆಯಾಗಿ ಮಾರ್ಪಡಿಸಿದೆ; ಚರಿತ್ರೆಕಾರನ ವೈಯಕ್ತಿಕ ಪ್ರೀತಿ-ಹಗೆ, ಮೆಚ್ಚುಗೆ-ವಿರೋಧಭಾವಗಳ ಕನ್ನಡಿಯಾಗಿ ರೂಪಾಂತರಗೊಳಿಸಿದೆ. ಫ್ರೆಡ್ರಿಕ್ ದಿ ಗ್ರೇಟ್ ಎಂಬ ಅರಸನು ಚರಿತ್ರೆಯ ಗ್ರಂಥಗಳನ್ನು ವಿನೋದಕ್ಕಾಗಿ ಓದಲು ತರಿಸುವಾಗ "Bring me my Liar" ಎಂದು ತನ್ನ ಕಾರ್ಯದರ್ಶಿಗೆ ಆಜ್ಞೆಕೊಡುತ್ತಿದ್ದನಂತೆ. ಅಂತೆಯೇ "Our History books are Fables" ಎಂದು ನೆಪೋಲಿಯನನೂ ಹೇಳುತ್ತಿದ್ದನಂತೆ. ಹೀಗಾಗಿಬಿಟ್ಟಿದೆ ಇಂದಿನ ಚರಿತ್ರೆ ಗ್ರಂಥಗಳ ನಿಜರೂಪ.

ಚರಿತ್ರೆಯನ್ನು ವಿರೂಪಗೊಳಿಸಿ ತಮ್ಮ ಹಿತಾಸಕ್ತಿಗಳಿಗೆ ಸಾಧನವಾಗಿ ಅದನ್ನು ಉಪಯೋಗಿಸುವ ವಿಷಯದಲ್ಲಿ ಆಂಗ್ಲೇಯರು ಇತರ ಪಾಶ್ಚಿಮಾತ್ಯ ಜನಾಂಗಗಳೆಲ್ಲವನ್ನೂ ಹಿಂದೂಡಿ ಮುಂದೆಸಾಗಿದ್ದಾರೆ ಎಂದರೆ ಅತಿಶಯೋಕ್ತಿ ಯಾಗಲಾರದು. ತಮ್ಮ ವೈರಿಗಳನ್ನು ಅಪಕೀರ್ತಿಗೆ ಗುರಿಪಡಿಸುವುದರಲ್ಲಿ ಹಾಗೂ ಚರಿತ್ರೆಯಿಂದ 'ಪ್ರೋಪಗಾಂಡ'ದ ಕಾರ್ಯ ಸಾಧಿಸುವುದರಲ್ಲಿ ಇಂಗ್ಲಿಷ್ ಚರಿತ್ರೆ ಕಾರರು ತುಂಬಾ ನೈಪುಣ್ಯತೆಯನ್ನು ಪ್ರದರ್ಶಿಸಿರುತ್ತಾರೆ. ಅದರೂ ಈ ಅಪರಾಧ ವನ್ನು ಕೇವಲ ವಿದೇಶೀ ಚರಿತ್ರೆಕಾರರ ತಲೆಯ ಮೇಲೆ ಹೊರಿಸುವುದು ನ್ಯಾಯ ವಾಗದು. ಈ ರೀತಿಯ ಚರಿತ್ರೆಯಿಂದ ತಮ್ಮ ಹಿತಾಸಕ್ತಿಗಳಿಗೆ ಸೇವೆ ಸಲ್ಲಿಸುವುದ ರಲ್ಲಿ ಆಂಗ್ಲೇಯರಿಂದ ತರಬೇತಿಗೊಳಿಸಲ್ಪಟ್ಟ ಅನೇಕ ದೇಶೀಯ ಚರಿತ್ರೆಕಾರರೂ ವಿಶೇಷವಾಗಿ ಅವರ ಪಟ್ಟದ ಶಿಷ್ಯರಾದ ಕ್ರೈಸ್ತ ಚರಿತ್ರೆಕಾರರೂ ತುಂಬಾ ಶ್ರಮ ವಹಿಸಿರುತ್ತಾರೆ. ಮುಸಲ್ಮಾನರ ವಿರುದ್ಧ ಹಗೆ-ದ್ವೇಷಗಳನ್ನು ಹರಡಿಸುವುದು ಅವರ ಕುರಿತು ಅಲ್ಲಸಲ್ಲದ ಕಾಲ್ಪನಿಕ ಕಥೆಗಳನ್ನು ಸೃಷ್ಟಿಸುವುದು, ಇಸ್ಲಾಮಿಾ ಸಂಸ್ಕೃತಿ ಹಾಗೂ ಧರ್ಮವನ್ನು ಭಯಾನಕ ರೂಪದಲ್ಲಿ ಚಿತ್ರಿಸಿ ಅದಕ್ಕೆ ಅಪ ಕೀರ್ತಿಯನ್ನು ತಂದೊಡ್ಡುವುದು ಅವರಿಗೆ ವಾಡಿಕೆಯಾಗಿಬಿಟ್ಟಿದೆ. ಪ್ರಚಲಿತ ಚರಿತ್ರೆ ಗ್ರಂಥಗಳನ್ನೊಮ್ಮೆ ಓದಿನೋಡಿದರೆ ಇವುಗಳ ಉದ್ದೇಶವು ಮುಸಲ್ಮಾನರ ವಿರುದ್ಧ ಅಮುಸ್ಲಿಮರಲ್ಲಿ ದ್ವೇಷಭಾವಗಳನ್ನು ಹರಡಿಸುವುದಲ್ಲದೆ ಬೇರೆ ಅಲ್ಲ

www.bearyinfo.com

ಎಂಬುದು ನಿಮಗೆ ಮುಂದಟ್ಟಾಗುವುದು. ಇದಕ್ಕೆ ರಾಜಕೀಯ ಕಾರಣಗಳೂ ಇವೆಯೆಂದು ಓದುಗರಲ್ಲನೇಕರು ತಿಳಿದಿರಬಹುದು. ಅಂತು, 1944ರಲ್ಲಿ ಮದ್ರಾಸಿನಲ್ಲಿ ಜರುಗಿದ ಅಖಿಭಾರತ ಚಾರಿತ್ರಿಕ ಕಾಂಗ್ರೆಸ್ಸಿನ ಅಧ್ಯಕ್ಷ ಭಾಷಣವನ್ನು ಕೊಡುತ್ತಾ ಸುಪ್ರಸಿದ್ಧ ಚರಿತ್ರೆಕಾರರಾದ ಡಾ। ಸಯ್ಯದ್ ಸುಲೈಮಾನ್ ನದ್ವೀಯವರು ಹೇಳಿದ ಮಾತನ್ನು ಈ ಸಂದರ್ಭದಲ್ಲಿ ಎತ್ತಿ ಬರೆಯುವುದು ಅನುಚಿತವಾಗದು.

"ರಾಜಕಾರಣದ ಆಟದಿಂದ ಈ ದೇಶದ ಚರಿತ್ರವಿದ್ಯೆಯೂ ಸುರಕ್ಷಿತವಾಗಿರುವುದಿಲ್ಲ. ನಿಜ ಹೇಳುವುದಾದರೆ ಭಾರತದ ಸುಪ್ರಸಿದ್ಧ ಫಲ 'ವಿಭಜನೆ'ಯನ್ನು ಕೊಟ್ಟ ಬೀಜವೂ ಇದೇ ಎನ್ನಬೇಕು. ಮುಸಲ್ಮಾನರ ಕೆಟ್ಟದು–ಒಳ್ಳೆಯದುಗಳ ಕುರಿತು ತುಂಬಾ ಮಾತುಗಳನ್ನು ಹೇಳಬಹುದಿತ್ತು. ಆದರೆ ಅವರ ಬಳಿಕ ದೇಶವನ್ನಾಳಿದ ಸರಕಾರದ ಕಾಲದಲ್ಲಿ ವಿದ್ಯೆಯ ವಿಭಾಗವಿಡೀ ಪರದೇಶೀಯರ ಕೈಯಲ್ಲಿತ್ತು. ತಮ್ಮ ದೇಶದ ಹಿರಿಮೆಯನ್ನು ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಚಿತ್ರಿಸಿಬಿಡಬೇಕು ಮತ್ತು ಈ ಜನರ ಹೃದಯದ ಕನ್ನಡಿಗಳು ಒಡೆದು ಮಗುದೊಮ್ಮೆ ಒಂದುಗೂಡದಷ್ಟು ಬಲವಾದ ಕಾರ್ಯಸಾಧನೆಯನ್ನು ನಡಿಸಬೇಕೆಂಬುದರ ಕಡೆಗೆ ಆಂಗ್ಲೇಯರ ಪ್ರತಿಯೊಂದು ಪಂಗಡದ ಪ್ರಯತ್ನವಿತ್ತು. ಈ ಕಾರ್ಯಕ್ಕಾಗಿ ಚರಿತ್ರೆ ಗ್ರಂಥಗಳನ್ನು ಶುರುವಿನಿಂದ ಕಡೆಯ ವರೆಗೂ ಈ ದೃಷ್ಟಿಯಿಂದ ರಚಿಸಿ ಓದಿಸಿದರು. ವಿದ್ಯೆಯ ಪ್ರತಿಯೊಂದು ವಿಷಯದಲ್ಲೂ ಈ ಮೂಲ ವಿಚಾರವನ್ನು ನೂರಾರು ರೀತಿಗಳಿಂದ ತಿರುಗಿಸಿ ಮರುಗಿಸಿ ಕ್ರೋಢೀಕರಿಸಲಾಯಿತು. ಈ ಕಾರ್ಯವು ಎಷ್ಟರ ವರೆಗೆ ಸಾಧಿಸಲಾಯಿತೆಂದರೆ ಒಡೆದ ಹೃದಯಗಳು ಮಗುದೊಮ್ಮೆ ಒಂದುಗೂಡಲಾರದಾದುವು."

ಆಂಗ್ಲೇಯರೂ, ಅವರನ್ನು ಹಿಂಬಾಲಿಸುವ ಕ್ರೈಸ್ತ ಲೇಖಕರೂ ಚರಿತ್ರೆಯಲ್ಲಿ ಮುಸಲ್ಮಾನರ ವಿರುದ್ಧ ಒಂದು ದ್ವೇಷಭಾವನೆಯನ್ನು ಪ್ರಕಟಿಸಲು ರಾಜಕೀಯ ಕಾರಣಗಳಲ್ಲದೆ ಧಾರ್ಮಿಕ ಕಾರಣಗಳೂ ಇವೆ. ಈ ಕುರಿತು ಸುಪ್ರಸಿದ್ಧ ಜರ್ಮನ್ ನವಮುಸ್ಲಿಮ್ ವಿದ್ವಾಂಸರಾದ ಮುಹಮ್ಮದ್ ಅಸದ್ ಲಿಯೋಪೋಲ್ಡ್‌ವೆಯ್ಸ್ ಅವರು ಒಂದು ರಹಸ್ಯವನ್ನು ಬಯಲಿಗೆಳೆದಿದ್ದಾರೆ. ಅವರು ಬರೆಯುತ್ತಾರೆ:

"To understand better the deep-seated prejudice against Islam so often to be found in Western literature and contemporary thought, one has to look far backward into history and try to comprehend the psychological background of the earliest relations

www.bearyinfo.com

between the Western and the Muslim Worlds. What occidentals think and feel about Islam today is rooted in impressions that were born during the Crusades. The damage caused by the crusades was not restricted to a clash of weapons; it was first and foremost, an intellectual damage—the poisoning of the Western mind against the Muslim world through a deliberate misrepresentation of the teachings and ideals of Islam. For, if the call for a crusade was to maintain its validity, the Prophet of the Muslims had, of necessity to be stamped as the Anti-Christ and his religion depicted in the most lurid terms as a fount of immorality and perversion. It was at the time of the Crusades that the ludicrous notion that Islam was a religion of crude sensualism and brutal violence, of an observance of ritual instead of a purification of the heart, entered the western mind and remained there; The age when the spirit of independent inquiry could raise its head was as yet far distant in Europe; it was easy for the powers–that–were to sow the dark seeds of hatred for a religion and civilisation that was so different from the religion and civilisation of the West."

"Hostility toward Islam stood over the cradle of European civilisation. The shadow of the Crusades hovers over the West to this day; and all its reaction toward Islam and the Moslem world bear distinct traces of that die-hard ghost." (The Road to Mecca—Asad–Weiss)

www.bearyinfo.com

ಭಾರತದ ಮುಸಲ್ಮಾನರು ಚರಿತ್ರೆಯ ಕುರಿತು ತುಂಬಾ ಅಸಡ್ಡೆ ತೋರಿದ್ದಾರೆ. ಈ ಮಹಾವಿದ್ಯೆಯನ್ನು ವೈಜ್ಞಾನಿಕ ನೆಲೆಗೆ ಮುಟ್ಟಿಸಿದುದು ಇವರ ಪೂರ್ವಿಗರೆಂಬುದು ಇವರಿಗೆ ಮರೆತಂತಿದೆ. ಈ ದೇಶದಲ್ಲಿ ಸುಮಾರು ಒಂದು ಸಾವಿರ ವರ್ಷಕಾಲ ಮುಸ್ಲಿಮರ ಆಳ್ವಿಕೆಯ ಸಮಯ ಈ ಕಡೆಗೆ ಹೆಚ್ಚಿನ ಗಮನವಿತ್ತುದಾಗಿ ಕಂಡುಬರುವುದಿಲ್ಲ. ಇತ್ತ ದಕ್ಷಿಣದಲ್ಲಿ ಸುಲ್ತಾನ್ ಟೀಪೂ ಶಹೀದ್ (ರ. ಅ.)ರವರು ಈ ಕುರಿತು ತುಂಬಾ ಶ್ರದ್ಧೆವಹಿಸಿದ್ದರೆಂದು ಅವರ ಚರಿತ್ರೆಯಿಂದ ವ್ಯಕ್ತವಾಗುತ್ತದೆ. ಆದರೆ ಅವರು ಸಂಗ್ರಹಿಸಿದ ಗ್ರಂಥಗಳನ್ನೂ ಅವರ ಎಲ್ಲಾ ರಿಕಾರ್ಡುಗಳನ್ನೂ ಬ್ರಿಟಿಷರು ಇಂಗ್ಲೆಂಡಿಗೆ ಸಾಗಿಸಿ ತಮ್ಮ ಹಿತಾಸಕ್ತಿಗಳಿಗೊಪ್ಪುವ ಭಾಗಗಳನ್ನು ಮಾತ್ರ ತಮ್ಮ ದ್ವೇಷಕಾರಕ ಟಿಪ್ಪಣಿಗಳೊಂದಿಗೆ ಪ್ರಕಟಿಸಿ, ಉಳಿದ ಪ್ರಾಮುಖ್ಯ ದಾಖಲೆಗಳನ್ನು ಅಡಗಿಸಿಬಿಟ್ಟರು. ಟೀಪೂ ಸುಲ್ತಾನ್ ಶಹೀದ್ (ರ. ಅ.)ರವರ ಪರಾಜಯಕ್ಕೆ ಅವರ ಮಂತ್ರಿಗಳೂ ಸೇನಾನಾಯಕರೂ ಆಗಿದ್ದ ಮುಸಲ್ಮಾನರೇ ಹೆಚ್ಚಿನಮಟ್ಟಿಗೆ ಕಾರಣಭೂತರು. ಅಂತು, ಮುಸಲ್ಮಾನರ ಅಸಡ್ಡೆಯಿಂದ ಇಂದು ಅವರ ಪೂರ್ವಿಗರ ಯಥಾರ್ಥ ಚರಿತ್ರೆಯು ಅವರ ಸಂತಾನಗಳಿಗೇ ಸಿಗದಂತಾಯಿತು. ಪರಿಸ್ಥಿತಿ ಹೀಗಿರುವಾಗ ಪರಕೀಯರನ್ನು ದೂರಿ ಪ್ರಯೋಜನವೇನು?

ಮಂಗಳೂರ ಮುಸ್ಲಿಮ್ ಸಮಾಜವು ಈ ದೇಶದ ಪ್ರಥಮ ಮುಸ್ಲಿಮ್ ಸಮಾಜಗಳಲ್ಲೊಂದು ಎಂಬುದು ಚರಿತ್ರೆಯಿಂದ ಖಚಿತವಾಗುತ್ತದೆ. 1300 ವರ್ಷಗಳ ಪಾರಂಪರ್ಯವಿರುವ ಈ ಸಮಾಜದ ಚರಿತ್ರೆಯನ್ನು ಈ ತನಕವೂ ಯಾರೂ ಬರೆಯಲು ಪ್ರಯತ್ನಿಸದಿದ್ದುದು ಶೋಚನೀಯವೇ ಸರಿ. ಇದರ ಮಹತ್ವವು ಸಮಾಜಕ್ಕೆ ಮನವರಿಕೆಯಾಗದಿದ್ದುದೇ ಈ ಕೊರತೆಗೆ ಕಾರಣವಾಗಿರಬೇಕು. ಆದರೆ ಈ ದುರವಸ್ಥೆಯಿಂದ ಈಗಾಗಲೇ ಅನ್ಯರು ದುರ್ಲಾಭಹೊಂದಿ ನಮ್ಮ ಸಮಾಜವನ್ನು ತಮ್ಮ ಹಿತಾಸಕ್ತಿಗೊಪ್ಪುವಂತೆ ಚಿತ್ರಿಸಿ ಚರಿತ್ರೆ ಬರೆಯಲು ತೊಡಗಿದ್ದಾರೆ. ಇಂತಹ ಒಂದು ತಪ್ಪು ಅಭಿಪ್ರಾಯ ಕೊಡುವ ಒಂದು ಪ್ರೌಢ ಪ್ರಬಂಧವನ್ನು ನಮ್ಮ ಕ್ರೈಸ್ತ ಭಗಿನಿಯೊಬ್ಬರು ಸ್ಥಳೀಯ ಕ್ರೆಸೆಂಟ್ ವೆಲ್ಫೇರ್ ಸೆಂಟರಿನವರ ಸಹಕಾರದಿಂದ ಬರೆದಿರುತ್ತಾರೆ. ಅದರಲ್ಲಿ ಇಸ್ಲಾಮಿಗೆ ಹಾಗೂ ಮಂಗಳೂರ ಮುಸಲ್ಮಾನರಿಗೆ ತುಂಬಾ ಅಪಕೀರ್ತಿಯನ್ನು ತರಲು ಪ್ರಯತ್ನಿಸಿದ್ದಾರೆ. ಈ ರೀತಿಯ ಪ್ರಬಂಧವನ್ನು ಬರೆಯುವಾಗ ನಮ್ಮ ಕೆಲವು ಬಂಧುಗಳ ಬಾಯಿಯಿಂದ ಹೊರಬಂದ ಮಾತುಗಳನ್ನು ಆಧಾರವಾಗಿ ಉಪಯೋಗಿಸಿದ್ದಾರೆಂಬುದು ನಮ್ಮ ಸಮಾಜದ ದುರಾದೃಷ್ಟವೆನ್ನಬೇಕು. ನಮ್ಮ ಸಮಾಜ ಬಂಧುಗಳು ಎಷ್ಟು ಬೇಗ ವಂಚಿತರಾಗುತ್ತಾರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಅಂತು ಈ ಕೃತಿಯನ್ನು ರಚಿಸುವಾಗ ಸದ್ರಿ ಲೇಖಕಿಯರು ನಮ್ಮ ಸಮಾಜದ

www.bearyinfo.com

ಹಿತಾಕಾಂಕ್ಷಿಯ ವೇಷಧರಿಸಿಕೊಂಡೇ ನಮ್ಮ ಮೇಲೆ ಅಲ್ಲಸಲ್ಲದ ಆರೋಪಗಳನ್ನು ಹೊರಿಸಿರುತ್ತಾರೆ.

ಈ ಕೃತಿಯನ್ನು ಓದಿದ ಬಳಿಕವೇ ನಮ್ಮ ಮಂಗಳೂರ ಮುಸ್ಲಿಮರ ಚರಿತ್ರೆಯೊಂದನ್ನು ಸಂಗ್ರಹಿಸಿ ಬರೆಯಬೇಕೆಂಬ ಬಲವಾದ ಇಚ್ಛೆಯು ನನ್ನಲ್ಲಿ ಮೂಡಿತು. ಇತ್ತ ಕೆಲವು ಸಮಯದಿಂದ ನಮ್ಮ ಸಮಾಜದಲ್ಲಿ ಒಂದು ನಿಶ್ಶಬ್ದ ಕ್ರಾಂತಿಯು ತಲೆದೋರುತ್ತಿದೆ. ನಮ್ಮ ಹಲವು ಹಣವಂತ ವಿದ್ಯಾವಂತ ತರುಣರು ಸಮಾಜದ ಇಂದಿನ ಅವ್ಯವಸ್ಥೆಯಿಂದ ಮನನೊಂದು ಅದಕ್ಕೊಂದು ನಿಯಂತ್ರಿತಾವಸ್ಥೆ ರೂಪಿಸಿಕೊಡಲು ಶ್ರಮಿಸುತ್ತಿರುವುದಾಗಿ ನಾವು ಕಾಣುತ್ತೇವೆ. ಈ ಸನ್ನಿವೇಶದಲ್ಲಿ ಇಲ್ಲಿಯ ಮುಸ್ಲಿಮ್ ಸಮಾಜದ ಹಿಂದಿನ ಮತ್ತು ಇಂದಿನ ಸ್ಥಿತಿಗತಿಗಳನ್ನು ಸಮಾಜದ ಮುಂದಿಡುವುದು ಹಿತಕರವಾಗುವುದೆಂದೆಣಿಸಿ ನಾನು ಈ ಪ್ರಯತ್ನಕ್ಕೆ ಕೈಹಚ್ಚಿದೆನು. ನನ್ನ ಇತಿಮಿತಿಯ ಅರಿವು ನನಗೆ ಚೆನ್ನಾಗಿ ಇದೆ. ಈ ಕಾರ್ಯವು ನನ್ನಂತಹ ಒಬ್ಬಿಬ್ಬ ವ್ಯಕ್ತಿಗಳಿಂದ ಸಾಧಿಸುವಂತಹದ್ದಲ್ಲ. ಇಡೀ ಸಮಾಜವೇ ಇದಕ್ಕೆ ಟೊಂಕಕಟ್ಟಿ ಇಳಿದು ಯೋಗ್ಯರೂ ವಿದ್ವಾಂಸರೂ ಆದ ಸಮಾಜ ಬಾಂಧವರ ಒಂದು ಸಂಪಾದಕ ಮಂಡಳಿಯನ್ನೇ ಇದಕ್ಕಾಗಿ ರಚಿಸಿ ಇಲ್ಲಿಯ ಎಲ್ಲಾ ಮಸೀದಿ ಮತ್ತು ಇತರ ಸಂಘಸಂಸ್ಥೆಗಳ ರಿಕಾರ್ಡನ್ನು ಪರಿಶೀಲಿಸಿ, ಇಡೀ ಸಮಾಜದ ಸಹಕಾರದೊಂದಿಗೆ ಚರಿತ್ರೆ ಬರೆಯಬೇಕಾಗಿದೆ. ಹೀಗಾದರೆ ಮಾತ್ರ ಅದು ಒಂದು ಫಲಪ್ರದ ಕಾರ್ಯವಾಗಬಹುದೆಂದು ನನ್ನ ಅಭಿಪ್ರಾಯ. ನನ್ನ ಈ ಪ್ರಕೃತ ಕೃತಿಯು ಆ ಮಟ್ಟಕ್ಕೆ ಸೇರಿದುದಲ್ಲ. ಅಷ್ಟಕ್ಕೆ ನನಗೆ ಯೋಗ್ಯತೆಯಿರುವುದೆಂದೂ ನನಗೆ ನಂಬಿಕೆಯಿಲ್ಲ. ಜೀವನೋಪಾಯಕ್ಕಾಗಿ ಹಗಲಿಡೀ ಏಳೆಂಟು ಗಂಟೆ ಕಾಲ ಆಫೀಸಿನಲ್ಲಿ ದುಡಿದು ಉಳಿದ ಸಮಯಗಳನ್ನೂ ರಜಾ ದಿನಗಳನ್ನೂ ಈ ಕೆಲಸಕ್ಕಾಗಿ ವಿನಿಯೋಗಿಸಿ, ಈ ಕೃತಿಯನ್ನು ಸಮಾಜದ ಮುಂದಿಟ್ಟಿರುತ್ತೇನೆ. ಮುಂದಕ್ಕೆ ವಿಶಾಲ ಸಂಶೋಧನೆಗಳನ್ನು ನಡಿಸಿ ಸಮಾಜದ ಯಥಾರ್ಥ ನೆಲೆ ಬೆಲೆಗೊಪ್ಪುವ ಒಂದು ಸವಿಸ್ತಾರ ಚರಿತ್ರೆ ಗ್ರಂಥವನ್ನು ರಚಿಸಲು ನಮ್ಮ ತರುಣ ವಿದ್ಯಾರ್ಥಿಗಳಿಗೆ ಇದು ಪ್ರೇರಕವಾದುದಾದರೆ ನನ್ನೀ ಪ್ರಯತ್ನವು ಸಫಲವಾಯಿತೆಂದೆಣಿಸುವೆನು.

ನನ್ನೀ ಕಾರ್ಯದಲ್ಲಿ ಸಮಾಜಬಾಂಧವರೆಲ್ಲರೂ ಏನೊಂದು ಪಕ್ಷಭಾವನೆಯನ್ನಿಟ್ಟುಕೊಳ್ಳದೆ ಸಹಕರಿಸಿದ್ದಾರೆ. ಕೆಲವರು ಗ್ರಂಥಗಳನ್ನು ಸಂಗ್ರಹಿಸಿ ಕೊಟ್ಟಿದ್ದರೆ ಇನ್ನು ಕೆಲವರು ಜಾಹೀರಾತುಗಳನ್ನು ಕೊಟ್ಟು ಸಹಾಯವಿತ್ತಿದ್ದಾರೆ. ಕೆಲವು ತರುಣ ಬಾಂಧವರು ನನ್ನ ಆಹ್ವಾನಕ್ಕೆ ಓಗೊಟ್ಟು ಸಮಾಜಸುಧಾರಣೆಯ ಕುರಿತು ಈ ಗ್ರಂಥದಲ್ಲಿ ತೊಡಗಿರುವ ಲೇಖನಮಾಲೆಯಲ್ಲಿ ಭಾಗವಹಿಸಿರುವಾಗ, ಕೆಲವು ಹಿರಿಯ ಬಾಂಧವರು ತಮ್ಮ ಜ್ಞಾಪಕಶಕ್ತಿಗೆ ಮಿತಿಮೀರಿದ

www.bearyinfo.com

ತ್ರಾಸಕೊಟ್ಟು 'ನನ್ನ ಕಾಲದ ಮೈಕಾಲ'ವೆಂಬ ವಿಷಯದ ಕುರಿತು ಹೇಳಿಕೆಗಳನ್ನು ಕೊಟ್ಟಿರುತ್ತಾರೆ. ಇವರೆಲ್ಲರಿಗೂ ನಾನು ಋಣಿಯಾಗಿರುವೆನು.

ಇನ್ನು ಈ ಗ್ರಂಥಕ್ಕೆ ಸಂದೇಶಗಳನ್ನು ಕಳುಹಿಸಿಕೊಟ್ಟ ನಮ್ಮ ಸಮಾಜದ ಹಿರಿಯ ಮುಂದಾಳಾದ ಜನಾಬ್ ಎಂ. ಕುಂಞಾಮ್ಮು ಸಾಹೇಬ್‌ರವರಿಗೂ, ಕೆಲವು ವರ್ಷ ಮಂಗಳೂರಿನಲ್ಲಿದ್ದು ಸ್ಥಳೀಯ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಚರಿತ್ರೆ ಪ್ರೊಫೆಸರರಾಗಿದ್ದಾಗ ಇಲ್ಲಿಯ ಮುಸಲ್ಮಾನರ ಸುಧಾರಣೆಯ ಕುರಿತು ತುಂಬಾ ಆಸಕ್ತಿ ವ್ಯಕ್ತಪಡಿಸಿದ್ದ, ತತ್ಕಾಲ ಬಡಗರೆಯ ಮುಡಪಳ್ಳಿ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿರುವ ಪ್ರೊಫೆಸರ್ ಸಿ. ಎಂ. ಸೈಯ್ಯದ್ ಮೊಯಿದಿನ್‌ಶಾ ಎಂ.ಎ.ಎಲ್.ಟಿ. ಅವರಿಗೂ, ಒಂದು ಕಾಲದಲ್ಲಿ ಮಂಗಳೂರ•ಮುಸ್ಲಿಮ್ ತರುಣ ಮುಂದಾಳಾಗಿದ್ದ ಪ್ರಕೃತ ಧಾರ್ವಾಡದಲ್ಲಿ ಸಿವಿಲ್ ಜಡ್ಜರಾಗಿರುವ ಜನಾಬ್ ಅಬ್ದುರ್ರಹೀಮಾನ್ ಅಹ್ಮದ್ ಬಿ.ಎ; ಬಿ.ಎಲ್, ಅವರಿಗೂ, ನನ್ನ ಸಾಹಿತೀ ಮಿತ್ರ, ದ್ವಿಭಾಷಾ ಕವಿ ಪತ್ರಿಕೋದ್ಯಮಿ ಹಾಗೂ ಮಾಪಿಳೆಪ್ಪಾಟ್ ಸಾಹಿತ್ಯದ ಸಂಶೋಧಕರೂ ಆಗಿರುವ ಜನಾಬ್ ಟಿ. ಉಬೈದ್ ಸಾಹೇಬರಿಗೂ, ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದು ಕೊಟ್ಟ ನನ್ನ ಸಾಹಿತೀ ಗೆಳೆಯರಾದ ಡಾ: ಸಾಲಿಹೀಯವರಿಗೂ ನನ್ನ ಹೃದಯ ಪೂರ್ವಕ ಕೃತಜ್ಞತೆಗಳು.

ಇನ್ನು, ಪುಸ್ತಕ ಶೇಖರಿಸುವುದರಲ್ಲಿ ನನಗೆ ಸಹಾಯಮಾಡಿದ ನನ್ನ ಮಿತ್ರರಾದ ಜನಾಬ್ ಅಲ್‌ಹಾಜ್ ಸಾದಾ ಮುಹಮ್ಮದ್ ಇಸ್ಮಾಯಿಲ್; ಸಾದಾ ಮುಹಮ್ಮದ್ ಹುಸೈನ್, ಡಾ। ಸಾಲಿಹೀ, ಜನಾಬ್ ಟಿ. ಉಬೈದ್, ಜನಾಬ್ ಎಂ. ಅಬ್ದುಲ್ಲ, ಮುಹಮ್ಮದ್ ಉಸ್ಮಾನ್ ಸಾಹೇಬ್ ಮತ್ತು ಗವರ್ನ್‌ಮೆಂಟ್ ಕಾಲೇಜಿನ ಲ್ಯಾಬ್ರೇರಿಯನ್ ಶ್ರೀ ಆನಂದರಾವ್ ಮತ್ತು ಇತರ ಹಲವಾರು ಸ್ನೇಹಿತರುಗಳಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಪುಸ್ತಕಕ್ಕೆ ಅಂದವಾದ ಫೊಟೋಗಳನ್ನು ತೆಗೆದುಕೊಟ್ಟ ಜನಾಬ್ ಎಂ. ಎಸ್. ಮುಹಮ್ಮದ್ ಹಾಗೂ ಶ್ರೀ ಪ್ರಭು ಉಚ್ರೆಯವರಿಗೂ ಚಂದವಾದ ಡಿಸೈನ್ ಬರೆದುಕೊಟ್ಟ ಆರ್ಟಿಸ್ಟ್ ಶ್ರೀ ಜನಾರ್ಧನರಿಗೂ ಟೀಪುಸುಲ್ತಾನ್ ಶಹೀದರ ಚಿತ್ರಬರೆದು ಕೊಟ್ಟ ಆರ್ಟಿಸ್ಟ್ ಶ್ರೀ ಶಿವಗೂರರಿಗೂ ನನ್ನ ಕೃತಜ್ಞತೆಗಳು.

—ಅಬೂರೈಹಾನ್ ಅಹ್ಮದ್‌ನೂರಿ.

www.bearyinfo.com

# ಮೈಕಾಲ

## ಅರಬಿ–ಭಾರತೀಯ ಸಂಪರ್ಕ

ಚರಿತ್ರೆಯಲ್ಲಿ ಭಾರತವು ಹಿಂದುಗಳ, ಭೌದ್ಧರ ಹಾಗೂ ಜೈನರ ಪವಿತ್ರ ಭೂಮಿಯೆಂದು ನಾವು ಓದುತ್ತೇವೆ. ಅರಬರಿಗೂ ಇದು ಪವಿತ್ರ ಭೂಮಿಯೆಂದು ಕೇಳಿದರೆ ಓದುಗರಿಗೆ ಆಶ್ಚರ್ಯಕರವೆನಿಸಬಹುದು. ಅದರಲ್ಲೂ ಕೇವಲ ಕೆಲವೇ ಸಾವಿರಾರು ವರ್ಷಗಳಿಂದಲ್ಲ; ಲೋಕಾರಂಭದಿಂದಲೇ ಭಾರತವು ತಮ್ಮ ಪಿತೃಭೂಮಿಯೆಂದು ಅರಬರ ಅಂಬೋಣ.

ಆದಿಮಾನವರಾದ ಹಜ್ರತ್ ಆದಮ್ (ಅ. ಸ.)ರವರು ಸ್ವರ್ಗಲೋಕದಿಂದ ಹೊರಕಳುಹಿಸಲ್ಪಟ್ಟಾಗ ಬಂದಿಳಿದುದು ಇದೇ ಭಾರತ ಭೂಮಿಯಲ್ಲೆಂದು ಹದೀಸುಗಳಲ್ಲಿ ಬಂದಿದೆ. (ಫಾರ್ಸಿಯಲ್ಲಿ ಹಿಂದುಸ್ಥಾನಕ್ಕೆ 'ಜನ್ನತ್ ನಿಶಾನ್' (ಸ್ವರ್ಗಸ್ವರೂಪ) ಎಂಬುದೊಂದು ಹೆಸರಿದೆ.) ಲಂಕೆಯ ಪರ್ವತವೊಂದರ ಮೇಲೆ ಅವರು ಇಟ್ಟ ಪ್ರಥಮ ಹೆಜ್ಜೆಯ ಗುರುತು ಇಂದಿಗೂ ಮಾಯವಾಗದೆ ಉಳಿದಿದೆ. ಹ. ಆದಮ (ಅ. ಸ.)ರು ಸ್ವರ್ಗದಿಂದ ಬಂದಿಳಿದ ಭಾರತದ ಆ ಭೂಭಾಗದ ಹೆಸರು 'ದಜ್ನಾ' ಎಂದು ಇಬ್ನ್ ಜುರೈರ್, ಇಬ್ನ್ ಅಬೀ ಹಾತಿಂ ಮತ್ತು ಹಾಕಿಂ ಮೊದಲಾದ ಹದೀಸ್ ಗ್ರಂಥಗಳಲ್ಲಿ ನಮೂದಿಸಲ್ಪಟ್ಟಿದೆ. ಈ ಶಬ್ದವು ಹಿಂದೀ ಭಾಷೆಯ ದಖ್ನಾ'ದ ತತ್ಸಮವಾಗಿರಬೇಕೆಂದು ಸುಪ್ರಸಿದ್ಧ ಚರಿತ್ರೆಕಾರರಾದ ಮೌಲಾನಾ ಸಯ್ಯದ್ ಸುಲೈಮಾನ್ ನದ್ವೀ ಅವರು ಅಭಿಪ್ರಾಯಪಟ್ಟಿದ್ದಾರೆ. ಮಾತ್ರವಲ್ಲ, ಅರಬಸ್ಥಾನಕ್ಕೆ ವಿವಿಧ ತರ ಸುಗಂಧಗಳು ಮತ್ತು ಮಸಾಲೆ ಇತ್ಯಾದಿ ದಖ್ಖಣ (ದಕ್ಷಿಣ ಭಾರತ)ದಿಂದಲೇ ರಫ್ತಾಗಿ, ಅಲ್ಲಿಂದ ಅವು ಅರಬರ ಮೂಲಕ ಇಡೀ ಲೋಕದಲ್ಲಿ ಹರಡುತ್ತಿದ್ದವು ಎಂದು ಚರಿತ್ರೆಯ ಆಧಾರಗಳಿಂದ ನಮಗೆ ಖಚಿತವಾಗುತ್ತದೆ. ಈ ಸಾಧನಗಳು ಹ. ಆದಮ (ಅ. ಸ.)ರು ತನ್ನ ಸಂಗಡ ಸ್ವರ್ಗಲೋಕದಿಂದ ತಂದ ಕಾಣಿಕೆಗಳ ಸ್ಮಾರಕಗಳಾಗಿರಬೇಕೆಂದು ಅವರು ವಾದಿಸುತ್ತಾರೆ; ಭಾರತದಲ್ಲಿ ಸಿಗುವ ನಿಂಬೆ, ಬಾಳೆಹಣ್ಣು, ಅಂಜೂರ ಹಣ್ಣುಗಳು ಆ ಕಾಣಿಕೆಗಳಾಗಿರಬೇಕೆಂದು ಅವರ ಅಭಿಪ್ರಾಯ.

ಸ್ವರ್ಗಲೋಕದಿಂದ ನಾಲ್ಕು ನದಿಗಳು ಹೊರಟಿರುವುದಾಗಿ ಇನ್ನೊಂದು ಹದೀಸಿನಲ್ಲಿ ಬಂದಿದೆ. ನೈಲ್, ಫರಾತ್, ಜೈಹೂನ್ ಮತ್ತು ಸೈಹೂನ್ ಎಂಬ

www.bearyinfo.com

ಮಹಾನದಿಗಳ ಹೆಸರು ಅದರಲ್ಲಿ ಕಾಣಬಹುದು. ನೈಲ್ ನದಿಯು ಇಜಿಪ್ತದ ನದಿ; ಫರಾತ್ ಇರಾಕಿನದು; ಜೈಹೂನ್ ತುರ್ಕಿಸ್ಥಾನದಲ್ಲಿದೆ; ಸೈಹೂನ್ ಹಿಂದುಸ್ಥಾನದ ಒಂದು ಮಹಾನದಿಯ ಹೆಸರೆಂದು ಹಲವು ಉಲೆಮಾಗಳು ಅಭಿಪ್ರಾಯಪಟ್ಟಿದ್ದಾರೆ. ಸ್ವರ್ಗಲೋಕದಿಂದ ಇಳಿದು ಬಂದ ಈ ನಾಲ್ಕನೆಯ ನದಿಯನ್ನು ಕೆಲವರು ಸಿಂಧೂ ನದಿ ಎಂದು ಗುರುತಿಸಿದ್ದಾರೆ. ಇದು ಗಂಗಾನದಿ ಯಾಕೆ ಆಗಬಾರದೆಂದು ಮೌಲಾನಾ ಸಯ್ಯದ್ ಸುಲೈಮಾನ್ ನದ್ವೀಯವರು ಪ್ರಶ್ನಿಸುತ್ತಾರೆ.

ಅಂತು, ಹಜರತ್ ಆದಮ (ಅಸ)ರು ಮೊತ್ತಮೊದಲು ಭೂಮಿಗೆ ಕಾಲಿಟ್ಟುದು ಇದೇ ಭಾರತ ಖಂಡದಲ್ಲಿ ಎಂಬುದು ಚರಿತ್ರಾರ್ಹ ಯಥಾರ್ಥತೆ. ಅವರಿಗೆ ದೈವವಾಣಿಯು (ವಹೀ) ಬಂದುದೂ ಇದೇ ಭೂಭಾಗದಲ್ಲಿ ಎಂದು ಹೇಳಬಹುದು. ಆರಬರಿಗೆ ಭಾರತದ ಕುರಿತು ಪುರಾತನ ಕಾಲದಿಂದಲೇ ಆದರದ ಭಾವನೆಗಳುಂಟಾಗಲು ಇದೊಂದು ಮುಖ್ಯ ಕಾರಣ. ಈ ದೇಶದೊಡನೆ ಮುಸಲ್ಮಾನರಿಗೆ ವಾತ್ಸಲ್ಯವುಂಟಾಗಲು ಇನ್ನೊಂದು ಕಾರಣವೂ ಇದೆ. ಪರಮಾತ್ಮನ ಅಂತ್ಯಪ್ರವಾದಿಯರಾದ ಹ. ಮುಹಮ್ಮದ್ ಪೈಗಂಬರ (ಸ. ಅ.)ರವರು ತನಗೆ ಹಿಂದುಸ್ಥಾನದ ಕಡೆಯಿಂದ ದೈವಿಕ ಸುಗಂಧವು ಬರುತ್ತಿರುವುದಾಗಿ ತಿರುವಚನ ನುಡಿದಿದ್ದಾರೆ.

ಅರಬರು ತುಂಬಾ ಪುರಾತನ ಕಾಲದಿಂದಲೇ ಭಾರತ ನಿವಾಸಿಗಳೊಂದಿಗೆ ವ್ಯಾಪಾರ ವಹಿವಾಟುಗಳಲ್ಲಿ ನಿರತರಾಗಿದ್ದಾರೆಂಬುದಕ್ಕೆ ಅನೇಕ ಸಾಕ್ಷ್ಯಗಳಿವೆ. ಮಹಾಭಾರತದ ಕಾಲದಲ್ಲಿ ಕೌರವರು ಅರಗಿನ ಮನೆ ಕಟ್ಟಿಸಿ ಅದರಲ್ಲಿ ಪಾಂಡವರನ್ನು ನಿವಾಸಿಸಿ, ಅದಕ್ಕೆ ಬೆಂಕಿ ಕೊಟ್ಟು ಸುಟ್ಟು ಬಿಡಬೇಕೆಂದು ಇಚ್ಛಿಸಿದಾಗ ವಿದುರರು ಯುಧಿಷ್ಠರರಿಗೆ ಅರಬಿ ಭಾಷೆಯಲ್ಲಿ ಅದನ್ನು ತಿಳಿಸಿದರೆಂದೂ ಯುಧಿಷ್ಠರರು ಅರಬಿಯಲ್ಲೇ ಅವರಿಗೆ ಉತ್ತರವಿತ್ತರೆಂದೂ, ಆರ್ಯಸಮಾಜದ ಸ್ವಾಮಿ ದಯಾನಂದಜೀಯವರು ತನ್ನ ಗ್ರಂಥ "ಸತ್ಯಾರ್ಥ ಪ್ರಕಾಶ"ದಲ್ಲಿ ಬರೆದಿರುತ್ತಾರೆ.

ಪ್ರವಾದಿ ಹ. ಸುಲೈಮಾನ್ (ಅ. ಸ.)ರವರು "ತರ್ಸೀಸ್" ಮತ್ತು "ಓಫೀರ್" ಬಂದರುಗಳಿಂದ ಚಿನ್ನ, ಬೆಳ್ಳಿ, ಆನೆದಂತ, ಮಂಗಗಳು, ಶ್ರೀಗಂಧ ಮತ್ತು ನವಿಲುಗಳನ್ನು ತರಲು ಬೇಕಾಗಿ ಎರಡು ನೌಕಾ ಪಂಗಡಗಳನ್ನು ಕಳುಹಿಸಿರುವುದಾಗಿ ಬೈಬಲಿನ ಹಳೆಯ ಒಡಂಬಡಿಕೆಯಲ್ಲಿ ಕಾಣಸಿಗುತ್ತದೆ. "ಓಫೀರ್" ಎಂಬುದು ಕೇರಳದ ಕ್ರೇಂಗನೂರ್ ಬಳಿಯ 'ಪೂವಾರ್' ಎಂಬ ಹಳ್ಳಿಯೆಂದು ಈಗ ಗೊತ್ತುಪಡಿಸಲಾಗಿದೆ. ಗ್ರೀಕ್ ಗ್ರಂಥಗಳಲ್ಲಿ ಭಾರತದಿಂದ ರಫ್ತಾಗಿ ಆಹಾರಕ್ಕಾಗಿ ಉಪಯೋಗವಾಗುತ್ತಿದ್ದ ಅಕ್ಕಿಯ ವಾರ್ತೆಯೂ ಇರುವುದಾಗಿ ಚರಿತ್ರಜ್ಞರು ಬರೆಯುತ್ತಾರೆ. ದಕ್ಷಿಣ ಭಾರತದಿಂದ ಬಂಗಾರ, ಮುತ್ತು, ಆನೆದಂತ, ಅಕ್ಕಿ, ಮಸಾಲೆ, ನವಿಲು, ಮತ್ತು ಮಂಗಗಳು ಡ್ರಾವಿಡಿಯನ್ ಹಡಗುಗಳಲ್ಲಿ ತುಂಬಿ ಯುರೋಪು, ಬಾಬಿಲೋನ್, ನೈನವೆ, ಗ್ರೀಸ್, ರೋಮ್, ಇಜಿಪ್ತ, ಚೈನಾ,

www.bearyinfo.com

ಮತ್ತು ಇತರ ದೇಶಗಳಿಗೆ ಸಾಗುತ್ತಿದ್ದುವು ಎಂಬುದು ತಮಿಳು ಭಾಷೆಯ ಪುರಾತನ ಶಿಲೆ ಬರಹಗಳಿಂದ ಕಂಡು ಹಿಡಿದಿರುತ್ತಾರೆ. ನೈನವೆ ಮತ್ತು ಬಾಬಿಲೋನಿನ ಅವ ಶೇಷಗಳಲ್ಲಿ ಸಾಗ್ವಾನಿ ಮರವು ಸಿಕ್ಕಿದೆ. ಇದು ಯಾವುದೋ ಒಂದು ಕಾಲದಲ್ಲಿ ದಕ್ಷಿಣ ಭಾರತದಿಂದ ತರಲಾಗಿತ್ತೆಂದು ಚರಿತ್ರೆ ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ.

ಕ್ರಿ. ಪೂ. 2000ದಲ್ಲಿ ಕಿನ್‌ಆನೀ ಅಥವಾ ಆರಾಮಿಾಯರೆಂದು ಅರಬೀ ಭಾಷೆಯಲ್ಲಿ ಹೆಸರುವಾಸಿಯಾದ ಫೊನೀಶಿಯವರು (Phoenicians) ಬಹಳ ನಿಪುಣ ಹಡಗು ಸಂಚಾಲಕರಾಗಿದ್ದರು. ಅವರು ಜನ್ಮತಃ ಬಹ್ರೈನ್ ಪ್ರದೇಶದವ ರಾಗಿದ್ದರೂ, ಅಧಿಕವಾಗಿ ನೆಲೆಸಿದ್ದುದು ಸಿರಿಯಾ ದೇಶದಲ್ಲಿ. ತಮ್ಮ ಹಡಗುಗಳಲ್ಲಿ ಗ್ರೀಸ್, ಯುರೋಪ್, ಈರಾನ್, ಭಾರತ, ಚೈನಾಗಳಿಗೆ ಸರಕುಗಳನ್ನು ಸಾಗಿಸು ತ್ತಿದ್ದುದಲ್ಲದೆ ಆ ದೇಶಗಳಿಂದ ತಮಗೆ ಬೇಕಾದ ಸಾಧನಗಳನ್ನೂ ಅವರು ಒಯ್ಯು ತ್ತಿದ್ದರು.

ಕಿ. ಪೂ. 1000ದಲ್ಲಿ ಯಮನಿನ 'ಸಬಾ' ಜನಾಂಗದವರೂ ಭಾರತ ದೊಂದಿಗೆ ವ್ಯಾಪಾರ ಸಂಬಂಧಗಳನ್ನು ಬಲಪಡಿಸಿದ್ದರು. ಚರಿತ್ರೆಕಾರ ಜೊಸೆ ಫೀಸನು ಬರೆಯುತ್ತಾನೆ: ಬೊಂಬಾಯಿ ಬಳಿ ಸತಾರಾ ಎಂಬಲ್ಲಿಂದ ಹ. ಸುಲೈ ಮಾನ್ (ಅ. ಸ.)ರವರ ಕಾಲದಲ್ಲಿ ಅಂದರೆ ಕಿ. ಪೂ. 950ರಲ್ಲಿ ಪೆಲಸ್ತೈನಿನೊಂ ದಿಗೆ ವ್ಯಾಪಾರ ವಿಹಿವಾಟು ನಡಿಯುತ್ತಿತ್ತು. ಭಾರತೀಯ ಮಲ್ಮಲ್, ಚೀಂಟು, ಮತ್ತು ರುಮಾಲುಗಳು ಅರೇಬಿಯಾ ದೇಶದಲ್ಲಿ ತುಂಬಾ ಜನಪ್ರೀಯವಾಗಿದ್ದುವು. ಇವುಗಳ ಕುರಿತು ಮೆಚ್ಚಿಕೆಯ ಅಭಿಪ್ರಾಯಗಳು ಪುರಾತನ ಅರಬಿ ಕಾವ್ಯಗಳಲ್ಲಿ ಕಾಣುತ್ತವೆ. ವ್ಯಾಪಾರ ಸಂಬಂಧವಲ್ಲದೆ ಶೈಕ್ಷಣಿಕ ಸಂಬಂಧವೂ ತುಂಬಾ ಪುರಾ ತನ ಕಾಲದಿಂದಲೂ ಇತ್ತು. ಸುಮಾರು ಕಿ.ಪೂ. 800ರಲ್ಲಿ ಅರಬಿಯರು ಭಾರತಕ್ಕೆ ಬರೆಹ ಕಲಿಸಿದ್ದರು. ಮೌರ್ಯವಂಶದ ಎಲ್ಲಾ ಶಿಲೆ ಬರೆಹಗಳು ಅರಬೀ ರೀತಿಯಲ್ಲಿ (ಬಲದಿಂದ ಎಡಕ್ಕೆ) ಬರೆದು ಕಾಣುತ್ತವೆ. ಗಣಿತವೂ ಆರಾಮಿಾ ರೀತಿಯಲ್ಲೇ ಬರೆದುದು ಕಾಣುತ್ತದೆ. ಅಶೋಕನ ಶಿಲೆ ಬರಹಗಳೂ ಬಲದಿಂದ ಎಡಕ್ಕೆ ಬರೆದು ಕಾಣುತ್ತದೆ. (Encyclopedia Britanaica).

ಕ್ರಿ. ಶ. ಒಂದನೆಯ ಶತಮಾನದ ಗ್ರೀಕ್ ಚರಿತ್ರೆಕಾರ 'ಪ್ಲಿನಿ'ಯ ಹೇಳಿಕೆ ಯಂತೆ ಅನೇಕ ಅರಬರು ಅಂದು ಮಲಬಾರ್ ಕರೆಯಲ್ಲಿ ಹಾಗೂ ಲಂಕೆಯಲ್ಲಿ ನೆಲಸಿದ್ದರು. ಲಂಕೆಯಲ್ಲಿ ಅವರು ಎಷ್ಟು ಅಧಿಕಸಂಖ್ಯೆಯಲ್ಲಿದ್ದರೆಂದರೆ ಅವರನ್ನು ಕರಾವಳಿಯ ಅಧಿಪತಿಗಳೆಂದೇ ಗಣಿಸಬಹುದಿತ್ತು.

'ಅಗಥರ್‌ಸೈಡಿ'ನ ಕಾಲದಲ್ಲಿ ಮಲಬಾರ್ ಕರಾವಳಿಯಲ್ಲಿ ಎಷ್ಟು ಅಧಿಕ ಮಂದಿ ಅರಬ್ ವ್ಯಾಪಾರಿಗಳು ನೆಲೆಸಿದ್ದರೆಂದರೆ ಅವರಿಂದ ಪ್ರಭಾವಿತರಾಗಿ

www.bearyinfo.com

ಅನೇಕ ಸ್ಥಳೀಯ ನಿವಾಸಿಗಳೂ ಅವರ 'ಸಾಬೀ'ಮತವನ್ನು ಅವಲಂಬಿಸಿದ್ದರು. (Bombay Gazetteer) ಕೇವಲ ಅರಬಿಯರೇ ಭಾರತಕ್ಕೆ ಬರುತ್ತಿದ್ದುದಲ್ಲ; ಭಾರತೀಯರೂ ಅರಬಿದೇಶಕ್ಕೆ ಹೋಗುತ್ತಿದ್ದರು. ಐದನೆ ಮತ್ತು ಆರನೆ ಶತಮಾನ ದಲ್ಲಿ ಭಾರತ ಮತ್ತು ಚೈನದಿಂದ ತುಂಬಾ ನಾವಿಕರು ಅರಬ್ ದೇಶಕ್ಕೆ ಹೋಗು ತ್ತಿದ್ದರೆಂದೂ ಅವರು ಬರುವುದನ್ನು ಅರಬೀ ನಾವಿಕರು ತಮ್ಮ ತಮ್ಮ ಮನೆ ಯಿಂದಲೇ ನೋಡುತ್ತಿದ್ದರೆಂದೂ ಅರಬ್ ಚರಿತ್ರೆಕಾರರು ಬರೆಯುತ್ತಾರೆ. ಇಬ್ನು ಜುರೈರ್ ತಿಬ್ರಿಯವರು ತಮ್ಮ ಚರಿತ್ರೆಯಲ್ಲಿ ಸಾಸಾನೀ ರಾಜ್ಯದ ಅಂತ್ಯಕಾಲ ಗಳಲ್ಲಿ ಭಾರತೀಯ ನೌಕೆಗಳು 'ದಜ್ಲ'ನದಿ ಮೂಲಕವಾಗಿ ಬಸ್ರಾಬಳಿ ದಜ್ಲಾ ಮತ್ತು ಹರಾತ್ ನದಿಗಳ ಸಂಗಮವಾದ ಅಬ್ಲಾ (obolla) ವರೆಗೂ ಪ್ರವೇಶಿಸಿದು ದನ್ನು ವಿವರಿಸಿದ್ದಾರೆ.

ಮುಸಲ್ಮಾನ-ಭಾರತ ಸಂಪರ್ಕವನ್ನು ಕೇವಲ ಗಝ್ನಿ ಮಹಮೂದನ ಆಕ್ರ ಮಣದೊಂದಿಗೆ ಸೇರಿಸುವುದು ಚರಿತ್ರೆಕಾರರಿಗೆ ವಾಡಿಕೆಯಾಗಿಬಿಟ್ಟದೆ. ಚಾರಿತ್ರಿಕ ದೃಷ್ಟಿಯಿಂದ ನೋಡಿದರೂ ಮುಸಲ್ಮಾನರು ಗಝ್ನಿಮುಹಮ್ಮದನಿಗಿಂತಲೂ ಎಷ್ಟೋ ವರ್ಷಗಳಿಗೆ ಮುನ್ನ ಭಾರತದಲ್ಲಿ ಬಂದು ನೆಲೆಸಿದುದು ಕಂಡುಬರುತ್ತದೆ.

## ಇಸ್ಲಾಮಿನ ಆಗಮನ

ಅರಬೀ ಹಿಂದೀ ಸಂಬಂಧಕ್ಕೆ ಇನ್ನೊಂದು ಕಾರಣವೂ ಇತ್ತು. ಪರ್ಶಿಯಾ ಚಕ್ರವರ್ತಿಯ ಆಳ್ವಿಕೆಯೊಳಗೆ ಬಲೂಚಿಸ್ತಾನ ಮತ್ತು ಸಿಂಧ್ ಪ್ರದೇಶವೂ ಸೇರಿ ದ್ದಾಗ ಸಿಂಧ್ ಪ್ರದೇಶದ ಕೆಲವು ಯೋಧ ಪಂಗಡಗಳ ಸೈನಿಕ ಭಾಗವು ಈರಾನೀ ಸೈನ್ಯದಲ್ಲಿ ಸೇರಿತ್ತು. ಅರಬರಿಗೆ ಅವರ ಪೈಕಿ ಜಾಠ ಮತ್ತು ಮಿಾಡರ ಪರಿಚಯ ವಿತ್ತು. ಈ ಎರಡು ಪಂಗಡಗಳು ಸಿಂಧಿನ ಸುಪ್ರಸಿದ್ಧ ಸಮುದಾಯಗಳಾಗಿದ್ದುವು. ಹದೀಸ್ ವಚನವೊಂದರಲ್ಲಿ ಒಮ್ಮೆ ಹ. ಅಬ್ದುಲ್ಲಾ ಬಿನ್ ಮಸ್ಊದ್ (ರ. ಅ.) ಎಂಬ ಸಹಾಬಿಯರು ರಸೂಲ್ ಕರೀಮ್ (ಸ. ಅ.)ರವರೊಂದಿಗೆ ಒಂದು ವಿಶಿಷ್ಟ ರೂಪದ ಜನರನ್ನು ಕಂಡಿದ್ದು "ಅವರ ಮುಖವು ಜಾಠರಂತೆ ಇತ್ತು" ಎಂದು ವಿವರಿ ಸಿದ್ದಾರೆ. ಅರಬಿಯರಿಗೆ ಆರನೇ ಶತಮಾನದಲ್ಲೇ ಜಾಠರ ಪರಿಚಯವಿತ್ತೆಂಬುದು ಇದರಿಂದ ವ್ಯಕ್ತವಾಗುತ್ತದೆ. ಈರಾನಿಯರಿಗೆ ಸೋಲು ಸಂಭವಿಸಿದಾಗ ಈ ವೀರ ಜಾಠರು ಕೆಲವು ಶರ್ತಗಳೊಂದಿಗೆ ಮುಸಲ್ಮಾನರ ಸೈನ್ಯದೊಂದಿಗೆ ಬಂದು ಸೇರಿದರು. ಮುಸ್ಲಿಮ್ ಸೈನ್ಯಾಧಿಕಾರಿಗಳು ಅವರಿಗೆ ತುಂಬಾ ಆದರವನ್ನು ವ್ಯಕ್ತಪಡಿಸಿದರು. ಹ. ಅಲೀ (ರ. ಅ.) (ನಾಲ್ಕನೇ ಖಲೀಫರು)ಯವರು 'ಜಮಲ್' ಯುದ್ಧದ ಸಂದರ್ಭದಲ್ಲಿ ಬಸ್ರಾದ ಖಜಾನೆಯನ್ನು ಜಾಠರ ನಿಗ್ರೈವಾನಿಯಲ್ಲಿ ಬಿಟ್ಟಿದ್ದರೆಂದು 'ತಿಬ್ರೀ'ಯ ಚರಿತ್ರೆಯಲ್ಲಿ ಬರೆದಿದೆ. ಖಲೀಫ ಹ. ಅಮಿಾರ್ ಮುಆವಿಯಾ

www.bearyinfo.com

(ರ. ಅ.)ರವರು ರೋಮಕರನ್ನು ಎದುರಿಸುವ ಸಲುವಾಗಿ ಜಾತರನ್ನು ಸಿರಿಯಾ ದೇಶದ ಕರಾವಳಿ ನಗರಗಳಲ್ಲಿ ನೆಲಸಿದರೆಂತಲೂ, ಖಲೀಫ ವಲೀದ್ ಬಿನ್ ಅಬ್ದುಲ್ ಮಲಿಕ್‌ರವರು ತಮ್ಮ ಕಾಲದಲ್ಲಿ ಆ ಜನಕೂಟವನ್ನು ಅಂತಾಕಿಯಾ ಪ್ರದೇಶದಲ್ಲಿ ನೆಲಸಿದರೆಂತಲೂ ಬಲಾಝುರೀ ಬರೆಯುತ್ತಾರೆ.

ಪ್ರಥಮತಃ ಮುಸಲ್ಮಾನರಾದ ಭಾರತೀಯರಲ್ಲಿ ಈ ಜನಾಂಗದವರೇ ಮೊದಲನೆಯವರೆಂದು ಹೇಳಬಹುದು. ಈ ಜಾತರ ಕೂಟದಿಂದಲೇ ಇಮಾಮ ಶ್ರೇಷ್ಠರಾದ ಹ. ಅಬೂಹನೀಫರು (ರ. ಅ.) ಜನ್ಮವೆತ್ತಿದರು. ಬಸ್ರಾದ ಸೈನ್ಯದ ನಾಯಕ ಹ. ಅಬೂಸಲ್ಮಾ ಕೂಡ ಜಾತ್ ಸೈನ್ಯದವರಾಗಿದ್ದರು. ಈ ಜನಕೂಟವನ್ನು ಇಸ್ಲಾಮಿಗೆ ಸೇರಿಸಿದವರು ಸಹಾಬ (ರಿ. ಅ.)ರಲ್ಲೊಬ್ಬರಾದ ಹ. ಅಬೂಮೂಸಾ ಅಶ್ಅರೀ (ರ. ಅ.) ಅವರು. ಅಂತು, ಈ ಜನಕೂಟವು ಹ. ಉಮ್ಮರ್ (ರ. ಅ.) ರವರ ಕಾಲದಲ್ಲೇ ಇಸ್ಲಾಮ್ ಸ್ವೀಕರಿಸಿದ್ದರು. ಭಾರತದ ಅರಸರುಗಳಿಗೆ ಇವರ ಮೂಲಕವೇ ಇಸ್ಲಾಮಿನ ಸುದ್ದಿಯು ಹರಡಿತೆನ್ನಬಹುದು.

ಸಹಾಬಗಳು (ರಿ. ಅ.) ಎರಡನೆ ಖಲೀಫ ಹ. ಉಮರ್ (ರ. ಅ.)ರವರ ಕಾಲದಲ್ಲೇ ಭಾರತಕ್ಕೆ ಬಂದಿದ್ದರು. ಹಿಜರಿ 15ರಲ್ಲಿ ಬಹ್ರೈನಿನ ಅಧಿಕಾರಿಯಾದ ಹ. ಉಸ್ಮಾನ್ ಬಿನ್ ಅಬಿಲ್ ಆಸ್ ಸಖಫೀ (ರ. ಅ.)ಯವರು ತನ್ನ ತಮ್ಮ ಹ. ಹಕಮ್‌ಬಿನ್ ಅಬಿಲ್ ಆಸ್ ಸಖಫೀ (ರ. ಅ.) ಸಹಾಬಿಗೆ ಭಾರತಕ್ಕೆ ಇಸ್ಲಾಮಿನ ಸಂದೇಶವನ್ನು ಮುಟ್ಟಿಸಲು ಆಜ್ಞೆಯಿತ್ತರು. (ಅಸದುಲ್‌ಗಾಬ) ಸದ್ರಿ ಸಹಾಬಿಯರು ಬೊಂಬಾಯಿ ಬಳಿ ಥಾನಾವನ್ನು ತಮ್ಮ ತಬ್ಲೀಗಿನ ಕೇಂದ್ರವಾಗಿ ನಿರ್ಣಯಿಸಿ, ಇಸ್ಲಾಮ್ ಇಲ್ಲವೆ ಜಿಝ್‌ಯದ ಕೇಳಿಕೆಯನ್ನು, ಮುಂದಿಟ್ಟರೆಂತಲೂ ಅದನ್ನು ನಿರಾಕರಿಸಿದಾಗ ದಂಡೆತ್ತಿ ಬಂದು ವಿಜಯ ಹೊಂದಿದರೆಂತಲೂ ಬಲಾಝುರೀ ಬರೆಯುತ್ತಾರೆ. ಇದುವೆ ಭಾರತಭೂಮಿಯ ಮೇಲೆ ಪ್ರಪ್ರಥಮ ಮುಸ್ಲಿಮ್ ಆಕ್ರಮಣ ಹಾಗೂ ವಿಜಯವಾಗಿದ್ದಿತು. ಅನಂತರ ಭರೋಚ್ ಪ್ರದೇಶದ ಮೇಲೆ ಸಹಾಬಗಳು ಆಕ್ರಮಣ ನಡಿಸಿದರು. ಅದೇ ಕಾಲದಲ್ಲಿ ಹ. ಮುಗೀರತ್ ಬಿನ್ ಆಸ್ (ರ. ಅ.) ಎಂಬವರು ಸಿಂಧ್‌ಪ್ರದೇಶದ ಬಂದರ್ ಆಗಿದ್ದ ದೀಬಲ್‌ನ ಮೇಲೆ, ಅನಂತರ ಪ್ರಕೃತದ ಕರಾಚಿಯ ಬಳಿ ಠಠ್ ಪ್ರದೇಶದ ಮೇಲೂ ಆಕ್ರಮಣ ನಡಿಸಿದರು. ಹಿಜರಿ 29–30ರಲ್ಲಿ ಮೂರನೆ ಖಲೀಫರಾದ ಹ. ಉಸ್ಮಾನ್ (ರ. ಅ.)ರವರ ಕಾಲದಲ್ಲಿ ಹ. ಅಬ್ದುರ್ರಹ್ಮಾನ್ ಬಿನ್ ಸಮ್ರ (ರ. ಅ) ಎಂಬ ಸಹಾಬಿಯು ಭಾರತಖಂಡದೊಳಗಿನ "ಝುರಂಜ್" ಹಾಗೂ "ಕಷ್" ಮತ್ತು "ಚಚ್" ಹಾಗೂ "ದಾದನ್" ಮೇಲೆ ಆಕ್ರಮಣ ನಡಿಸಿ ವಶಪಡಿಸಿದರು.

ಪುನಃ ಹ. ಉಸ್ಮಾನ್ (ರ. ಅ.)ರವರ ಕಾಲದಲ್ಲೇ ಒಂದು ಸಮುದ್ರ ಸೇನೆಯು ಈ ಬಂದರುಗಳ ಮೇಲ್ವಿಚಾರಣೆ ನಡಿಸಿ ಹಿಂತಿರುಗಿ ಹೋಯಿತು.

www.bearyinfo.com

ನಾಲ್ಕನೆಯ ಖಲೀಫರಾದ ಹ. ಅಲೀ (ರ. ಅ.)ರವರ ಕಾಲದಲ್ಲಿ ಅಂದರೆ 38ನೇ ಹಿಜರಿಯಲ್ಲಿ ಹ. ಸಾಗಿರ್ ಬಿನ್ ವಲೂರ್ ಮತ್ತು ಹಾರಿಸ್ ಬಿನ್ ಅಮ್ರ್ (ರಿ. ಅ.) ಎಂಬ ನಾಯಕರು ಮಗುದೊಮ್ಮೆ ಸಿಂಧಿನ ಮೇಲೆ ಆಕ್ರಮಣ ನಡೆಸಿದ್ದರು. 39ನೇ ಹಿಜರಿಯಲ್ಲಿ ಒಬ್ಬ ಅರಬ್ ನಾಯಕರು ಈ ಭಾಗಗಳ ಆಡಳಿತೆಗಾಗಿ ನೇಮಿಸಲ್ಪಟ್ಟರು. ಸದ್ರಿಯವರು ಮೂರು ವರ್ಷಾವಧಿಯೊಳಗೆ ಕೊಲ್ಲಲ್ಪಟ್ಟರು.

ಕ್ರಿ. ಶ. 665ರಲ್ಲಿ ಎಂದರೆ 44ನೆ ಹಿಜರಿಯಲ್ಲಿ ಹ. ಅಮೀರ್ ಮುಆವಿಯಾ (ರ. ಅ.)ರವರು ಮುಹಲಬ್ ಎಂಬ ನಾಯಕರನ್ನು ಸಿಂಧ್ ಗಡಿಪ್ರದೇಶಗಳ ಮೇಲಧಿಕಾರಿಯಾಗಿ ನೇಮಿಸಿ ಕಳುಹಿಸಿಕೊಟ್ಟರು. ಆ ಬಳಿಕ ತುಂಬಾ ಕಾಲದ ವರೆಗೂ ಅರಬರ ರಾಜ್ಯದಲ್ಲಿ ಇದೊಂದು ಶಾಶ್ವತ ಹುದ್ದೆಯಾಗಿ ನಿಶ್ಚಯವಾಯಿತು.

ಅಂತು, ಸಿಂಧ್ ಪ್ರದೇಶವು ನಾಲ್ಕನೆ ಖಲೀಫರಾದ ಹ. ಅಲೀ (ರ. ಅ)ರವರ ಖಿಲಾಫತ್ ಕಾಲದಲ್ಲೇ ಅರಬರ ಸ್ವಾಧೀನ ಬಂದಿತ್ತು. ಆದರೆ ಅರಬರು ಹ. ಅಲೀಯವರ (ಸ. ಅ.) ನಿಧನದ ಸುದ್ದಿ ಕೇಳಿ ಹಿಂತಿರುಗಿದರೆಂದು ಚರಿತ್ರೆಗಾರರು ಬರೆಯುತ್ತಾರೆ. (ಬಲಾಜರಿ)

ಹಿಂದುಸ್ಥಾನದಲ್ಲಿ ಮುಸಲ್ಮಾನರು ಕಾಲಿಟ್ಟುದು ಮೊತ್ತಮೊದಲು ಕ್ರಿ ಶ. 712ರಲ್ಲಿ ಮುಹಮ್ಮದ್ ಬಿನ್ ಕಾಸಿಮನ ಆಗಮನದೊಂದಿಗೆಯೆಂದು ಸಾಧಾರಣವಾಗಿ ಚರಿತ್ರೆಯಲ್ಲಿ ನಾವು ಓದುತ್ತೇವೆ. ಆದರೆ ಇದು ಯಥಾರ್ಥಕ್ಕೆ ವಿರುದ್ಧವಿದೆ. ಮೇಲೆ ವಿವರಿಸಿದ ಎಲ್ಲಾ ಆಕ್ರಮಣಗಳೂ ಸಂಪರ್ಕಗಳೂ ಮುಹಮ್ಮದ್ ಬಿನ್ ಕಾಸಿಮನ ಆಗಮನಕ್ಕೂ ಎಷ್ಟೋ ಮುಂಚಿನದು.

## ಕೇರಳ ಕರಾವಳಿಗೆ ಹಾಗೂ ತುಳುನಾಡಿಗೆ ಮುಸ್ಲಿಮರ ಆಗಮನ

ಈ ಮೇಲೆ ವಿವರಿಸಿದ ಘಟನೆಗಳಿಗೂ ಮುಂಚಿತವಾಗಿ ಕೇರಳ ಕರಾವಳಿಯಲ್ಲಿ ಹಾಗೂ ತುಳುನಾಡಿನಲ್ಲಿ ಮುಸ್ಲಿಮರು ನೆಲೆಸಿದ್ದರೆಂದು ಚರಿತ್ರೆಯ ಆಧಾರಗಳಿಂದಲೇ ಸ್ಥಿರವಾಗಿದೆಯೆಂದರೆ ಓದುಗರಿಗೆ ಸೋಜಿಗವೆನಿಸಬಹುದು. ದಕ್ಷಿಣ ಭಾರತಕ್ಕೆ ಮುಸಲ್ಮಾನರು ಪ್ರವೇಶಿಸಿದುದು ಅಲ್ಲಾವುದ್ದೀನ್ ಖಿಲ್ಜಿಯ ಸಂಗಡ ಕ್ರಿ. ಶ. 1296–1316ರಲ್ಲು ಎಂದು ಕೆಲವು ಚರಿತ್ರೆಕಾರರು ಬರೆದಿದ್ದಾರೆ. ಅವರು ಈ ಕುರಿತು ತಕ್ಕ ಶೋಧನೆಗಳನ್ನು ನಡಿಸದೆ ಕೆಲವು ಹಿಂದಿನ ಚರಿತ್ರೆಕಾರರು ಬರೆದುದನ್ನೆ ಆವರ್ತಿಸಿದ್ದಾರೆ ಅಷ್ಟೆ. ಇಸ್ಲಾಮಿನ ಪ್ರಥಮ ನಾಲ್ಕು ಖಲೀಫರ ಖಿಲಾಫತ್ ಕಾಲದಲ್ಲೇ ಕೇರಳ ಮತ್ತು ತುಳುನಾಡಿನ ಪ್ರದೇಶಗಳಿಗೆ ಇಸ್ಲಾಮ್ ಮುಟ್ಟಿದೆಯೆಂದು ದೃಢವಾಗಿ ಹೇಳಲು ಹಲವು ಆಧಾರಗಳಿವೆ.

www.bearyinfo.com

ಪ್ರಸಿದ್ಧ ಚರಿತ್ರೆಕಾರ ಇಲ್ಯಟ್‌ರವರು ತಮ್ಮ ಭಾರತ ಚರಿತ್ರೆ ಭಾಗ ೧ರಲ್ಲಿ ಪ್ರಥಮ ಮುಸ್ಲಿಮ್ ನೌಕೆಯು ಭಾರತದ ಸಮುದ್ರದಲ್ಲಿ ತೋರಿಬಂದುದು ಕ್ರಿ. ಶ. 630ರಲ್ಲಿ ಎಂದರೆ ಎರಡನೇ ಖಲೀಫರಾದ ಹ. ಉಮರ್ (ರ. ಅ.)ರವರ ಖಿಲಾಫತ್ ಕಾಲದಲ್ಲಿ ಹ. ಉಸ್ಮಾನ್ ಸಖಫೀ (ರ. ಅ.)ರವರು ಬ್ರಹ್ರೈನಿನ ಗರ್ವನರಾಗಿದ್ದಾಗ ಎಂದಿದ್ದಾರೆ. ಹ. ಉಮರ್ (ರ. ಅ.)ರವರು (ಬೊಂಬಾಯಿಯ) ಥಾನಾಕ್ಕೆ ಒಂದು ಸೈನ್ಯವನ್ನು ಕಳುಹಿದ್ದರೆಂದೂ ಬರೆದಿದ್ದಾರೆ.

ರೋಲೇಂಡ್ಸನರು ಮುಸ್ಲಿಮ್ ಅರಬರು ಮಲಬಾರ್ ಕರಾವಳಿಯಲ್ಲಿ ಮೊತ್ತಮೊದಲು ನೆಲೆಸಿದುದು ಕ್ರಿ. ಶ. ಏಳನೆಯ ಶತಕದ ಅವಸಾನ ಕಾಲದಲ್ಲಿ ಎಂದಿದ್ದಾರೆ.

ಸ್ಟರ್ರಕ್‌ರವರು ತಮ್ಮ ಸೌತ್ ಕೆನರಾ ಮೇನುವೆಲ್‌ನಲ್ಲಿ ಈ ರೀತಿ ಬರೆದಿದ್ದಾರೆ: "ಕ್ರಿ. ಶ. ಏಳನೆ ಶತಕದಿಂದ ಮುಂದೆ ಫಾರ್ಸಿ ಮತ್ತು ಅರಬೀ ವ್ಯಾಪಾರಿಗಳು ಭಾರತದ ಪಶ್ಚಿಮ ಕರಾವಳಿಯ ವಿವಿಧ ಬಂದರುಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಇಳಿದು, ದೇಶದ ಸ್ತ್ರೀಯರನ್ನು ಮದುವೆಮಾಡಿ ವಾಸಿಸಿಕೊಂಡಿದ್ದರು. ಈ ನೆಲೆಸುವಿಕೆಯು ವಿಶೇಷವಾಗಿ ಮಲಬಾರಿನಲ್ಲಿ ಸಂಖ್ಯೆಯಲ್ಲಿಯೂ ಪ್ರಾಧಾನ್ಯತೆಯಲ್ಲಿಯೂ ಅಧಿಕವಾಗಿತ್ತು. ಅದಕ್ಕೆ ಕಾರಣವೇನೆಂದರೆ ಅಲ್ಲಿಯ ಬಂದರುಗಳಲ್ಲಿ ಎಲ್ಲಾ ವ್ಯಾಪಾರಿಗಳಿಗೂ ಎಲ್ಲಾ ತರದ ಸೌಕರ್ಯಗಳನ್ನು ಒದಗಿಸಿಕೊಡುವುದು ಅಲ್ಲಿಯವರ ಧೋರಣೆಯಾಗಿತ್ತು."

ಮುಸಲ್ಮಾನರು ಕ್ರಿ. ಶ. ಎಂಟನೆ ಶತಕದಲ್ಲಿ ಮಲಬಾರಿನಲ್ಲಿ ವಾಸಿಸಿದ್ದರೆಂಬುದಕ್ಕೆ ಪ್ರತ್ಯಕ್ಷ ದಾಖಲೆಯಾಗಿ ಇರುವ ಸಾಧನವೆಂದರೆ ಕೊಲ್ಲಮಿನ ಒಂದು ಗೋರಿಯಲ್ಲಿ ಹಿ. 166 (ಕ್ರಿ. ಶ. 788) ಎಂದು ಕೆತ್ತಿರುವ ಲೇಖವೆಂದು ಮಲಬಾರ್ ಮತ್ತು ಅಂಜೆಂಗೋ ಜಿಲ್ಲಾಗಜೆಟರ್ ಎಂಬ ಗ್ರಂಥದಲ್ಲಿ ಇನ್ಸ್ ಎಂಬ ಇತಿಹಾಸಜ್ಞರು ಬರೆದಿರುತ್ತಾರೆ.

ಒಂದು ಸಮುದಾಯವೆಂಬ ನೆಲೆಯಲ್ಲಿ ಮುಸ್ಲಿಮರು ಕೇರಳದಲ್ಲಿ ನೆಲೆಸಿದುದು ಕ್ರಿ. ಶ. 705 — 715ರಲ್ಲಿ ಎಂದು ಬಾರತ್ಲೋಮಿಯೋ ಬರೆದಿರುತ್ತಾರೆ.

ಮುಸ್ಲಿಮ್ ಅರಬರು ಮಲಬಾರಿನಲ್ಲಿ ನೆಲೆಸಿದುದು ಒಂಭತ್ತನೆಯ ಶತಕದ ಪ್ರಥಮ ಭಾಗದಲ್ಲೆಂದು ತೋರುತ್ತದೆ ಎಂದು ಡಾ। ಬರ್ನೆಲ್ ಬರೆದಿರುತ್ತಾರೆ.

ದಕ್ಷಿಣ ಭಾರತ ಮತ್ತು ಸಿಲೋನಿನಲ್ಲಿ ಇಸ್ಲಾಮಿನ ಪ್ರಭಾವವು ಅದರ ಆರಂಭ ಕಾಲದಿಂದಲೇ ಎಂದರೆ ಏಳನೇ ಶತಕದಿಂದಲೇ ಇತ್ತು ಎಂದು ಆರ್. ಸಿ. ಮಜುಂದಾರರು ಬರೆದಿರುತ್ತಾರೆ.

www.bearyinfo.com

ಆದರೆ ಪ್ರಸಿದ್ಧ ಇತಿಹಾಸಜ್ಞ ಹಾಗೂ ಪ್ರೀಚಿಂಗ್ ಆಫ್ ಇಸ್ಲಾಮ್ ಎಂಬ ಗ್ರಂಥದ ಲೇಖಕರೂ ಆದ ಮಾತಿವ್ ಆರ್ನಾಲ್ಡ್‌ರವರು ದಕ್ಷಿಣ ಭಾರತದೊಳಗೆ ಇಸ್ಲಾಮಿನ ಪ್ರಪ್ರಥಮ ಆಗಮನವು ಎಂಟನೆ ಶತಕದಷ್ಟು ಹಿಂದಿನದು ಎಂದೂ, ಮಾಪಿಳ್ಳೆಯರು ತಮ್ಮ ವಂಶಜರೆಂದು ವಾದಿಸುವ ಒಂದು ನಿರಾಶ್ರಿತರ ಪಂಗಡವು ಆಗ ಇರಾಕ್ ರಾಜ್ಯದಿಂದ ಬಂದು ಈ ದೇಶದಲ್ಲಿ ನೆಲೆಸಿತೆಂತಲೂ ಬರೆದಿದ್ದಾರೆ.

## ಚಕ್ರವರ್ತಿ ಚೇರಮಾನ್ ಪೆರುಮಾಳರ ಮತಾಂತರ

ಕೇರಳ ಚರಿತ್ರೆ ಸಂಬಂಧವಾದ ಅತಿ ಪುರಾತನ ಮಹಾ ಗ್ರಂಥಗಳೆಂದರೆ "ಕೇರಳೋತ್ಪತ್ತಿ" ಎಂಬ ಮಲೆಯಾಳ ಗ್ರಂಥ ಹಾಗೂ "ತುಹ್ಫತುಲ್ ಮುಜಾಹಿದೀನ್" ಎಂಬ ಅರಬಿ ಗ್ರಂಥ. 'ಕೇರಳೋತ್ಪತ್ತಿ' ಎಂಬ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಗ್ರಂಥಗಳಿವೆ. 'ಕೇರಳೋತ್ಪತ್ತಿ'ಯಲ್ಲಿ ಮಕ್ಕಕ್ಕೆ ಹೋದ ಚಕ್ರವರ್ತಿಯ ಕುರಿತು ಬರೆದುದು ಕಾಣುತ್ತದೆ. ಆದರೆ ಕಾಲಗಣನೆ ಮಾತ್ರ ಹಲವು ತರ ಇದೆ. ಚೇರಮಾನ್ ಪೆರುಮಾಳ್ ಮಕ್ಕವನ್ನು ಸೇರಿ ಪ್ರವಾದಿ ಹ. ಮುಹಮ್ಮದ್ (ಸ.ಅ.) ರವರ 57ನೇ ವಯಸ್ಸಿನಲ್ಲಿ ಅವರನ್ನು ಕಂಡುದಾಗಿ ಕೇರಳೋತ್ಪತ್ತಿಯಲ್ಲಿ ಬರೆದಿದೆ. 16ನೇ ಶತಕದ ಸುಪ್ರಸಿದ್ಧ ಚರಿತ್ರೆಕಾರರೂ ಪಂಡಿತವರ್ಯರೂ ಆಗಿದ್ದ ಅಲ್ಲಾಮ: ಮುಕ್ದೂಮ್ ಜೈನುದ್ದೀನ್ (ಎರಡನೆ)ರವರು ಚೇರುಮಾನ್ ಪೆರ್ರುಮಾಳರ ವಿದೇಶ ಯಾತ್ರೆಯ ಕುರಿತು ಸಂಶೋಧನೆ ನಡಿಸಿ ತಮ್ಮ ಗ್ರಂಥ "ತುಹ್ಫತುಲ್ ಮುಜಾಹಿದೀನ್"ನಲ್ಲಿ ಸದ್ರಿ ಘಟನೆಯು ಹಿಜ್ರಿ ಎರಡನೆ ಶತಕ (ಕ್ರಿ. ಶ. 8ನೆ ಶತಕ)ದಲ್ಲಾಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಆದರೆ ಅರೆಕ್ಕಲ್ ರಾಜವಂಶದ (ಕಣ್ಣಾನೂರಿನ ಮುಸ್ಲಿಮ್ ರಾಜವಂಶ) ರಿಕಾರ್ಡು ಪ್ರಕಾರ ಚೇರಮಾನ್ ಪೆರುಮಾಳ್ ಚಕ್ರವರ್ತಿಯು ಇಸ್ಲಾಮ್ ಸ್ವೀಕರಿಸಿದುದು ಖುಲಫಾಉರ್ ರಾಶಿದೀನ್‌ರ (ಇಸ್ಲಾಮಿನ ನಾಲ್ಕು ಸನ್ಮಾರ್ಗಿಗಳಾದ ಖಲೀಫರು) ಕಾಲದಲ್ಲಿಯೆಂದು ಖಚಿತವಾಗುತ್ತದೆ. ಅಂದರೆ ಚೇರಮಾನ್ ಪೆರುಮಾಳ್ ಚಕ್ರವರ್ತಿಯ ಸಹೋದರಿ–ಪುತ್ರನೂ ಅರೆಕ್ಕಲ್ ರಾಜವಂಶ ಸಂಸ್ಥಾಪಕನೂ ಆದ 'ಮಾಬಲಿ'ಯು ಇಸ್ಲಾಮ್ ಮತವನ್ನು ಅವಲಂಬಿಸಿದ್ದುದು ಹಿಜ್ರಿ 64ರಲ್ಲಿ (ಕ್ರಿ. ಶ. 645ರಲ್ಲಿ)ಯೆಂದು ವ್ಯಕ್ತಪಡಿಸುವ ಆಧಾರಗಳು ಅರೆಕ್ಕಲ್ ಅರಮನೆಯಲ್ಲಿ ಇದೆಯೆಂತಲೂ ಪುರಾತನ ಮುಸ್ಲಿಮ್ ಮಸೀದಿಯಾದ ಮಾಡಾಯಿ ಮಸೀದಿಯಲ್ಲಿರುವ ಶಿಲ್ಪಲೇಖವೂ ವಳರ್‌ಪಟ್ಟಣ ಕಾಜಿಯವರ ಕೈವಶವಿರುವ ಅರಬಿ ಹಸ್ತಲೇಖವೂ ಅವುಗಳಿಗೆ ದೃಢತೆ ಕೊಡುತ್ತವೆ ಎಂತಲೂ ಸುಪ್ರಸಿದ್ಧ ಮಲೆಯಾಳ ಚರಿತ್ರೆಕಾರ ಪಿ. ಎ. ಸಯ್ಯಿದ್ ಮುಹಮ್ಮದ್‌ರವರು ಬರೆಯುತ್ತಾರೆ. ಮಾತ್ರವಲ್ಲ, ಅರೆಕ್ಕಲ್ ರಾಜ್ಯವಂಶವು ಎಂಟನೆ ಶತಮಾನದ ಪ್ರಥಮ ಘಟ್ಟದಲ್ಲಿಯೇ ಅಂದರೆ ಕ್ರಿ. ಶ. 703ರಲ್ಲಿ ಮತ್ತು 744ರಲ್ಲಿ ಭಂಗಾರ, ಬೆಳ್ಳಿ, ತಾಮ್ರ

www.bearyinfo.com



ಎಂಬೀ ಲೋಹಗಳಿಂದ ಹಲವು ತರದ ನಾಣ್ಯಗಳನ್ನು, ಅರಬಿಯಲ್ಲಿಯೂ, ಫಾರ್ಸಿಯಲ್ಲಿಯೂ ಅರೆಕ್ಕಲ್ ಅಲೀ ರಾಜರ ಹೆಸರು ಮತ್ತು ನಾಣ್ಯ ಜ್ಯಾರಿಗೊಳಿಸಿದ ವರ್ಷವನ್ನೂ ಸೂಚಿಸಿ ಮುದ್ರಿಸಿದ್ದ ದಾಖಲೆ ಇದೆ. ಅಂತು ಅರಕ್ಕಲ್ ಅರಮನೆಯಲ್ಲಿ ಶೇಖರಿಸಿಡಲಾದ ಅರಬಿ ಮಲೆಯಾಳ ಆಧಾರಗಳೂ ಫಾರ್ಸಿ ಆಧಾರಗಳೂ 1300 ವರ್ಷಗಳ ಪಾರಂಪರ್ಯವನ್ನು ಪ್ರಖ್ಯಾಪಿಸುತ್ತವೆಯೆಂದು ಸೈಯ್ಯದ್ ಮುಹಮ್ಮದರು ಬರೆಯುತ್ತಾರೆ. ಮಿ. ಕಾಲ್ಡ್‌ವೆಲ್‌ರವರು ಮಲಬಾರಿನಲ್ಲಿ ಹಿಜರಿ 71ರ ಎಂದರೆ ಕ್ರಿ. ಶ. 693ರ ಮುಸ್ಲಿಮ್ ನಾಣ್ಯಗಳನ್ನು ಶೋಧಿಸಿ ಕಂಡು ಹಿಡಿದಿದ್ದಾರೆ.

ಈ ಎಲ್ಲಾ ಆಧಾರಗಳಿಗೂ ವಿಸ್ಮಯಕಾರಕವಾದ ಆಧಾರವೊಂದನ್ನು ಮಲಬಾರಿನ ಸುಪ್ರಸಿದ್ಧ ಮತಪಂಡಿತರಾದ ಶೈಖುಲ್-ಉಲೆಮಾ ಅಲ್ಲಾಮ; ಕುತುಬಿ ಮುಹಮ್ಮದ್ ಮುಸ್ಲಿಯಾರ್‌ರವರು ಕಂಡುಹಿಡಿದಿದ್ದಾರೆ. ಪಯಂಗಾಡಿಯ ಪುರಾತನ ಮಸೀದಿಯೊಂದರಲ್ಲಿ ಸಿಕ್ಕಿದ ಒಂದು ಹಲಗೆ ತುಂಡಿನ ಮೇಲೆ ಕೆತ್ತಲಾಗಿರುವ ಅರಬಿ ಭಾಷೆಯ ಲೇಖವದು. ಇದರ ಚಿತ್ರವನ್ನು ಈ ಪುಟದಲ್ಲಿ ಕೊಡಲಾಗಿದೆ- ಅದರಲ್ಲಿ ಆ ಮಸೀದಿಯ ನಿರ್ಮಾಣವು ಐದನೆ ಹಿಜರಿಯಲ್ಲಿ ಎಂದರೆ ಕ್ರಿ. ಶ. 627ರಲ್ಲಿ ನಡೆಯಿತೆಂದು ಉಲ್ಲೇಖಿಸಲಾಗಿದೆ. ಇದಕ್ಕೂ ಹಿಂದೆ ಏಯಿಮಲಯ ಪುರಾತನ ಮಸೀದಿ ಮಾಡಾಯಿಪಳ್ಳಿ ಮೊನ್ನೆಯಂತೆ ಜೀರ್ಣೋದ್ಧಾರಮಾಡಿದಾಗ ಅಲ್ಲಿ ಸಿಕ್ಕಿದ ಹಲಗೆ ತುಂಡು ಒಂದರಲ್ಲಿ ಸದ್ರಿ ಮಸೀದಿಯು ಹಿಜ್ರಿ 101ರಲ್ಲಿ ಎಂದರೆ ಕ್ರಿ. ಶ. 723ರಲ್ಲಿ ನಿರ್ಮಿಸಲ್ಪಟ್ಟಿತು ಎಂದು ಬರೆಯಲ್ಪಟ್ಟುದು ಸಿಕ್ಕಿತ್ತು. ಕಾಸರಗೋಡಿನಲ್ಲಿ ಹಬೀಬ್ ಬಿನ್ ಮಾಲಿಕ್ ಅವರು ಕಟ್ಟಿಸಿದ 'ಮಾಲಿಕ್ ದೀನಾರ್ ಮಸೀದಿಯು ಹಿಜರಿ 20 (ಕ್ರಿ. ಶ. 642ರಲ್ಲಿ ನಿರ್ಮಿಸಲ್ಪಟ್ಟಿತು ಎಂದು ಬರೆದುದು ಕಾಣುತ್ತದೆ. ಇದೀಗ ಹಿಜ್ರಿ 5ರಲ್ಲಿ (ಕ್ರಿ. ಶ. 627ರಲ್ಲಿ) ಮಲಬಾರಿನಲ್ಲಿ ಒಂದು ಮಸೀದಿಯು ನಿರ್ಮಿಸಲ್ಪಟ್ಟಿತ್ತೆಂಬುದು ಈ ಶೋಧನೆಯಿಂದ ಬಹಿರಂಗವಾಗುತ್ತದೆ." ಅರಬಿಗಳ ಆಗಮನವು ಮಲಬಾರಿನಲ್ಲಿ ಮೊದಲಿನಿಂದಲೇ ಇದ್ದು, ಅದುಕಾರಣವಾಗಿ ನಬಿವರ್ಯರಿಗೆ (ಸ. ಅ.) ಪ್ರವಾದಿತ್ವವು ಲಭಿಸಿದ ವರ್ತಮಾನವು ನಬಿವರ್ಯರ ಕಾಲದಲ್ಲೇ ಮಲಬಾರಿನ ಜನರಿಗೆ ಸುದ್ದಿಯಾಗಿತು" ಎಂದು 'ಆಯಿನಯೆ ಹಕೀಕತ್‌ನುಮಾ' ಎಂಬ ಗ್ರಂಥದಲ್ಲಿ ಸುಪ್ರಸಿದ್ಧ ಚರಿತ್ರೆಕಾರರಾದ ಮೌಲಾನಾ ಅಕ್ಬರ್ ಶಾಹ್ ಖಾನ್ ನಜೀಬಾಬಾದಿಯವರು ಬರೆಯುತ್ತಾರೆ. ಇದೇ ಅಭಿಪ್ರಾಯವನ್ನು ಹಲವು

www.bearyinfo.com

ಮುಸ್ಲಿಮ್ ಮತ್ತು ಅಮುಸ್ಲಿಮ್ ಸಂಶೋಧಕರೂ ಸಮರ್ಥಿಸಿದ್ದಾರೆ. ಅಲ್ಲಾಮ ಖುತ್ಬಿಯವರ ಸಂಶೋಧನೆಯು ಸಂಶೋಧನಾ ಕಾರ್ಯದಲ್ಲಿ ಒಂದು ಹೊಸ ಪರಿಚ್ಛೇದವನ್ನೇ ಸ್ಥಾಪಿಸಿದೆ. ಅರಬರು ತುಂಬಾ ಕಾಲ ಹಿಂದಿನಿಂದಲೇ ಈ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟುಗಳಿಗಾಗಿ ಸಂಚರಿಸುತ್ತಿದ್ದರೆಂಬುದು ನಿರ್ವಿವಾದವಷ್ಟೆ. ಇಸ್ಲಾಮಿನ ಪ್ರಾರಂಭ ಕಾಲದಲ್ಲೂ ಅವರು ಈ ಕಡೆಗಳಲ್ಲಿ ವ್ಯಾಪಾರ ವಹಿವಾಟುಗಳಲ್ಲಿ ನಿರತರಾಗಿದ್ದಿರಬಹುದು. ಈ ರೀತಿ ಇಲ್ಲಿ ವ್ಯಾಪಾರಕ್ಕಾಗಿ ಬಂದಿದ್ದ ಮುಸ್ಲಿಮ್ ಅರಬರು ಈ ಮಸೀದಿಯನ್ನು ಕಟ್ಟಿಸಿರಬಹುದೆಂದು ಊಹಿಸಬಹುದು. ಆದರೆ ಆ ಕಾಲದಲ್ಲಿ ಇಸ್ಲಾಮಿನ ಪ್ರಚಾರ ಕಾರ್ಯವನ್ನು ಅವರು ನಡಿಸಿದ್ದರೋ ಅಥವಾ ಈ ದೇಶದವರು ಯಾರೂ ಆ ಸಮಯ ಇಸ್ಲಾಮ್ ಮತವನ್ನು ಅವಲಂಬಿಸಿದ್ದರೋ ಎಂಬೀ ವಿಷಯಗಳ ಕುರಿತು ಏನೊಂದು ಆಧಾರಗಳೂ ಇನ್ನೂ ಸಿಕ್ಕಿಲ್ಲ. ಸಂಶೋಧನೆಯಿಂದ ಇನ್ನೂ ಹೊಸ ಹೊಸ ಸಂಗತಿಗಳು ಬೆಳಕಿಗೆ ಬರಲಿರುವುವು. ಅಂತು, ಭಾರತದಲ್ಲಿ ಮುಹಮ್ಮದ್ ಬಿನ್ ಕಾಸಿಮ್ (ರ. ಅ.)ರವರ ಆಗಮನಕ್ಕಿಂತ 90 ವರ್ಷ ಮೊದಲೇ ಇಸ್ಲಾಮು ಭಾರತವನ್ನು ಪ್ರವೇಶಿಸಿರುವುದಾಗಿ ಈ ಚಾರಿತ್ರಿಕ ಉಲ್ಲೇಖದಿಂದ ವ್ಯಕ್ತವಾಗುತ್ತದೆ. ಮಾತ್ರವಲ್ಲ ಚೇರಮಾನ್ ಪೆರುಮಾಳರ ಸಂಗಾತಿಗಳಾದ ಮಾಲಿಕ್ ಬಿನ್ ದೀನಾರ್ ಮೊದಲಾದ ಮಿಶನರಿಗಳಿಗಿಂತಲೂ ಮೊದಲೇ ಇಲ್ಲಿ ಮುಸಲ್ಮಾನರ ಮಸೀದಿಯೊಂದಿತ್ತು ಎಂಬುದೂ ಬೆಳಕಿಗೆ ಬರುತ್ತದೆ.




ಹಿಜರಿ 127ರಲ್ಲಿ
ಕಾಸರಗೋಡಿನಲ್ಲಿ ನಿಧನ
ಹೊಂದಿದರೆನ್ನಲಾದ
ಹ. ಮಾಲಿಕ್ ಬಿನ್
ದೀನಾರರ ಗೋರಿ

(ಸಂಪ,ವರ್ದಿ)

www.bearyinfo.com

ಮಿಂಬರ್




ಸದ್ರಿ ಮಸೀದಿಯ ಮಿಂಬರ್ ಇದರಲ್ಲೂ ಕೆತ್ತನೆ ಕೆಲಸವಿದೆ.

ಏಳನೇ ಶತಮಾನದಲ್ಲಿ ಹಜ್ರತ್ ಹಬೀಬ್ ಬಿನ್ ಮಾಲಿಕ್‌ರವರಿಂದ ನಿರ್ಮಿಸಲ್ಪಟ್ಟು ಹದಿನೆಂಟನೆಯ ಶತಮಾನದಲ್ಲಿ ಸುಲ್ತಾನ್ ಟೀಪು ಶಹೀದರಿಂದ ಪುನರುತ್ಥಾನಗೊಳಿಸಲ್ಪಟ್ಟ **ಮಸ್ಜಿದ್ ಜೀನತ್ ಬಕ್ಷ್** ಎಂಬ ಮಂಗಳೂರಿನ ಕೇಂದ್ರ ಜುಮಾಮಸೀದಿ.


ಇದರ ಕಂಬಗಳಲ್ಲಿ ಮತ್ತು ಬೋಡಿಗೆಗಳಲ್ಲಿ ಇರುವ ಮರಕೆತ್ತನೆಯ ಕೆಲಸವು ಇಡೀ ಜಿಲ್ಲೆಯಲ್ಲಿಯೇ ಅದ್ವಿತೀಯವಾದುದು.

ಇದೇ ಮಸೀದಿಯ ಒಂದು ಕಂಬವನ್ನು ಮುಖಚಿತ್ರದಲ್ಲಿ ಕಾಣಬಹುದು.

ಮಸ್ಜಿದ್ ಜೀನತ್ ಬಕ್ಷ್, ಬಂದರ್




www.bearyinfo.com



ಉಳ್ಳಾಲದಲ್ಲಿ ಹೊಸತಾಗಿ ಕಟ್ಟಿಸಿರುವ ಜುಮಾ ಮಸೀದಿಯ ಒಂದು ಪಾರ್ಶ್ವದ ಚಿತ್ರ.
ಮಸೀದಿಯ ಕೆಲಸವು ಇನ್ನೂ ನಡಿಯುತ್ತಲಿದೆ. ಸುಮಾರು ಎರಡು ಲಕ್ಷ
ರೂಪಾಯಿ ಈ ವರೆಗೆ ಖರ್ಚಾಗಿರಬಹುದೆಂದು ಊಹಿಸಲಾಗಿದೆ.
ಈ ಚಿತ್ರವು ಉರೂಸಿನ ಸಮಯ ರಾತ್ರಿ ಹೊತ್ತು ತೆಗೆದುದು.

ಪುರಾತನ ಕಾಲದ ಮುಸ್ಲಿಮ್ ಮತ
ಪ್ರಚಾರಕರೆನ್ನಲಾದ ಉಳ್ಳಾಲದ
ಸಯ್ಯದ್ ಶರೀಫುಲ್ ಮದನೀ
ಅವರ ಗೋರಿ. ಇದರ
ಚರಿತ್ರೆಯು ಕುರಿತು
ಇನ್ನೂ ಸಂಶೋಧನೆ
ನಡೆದಿಲ್ಲ.



— ಡೇಲೈಟ್ ಇಲೆಕ್ಟ್ರಿಕ್ ವರ್ಕ್ಸ್‌ರವರ ಕೃಪೆಯಿಂದ.

www.bearyinfo.com

# ನಮ್ಮ ಸಮಾಜದ ಚರಿತ್ರೆ

## ಸಂಕ್ಷಿಪ್ತ ಹಿನ್ನೆಲೆ

ಕ್ರಿ. ಶ. ಆರನೆ ಶತಮಾನದಲ್ಲಿ ಲೋಕದಲ್ಲೆಲ್ಲೂ ಜುಲುಮೆ, ಅತ್ಯಾಚಾರ, ಅಧರ್ಮ ಹಾಗೂ ಅಸಭ್ಯತೆಯು ತಾಂಡವವಾಡುತ್ತಿದ್ದು ಮಾನವತೆಯು ಅಧಃಪತನ ಹೊಂದುತ್ತಿದ್ದ ಸಂದಿಗ್ಧ ಸನ್ನಿವೇಶದಲ್ಲಿ ಪರಿಶುದ್ಧ ನಬಿವರ್ಯರಾದ ಹ. ಮುಹಮ್ಮದ (ಸ.ಅ)ರವರು ಇಸ್ಲಾಮಿನ ಸಂದೇಶವನ್ನು ಸಾರಿದರು. ತನ್ನ ಪವಿತ್ರ ಜೀವನಕಾಲದಲ್ಲೇ ತಾನು ಬೋಧಿಸುತ್ತಿದ್ದ ಕ್ರಾಂತಿಕಾರಕ ದೈವಿಕ ಮತ ನಿರ್ದೇಶ ಗಳಿಗನುಸೃತವಾದ ಒಂದು ಮಾದರಿ ಸಂಸ್ಥಾನವನ್ನು ರಚಿಸಲು ಅವರಿಗೆ ಸಾಧ್ಯವಾಯಿತು. ಇದು ಇಡೀ ಜಗತ್ತಿನ ಸ್ಥಿತಿಗತಿಗಳನ್ನೇ ಮಾರ್ಪಡಿಸಿದ ಮಹತ್ವದ ಸಂಗತಿಯಾಗಿ ಪರಿಣಮಿಸಿತು. ಪುರೋಹಿತವರ್ಗವಿಲ್ಲದ ಏಕದೇವಾರಾಧನೆ ಹಾಗೂ ಕೀಳು-ಮೇಲು, ಕರಿ—ಬಿಳಿ, ಧನಿಕ—ಬಡವವೆಂಬ ಭೇದ ಭಾವವನ್ನು ಗಣಿಸದ ಸರ್ವಸೋದರಭಾವದ ಕ್ರಾಂತಿಕಾರಕ ಸಿದ್ಧಾಂತಗಳು ಇಡೀ ಲೋಕದಲ್ಲೇ ವಿಚಾರಕ್ರಾಂತಿಯನ್ನು ಮೊಳಗಿಸಿದುವು.

ನಬಿವರ್ಯರ ಜೀವನ ಕಾಲದಲ್ಲೇ ಇಸ್ಲಾಮಿನ ದಿವ್ಯಸಂದೇಶವು ಪಾಶ್ಚಾತ್ಯ ಪೌರಾಸ್ತ್ಯ ದೇಶಗಳಲ್ಲಿ ಬಹಿರಂಗವಾಗಿ ತಿಳಿದಿತ್ತು. ನಬಿವರ್ಯರು (ಸ. ಅ.) ಇಸ್ಲಾಮಿಗೆ ಆಹ್ವಾನವೀಯುತ್ತಾ ಆ ಕಾಲದ ಪ್ರಧಾನರಾಜರುಗಳಿಗೂ ಆಳರಸರಿಗೆಲ್ಲರಿಗೂ ತನ್ನ ದೂತರ ಮುಖಾಂತರ ಪತ್ರಗಳನ್ನು ಕಳುಹಿಸಿದ್ದರು. ಕೇರಳದ ಚೇರಮಾನ್ ಪೆರುಮಾಳ್ ಎಂಬ ಅರಸನು ನಬಿವರ್ಯರ ಪ್ರವಾದಿತ್ವ ಕಾಲದಲ್ಲಿ ಉಂಟಾದ ಚಂದ್ರಸೀಳಾದ ಅದ್ಭುತಸಂಭವವನ್ನು ಕಂಡು ಅದರ ಕುರಿತು ಅನ್ವೇಷಣೆ ನಡಿಸಿದ್ದನೆಂದೂ, ಕಡೆಗೆ ಅರಬಿ ಹಡಗಗಳ ನಾವಿಕರು ನಬಿವರ್ಯರ (ಸ. ಅ.) ಪ್ರಸಾದಿತ್ವದ ಕುರಿತು ಆತನಿಗೆ ಬೋಧಿಸಿದರೆಂತಲೂ ಆತನು ರಾಜತ್ಯಾಗಮಾಡಿ ಮಕ್ಕಕ್ಕೆ ಹೋದನೆಂತಲೂ "ಕೇರಳೋತ್ಪತ್ತಿ"ಯಿಂದ ವ್ಯಕ್ತವಾಗುತ್ತದೆ. ಈ ಚಕ್ರವರ್ತಿ ಚೇರಮಾನ್ ಪೆರುಮಾಳರು ಇಸ್ಲಾಮ್ ಸ್ವೀಕರಿಸಿ ಅರಬಿಯದ 'ಹದರಮೌತ್' ಎಂಬಲ್ಲಿ ದೈವಾಧೀನರಾದರೆಂತಲೂ, ಅವರು ಸಾಯುವುದಕ್ಕೂ ಮುಂಚಿತವಾಗಿ ತನ್ನ ಸ್ನೇಹಿತರುಗಳಾದ ಶರಫ್‌ಬಿನ್‌ಮಾಲಿಕ್, ಮಾಲಿಕ್ ಬಿನ್ ದೀನಾರ್, ಹಬೀಬ್ ಬಿನ್ ಮಾಲಿಕ್ ಮೊದಲಾದವರನ್ನು ಇಸ್ಲಾಮಿನ ಪ್ರಚಾರಕ್ಕಾಗಿ ಕೇರಳಕ್ಕೆ ಹೋಗಲು ವಿಜ್ಞಾಪಿಸಿ, ಅಲ್ಲಿಯ ಅವರ ಸಂಬಂಧಿಕರಿಗೆ ಈ ಯಾತ್ರಿಕರಿಗೆ ಬೇಕಾದ ಎಲ್ಲ ಸವಲತ್ತುಗಳನ್ನು ಒದಗಿಸಿ ಕೊಡಲು ಆಜ್ಞಾಪಿಸಿ ಪತ್ರ ಬರೆದುಕೊಟ್ಟಿದ್ದರೆಂದೂ 'ತುಹ್ಫತುಲ್ ಮುಜಾಹಿದೀನ್' ಗ್ರಂಥದಲ್ಲಿ ಬರೆದಿದೆ.

www.bearyinfo.com

## ಮಂಗಳೂರಿಗೆ ಇಸ್ಲಾಮಿನ ಆಗಮನ

ಚಕ್ರವರ್ತಿ ಚೇರಮಾನ್ ಪೆರುಮಾಳರ ಸ್ನೇಹಿತ ಮುಸ್ಲಿಮ್ ಮಿಶನರಿಗಳಾದ ಹ. ಶರಫ್ ಬಿನ್‌ಮಾಲಿಕ್, ಮಾಲಿಕ್ ಬಿನ್‌ದೀನಾರ್, ಹಬೀಬ್ ಬಿನ್ ಮಾಲಿಕ್ (ರ. ಅ) ಮತ್ತು ಇತರರು ಕೇರಳದಲ್ಲಿ ಮತಪ್ರಚಾರ ಕೈಗೊಂಡಂತೆ ದಕ್ಷಿಣಕನ್ನಡದ ಜಿಲ್ಲೆಯಲ್ಲಿಯೂ ಇಸ್ಲಾಮಿನ ಮಾರ್ಗಕ್ಕೆ ಜನರನ್ನು ಆಹ್ವಾನಿಸಿದ್ದರೆಂಬುದೂ, ಅವರ ಪರಿಶ್ರಮದ ಫಲವಾಗಿ ಇಲ್ಲಿಯೂ ಅನೇಕರು ಮತಾಂತರ ಹೊಂದಿ ಇಸ್ಲಾಮ್ ದೀಕ್ಷೆಯನ್ನು ಸ್ವೀಕರಿಸಿದ್ದರೆಂಬುದೂ, ನಮ್ಮ ಜಿಲ್ಲೆಯ ಬಾರ್ಕೂರು, ಮಂಗಳೂರು ಮತ್ತು ಕಾಸರಗೋಡಿನಲ್ಲಿ ಹ. ಹಬೀಬ್ ಬಿನ್ ಮಾಲಿಕ್ (ರ. ಅ)ರವರು ಕಟ್ಟಿಸಿದ ಮಸೀದಿಗಳಿಂದ ವ್ಯಕ್ತವಾಗುತ್ತದೆ. ಆ ಕಾಲದಲ್ಲಿ ಮಂಗಳೂರು ತುಳುನಾಡಿನ ಒಂದು ಅಂತರ್‌ರಾಷ್ಟ್ರೀಯ ಖ್ಯಾತಿಯ ರೇವು ಪಟ್ಟಣವಾಗಿತ್ತಲ್ಲದೆ ರಾಜಧಾನಿಯಾಗಿರಲಿಲ್ಲ. ವ್ಯಾಪಾರ ಕೇಂದ್ರವಾಗಿ ಅದು ಶೋಭಿಸುತ್ತಿತ್ತು. ಕೇರಳದಲ್ಲಿ ಚೇರಮಾನ್ ಪೆರುಮಾಳರ ಸಹೋದರಿ ಪುತ್ರ 'ಮಾಬಲಿ'ಯು ಇಸ್ಲಾಮ್ ದೀಕ್ಷೆಯನ್ನು ಸ್ವೀಕರಿಸಿ 'ಮುಹಮ್ಮದಾಲಿ' ಎಂಬ ಹೆಸರಿನಿಂದ ಅರಿಯಲ್ಪಡುತ್ತಿದ್ದನು. ಇಂದಿನ 'ಧರ್ಮಡಂ' ಎಂಬುದೇ ಅಂದು ಅವನ ರಾಜಧಾನಿಯಾಗಿತ್ತು. ಈ ಘಟನೆಯು ಹಿಜ್ರ 64ರಲ್ಲಿ (ಕ್ರಿ. ಶ. 645ರಲ್ಲಿ) ನಡಿಯಿತೆಂದು ಈ ಮೊದಲೇ ವಿವರಿಸಲಾಗಿದೆ. ಇದೇ ಸಮಯದಲ್ಲಿ ತುಳುವವನ್ನು ಬಲಿಷ್ಠ ಕರ್ಣಾಟಕ ಸಾರ್ವಭೌಮನಾದ ೨ನೇ ಪುಲಕೇಶಿಯ ಕೈಕೆಳಗೆ ಆಲೂಪ ಅರಸನಾದ ಕುಂದವರ್ಮನು ಆಳುತ್ತಿದ್ದನು. ಬಾರಕೂರಿನಲ್ಲಿದ್ದ ಜೈನ ಅರಸರ ಆಳಿಕೆಯು ಕ್ರಿ. ಶ. 575ರ ಮೊದಲೇ ಅಂತ್ಯವಾಗಿತ್ತು. ಜೈನರ ಹಾಗೂ ಬೌದ್ಧ ಮತದ ಪ್ರಾಬಲ್ಯವು ತುಳುವದಲ್ಲಿ ಕಡಿಮೆಯಾಗಿ ಜೈನರು ಮತ್ತು ಬೌದ್ಧರು ಬಹಿಷ್ಕೃತರಾಗಿದ್ದರು. ಬ್ರಾಹ್ಮಣರು ಪ್ರಬಲರಾಗಿದ್ದರೂ ಅವರೊಳಗೂ ಸ್ಥಾನಮಾನಗಳಿಗೆ ಪೈಪೋಟಿಯು ಆರಂಭವಾಗಿತ್ತು. ತುಳುವದಲ್ಲೆಲ್ಲೂ ಜಾತಿಕಟ್ಟಿನ ಬಿಗಿತನವು ತಲೆದೋರಿತ್ತು. ಜಾತಿ ವ್ಯತ್ಯಾಸಗಳು ದ್ರಾವಿಡರಲ್ಲಿಯೂ ತಲೆದೋರಿದ್ದುವು. ಬೌದ್ಧಮತದ ಮಹಾಯಾನ ಶಾಖೆಯು ತುಳುವದಲ್ಲಿ ಹೀನಾವಸ್ಥೆಗೆ ಬಂದಿತ್ತು. ಈ ಪಂಗಡದ ಸಂಪರ್ಕದಿಂದ ಹಿಂದುಗಳಲ್ಲಿಯೂ ದೇವಿ ಆರಾಧನೆಯು ಪ್ರಾರಂಭವಾಗಿ ದುರ್ಗಾಪರಮೇಶ್ವರಿ ದೇವಾಲಯಗಳೂ ಮಹಾಲಿಂಗೇಶ್ವರ ದೇವಾಲಯಗಳೂ ಅಲ್ಲಲ್ಲಿ ತಲೆದೋರಿದ್ದುವು.

ಆ ಸಮಯದಲ್ಲಿ ತುಳುವದಲ್ಲೂ ಜೈನ ಬೌದ್ಧ ಧರ್ಮಗಳು ಪತನ ಹೊಂದುತ್ತಲಿದ್ದು ಜೈನರು ಮತ್ತು ಬೌದ್ಧರು ತುಂಬಾ ಕಳವಳಕ್ಕೀಡಾಗಿದ್ದರು. ಎಲ್ಲೆಡೆಯಲ್ಲಿಯೂ ಅವರು ಬಹಿಷ್ಕೃತರಾಗಿದ್ದರು. ಆ ಸಮಯಕ್ಕೆ ಸರಿಯಾಗಿ ಈ ಪ್ರದೇಶಕ್ಕೆ ಇಸ್ಲಾಮಿನ ಸಂದೇಶವನ್ನು ಹಬೀಬ್ ಬಿನ್ ಮಾಲಿಕ್ (ರ. ಅ)ರವರೂ

www.bearyinfo.com

ಅವರ ಸಂಗಾತಿಗಳೂ ತಂದಾಗ ಅನೇಕ ಬೌದ್ಧರೂ ಜೈನರೂ ಇಸ್ಲಾಮ್ ಸ್ವೀಕರಿಸಿದರು. ಮಾತ್ರವಲ್ಲ, ಬಾರ್ಕೂರು, ಮಂಗಳೂರು, ಕಾಸರಗೋಡು ಮೊದಲಾದ ಕಡೆಗಳಲ್ಲಿ ಮಸೀದಿಗಳನ್ನೂ ಕಟ್ಟಲಾಯಿತು. ಸಿಂಧ್ ಪ್ರದೇಶದಲ್ಲಿ ಮುಹಮ್ಮದ್ ಬಿನ್ ಕಾಸಿಮ (ರ. ಅ)ರವರ ಆಗಮನಕಾಲದಲ್ಲಿ ಬೌದ್ಧ ಸನ್ಯಾಸಿಗಳು ಇಸ್ಲಾಮಿನ ವಿಜಯದ ಕುರಿತು ತಮ್ಮ ಮತಗ್ರಂಥಗಳಲ್ಲಿ ಭವಿಷ್ಯವಾಣಿಯಿರುವುದೆಂದು ಇತರರೊಡನೆ ವಾದಿಸಿ ದೊಡ್ಡ ಸಂಖ್ಯೆಯಲ್ಲಿ ಇಸ್ಲಾಮ್ ಮತವನ್ನು ಅವಲಂಬಿಸಿದ್ದರೆಂದು ಅರಬಿ ಚರಿತ್ರೆಕಾರರು ಬರೆಯುತ್ತಾರೆ. ಅಫ್ಘಾನಿಸ್ತಾನ, ತುರ್ಕಿಸ್ಥಾನದ ಬೌದ್ಧರು ಇಸ್ಲಾಮ್ ಸ್ವೀಕರಿಸಿದುದನ್ನು ಕಂಡು ಇವರೂ ಇಸ್ಲಾಮ್ ಸ್ವೀಕರಿಸಿರಬಹುದೆಂದು ಊಹಿಸಬಹುದು. ಅಂತು, ಅದೇ ಕಾಲದಲ್ಲಿ ತುಳುನಾಡಿನ ಹಾಗೂ ಕೇರಳದಲ್ಲಿಯೂ ಅನೇಕ ಬೌದ್ಧರು ಹಾಗೂ ಜೈನರು ಇಸ್ಲಾಮ್ ಮತ ಸ್ವೀಕರಿಸಿದ್ದರು. ಅವರು ಇಸ್ಲಾಮಿನ ದಿವ್ಯಧ್ಯೇಯಗಳ ಅರಿವಿನಿಂದಲೇ ಮುಸ್ಲಿಮರಾಗಿದ್ದು, ಈ ಪ್ರದೇಶದಲ್ಲಿ ಇಸ್ಲಾಮಿನ ಪ್ರಚಾರ ಹಾಗೂ ಸಂಘಟನೆಗೆ ತುಂಬಾ ಸಹಾಯಮಾಡಿದರು. ಕ್ರಿ. ಶ. 7ನೇ ಶತಮಾನದಿಂದ ಪರ್ಷಿಯದ ಮತ್ತು ಅರೇಬಿಯದ ಮುಸ್ಲಿಮ್ ವ್ಯಾಪಾರಸ್ಥರು ಈ ಜಿಲ್ಲೆಯ ಮಂಗಳೂರು, ಉಳ್ಳಾಲ, ಮಂಜೇಶ್ವರ, ಕಾಸರಗೋಡು, ಮುಂತಾದ ಬಂದರುಗಳಲ್ಲಿ ನೆಲೆನಿಂತು ಪರದೇಶಗಳ ಸಂಗಡ ವ್ಯಾಪಾರವನ್ನು ನಡಿಸುತ್ತಿದ್ದರು. ಈ ಸಾಹುಕಾರರು ಸ್ಥಳೀಯ ಹೆಂಗಸರನ್ನು ಮದುವೆ ಮಾಡಿ ಸುಖದಿಂದ ಇದ್ದರು. "ಕಣ್ಣಾನೂರಿನ ಚರಕಲ್ ವಂಶದ ಒಬ್ಬನು ಮುಸಲ್ಮಾನನಾಗಿ ತನ್ನ ರಾಜ್ಯದಲ್ಲಿ ಅನೇಕರನ್ನು ತನ್ನ ಮತಕ್ಕೆ ಸೇರಿಸಿದಾಗ ದಕ್ಷಿಣಕನ್ನಡ ಜಿಲ್ಲೆಯಲ್ಲಿಯೂ ಅನೇಕ ಮಂದಿ ಮುಸಲ್ಮಾನರಾದರೆಂದೂ" ಶ್ರೀ ಗಣಪತಿರಾವ್ ಐಗಳ್ ಬರೆಯುತ್ತಾರೆ. ಈ ಘಟನೆಯು ಕ್ರಿ. ಶ. 645ರಲ್ಲಿ ನಡಿಯಿತೆಂದು ಚರಿತ್ರೆಯ ಅತ್ಯಾಧುನಿಕ ಸಂಶೋಧನೆಗಳಿಂದ ವ್ಯಕ್ತವಾಗುತ್ತದೆ. ಹ. ಹಬೀಬ್ ಬಿನ್ ಮಾಲಿಕ್ (ರ. ಅ)ರವರು ಮಂಗಳೂರಲ್ಲಿ ಕಟ್ಟಿಸಿದ ಮಸೀದಿಯು ಇಂದಿನ ನಮ್ಮ ಕೇಂದ್ರ ಜುಮಾ ಮಸೀದಿ ಎಂತಲೂ ಅದಕ್ಕೆ ಇಂದಿರುವ ರೂಪಕೊಟ್ಟುದು ಸುಲ್ತಾನ್ ಟಿಪ್ಪು ಶಹೀದ್ (ರ. ಅ)ರವರೆಂತಲೂ ತಿಳಿದುಬಂದಿದೆ.

## 'ಮೈಕಾಲ' ಎಂಬ ಹೆಸರಿನ ಹಿನ್ನೆಲೆ

ತುಳುವದ ಬೌದ್ಧರು, ಜೈನರಲ್ಲನೇಕರು ಅಂದು ಇಸ್ಲಾಮ್ ಧರ್ಮ ಸ್ವೀಕರಿಸಿದ್ದರೆಂಬುದಕ್ಕೆ ಅನೇಕ ಆಧಾರಗಳಿವೆ. ತುಳುವಕ್ಕೆ ಮುಸ್ಲಿಮರ ಆಗಮನದ ಹೊತ್ತಿಗೆ ಬೌದ್ಧ ಮತ್ತು ಜೈನ ಮತಾನುಯಾಯಿಗಳು ತುಂಬಾ ಮಂದಿ ಇದ್ದರು. "ತುಳುವದಲ್ಲಿರುವ ದುರ್ಗಾಪರಮೇಶ್ವರೀ ದೇವಾಲಯುಗಳೂ, ಶಾಸ್ತಾವು ಕಲ್ಲುಗಳೂ ಒಂದಾನೊಂದು ಕಾಲದಲ್ಲಿ ಬೌದ್ಧಮತದ ಪೂಜಾ ಸ್ಥಳಗಳಾಗಿರಬೇಕೆಂತಲೂ, ಮಂಗಳೂರಿನ ಕದಿರೆಯು ಬೌದ್ಧವಿಹಾರವಾಗಿತ್ತೆಂದೂ, ಮಂಗಳಾದೇವಿಯು ಬೌದ್ಧಮತದ ತಾರಾಭಗವತಿಯಾಗಿರಬೇಕೆಂತಲೂ

www.bearyinfo.com

ಸುಪ್ರಸಿದ್ಧ ಇತಿಹಾಸಜ್ಞ ಡಾ। ಸಾಲೆತ್ತೂರರು ಅಭಿಪ್ರಾಯಪಟ್ಟಿದ್ದಾರೆ. ಜಿಲ್ಲೆಯ ಮುಸಲ್ಮಾನರಲ್ಲಿ ಇಂದು ಪ್ರಚಾರವಿರುವ 'ಮೈಕಾಲ'ವೆಂಬ ಹೆಸರು 'ಮಾಯಾ ಕಾಲ'ವೆಂಬ ಶಬ್ದದಿಂದ ಹೊರಟಿತೆಂದೂ 'ಮಾಯಾ'ಳ ಸ್ಥಳ ಅಥವಾ ವೀಡು ಎಂದೇ ಅದಕ್ಕೆ ಅರ್ಥವೆಂತಲೂ, ಮಾಯಾದೇವಿ ಎಂಬುದು ಬೌದ್ಧ ಮತದ ತಾರಾಭಗವತಿಯ ಹೆಸರೆಂತಲೂ, ಇದರಿಂದ ಮಂಗಳೂರಿಗೆ 'ಮೈಕಾಲ'ವೆಂಬ ಹೆಸರು ಬರಲು ಕಾರಣವೇನೆಂಬುದು ಸ್ಪಷ್ಟವಾಗುತ್ತದೆಂತಲೂ ಡಾ। ಸಾಲೆತ್ತೂರರು ಬರೆಯುತ್ತಾರೆ. (Ancient History of Karnataka vol. I.) 'ಮೈಕಾಲ' ಅಥವಾ 'ಮೈಕಾನ'ವೆಂಬುದು ಮಂಗಳೂರಿನ ಪುರಾತನ ಹೆಸರುಗಳಲ್ಲೊಂದು ಎಂತಲೂ ಅದು ಅಂದು ನಗರದ ಮೂಲಭಾಗವಾಗಿದ್ದ ದಕ್ಷಿಣ ಭಾಗದ ಹೆಸರೆಂತಲೂ ಅವರು ವಿವರಿಸುತ್ತಾರೆ. 'ಮೈಕಾಲ'ವೆಂಬ ಹೆಸರು ಇಂದಿಗೂ ಕೇವಲ ಮುಸಲ್ಮಾನರೊಳಗೇ ಪ್ರಚಾರವಿರುವುದರಿಂದ ಮುಸಲ್ಮಾನರು ಇಲ್ಲಿಗೆ ಆಗಮಿಸುವಾಗ ಇಲ್ಲಿ ಬೌದ್ಧರ ಪ್ರಾಬಲ್ಯವು ಹೆಚ್ಚಿತ್ತೆಂಬುದು ಇದರಿಂದ ವ್ಯಕ್ತ ವಾಗುವುದಲ್ಲದೆ ಇಲ್ಲಿ ಮೊತ್ತಮೊದಲು ಇಸ್ಲಾಮ್ ಸ್ವೀಕರಿಸಿದವರೂ ಬೌದ್ಧ ಹಾಗೂ ಜೈನ ಮತಾನುಯಾಯಿಗಳೆಂದೂ ಸ್ಥಿರವಾಗುತ್ತದೆ. ನಮ್ಮ ನಗರದ ಕೆಲವು ಮುಸ್ಲಿಮ್ ಮನೆಗಳಿಗೆ 'ಜೈನ್‌ತಾನ್' (ಜೈನ:ಸ್ಥಾನ್) 'ಬಲ್ಲಾಳಗ' ಮೊದಲಾದ ಜೈನ ಸಂಬಂಧ ಸೂಚಿಸುವ ಹೆಸರುಗಳಿವೆಯೆಂಬುದು ಇದಕ್ಕೆ ಇನ್ನೂ ಬಲಕೊಡುತ್ತದೆ. ಮಾತ್ರವಲ್ಲ, ನಮ್ಮ ಕೆಲವು ಮಸೀದಿಗಳಲ್ಲಿರುವ ಕೆತ್ತನೆಯ ಕೆಲಸವನ್ನು ನೋಡುವಾಗ ಮತಾಂತರ ಹೊಂದಿದ ಜೈನಕಲಾಕಾರರು ತಮ್ಮ ಯೋಗ್ಯತೆಯನ್ನು ಇಸ್ಲಾಮಿಗೆ ಅಧೀನಪಡಿಸಿ ಅದರ ಮೇರೆಯೊಳಗೆ ಇದ್ದುಕೊಂಡು ತಮ್ಮ ಎಲ್ಲಾ ಕಲಾಕೌಶಲವನ್ನೂ ಉಪಯೋಗಿಸಿದ್ದಾರೆಂಬುದೂ ವ್ಯಕ್ತವಾಗುತ್ತದೆ. ಇದೂ ಅಲ್ಲದೆ ಇಂದಿಗೂ ನಮ್ಮ ಸ್ತ್ರೀಯರ ಬೆಳ್ಳಿ ಭಂಗಾರದ ಆಭರಣಗಳು ಜೈನರ ಆಭರಣಗಳನ್ನು ಹೋಲುತ್ತವೆ. ಅಷ್ಟೆ ಅಲ್ಲ, ನಮ್ಮ ಭಾಷೆಯಲ್ಲಿಯೂ ಅನೇಕ ತುಳು, ಕನ್ನಡ ಶಬ್ದಗಳು ಮಲೆಯಾಳಕ್ಕಿಂತಲೂ ಅಧಿಕ ಪರಿಮಾಣದಲ್ಲಿ ಬೆರಕೆಯಾಗಿರುವುದನ್ನು ನೋಡುವಾಗ ನಮ್ಮ ಪೂರ್ವ ಜರು ಈ ಭಾಷೆಗಳನ್ನಾಡುತ್ತಿದ್ದರೆಂದೂ ಊಹಿಸಬಹುದು.

## ಪಾಡ್ದೊನಗಳಲ್ಲಿ ಮುಸ್ಲಿಮರ ಸಂದ್ದಿ

ತುಳು ಪಾಡ್ದೊನಗಳಲ್ಲಿ 'ಬ್ಯಾರಿ'ಗಳ ಕುರಿತು ಬರೆದು ಕಾಣುತ್ತದೆ. ಬೊಬ್ಬರ್ಯ ಎಂಬ ಪಾಡ್ದೊನವು ದಕ್ಷಿಣಕನ್ನಡಕ್ಕೆ ಮುಸ್ಲಿಮ್ ವ್ಯಾಪಾರಿಗಳ ಆಗಮನವನ್ನು ಸೂಚಿಸುತ್ತದೆಯೆಂದು ಅನೇಕ ಚರಿತ್ರೆಕಾರರು ಬರೆಯುತ್ತಾರೆ. ಆದರೆ ಮುಸ್ಲಿಮ್ ವ್ಯಾಪಾರಿಗಳ ಆಗಮನವು ಪಾಡ್ದೊನದ ಕಾಲಕ್ಕಿಂತಲೂ ಎಷ್ಟೋ ಮುಂಚೆ ಆಗಿತ್ತೆಂದು ಮೇಲೆ ವಿವರಿಸಿದ್ದೇವೆ.

www.bearyinfo.com

ಪಾಡ್ದೊನಗಳ ಕಾಲದಲ್ಲಿ ಮುಸ್ಲಿಮರು ಕಲ್ಲು, ತೆಂಗಿನ ನಾರು ಮತ್ತು ಇತರ ಸಾಧನಗಳ ವ್ಯಾಪಾರ ನಡಿಸುತ್ತಿದ್ದರು. ಅವರು ತಮ್ಮ ಆಗಮನ ಕಾಲದಿಂದಲೇ ವ್ಯಾಪಾರದಲ್ಲಿ ನಿರತರಾಗಿದ್ದುದರಿಂದ ತುಳು ಜನರು ಅವರನ್ನು 'ಬ್ಯಾರಿ' ('ಬ್ಯಾರ' ಮಾಡುವವ = ವ್ಯಾಪಾರಿ)ಗಳೆಂದು ಕರೆಯತೊಡಗಿದರು. (ಇಂದಿಗೂ ತುಳುನಾಡಿನ ಮುಸ್ಲಿಮರಿಗೆ ಬ್ಯಾರಿಗಳೆಂದೇ ಹೆಸರಿದೆ. ಆದರೆ 'ಬ್ಯಾರ' ಮಾತ್ರ ಅವರನ್ನು ಕೈಬಿಟ್ಟಿದೆ)

ಬ್ಯಾರಿಯ ಭೂತದ ಕುರಿತೆಂದು ಹೇಳಲಾಗುವ 'ಬೊಬ್ಬರ್ಯ' ಪಾಡ್ದೊನವು ಮುರವೆ ಬ್ಯಾರಿ, ಅವರ ಹೆಂಡತಿ ಫಾತಿಮ ಮತ್ತು ಮಕ್ಕಳು ಕಾಯಿರಿ, ಕಲಸಪ್ಪ, ಗೆಂಡ, ಬೊಂಬಯ, ಸಿಂಕಿರಿಸುನಿ, ಸುಮುನ್ನಿ ಅನಂತ, ಸರಪೊಲಿ ಮತ್ತು ಸುನಜನನಾಯಕ–ಇವರ ಕುರಿತು ವಿವರಿಸುತ್ತದೆ. 'ಬೊಬ್ಬರ್ಯ' ಪಾಡ್ದೊನವು ಬಾಬುಬ್ಯಾರಿ ಎಂಬ ಮುಸ್ಲಿಮನೊಬ್ಬನ ಕಥೆಯೆಂಬುದು ಸತ್ಯವೆಂದಾದರೆ 'ಮುರವೆಬ್ಯಾರಿ' ಎಂಬುದು ಉಮರಬ್ಬ ಬ್ಯಾರಿ ಎಂದೇ ಗಣಿಸಿದರೂ, ಅವರ ಹೆಂಡತಿ ಫಾತಿಮ ಎಂಬ ಹೆಸರನ್ನು ಬಿಟ್ಟು ಮಕ್ಕಳ ಹೆಸರು ಅರಬಿ ಹೆಸರಲ್ಲ, ತುಳು ಹೆಸರೆಂದು ಸ್ಪಷ್ಟವಾಗುತ್ತದೆ. ಆದರೂ ಈ ತುಳು ಹೆಸರುಗಳನ್ನು ನೋಡಿ ಈ ಕುಟುಂಬವು ಮುಸ್ಲಿಮರದಲ್ಲವೆಂದು ಹೇಳಲು ಸಾಧ್ಯವಿಲ್ಲ. ಕಾರಣ, ನಮ್ಮ ಸಮಾಜದಲ್ಲಿ ಇಂದಿಗೂ ಇಂತಹ ತುಳು ಅಡಿಸ್ತಾನದ ಅಥವಾ ಅರಬಿ ಯೇತರ ಭಾಷೆಯ ಹೆಸರುಗಳು ಕಾಣುತ್ತವೆ. ದೃಷ್ಟಾಂತವಾಗಿ ಸಾವುಂಞಿ, ಪಕ್ರುಂಞಿ, ಸಯ್ಯುವ್, ಚೆಯ್ಯಬ್ಬ, ಹಮ್ಮಬ್ಬ, ಕುಞಂಮ್ಮು, ಚಾಯಿ ಇನ್ನೂ ಅನೇಕ ಹೆಸರುಗಳನ್ನು ಕೊಡಬಹುದು. ಇದರಿಂದ ಒಂದು ಸಂಗತಿ ತಿಳಿಯಾಗಿ ಬಹಿರಂಗವಾಗುತ್ತದೆ. ಅದೇನೆಂದರೆ: ಇಸ್ಲಾಮ್ ಮತವನ್ನು ಅವಲಂಬಿಸಿದ್ದರೂ ತಮ್ಮ ಪುರಾತನ ಹೆಸರುಗಳನ್ನು ಬದಲಾಯಿಸುವಷ್ಟು ಇಸ್ಲಾಮೀ ಜ್ಞಾನವು ಅವರಲ್ಲಿ ಅಂದು ಇರಲಿಲ್ಲ ಅಥವಾ ಅವರಿಗೆ ಸಿಗಲಿಲ್ಲ. ಮಾತ್ರವಲ್ಲ, ಅವರು ಜ್ಯೋತಿಷ್ಯರ ಬಳಿಗೆ ಹೋಗುತ್ತಿದ್ದರಿಂದೂ, ಭೂತಾರಾಧನೆಗಳಲ್ಲಿ ಭಾಗ ವಹಿಸುತ್ತಿದ್ದರಿಂದೂ ಹೇಳುವಾಗ, ಅವರಿಗೆ ಇಸ್ಲಾಮಿನ ಗಂಧವು ಕೂಡಾ ತಾಗಲಿಲ್ಲವೆಂದೇ ಅರ್ಥ ಮಾಡಬಹುದು. ಮುರವೆ ಬ್ಯಾರಿಯ ಕುಟುಂಬವು ಹೊಲೆಯರ ಯಾ ಭೂತಾರಾಧಕರ ಕುಟುಂಬದಿಂದ ಮತಾಂತರ ಹೊಂದಿ ಇಸ್ಲಾಮಿನ ವಿದ್ಯಾಜ್ಞಾನಗಳು ಅದಕ್ಕೆ ಸಿಗದ ಕಾರಣ ತಮ್ಮ ಪೂರ್ವಜರು ನಡಿಸುತ್ತಿದ್ದ ಆಚಾರ ವಿಚಾರಗಳಿಗೆ ಶರಣಾಗಿತ್ತೆಂದೇ ಹೇಳಬಹುದು.

ಅರಬಿಗಳು ಇಲ್ಲಿಯ ನಿವಾಸಿಕರಿಗೆ ಇಸ್ಲಾಮ್ ದೀಕ್ಷೆಯನ್ನು ಕೊಟ್ಟು ಇವರನ್ನು ಮತಾಂತರಗೊಳಿಸಿ ತಮ್ಮ ದೇಶಕ್ಕೆ ಪ್ರಯಾಣ ಬೆಳೆಸಿದುದಲ್ಲದೆ ಇಲ್ಲೇ ನೆಲೆನಿಂತು ಇವರಿಗೆ ಸರಿಯಾದ ಇಸ್ಲಾಮೀ ವಿದ್ಯಾಬೋಧನೆಗಳನ್ನು

www.bearyinfo.com

ಕೊಡಲಿಲ್ಲ; ಅದಲ್ಲದಿದ್ದರೆ, ಭಾಷೆಯ ವೈಪರೀತ್ಯದಿಂದಾಗಿ ಮತ್ತು ಒಂದೇ ಸವನೆ ತುಂಬಾ ಮಂದಿ ಮತಾಂತರಗೊಂಡು ಅವರೆಲ್ಲರಿಗೂ ತಕ್ಕ ವ್ಯವಸ್ಥೆಮಾಡಲು ಸಾಧ್ಯವಾಗದೆ ಮುರವೆ ಬ್ಯಾರಿಯ ಕುಟುಂಬದಂತೆ ಕೆಲವು ಕುಟುಂಬಗಳಿಗೆ ಇಸ್ಲಾಮಿನ ಸರಿಯಾದ ಜ್ಞಾನ ಬೋಧನೆಗಳ ಬೆಳಕು ಸಿಗಲಿಲ್ಲವೆನ್ನಬಹುದು.

## ಇಬ್ನ್ ಬತೂತರ ಕಾಲದಲ್ಲಿ

ಆದರೆ 1342ರಲ್ಲಿ ದಕ್ಷಿಣಕನ್ನಡಕ್ಕೆ ಸುಪ್ರಸಿದ್ಧ ಮುಸ್ಲಿಮ್ ಯಾತ್ರಿಕ ಚರಿತ್ರೆಕಾರ ಇಬ್ನ್ ಬತೂತ ಆಗಮಿಸಿದಾಗ ಈ ಜಿಲ್ಲೆಯಲ್ಲಿ ತುಂಬಾ ಮಂದಿ ಮುಸ್ಲಿಮರು ಇದ್ದುದಾಗಿಯೂ ಅವರು ಧಾರ್ಮಿಕವಾಗಿಯೂ ಒಳ್ಳೆಯ ನೆಲೆಯಲ್ಲಿದ್ದುದಾಗಿಯೂ ನಾವು ತಿಳಿಯುತ್ತೇವೆ.

ಇಬ್ನ್ ಬತೂತರು ತಮ್ಮ 'ರಿಹ್ಲಾ'ದಲ್ಲಿ ಈರೀತಿ ಬರೆಯುತ್ತಾರೆ: "ಮೂರು ದಿನಗಳ ನಂತರ ನಾವು ಮಂಜರೂರನ್ನು (ಮಂಗಳೂರು) ಮುಟ್ಟಿದೆವು; ಅದು ದೊಡ್ಡ ಪಟ್ಟಣ. ಅದು ಮಲಬಾರ್ ದೇಶದ ಅತಿ ದೊಡ್ಡ 'ದುಂಬ ಅಳಿವೆ' ಎಂದು ಹೆಸರಾದ ಅಳಿವೆಯ ಮೇಲೆ ನೆಲೆಸಿದೆ. ಈ ಪಟ್ಟಣದಲ್ಲಿ ಫಾರಸ್ ಮತ್ತು ಯಮನಿನ ದೊಡ್ಡ ವ್ಯಾಪಾರಿಗಳು ಇಳಿಯುತ್ತಾರೆ. ಇಲ್ಲಿ ಕರಿಮೆಣಸು ಮತ್ತು ಶುಂಠಿಯು ತುಂಬ ಸಿಕ್ಕುತ್ತವೆ. ಅದರ ಅರಸನು ಆ ಪ್ರದೇಶದ ರಾಜರುಗಳಲ್ಲಿ ದೊಡ್ಡವನು. ಅವನ ಹೆಸರು ರಾಮದೇವ. ಆ ಪಟ್ಟಣದಲ್ಲಿ ಹೆಚ್ಚುಕಮ್ಮಿ ನಾಲ್ಕು ಸಾವಿರ ಮುಸ್ಲಿಮರು ಇದ್ದಾರೆ. ಅವರು ಪಟ್ಟಣದ ಕಿನಾರೆಯಲ್ಲಿ ಸುಖದಿಂದ ನೆಲೆಸಿರುವರು. ಅವರ ಮತ್ತು ಊರವರ ಮಧ್ಯೆ ಜಗಳವುಂಟಾದಾಗಲೆಲ್ಲಾ ರಾಜನು ಅವರೊಳಗೆ ರಾಜಿ ಮಾಡಿಸುತ್ತಿದ್ದನು. ಕಾರಣ, ಆತನಿಗೆ ವ್ಯಾಪಾರಿಗಳ ಆವಶ್ಯಕತೆಯಿತ್ತು. ಆ ಪಟ್ಟಣದಲ್ಲಿ ಯೋಗ್ಯವಂತರಾದ ಶಾಫಿ ಮದ್‌ಹಬಿನ ಕಾಜಿಯೊಬ್ಬರು ಇದ್ದರು. ಅವರ ಹೆಸರು ಬದ್ರುದ್ದೀನುಲ್ ಮಲಬರೀ ಎಂದಾಗಿತ್ತು. ಅವರು ಹಿರಿಯ ವಿದ್ವಾಂಸರಾಗಿದ್ದರು. ಅವರು ನಮ್ಮ ಬಳಿಗೆ ಹಡಗದಲ್ಲಿ ಬಂದು ಅವರ ಪಟ್ಟಣದಲ್ಲಿ ಇಳಿಯಲು ನಮ್ಮನ್ನು ಪ್ರೇರೇಪಿಸಿದರು. ರಾಜನು ತನ್ನ ಮಗನನ್ನು ನಮ್ಮ ಹಡಗದಲ್ಲಿ (ಜಾಮೀನಾಗಿ) ನಿಲ್ಲಲು ಕಳುಹಿಸುವತನಕ ನಾವು ಬರಲಾರೆವು. ಬಾರಕೂರಿನ ರಾಜನು—ಆತನ ರಾಜ್ಯದಲ್ಲಿ ಮುಸ್ಲಿಮರಿಗೆ ಶಕ್ತಿಯಿಲ್ಲದಿರುವಾಗಲೂ—ಇದೇ ರೀತಿ ಮಾಡಿದ್ದನು; ನಮಗೆ ನಿಮ್ಮ ರಾಜನ ಕುರಿತು ಭಯವಿದೆ ಎಂದೆವು. ಆತನು ತನ್ನ ಮಗನನ್ನು ನಮ್ಮ ಹಡಗಕ್ಕೆ ಕಳುಹಿಸಿದನು. ಅದನ್ನನುಸರಿಸಿ ನಾವೂ ಇಳಿದೆವು. ನಮಗೆ ತುಂಬಾ ಅತಿಥಿಸತ್ಕಾರ ಮಾಡಿದರು. ಅವರ ಬಳಿ ನಾವು ಮೂರು ದಿನಗಳ ತನಕ ಉಳಿದುಕೊಂಡು 'ಹೇಲಿ' ಪಟ್ಟಣಕ್ಕೆ ಪ್ರಯಾಣ ಬೆಳೆಸಿದೆವು"—

(ರಿಹ್ಲಾ ಇಬ್ನ್‌ಬತೂತ—ಎರಡನೆ ಭಾಗ)

www.bearyinfo.com

ಮಂಗಳೂರಲ್ಲಿ ಆಗ ನಾಲ್ಕು ಸಾವಿರ ಮಂದಿ ಮುಸಲ್ಮಾನರಿದ್ದರೆಂದೂ ಬದ್ರುದ್ದೀನ್ ಮಅಬರೀ ಎಂಬ ಸುಪ್ರಸಿದ್ಧ ವಿದ್ವಾಂಸರು ಇಲ್ಲಿಯ ಖಾಜಿ ಯಾಗಿದ್ದರೆಂತಲೂ ಇಬ್ನ್ಬತೂತ ವಿವರಿಸಿದ್ದಾರಷ್ಟೆ.

ಕುದ್ರೋಳಿಯ ಮುಹಿಯದ್ದೀನ್ ಮಸೀದಿಯ 'ಹೌಸ್'—ನೀರು ತುಂಬಿ ಸಿಡುವ ಸ್ಥಳದಲ್ಲಿ 1368 ಎಂದು ತಾರೀಕು ಬರೆದುದು ಕಾಣುತ್ತದೆ. ಆ ಮಸೀದಿಯು ಆ ವರ್ಷ ನಿರ್ಮಿಸಲ್ಪಟ್ಟಿತ್ತೆಂದು ಇದರಿಂದ ವ್ಯಕ್ತವಾಗುತ್ತದೆ. ಮಂಗಳೂರಿನ ಒಂದೆರಡು ಮಸೀದಿಗಳನ್ನು ಬಿಟ್ಟು ಉಳಿದವುಗಳೆಲ್ಲವೂ ಟೀಪು ಸುಲ್ತಾನರ ಕಾಲಕ್ಕಿಂತಲೂ ಎಷ್ಟೋ ಮುಂಚಿನವು. ಇದನ್ನು ನೋಡುವಾಗ ಕೇವಲ ಪಾಡ್ದೊನಗಳ ಆಧಾರದ ಮೇಲೆ 'ಇಸ್ಲಾಮಿನ ದಿವ್ಯ ಧ್ಯೇಯಗಳ ಅರಿವಿನಿಂದ ಮುಸ್ಲಿಮರಾದವರು ತುಳುವದಲ್ಲಿ ಯಾರೂ ಇರಲಿಲ್ಲ'ವೆಂದು ಹೇಳುವುದು ಸರಿಯೆಂದು ಕಾಣುವುದಿಲ್ಲ.

ಆದರೆ ನಮ್ಮ ಸಮಾಜವು ಅದರ ಪ್ರಾರಂಭ ಕಾಲದಿಂದಲೇ ನಮ್ಮ ಪೂರ್ವಜರಾದ ಅರಬ್ ವ್ಯಾಪಾರಿಗಳಿಂದ ತರಬೇತು ಹೊಂದಿ, ವ್ಯಾಪಾರ ವಹಿ ವಾಟುಗಳಲ್ಲಿ ನಿರತರಾಗಿದ್ದುದಲ್ಲದೆ, ಅವರನ್ನು ಅನುಸರಿಸಿ ಸಮುದ್ರ ಪ್ರಯಾಣ ವನ್ನು ಕೈಕೊಳ್ಳುತ್ತಿದ್ದರೆಂದೂ ಪಾಡ್ದೊನಗಳ ಆಧಾರದಿಂದ ತಿಳಿಯಬಹುದು. ಮುರವೆ ಬ್ಯಾರಿಯ ಮಕ್ಕಳು ಒಂದು ವರ್ಷ ಆರು ತಿಂಗಳುಗಳ ತನಕವೂ ಸಮುದ್ರ ಪ್ರಯಾಣ ಬೆಳೆಸಿ ಭಂಗಾರ, ಮುತ್ತು, ಮಾಣಿಕ್ಯ, ವಜ್ರ ವೈಡೂರ ಇತ್ಯಾದಿಗಳನ್ನು ಶೇಖರಿಸಿದರು ಎಂದು ಸದ್ರಿ ಪಾಡ್ದೊನದಲ್ಲಿ ಹೇಳಿದೆ. ವ್ಯಾಪಾರವು 20ನೇ ಶತಮಾನದ ಆರಂಭ ದಶಕಗಳ ವರೆಗೂ ನಮ್ಮ ಸಮಾಜದ ಏಕಸ್ವಾಮ್ಯ ಸ್ವಾಧೀನದಲ್ಲಿತ್ತು. ಇಂದು ಅದು ನಮ್ಮ ಕೈಬಿಟ್ಟಿದೆ. ಆದರೆ ಸಮುದ್ರಯಾನ ಇಂದಿಗೂ ನಮ್ಮ ಸಮಾಜ ಬಾಂಧವರಲ್ಲನೇಕರ ಜೀವನೋಪಾಯವಾಗಿದೆ. ಮಂಗಳೂರಿನಲ್ಲಿರುವ ಮಂಜಿಗಳಲ್ಲಿ ಒಂದೆರಡನ್ನು ಬಿಟ್ಟರೆ ಉಳಿದವುಗಳೆಲ್ಲವೂ ಇಂದಿಗೂ ನಮ್ಮ ಸಮಾಜ ಬಂಧುಗಳ ಕೈಯಲ್ಲೇ ಇವೆ. ಸುಮಾರು ಒಂದು ನೂರು ಮಂಜಿ ಕೋಟೆಯುಗಳಲ್ಲಿ ಸುಮಾರು ಒಂದು ಸಾವಿರ ಮುಸ್ಲಿಮರು ದುಡಿಯುತ್ತಾರೆ. ಇವರಲ್ಲಿ ಹೆಚ್ಚಿನವರು ಅಕ್ಕರೆ (ಬೆಂಗರೆ) ಉಳ್ಳಾಲ ಮತ್ತು ತನ್ನೀರ್‌ಬಾವಿಯವರಾಗಿದ್ದು 'ಬ್ಯಾರಿ' ಸಮುದಾಯಕ್ಕೆ ಸಂಬಂಧಪಟ್ಟವರೇ ಆಗಿರುತ್ತಾರೆ.

## ನಮ್ಮ ವಿಶೇಷ ಭಾಷೆಯ ಉಗಮ.

'ಇಬ್ನ್ ಬತೂತರ' ವಿವರಣೆಯಿಂದ ಇನ್ನೊಂದು ರಹಸ್ಯವು ಬಹಿರಂಗ ವಾಗುತ್ತದೆ. ಇಸ್ಲಾಮವು ಭಾರತದ ಪಶ್ಚಿಮ ಕರಾವಳಿಗೆ ಮುಟ್ಟಿದಾಗಲೇ

www.bearyinfo.com

ಪೂರ್ವಕರಾವಳಿಗೂ ಮುಟ್ಟಿತ್ತು. ಅಲ್ಲಿ ತುಂಬಾ ಮಂದಿ ಮತಪಂಡಿತರ ಹಾಗೂ ಸೂಫಿಯಾಗಳ ಪರಿಶ್ರಮಫಲವಾಗಿ ಇಸ್ಲಾಮೀ ವಿದ್ಯಾಭ್ಯಾಸವು ಹರಡಿತ್ತು. ಮತ್ತು ಅಲ್ಲಿಯ ವಿದ್ವಾಂಸರು ಪಶ್ಚಿಮ ಕರಾವಳಿಗೆ ಬಂದು ಇಲ್ಲಿಯ ದೊಡ್ಡ ದೊಡ್ಡ ಧಾರ್ಮಿಕ ಹುದ್ದೆಗಳನ್ನು ಅಲಂಕರಿಸಿದ್ದರು. ಇಬ್ನ್ ಬತೂತರ ಕಾಲದಲ್ಲಿ ಇಲ್ಲಿಯ ಖಾಜಿಯಾಗಿದ್ದ ಬದ್ರುದ್ದೀನುಲ್ ಮಅಬರೀ ಎಂಬವರೂ ಪೊನ್ನಾನಿಯ ಮಕದೂಮ್ ಜೈನುದ್ದೀನುಲ್ ಮಅಬರೀ ("ತುಹಫತುಲ್ ಮುಜಾಹಿದೀನ್" ಚರಿತ್ರೆ ಗ್ರಂಥಬರೆದವರು) ಕೂಡಾ ಅದೇ ಪೂರ್ವಕರಾವಳಿ 'ಮಅಬರ್' (Coromondel) ಪ್ರದೇಶದವರಾಗಿದ್ದರು. ಈ ಜನಕೂಟವು ಹಲವು ತಲೆಮಾರುಗಳ ತನಕವೂ ಮಂಗಳೂರಿನಲ್ಲಿಯೂ ಮಲಬಾರಿನಲ್ಲಿಯೂ ಹಿರಿಯ ಮತಹುದ್ದೆಗಳಲ್ಲಿದ್ದು ಇಲ್ಲಿಯ ಮುಸ್ಲಿಮ್ ಸಮಾಜಕ್ಕೆ ಇಸ್ಲಾಮೀ ವಿದ್ಯಾ ಬೋಧನೆಗಳ ಪರಿಚಯ ಮಾಡಿಕೊಡುತ್ತಿದ್ದರು. ಈ ಜನರು ತಮಿಳು ಮಾತಾಡುವವರಾಗಿದ್ದುದರಿಂದ ಇಲ್ಲಿಯ ತುಳು ಮಾತಾಡುವ ಹಾಗೂ ಮಲೆಯಾಳ ಮಾತಾಡುವ ಮುಸ್ಲಿಮರಿಗೆ ತಮ್ಮ ಭಾಷೆಯ ಹಲವು ಶಬ್ದಗಳನ್ನೂ ಶೈಲಿಯನ್ನೂ ಕೊಟ್ಟರು. ಮಂಗಳೂರಿನಲ್ಲಂತೂ ಇವರ ತಮಿಳು, ಕೇರಳದ ಮಲೆಯಾಳ, ತುಳುವದ ಕನ್ನಡ ಮತ್ತು ತುಳು, ಅರಬಿಯರ ಅರಬಿ—ಈ ಎಲ್ಲಾ ಭಾಷೆಗಳ ಒಟ್ಟುಗೂಡುವಿಕೆಯಿಂದ ಮಂಗಳೂರು ಮಲೆಯಾಳವೆಂದು ಹೇಳಲ್ಪಡುಬಹುದಾದ ಒಂದು ಹೊಸ ಭಾಷೆಯೇ ಜನ್ಮವೆತ್ತಿತು. ಈ ಭಾಷೆಯಲ್ಲಿ ತಮಿಳು, ತುಳು ಮತ್ತು ಅರಬಿ ಶಬ್ದಗಳೇ ಅಧಿಕವಾಗಿವೆಯೆಂದರೆ ಹೆಚ್ಚಾಗಲಾರದು. ಇದಕ್ಕೆ ಲಿಪಿಯಿಲ್ಲದ್ದರಿಂದ ಇದಕ್ಕೊಂದು ಸ್ಥಾನವು ಸಿಗದೆ ಹೋಯಿತು. ಒಂದು ಕಾಲದಲ್ಲಿ ನಮ್ಮ ಹಿರಿಯರು ಈ ಭಾಷೆಯನ್ನು ಮಲೆಯಾಳ ಮತ್ತು ತಮಿಳಿಗೆ ಹೋಲಿಕೆಯಿರುವ ಒಂದು ತರ ಲಿಪಿಯಲ್ಲಿ ಬರೆಯುತ್ತಿದ್ದರೆಂತಲೂ ಅದಕ್ಕೆ 'ಬಟ್ಟೆಬರಹ'ವೆಂದು ಹೇಳುತ್ತಿದ್ದರೆಂತಲೂ ಕೆಲವು ಹಿರಿಯರಿಂದ ತಿಳಿದುಬರುತ್ತದೆ. ಈ ಲಿಪಿಯಲ್ಲಿ ಬರೆಯಲಾದ ಅನೇಕ ಗ್ರಂಥಗಳು ಅರಕ್ಕಲ್ ಸುಲ್ತಾನ್ ಅಲೀರಾಜರ ಅರಮನೆಯಲ್ಲಿ ಇಂದಿಗೂ ಇವೆಯೆಂದು ಪಿ. ಎ. ಸೈಯದ್ ಮುಹಮ್ಮದರು ಬರೆಯುತ್ತಾರೆ. ತುಳು ಭಾಷೆಯನ್ನೂ ಈ ತರ ಮಲೆಯಾಳಕ್ಕೆ ಹೋಲುವ ಲಿಪಿಯಲ್ಲಿ ಬರೆಯುತ್ತಿದ್ದರು.

ಕ್ರಿ. ಶ. 13ನೇ ಶತಮಾನದಲ್ಲಿ ಮಂಗಳೂರಿಗೆ ಭಾರತದ ಸುಪ್ರಸಿದ್ಧ ಔಲಿಯಾಗಳಲ್ಲೊಬ್ಬರಾದ ಶೇಖ್‌ಫರೀದ್ ಮಸ್‌ಊದ್ ಗಂಜ್‌ಶಕರ್‌ರವರು ಆಗಮಿಸಿ ಇಲ್ಲಿ ತುಂಬಾ ಮಂದಿಯನ್ನು ತಮ್ಮ ಹಿತಬೋಧನೆಗಳಿಂದ ಇಸ್ಲಾಮಿಗೆ ಪ್ರವೇಶಿಸಿದರೆಂದು ಕಾಣುತ್ತದೆ. ಸದ್ರಿಯವರು ಧ್ಯಾನಮಾಡಿದ ಸ್ಥಳ ಕದಿರೆಯಲ್ಲಿ ಜೋಗಿ ಮಠದ ಕೆಳಗೆ ಇಂದಿಗೂ ಮುಸ್ಲಿಮರ ಸ್ವಾಧೀನವಿದೆ.

## ಪೋರ್ತುಗೀಸರ ಆಗಮನ

ಕ್ರಿ. ಶ. 1514ರಲ್ಲಿ ಡ್ವಾರ್ಟೆ ಬಾರ್ಬೋಸ ಎಂಬ ಪೋರ್ತುಗೀಸ ಯಾತ್ರಿಕನು ಮಂಗಳೂರಿಗೆ ಬಂದಾಗ ಇಲ್ಲಿ ಮುಸ್ಲಿಮರು ತುಂಬಾ ಮಂದಿ

www.bearyinfo.com

ಇದ್ದರೆಂತಲೂ ಇವರು ಒರ್ಮುಸ್, ಏಡನ್, ಜಹೀರ್ ಮೊದಲಾದ ಕಡೆಗಳಿಗೆ ಅಕ್ಕಿ ಕರಿಮೆಣಸು ರಫ್ತು ಮಾಡುತ್ತಿದ್ದರೆಂತಲೂ, ಮಾತ್ರವಲ್ಲ, ಮಂಗಳೂರಲ್ಲಿ ತುಂಬಾ ಮಸೀದಿಗಳಿದ್ದುವೆಂತಲೂ ಮುಸಲ್ಮಾನರು ಅವುಗಳಲ್ಲಿ ಮುಹಮ್ಮದರನ್ನು ಹೊಗಳುತ್ತಿದ್ದರೆಂತಲೂ ಸದ್ರಿ ಸಂಚಾರಿಯು ಬರೆದಿರುತ್ತಾನೆ.

ಹದಿನಾರನೆ ಶತಮಾನದಲ್ಲಿ ಮಂಗಳೂರಿಗೆ ಪೋರ್ತುಗೀಸರು ಆಗಮಿಸಿದರು. ಅವರು ಅರಬ್ಬಿಯರ ಹಾಗೂ ಇಲ್ಲಿಯ ಮುಸಲ್ಮಾನರ ವ್ಯಾಪಾರ ಬಂಧವನ್ನು ಇಡೀ ಕರಾವಳಿಯಿಂದಲೇ ನಾಶಪಡಿಸಲು ಪಣತೊಟ್ಟರು. ಕಲ್ಲಿಕೋಟೆಯ ಮುಸ್ಲಿಮ್ ವ್ಯಾಪಾರಿಗಳಿಗೆ ಮಂಗಳೂರಿನಲ್ಲಿಯೂ ಬಸ್ರೂರಿನಲ್ಲಿಯೂ ದಲ್ಲಾಳಿಗಳಿದ್ದಾರೆಂದು ಕೇಳಿ ಕ್ರಿ. ಶ. 1524ರಲ್ಲಿ ವಾಸ್ಕೋಡಿಗಾಮನು ಮಂಗಳೂರು ನದಿಯನ್ನು ಮುತ್ತಿದನು ಮತ್ತು ಎರಡು ವರ್ಷಗಳೊಳಗೆ ಪೋರ್ತುಗೀಸರು ಮಂಗಳೂರನ್ನು ಸ್ವಾಧೀನಪಡಿಸಿಕೊಂಡರು. ಪೋರ್ತುಗೀಸರನ್ನು ಇಲ್ಲಿಯ ಮುಸ್ಲಿಮ್ ವ್ಯಾಪಾರಿಗಳು ತಡೆಯಲು ಪ್ರಯತ್ನಿಸಿದರು. ಆದರೆ ಅವರಿಗೆ ಅದರಲ್ಲಿ ಗೆಲವು ಉಂಟಾಗಲಿಲ್ಲ. ತಮ್ಮ ಧರ್ಮದ ಪ್ರಚಾರಕ್ಕೆ ಆಸ್ಪದ ಕೊಡಬೇಕೆಂಬುದು ಪೋರ್ತುಗೀಸರು ದೇಶೀಯ ರಾಜರೊಡನೆ ಮಾಡಿದ ಎಲ್ಲ ಒಪ್ಪಂದಗಳ ಮೂಲ ಶರ್ತವಾಗಿತ್ತು. ಅಂತೆಯೇ ಅದೇ ವರ್ಷ ನಗರದಲ್ಲಿ ಮತ್ತು ಸುತ್ತು ಮುತ್ತಲೂ ತುಂಬಾ ಮಂದಿ ಪಾದ್ರಿಗಳನ್ನು ಕ್ರೈಸ್ತ ಧರ್ಮದ ಪ್ರಚಾರಾರ್ಥವಾಗಿ ತಂದು ಇಳಿಸಿದರು.

ಈ ಸಮಯ ಇಲ್ಲಿ ಮುಸ್ಲಿಮರು ಬಂಗರ ರಾಜರ ಸೈನ್ಯದಲ್ಲಿದ್ದು ಪೋರ್ತುಗೀಸರ ಸಂಗಡ ಯುದ್ಧಮಾಡಿ ಬಹಳ ಕಷ್ಟಪಟ್ಟರು. ಪಶ್ಚಿಮ ಕರಾವಳಿಯೊಂದಿಗೆ ಅರಬರ ಹಾಗೂ ಮುಸ್ಲಿಮರ ವ್ಯಾಪಾರವನ್ನು ಮುರಿಯಲು ಪೋರ್ತುಗೀಸರು ತುಂಬಾ ಪ್ರಯತ್ನಪಟ್ಟರು. ಪೋರ್ತುಗೀಸ್ ಪಾಸ್ ವಿನಹ ಕನ್ನಡ ಜಿಲ್ಲೆಯ ಬಂದರವನ್ನು ಬಿಡುತ್ತಿದ್ದ ಪ್ರತಿಯೊಂದು ಹಡಗವನ್ನೂ ಸ್ವಾಧೀನಪಡಿಸುತ್ತಿದ್ದರು. ಇದನ್ನು ಬಲವಾಗಿ ಎದುರಿಸಿ ಕಡೆಗೆ ಪೋರ್ತುಗೀಸರ ವಶವಿದ್ದ ಮಂಗಳೂರು ನಗರವನ್ನು ಅರಬರು 1695ರಲ್ಲಿ ಸುಟ್ಟು ಭಸ್ಮ ಮಾಡಿದರು.

ಪೋರ್ತುಗೀಸರನ್ನು ಧೀರತನದಿಂದ ಎದುರಿಸಿದ ಉಳ್ಳಾಲದ ಚೌಟಾರಾಣಿಯ ಸೈನ್ಯದಲ್ಲಿಯೂ ಮುಸ್ಲಿಮರು ಸೈನಿಕರಾಗಿಯೂ ಸೇನಾಧಿಪತಿಗಳಾಗಿಯೂ, ನೌಕಾಧಿಪತಿಗಳಾಗಿಯೂ ಇದ್ದರೆಂದು ಶ್ರೀ ಗಣಪತಿರಾವ್ ಐಗಳ್ ಬರೆಯುತ್ತಾರೆ. 1570ರಲ್ಲಿ ಉಳ್ಳಾಲದ ಚೌಟಾರಾಣಿ ಅಬ್ಬಕ್ಕದೇವಿಯು ಪೋರ್ತುಗೀಸರೊಡನೆ ಯುದ್ಧಮಾಡುತ್ತಿದ್ದಾಗ ಜಾಮೋರಿನನ ಮುಸ್ಲಿಮ್ ನೌಕಾ ಸೇನಾಧಿಪತಿಯಾಗಿದ್ದ ಕುಟ್ಟಿ ಪೋಕರನಿಗೆ ಹೇಳಿ ಕಳುಹಿಸಿದಳು. ಅವನು 6 ಹಡಗಗಳ ಸಹಿತ

www.bearyinfo.com

ರಾಣಿಯ ಸಹಾಯಕ್ಕೆ ಬಂದು ಮಂಗಳೂರು ನದಿಯಲ್ಲಿ ಪ್ರವೇಶಿಸಿ ಇಲ್ಲಿಯ ಪೋರ್ತುಗೀಸ್ ಕೋಟೆಯನ್ನು ಅಗ್ನಿಗೆ ಆಹುತಿಮಾಡಿ ಒಂದು ಚಿಕ್ಕ ಹಡಗವನ್ನೂ ವಶಪಡಿಸಿ ಧೈರ್ಯಸಹಿತ ಹಿಂತಿರುಗುವಾಗ ಪೋರ್ತುಗೀಸರ ಹಡಗಗಳು ಎದುರಿಗೆ ಸಿಕ್ಕಿ ಅವನು ಭಯಂಕರ ನೌಕಾ ಕಾಳಗದಲ್ಲಿ ಮಡಿದನು.

ಪೋರ್ತುಗೀಸರ ಹಾವಳಿಯಿಂದಾಗಿ ಮಂಗಳೂರು, ಉಳ್ಳಾಲ, ಉದ್ಯಾವರ, ಮಂಜೇಶ್ವರ ಮೊದಲಾದ ಕಡೆಗಳಲ್ಲಿಯ ಮುಸ್ಲಿಮ್ ವ್ಯಾಪಾರಿಗಳ ವ್ಯಾಪಾರವು ಸಂಪೂರ್ಣ ನಾಶವಾಯಿತು.

ಇಕ್ಕೇರಿ ಅರಸರ ಕಾಲದಲ್ಲೂ ಮುಸಲ್ಮಾನ ಸಾಹುಕಾರರು ಬಹಳ ಐಶ್ವರ್ಯವಂತರಾಗಿದ್ದು ಕಪ್ಪವನ್ನು ಕೊಡಲಿಕ್ಕೆ ಇಲ್ಲದೆ ಕಷ್ಟದಲ್ಲಿ ಬಿದ್ದಾಗ ಬಂಗರಾಜರಿಗೂ ಅಜಿಲರಿಗೂ ಜಾಮೀನಾಗಿ ನಿಂತು ಅವರು ಹಣವನ್ನು ಸಲಾಯಿಸುತ್ತಿದ್ದರು.

## ನವಾಬ್ ಹೈದರಾಲಿಯು ಕಾಲದಲ್ಲಿ

ಕ್ರಿ. ಶ. 1762ರಲ್ಲಂತೂ ನವಾಬ್ ಹೈದರಾಲಿಯವರು ನಗರವನ್ನು ಹಿಡಿದು ಮಂಗಳೂರಿಗೆ ಬಂದರು. ಆಗ ತಿಮ್ಮಣ್ಣಾಜಿಲನೆಂಬ ಅಜಿಲರಾಜನು ಮಂಗಳೂರಿಗೆ ಬಂದು ನವಾಬರ ಭೇಟಿಮಾಡಿ ಕಪ್ಪಕೊಡಲು ಒಪ್ಪಿದನು. ಈ ಸಮಯದಲ್ಲಿ ಮಂಗಳೂರು ಜಿಲ್ಲೆಯ ಅಧಿಕಾರವು ದಾಮಾಜಿಪಂತನ ಕೈಯಲ್ಲಿತ್ತು. 1764ರಲ್ಲಿ ದಾಮಾಜಿಪಂತನ ಅಧಿಕಾರವು ಕಣ್ಣಾನೂರಿನ ಸುಲ್ತಾನ್ ಆಲಿರಾಜನ ತಮ್ಮನಾದ ಶೇಖಾಲಿಯ ಕೈಗೆ ಸಿಕ್ಕಿತು. ಇವನು ಬಂಗರು ಚೌಟರು ಮುಂತಾದ ಎಲ್ಲಾ ಮನೆತನದವರ ರಾಜ್ಯಗಳನ್ನೂ ಸೆಳೆಕೊಂಡುದಲ್ಲದೆ, ವೇಣೂರು ಶೀಮೆಯನ್ನೂ ಸ್ವಾಧೀನಪಡಿಸಿಕೊಂಡು ಅರಮನೆಯನ್ನು ಸುಲಿಗೆಮಾಡಿ ತಿಮ್ಮಣ್ಣಾಜಿಲನನ್ನು ಸೆರೆಯಲ್ಲಿಟ್ಟನು. ಆಗ ತಿಮ್ಮಣ್ಣಾಜಿಲನು ಮಂಗಳೂರು ಕೋಟೆಯ ಕಿಲ್ಲೆದಾರ ಮಿರ್ಜಾಸಾಹೇಬನ ಮುಖಾಂತರ ನವಾಬರಿಗೆ ಶೇಖಾಲಿ ಮಾಡಿದ ಅನ್ಯಾಯಗಳನ್ನು ಬರೆದು ಕಳುಹಿಸಿದನು. ನವಾಬರು ಅವನನ್ನು ಕರೆಸಿ 11,000 ವರಹಗಳನ್ನು ಕಪ್ಪಕೊಡುವ ಶರ್ತದ ಮೇಲೆ ಆತನಿಗೆ ವೇಣೂರು ಸೀಮೆ ಬಿಟ್ಟುಕೊಟ್ಟರು. ಆ ಹಣಕ್ಕೆ ಮಂಗಳೂರು ಸಾಹುಕಾರ ಲಾಲಾಸಾಹೇಬರು ಜಾಮೀನಾಗಿ ನಿಂತರು.

ನವಾಬ ಹೈದರರ ಕಾಲದಲ್ಲಿ ಪೋರ್ತುಗೀಸರ ಪ್ರಾಬಲ್ಯ ಕಡಿಮೆಯಾಯಿತು. ಮುಸ್ಲಿಮ್ ವ್ಯಾಪಾರಿಗಳು ಸ್ವಲ್ಪ ಏಳಿಗೆಗೆ ಬಂದರು. ನವಾಬ್ ಹೈದರ್ ಮತ್ತು ಸುಲ್ತಾನ್ ಟೀಪೂ ಶಹೀದರ ಕಾಲದಲ್ಲಿ ಅನೇಕ ಮುಸ್ಲಿಮರು ಸರಕಾರಿ ಹುದ್ದೆಯಲ್ಲಿದ್ದರು. ಕೆಲವರು ಕಿಲ್ಲೆದಾರರಾಗಿಯೂ, ಕೆಲವರು ಆಸಫರಾಗಿಯೂ ಕೆಲಸ ನೋಡುತ್ತಿದ್ದರು. ಕೆಲವರು ನವಾಬರ ನೌಕಾ ಸೈನ್ಯದಲ್ಲಿದ್ದರು.

www.bearyinfo.com

ನವಾಬರು ಆ ಸಮಯ ಮಂಗಳೂರನ್ನು ಒಂದು ನೌಕಾ ಕೇಂದ್ರವಾಗಿ ಮಾರ್ಪಡಿಸಿದ್ದರು. ಮರಾಕಷ್‌ನಿಂದ ತುಂಬಾ ಮಂದಿ ಕೆಲಸಗಾರರನ್ನು ತರಿಸಿ ದೊಡ್ಡ ದೊಡ್ಡ ಹಡಗುಗಳನ್ನು ರಚಿಸತೊಡಗಿದ್ದರು.

ನವಾಬ ಹೈದರರು ಮಂಗಳೂರಿಗೆ 'ಕೊಡಿಯಾಲ್ ಶಾಹ್‌ಬಂದರ್' ಎಂದು ನಾಮಕರಣ ಮಾಡಿದ್ದರು. ಶಾಹ್‌ಬಂದರ್ ಎಂದರೆ 'ರಾಜರೇವು' ಎಂದರ್ಥವಾಗುತ್ತದೆ. ನವಾಬ ಹೈದರರ ಕಾಲದಲ್ಲಿ ಪ್ರಧಾನ ವ್ಯಾಪಾರಿಗಳಾಗಿದ್ದುದು ಮಾಪಿಳ್ಳೆಯರು ಮತ್ತು ಕೊಂಕಣಿಯರು. ಕೆಲವರು ಗುಜರಾತಿನಿಂದ ಬಂದವರೂ ಇದ್ದರೆಂದೂ ಬುಚಾನನ್‌ರವರು ಬರೆದಿರುತ್ತಾರೆ.

## ಸುಲ್ತಾನ್ ಟೀಪು ಶಹೀದರ ಕಾಲದಲ್ಲಿ

ಸುಲ್ತಾನ್ ಟೀಪೂ ಶಹೀದರ ಕಾಲದಲ್ಲಿ ಮುಸಲ್ಮಾನ ಜನಾಂಗವೊಂದೇ ಅಲ್ಲ, ಎಲ್ಲಾ ಜನಾಂಗಗಳೂ ಉತ್ತಮ ಸ್ಥಿತಿಯಲ್ಲಿದ್ದುವು. ಎಲ್ಲಾ ಜನಾಂಗಗಳನ್ನೂ ಮತಾನುಯಾಯಿಗಳನ್ನೂ ಒಂದೇ ರೀತಿ ಮಮತೆಯೊಂದಿಗೆ ನೋಡುತ್ತಿದ್ದರು. ಅವರ ರಾಜ್ಯಭಾರ ಕಾಲದ ಕುರಿತು ಪ್ರಸಿದ್ಧ ಐರೋಪ್ಯ ಪ್ರಯಾಣಿಕ ಕೇಪ್ಟನ್ ಲಿಟ್ಟಲ್‌ರವರು ಈ ರೀತಿ ಬರೆದಿರುತ್ತಾರೆ.

"ನಾವು ಅವರ (ಟೀಪು ಸುಲ್ತಾನರ) ರಾಜ್ಯದೊಳಗೆ ಪ್ರವೇಶಿಸಿದಾಗ ಅಲ್ಲಿ ಕೈಗಾರಿಕೆ ಮತ್ತು ವ್ಯಾಪಾರೋದ್ಯಮಗಳ ಪ್ರಗತಿಯಿಂದ ಹೊಸ ಹೊಸ ನಗರಗಳು ಸ್ಥಾಪಿಸಲ್ಪಟ್ಟುದಾಗಿಯೂ ಇನ್ನೂ ಹೊಸ ನಗರಗಳು ಉದ್ಭವಿಸುತ್ತಿರುವುದಾಗಿಯೂ ಕಂಡೆವು. ಪ್ರಜೆಗಳು ತಮ್ಮ ಕೆಲಸಗಳಲ್ಲಿ ನಿರತರಾಗಿದ್ದಾರೆ. ಭೂಮಿಯ ಯಾವದೊಂದು ಭಾಗವೂ ಬಂಜರು ಬಿದ್ದುದು ಕಾಣಲಿಲ್ಲ. ಉಳಲು ಯೋಗ್ಯವಾದ ಭೂಮಿ ಎಷ್ಟು ಸಿಗಬಹುದಿತ್ತೋ ಅದರ ಮೇಲೆ ಗದ್ದೆಗಳು ಕಣ್ಣಿಗೆ ಗೋಚರವಾಗುತ್ತಿದ್ದುವು. ಒಂದು ಇಂಚು ಭೂಮಿಯೂ ಹಾಳು ಬಿದ್ದಿರಲಿಲ್ಲ. ಪ್ರಜೆ ಮತ್ತು ಸೈನ್ಯದ ಹೃದಯದಲ್ಲಿ ಅರಸನ ಮೇಲೆ ಪ್ರೀತ್ಯಾದರಗಳು ಪರಿಪೂರ್ಣ ನೆಲೆಗೊಂಡಿದ್ದುವು. ಸೈನ್ಯದ ಸಂಘಟನಾವ್ಯವಸ್ಥೆ ಹಾಗೂ ಅದರ ಶಸ್ತ್ರಾಸ್ತ್ರಗಳನ್ನು ನೋಡಿದಲ್ಲಿ ಅದು ಯುರೋಪಿನ ಯಾವುದೇ ಸುಸಂಸ್ಕೃತ ದೇಶದ ಸೈನ್ಯಕ್ಕಿಂತ ಯಾವ ಅವಸ್ಥೆಗೂ ಕಮ್ಮಿಯಿಲ್ಲವೆಂದು ಹೇಳಬಹುದು."

ಮೇಜರ್ ಟಾರೆನ್ಸ್ ಎಂಬವರು ಎಂಪೈಯರ್ ಇನ್ ಏಶ್ಯಾ ಎಂಬ ಗ್ರಂಥದಲ್ಲಿ "ಟೀಪುವಿನ ರಾಜ್ಯಭಾರದಲ್ಲಿ ಮೈಸೂರು ಇಡೀ ಭಾರತದಲ್ಲೇ ಅತ್ಯುತ್ತಮ ಫಲವತ್ತಾಗಿದ್ದುದಲ್ಲದೆ, ಅದರ ನಿವಾಸಿಗಳೂ ಎಲ್ಲರಿಗಿಂತಲೂ ಅಧಿಕ ಸುಖಸಮೃದ್ಧಿ ಅನುಭವಿಸುತ್ತಿದ್ದರು." ಎಂದು ಬರೆದಿದ್ದಾರೆ.

ಸುಲ್ತಾನರ ಸೈನ್ಯದಲ್ಲಿ ಎರಡು ವಿಶೇಷ ವಿಭಾಗಗಳಿದ್ದುವು. ಅಸದೆ-ಇಲಾಹೀ ಫೌಜ್ (ದೇವರ ಸಿಂಹಗಳು) ಎಂಬ ಹೆಸರಿನ ವಿಭಾಗದಲ್ಲಿ ಹಿಂದೂ-

www.bearyinfo.com

ಮುಸ್ಲಿಮ್ ಹಾಗೂ ಐರೋಪ್ಯ ಸೈನಿಕರು ಇದ್ದರು. ಈ ಸೈನ್ಯದಲ್ಲಿದ್ದ ಕೆಲವು ಮುಸ್ಲಿಮ್ ಕುಟುಂಬಗಳಿಗೆ 'ಅಸದೀ' ಎಂಬ ಬಿರುದು ಪ್ರಚಾರದಲ್ಲಿ ಬಂದಿತ್ತು. ನಮ್ಮ ಜಿಲ್ಲೆಯಲ್ಲಿ ಅಸದೀ ಎಂಬ ಹೆಸರಿನ ಕೆಲವು ಮನೆತನಗಳಿವೆ. ಈ ಮನೆತನದ ಕೆಲವು ಕುಟುಂಬಗಳು ತೋಕೂರಿನಲ್ಲಿಯೂ ಮಂಗಳೂರಿನಲ್ಲಿಯೂ ಇವೆ.

ಇನ್ನೊಂದು ವಿಭಾಗವು ಕೇವಲ ನವಮುಸ್ಲಿಮರನ್ನೊಳಗೊಂಡು "ಅಹ್ಮದೀ" ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಇದನ್ನು ಸುಲ್ತಾನರು ಅಂದಿನ ತುರ್ಕಿಯ "ಜಾಂನಿಸಾರ್" (ಜೀವತ್ಯಾಗಿಗಳು) ಸೈನ್ಯದ ರೂಪದಲ್ಲಿ ಸಂಘಟಿಸಿದ್ದರು. ಅವರ ಬಾಡಿಗಾರ್ಡ್ (ಅಂಗರಕ್ಷಕ) ದಳವೂ 'ಅಹ್ಮದೀ' ಸೈನ್ಯದ ಸಿಪಾಯಿಗಳನ್ನೊಳಗೊಂಡಿತ್ತು. ಈ ಸೈನ್ಯವು ಕೊಡಗು ಮತ್ತು ಮಲಬಾರಿನಲ್ಲಿ ಮತಾಂತರ ಹೊಂದಿದ ನವಮುಸ್ಲಿಮರನ್ನೊಳಗೊಂಡಿದ್ದರೂ ಅದರ ಮೂಲವು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ನಗರಪ್ರದೇಶದ ನವಮುಸ್ಲಿಮರಿಂದಲೇ ಬಿದ್ದಿತ್ತು. ಆ ಸಂಬಂಧದಲ್ಲಿ ನಮ್ಮ ಸಮಾಜದ ಅನೇಕ ಮಂದಿ ಸುಲ್ತಾನ್ ಶಹೀದರ ಸೈನ್ಯದಲ್ಲೂ ಇದ್ದರು.

ಸುಲ್ತಾನ ಟೀಪೂಶಹೀದರು ಪ್ರಜೆಗಳ ಮಧ್ಯೆ ಎಷ್ಟರ ಮಟ್ಟಿಗೆ ಜನಪ್ರಿಯತೆಯನ್ನು ಗಳಿಸಿದ್ದರೆಂಬುದನ್ನು ಚರಿತ್ರೆಕಾರ 'ಸಿಂಕ್ಲೇರ್' ಅವರು ತನ್ನ ಚರಿತ್ರೆಯಲ್ಲಿ ಬರೆಯುವ ಈ ಕೆಳಗಿನ ವಾಕ್ಯದಿಂದ ಮನನಮಾಡಬಹುದು.

"ರಾಜ್ಯವನ್ನು ಟೀಪುವಿನ ಕುಟುಂಬಕ್ಕೆ ಬಿಟ್ಟುಹೋಗಲೆಂದು ಶ್ರೀರಂಗಪಟ್ಟಣದ ನಿವಾಸಿಗಳು ಇಂಗ್ಲೀಷರಿಗೆ ತಮ್ಮ ಸರ್ವಸಂಪತ್ತನ್ನೂ ಬಿಟ್ಟುಕೊಡಲು ಇಚ್ಛಿಸಿದರು. ಅವನು ಪ್ರಜೆಗಳಲ್ಲಿ ಎಷ್ಟರ ಮಟ್ಟಿಗೆ ಜನಪ್ರಿಯನಾಗಿದ್ದನೆಂಬುದು ಇದರಿಂದ ಗೊತ್ತಾಗುತ್ತದೆ."

ಆದರೆ ಕ್ರೈಸ್ತರ ಕುರಿತು ಸುಲ್ತಾನ್ ಟೀಪೂ ಶಹೀದರ ಹೃದಯದಲ್ಲಿ ಸಂಶಯ ಉತ್ಪನ್ನವಾದಂತಿತ್ತು. ಪೋರ್ಚುಗೀಸ್ ಪ್ರದೇಶ ಗೋವವು ಬಹಳ ಹತ್ತಿರವಾಗಿದ್ದುದರಿಂದ ಈ ಪ್ರದೇಶಗಳಲ್ಲಿ ಪೋರ್ತುಗೀಸ್ ಪಾದ್ರಿಗಳು ಕ್ರೈಸ್ತ ಧರ್ಮಪ್ರಚಾರದ ಬಲೆಯನ್ನು ಹರಡಿಬಿಟ್ಟಿದ್ದರು. ಸುಲ್ತಾನ್ ಶಹೀದರ ದೂರದರ್ಶಕ ದೃಷ್ಟಿಯು ಬಂಗಾಲ ಮತ್ತು ಕರ್ಣಾಟಕದಲ್ಲಿ ಇದೇ ಪಾದ್ರಿಗಳು ತಮ್ಮ ಧರ್ಮದ ಜಾಲವನ್ನು ಹರಡಿಸಿ ಐರೋಪ್ಯನರ ಆಳಿಕೆಗೆ ಸುಲಭ ಮಾರ್ಗ ಮಾಡಿದ್ದುದನ್ನು ಮನಗಂಡು, ತನ್ನ ರಾಜ್ಯದಲ್ಲೂ ಈ ಕಪಟವಿದ್ಯೆಯನ್ನು ಪೋರ್ತುಗೀಸ್ ಪಾದ್ರಿಗಳು ನಡಿಸುತ್ತಿರುವುದನ್ನು ಅವರಿಂದ ಸಹಿಸಲಾಗಲಿಲ್ಲ.

ಪಾದ್ರಿಗಳ ಈ ಮತಾಂತರ ಜಾಲವನ್ನು ಎದುರಿಸಲು ಸುಲ್ತಾನರು ಈ ಕೆಳಗಿನಂತೆ ಆಜ್ಞೆ ಹೊರಡಿಸಿದರು. "ಅನೇಕ ಹಿಂದುಗಳು ಕ್ರೈಸ್ತಧರ್ಮವನ್ನು

www.bearyinfo.com

ಸ್ವೀಕರಿಸುತ್ತಿರುವುದನ್ನು ಕಂಡು ಸುಲ್ತಾನರು ಅವರಿಗೆ ತಮ್ಮ ಹಿರಿಯರ ಧರ್ಮವನ್ನು ಬಿಡಬಾರದೆಂದು ಬರೆದರು. ಆರು ಸಲ ಬರೆದ ಬಳಿಕವೂ ಅವರು ಕೇಳದುದನ್ನು ಕಂಡು ಕಡೆಗೆ ಸುಲ್ತಾನರು "ಮುಂದಕ್ಕೆ ನಿಮ್ಮ ಪೈಕಿ ಯಾವನೊಬ್ಬನೂ ತನ್ನ ಹಿರಿಯರ ಧರ್ಮವನ್ನು ತ್ಯಜಿಸಬಾರದು. ಒಂದು ವೇಳೆ ಮತ ಬದಲಾಯಿಸಬೇಕೆಂದೇ ಹಂಬಲವಿದ್ದರೆ, ಅವರ ಸ್ವಂತ ಅರಸರ ಮತವನ್ನು ಸ್ವೀಕರಿಸಲಿ." ಎಂದು ಬರೆದರು. (ಬೋರಿಂಗ್)

ಹೀಗೆ ಹಲವು ಬಾರಿ ಸೂಚನೆ ಕೊಟ್ಟು ಏನೂ ಫಲವುಂಟಾಗದಾಗ ಸುಲ್ತಾನರು ತೀವ್ರಕ್ರಮ ಕೈಕೊಳ್ಳಬೇಕಾಯಿತು. ಈ ಕುರಿತು ಸುಲ್ತಾನ್ ಶಹೀದರು ಸ್ವತಃ ತಮ್ಮ ಡೈರಿಯಲ್ಲಿ ಈ ರೀತಿ ಬರೆದಿದ್ದಾರೆ.

"ಸುಮಾರು ಮುನ್ನೂರು ವರ್ಷಗಳಿಗೆ ಮುನ್ನ ಪೊರ್ತುಗಲಿನ ನಸ್ರಾನಿಗಳು (ಕ್ರೈಸ್ತರು) ಈ ದೇಶದಲ್ಲಿ ಬಂದಿಳಿದು ಸೋಂಡದ ಅರಸನೊಡನೆ ಕೇವಲ ವ್ಯಾಪಾರ ಮಾಡುವ ನೆವತೋರಿಸಿ ಒಂದು ಪ್ರದೇಶ ಗೋವವನ್ನು ಸ್ವಾಧೀನಪಡಿಸಿಕೊಂಡರು. ಅನಂತರ, ಕಾಲವು ಇವರಿಗೆ ಒದಗಿಸಿದ ಸೌಕರ್ಯಗಳಿಂದ ಫಲಹೊಂದಿ ಸುಮಾರು ಮೂರು ನಾಲ್ಕು ಲಕ್ಷ ರೂಪಾಯಿ ವಾರ್ಷಿಕ ಲಾಭ ಕೊಡುವ ಸುತ್ತುಮುತ್ತಲಿನ ಪ್ರದೇಶಗಳನ್ನು ವಶಪಡಿಸಿಕೊಂಡರು. ಈ ಪ್ರದೇಶದಲ್ಲಿ ಅವರು ಹಿಂದುಗಳನ್ನು ಮೂರ್ತಿಪೂಜೆಯಿಂದಲೂ ಮುಸಲ್ಮಾನರನ್ನು ನಮಾಜು ಮತ್ತು ಉಪವಾಸದಿಂದಲೂ ತಡೆದರು. ಇವರ ಆಜ್ಞೆ ಅನುಸರಿಸದವರನ್ನು ಪಟ್ಟಣದಿಂದ ಹೊರತಳ್ಳಿದರು. ಆ ಊರ ನಿವಾಸಿಕರು ಹೊರಗೆ ಹೋಗದಿದ್ದರೆ ಅವರನ್ನು ಬಲಪ್ರಯೋಗಿಸಿ ಕ್ರೈಸ್ತರನ್ನಾಗಿ ಮಾಡಲಾಗುವುದೆಂದು ಕೇವಲ ಮೂರು ದಿವಸಗಳ ಅವಧಿ ಕೊಟ್ಟರು. ಕೆಲವರು ಹೆದರಿ ತಮ್ಮ ಮನೆಮಠಗಳನ್ನು ಬಿಟ್ಟು ಹೊರಗೋಡಿದರು. ಆದರೆ ಹೆಚ್ಚಿನ ಜನರು ದಿಕ್ಕು ದಾರಿ ತೋಚದೆ ಅಲ್ಲೇ ಉಳಿದುಬಿಟ್ಟರು. ಅವರನ್ನು ಆ ಅಧರ್ಮಿಗಳಾದ ನಸ್ರಾನಿಗಳು ಮೂರು ದಿವಸಗಳ ನಂತರ ಅವರ ಸುಳ್ಳು ಧರ್ಮವನ್ನು ಸ್ವೀಕರಿಸಲು ಒತ್ತಾಯಪಡಿಸಿದರು. [ಇದೇ ಸಂದರ್ಭದಲ್ಲಿ ಸಾರಸ್ವತ ಮತ್ತು ಗೌಡ ಸಾರಸ್ವತ ಸಮುದಾಯಗಳು ಗೋವದಿಂದ ಪಲಾಯನಗೈದು ನಮ್ಮ ಜಿಲ್ಲೆಯಲ್ಲಿ ಬಂದು ನೆಲೆಸಿದುವು. ಗೋವದ ಧಾರ್ಮಿಕ ನ್ಯಾಯಾಲಯಗಳು ವಿಧಿಸುತ್ತಿದ್ದ ಶಿಕ್ಷೆಗಳಿಗೆ ಹೆದರಿ ಸ್ವತಃ ಕ್ರೈಸ್ತರೂ ಗೋವದಿಂದ ಪಲಾಯನ ಮಾಡಿ ನಮ್ಮ ಜಿಲ್ಲೆಯಲ್ಲಿ ಬಂದು ನೆಲೆಸಿದರು. ಪೋರ್ತುಗಲ್ ಅರಸನ ಆಜ್ಞೆಯನುಸರಿಸಿ ಅನೇಕ ಹಿಂದುಗಳ ದೇವಾಲಯಗಳನ್ನೂ ಮುಸಲ್ಮಾನರ ಮಸೀದಿಗಳನ್ನೂ ಕೆಡವಿ ಅವುಗಳ ಸ್ಥಳಗಳಲ್ಲಿ ಇಗರ್ಜಿಗಳನ್ನು ನಿರ್ಮಿಸಿದ್ದರು. ಗೋವದಲ್ಲಿ ಪೋರ್ತುಗೀಸರು ಸ್ಥಳೀಯ ಹಿಂದೂ-ಮುಸಲ್ಮಾನರ ವಿರುದ್ಧ ನಡಿಸುತ್ತಿದ್ದ ಅಕ್ರಮ-ಮರ್ದನಗಳು ಸ್ಪೈನಿನಲ್ಲಿ ಇವರ ಸಹಧರ್ಮಿಗಳು ಅಲ್ಲಿಯ ಮುಸಲ್ಮಾನರ ವಿರುದ್ಧ ಮಾಡಿದ ಅತ್ಯಾಚಾರ-ಅಕ್ರಮಗಳನ್ನು ಹೋಲುತ್ತಿದ್ದುವು—ಸಂ.]

www.bearyinfo.com

ಇದರ ನಂತರ ಸುತ್ತುಮುತ್ತಲಿನ ಪ್ರದೇಶಗಳ ಅರಸರು-ಅಧಿಕಾರಿಗಳಿಂದ ರೂಪಾಯಿ ಮತ್ತು ಇನಾಮುಗಳನ್ನು ಕರಸ್ಥಮಾಡಿಕೊಂಡು ಅವರು ಈ ನವ ಕ್ರೈಸ್ತರ ಮೂಲಕ ನಗರ, ಸೋಂಡ ಮತ್ತು ಕೊಡಿಯಾಲಬೈಲ್ ಬಂದರ್ (ಮಂಗಳೂರು)ನಲ್ಲಿ ಇಗರ್ಜಿಗಳನ್ನು ಕಟ್ಟಿಸಿದರು ಮತ್ತು ಅಲ್ಲಿ ಒಬ್ಬಿಬ್ಬರು ಪಾದ್ರಿಗಳನ್ನೂ ನೇಮಿಸಿದರು. ಇವರ ಮೂಲಕ ವಂಚನೆಯಿಂದಲೂ ತರತರದ ಲಂಚತೋರಿಸಿ ಇಲ್ಲಿಯ ಜನರನ್ನು ತಮ್ಮ ಧರ್ಮದೊಳಗೆ ಸೇರಿಸಿಕೊಂಡರು. ಇದೇ ಅವಸ್ಥೆ ಸಾಗುತ್ತಿರುವಾಗಲೇ ದೇವರ ದಯದಿಂದ ಕೋಡಿಯಾಲ್ ಬಂದರವು ನಮ್ಮ ಕೈವಶ ಬಂತು. ಮತ್ತು ಇಲ್ಲಿ ಪೋರ್ತುಗಲ್ಲಿನವರ ಎಲ್ಲಾ ಕುತಂತ್ರಗಳು ನಮಗೆ ಅರಿವಾದಾಗ ನಾವು ಹಜೂರು ಕಛೇರಿಯ ದೀವಾನ ನಿಗೆ ಎಲ್ಲಾ ಕ್ರೈಸ್ತಮನೆಗಳ ಖಾನೇಶುಮಾರಿ ನಡಿಸಬೇಕೆಂದು ಆಜ್ಞೆಕೊಟ್ಟೆವು. ದೀವಾನನು ಸೋಂಡಾ ನಗರ ಮತ್ತು ಕೊಡಿಯಾಲ್ ಬಂದರದ ಮುತ್ಸದ್ದಿಯ ರನ್ನು ತೆಗೆದುಕೊಂಡು ಖಾನೆಶುಮಾರಿ ನಡಿಸಿದನು. ನಾವು ಒಬ್ಬ ಅಫ್‌ಸರ್ (ಅಫೀಸರ್) ಮತ್ತು ಕೆಲವು ಸೈನಿಕರನ್ನು ಕ್ರೈಸ್ತರು ವಾಸಿಸುತ್ತಿದ್ದಲ್ಲಿ ನಿಲ್ಲಿಸಿದೆವು. ಮತ್ತು 'ಮುಂದಿನ ಕಾರ್ಯಕ್ರಮದ ಕುರಿತು ನಿಮಗೆ ಆಜ್ಞೆಕೊಡಲಾಗುವುದು; ಅದರಂತೆ ಪರಿಪೂರ್ಣ ಸಾಧಿಸಬೇಕಾಗುವುದು; ಅಷ್ಟರ ವರೆಗೂ ಎಲ್ಲಾ ಕಾರ್ಯ ಕ್ರಮವನ್ನೂ ಗುಪ್ತವಾಗಿಡಬೇಕು' ಎಂದು ಅವರಿಗೆ ಹೇಳಿದೆವು. ಅನಂತರ ನಿರ್ದಿಷ್ಟ ದಿವಸ, ನಿರ್ದಿಷ್ಟ ಸಮಯದಲ್ಲಿ (ಸುಬಹ್ ನಮಾಜಿನ ವೇಳೆ) ಎಲ್ಲ ಕ್ರೈಸ್ತನಿವಾಸಿಕರನ್ನೂ (ಸ್ತ್ರೀಯರನ್ನೂ ಮಕ್ಕಳನ್ನೂ) ಮುತ್ತಿಗೆ ಹಾಕಿ ಸೆರೆಹಿಡಿಯ ತಕ್ಕದ್ದೆಂದೂ ಒಬ್ಬನೇ ಒಬ್ಬ ವ್ಯಕ್ತಿಗೆ—ತಪ್ಪಲು ಎಡೆಕೊಡಬಾರದಾಗಿಯೂ ಆ ಅಫ್‌ಸರುಗಳಿಗೆ ಆಜ್ಞೆಕೊಡಲಾಯಿತು. ಸೈನ್ಯವು ಈ ಆಜ್ಞೆಯನ್ನು ಅಕ್ಷರಶಃ ಪಾಲಿಸಿತು. ಈ ರೀತಿ ಒಟ್ಟು 60,000 ಕ್ರೈಸ್ತರು ಕೈಸೇರಿದರು. ಅವರನ್ನು ಹಜೂರರ (ತನ್ನ) ಬಳಿ ಕಳುಹಿಸಲು ಆಜ್ಞೆಕೊಡಲಾಯಿತು. ಅವರನ್ನು ಐನೂರರ ಸಂಖ್ಯೆಯಲ್ಲಿ ಬೇರೆ ಬೇರೆ ವಿಭಾಗಗಳಾಗಿ ಕಳುಹಿಸಲಾಯಿತು. ವಿವಿಧ ಸ್ಥಳಗಳಲ್ಲಿ ಅವರಿಗೆ ಊಟ ಬಟ್ಟೆಗಳನ್ನು ಕೊಡಲಾಯಿತು. ಅಲ್ಲಿ ಇವರಿಗೆ ಇಸ್ಲಾಮಿನ ಸಂದೇಶವನ್ನೂ ಕೊಡಲಾಯಿತು. ಇವರು ಇಸ್ಲಾಮ್ ಸ್ವೀಕರಿಸಿದಾಗ ಇವರಿಗೆ ಅಹ್ಮದೀಗಳೆಂದು ಹೆಸರಿಡಲಾಯಿತು."

"ಈ ರೀತಿ ಆ ಜನರಿಂದ ಸುಲ್ತಾನರಿಗೆ ತನ್ನ ಸೈನ್ಯಕ್ಕೆ ಹದಿನೈದು ಸಾವಿರ ತರುಣರು ಸಿಕ್ಕಿದರು. ಅನಂತರ, ಮಲಬಾರಿನ ಮತ್ತು ಕೊಡಗಿನ ನವಮುಸ್ಲಿ ಮರನ್ನು ಸೇರಿಸಿ ಅಹ್ಮದೀ (ಟೀಪೂ ಸುಲ್ತಾನರ ಒಂದು ಸೈನ್ಯ ವಿಭಾಗದ ಹೆಸರು) ಗಳ ಸಂಖ್ಯೆಯನ್ನು ವರ್ಧಿಸಲಾಯಿತು". ಎಂದು ಕರ್ಕ್‌ಪೇಟ್ರಿಕ್ ಬರೆಯುತ್ತಾನೆ. ಈ ಜನರನ್ನು ಸಂಸ್ಥಾನದ ಪ್ರತಿಯೊಂದು ವಿಭಾಗದಲ್ಲೂ ನೆಲೆಸಲಾಯಿತು. ಮತ್ತು ಈ ಜನಕೂಟದೊಡನೆ ಬಹಳ ವಿಶಾಲ ಮನಸ್ಸಿನಿಂದ ವರ್ತಿಸಬೇಕೆಂದು

www.bearyinfo.com

ಇವರನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಿಗೆ ಪ್ರೀತಿಸಬೇಕೆಂತಲೂ ಅಲ್ಲಲ್ಲಿಯ ಅಧಿಕಾರಿಗಳಿಗೆ ಸುಲ್ತಾನರು ಕಟ್ಟಾಜ್ಞೆ ಕೊಟ್ಟರು. ಬ್ಯಾರಿಗಳೆಂದು ಹೆಸರಾಂತ (ಶಾಫೀ ಮದ್‌ಹಬಿನ) ನಮ್ಮ ಸಮಾಜದ ಅನೇಕ ಕುಟುಂಬಗಳು ಮೈಸೂರು ರಾಜ್ಯದ ಹಲವು ಕಡೆಗಳಲ್ಲಿಯೂ ಕೊಡಗಿನಲ್ಲಿಯೂ ಉತ್ತರಕನ್ನಡದಲ್ಲಿಯೂ ನೆಲೆಸಿರುವುದನ್ನು ನೋಡುವಾಗ, ಇವರು ಅಹ್ಮದೀ ಸೈನ್ಯಕ್ಕೆ ಸಂಬಂಧಪಟ್ಟ ನಮ್ಮ ಸಮಾಜದವರೇ ಆಗಿರಬೇಕೆಂದು ಊಹಿಸಬಹುದು. ಸುಲ್ತಾನ್ ಶಹೀದರ ಕಾಲದಲ್ಲೇ ಮತಾಂತರ ಹೊಂದಿದ ಕೆಲವರಿಗೆ ಸುಲ್ತಾನರು 'ಶೇಖ್' ಮತ್ತು 'ಖಾನ್' ಎಂಬ ಬಿರುದು ಕೊಟ್ಟಿದ್ದು ಅದನ್ನು ಅವರು ಅಭಿಮಾನಪೂರ್ವಕವಾಗಿ ಉಪಯೋಗಿಸುತ್ತಾ ಬರುತ್ತಿದ್ದರು. ಕೇರಳದಲ್ಲಿ ಉರ್ದು ಮಾತಾಡುವ 'ಪಠಾಣಿ' ಗಳೆಂದು ಹೇಳಿಸಿಕೊಳ್ಳುವ ಅನೇಕರು ಈ ಪಂಗಡಕ್ಕೆ ಸೇರಿದವರಾಗಿರಬೇಕು.

ಕ್ರೈಸ್ತರನ್ನು ಈ ರೀತಿ ಸ್ಥಳಾಂತರಗೊಳಿಸಿದ ವೇಳೆಯಲ್ಲಿ ಒತ್ತಾಯದಿಂದ ಮತಾಂತರಗೊಳಿಸಿ ಮುಂಜಿ ಮಾಡಿಸಿದ್ದರೆಂತಲೂ ಕೆಲವು ಕ್ರೈಸ್ತಚರಿತ್ರೆಕಾರರು ಬರೆಯುತ್ತಾರೆ. ಮಾತ್ರವಲ್ಲ ಈ ಮತಾಂತರ ಮತ್ತು ಮುಂಜಿಯ ಕುರಿತು ನೂರಾರು ಗ್ರಂಥಗಳನ್ನು ಬರೆದು ಸಹಸ್ರಾರು ರೀತಿಯಲ್ಲಿ ಹೃದಯದ್ರಾವಕರೂಪ ದಲ್ಲಿ ಚಿತ್ರಿಸಿದ್ದಾರೆ. ಆದರೆ ಮತಾಂತರಕ್ಕೆ ಒತ್ತಾಯಪಡಿಸಿದ್ದುದು ಯಥಾರ್ಥ ವಾಗಿದ್ದರೆ ತಮ್ಮ ಧರ್ಮದ ರಕ್ಷಣೆಗಾಗಿ ಈ 60,000 ಕ್ರೈಸ್ತರ ಪೈಕಿ ಒಬ್ಬನೇ ಒಬ್ಬನು ಮತಾಂತರವನ್ನು ವಿರೋಧಿಸಿ ಪ್ರಾಣತ್ಯಾಗಗಳಿಸಿದ ವರ್ತಮಾನವು ಚರಿತ್ರೆಯಲ್ಲಿ ಕಾಣಬೇಕಿತ್ತು. ಈ ರೀತಿ ನಡಿಯಲಿಲ್ಲವೆಂದು ಕ್ರೈಸ್ತ ಚರಿತ್ರೆ ಕಾರರೇ ಒಪ್ಪುವಾಗ ಆ ಜನಕೂಟಕ್ಕೆ ಕ್ರೈಸ್ತಧರ್ಮದ ಮೇಲೆ ಸಂಪೂರ್ಣ ನಂಬಿಕೆ ಬಂದಿರಲಿಲ್ಲವೆಂತಲೋ ಸುಲ್ತಾನರು ಅವರಿಗೆ ಇಸ್ಲಾಮಿನ ಸಂದೇಶ ಕೊಟ್ಟಾಗ ಪುರೋಹಿತ ವರ್ಗದ ನಿರಂಕುಶತೆಯು ಇಸ್ಲಾಮಿನಲ್ಲಿ ಇಲ್ಲದುದನ್ನು ಕಂಡು ಈ ಧರ್ಮವನ್ನು ಸ್ವೀಕರಿಸಿದುದರಿಂದ ತಮಗೆ ಲಾಭವಲ್ಲದೆ ನಷ್ಟವಾಗದು ಎಂದು ತೀರ್ಮಾನಿಸಿ ಅವರು ಮತಾಂತರ ಹೊಂದಿರಬೇಕು ಎಂದೋ ತೀರ್ಪು ಕೊಡಬೇಕಾಗುತ್ತದೆ.

ಮಾತ್ರವಲ್ಲ, ಸುಲ್ತಾನರಿಗೆದುರಾಗಿ ಕ್ರೈಸ್ತರು ಬ್ರಿಟಿಷರಿಗೆ ಒಳಗಿಂದೊಳಗೆ ಸಹಾಯ ಮಾಡಿ ದ್ರೋಹಬಗೆಯುತ್ತಿದ್ದರೆಂಬುದು ಚರಿತ್ರೆ ಪ್ರಸಿದ್ಧವಾದ ಯಥಾರ್ಥತೆ. ಈ ರೀತಿಯ ರಾಜದ್ರೋಹಕ್ಕೆ ಸುಲ್ತಾನರು ಕೊಟ್ಟ ಶಿಕ್ಷೆಯ ಕಠಿಣತೆಯ ಕುರಿತು ಅಭಿಪ್ರಾಯ ವ್ಯತ್ಯಾಸವಿದೆ. ಅಂತು, ಸುಲ್ತಾನರನ್ನು ಲಜ್ಜಾಸ್ಪದವಾದ ಒಂದು ಒಳಸಂಚಿಗೆ ಗುರಿಪಡಿಸಿ ಅವರನ್ನು ಕೊಲ್ಲಿಸಿದ ನಂತರ ಆಂಗ್ಲೇಯರೂ ಅವರ ಹಿಂಬಾಲಕರೂ ಅವರ ವಿರುದ್ಧ ಅಪಪ್ರಚಾರ ವನ್ನು ಕೈಗೊಂಡು ಅವರ ಕಾಲವನ್ನು ಭಾರತ ಚರಿತ್ರೆಯ ಕರಿಪುಟವಾಗಿ ಚಿತ್ರಿಸಲು ತುಂಬಾ ಪ್ರಯತ್ನ ಪಟ್ಟಿದ್ದಾರೆ. ಈ ಕುರಿತು ಕೇಪ್ಟನ್ ಲಿಟಲ್ ರವರ ಮಾತು ಅಕ್ಷರಶಃ ನಿಜವಾಗಿದೆ.

www.bearyinfo.com


"ಗತ ಕೆಲವು ವರ್ಷಗಳಿಂದ ಸುಲ್ತಾನ್ ಟೀಪೂರವರನ್ನು ಅಪಕೀರ್ತಿಗೊಳಿಸಲುಬೇಕಾಗಿ ಇಂಗ್ಲಿಷ್ ಭಾಷೆಯ ಎಲ್ಲಾ ಶಬ್ದಗಳನ್ನೂ ಹುಡುಕಿ ತೆಗೆಯಲಾಗುತ್ತದೆ. ನಿಘಂಟಿನಲ್ಲಿರುವ ನೀಚ ಶಬ್ದಗಳನ್ನು ಸುಲ್ತಾನರನ್ನು ಖಂಡಿಸುವ ಸಲುವಾಗಿ ಹುಡುಕಿ ತೆಗೆಯಲಾಗುತ್ತದೆ. ಆದರೂ ಟೀಪು ಸುಲ್ತಾನರನ್ನು ತಮ್ಮ ಮನಸ್ಸು ಸಂತುಷ್ಟವಾಗುಷ್ಟರ ಮಟ್ಟಿಗೆ ಬಯ್ಯಲು, ಭಾಷೆಯಲ್ಲಿ ಬೇಕಾದಷ್ಟು ವಿಶಾಲತೆಯಿಲ್ಲವಲ್ಲಾ ಎಂಬುದೇ ಹಲವರಿಗೆ ಚಿಂತಾ ವಿಷಯವಾಗಿದೆ. ಆದ್ದರಿಂದ ಈ ಜನರು ಹೊಸ ಹೊಸ ಸಾಂಕೇತಿಕ ಶಬ್ದಗಳನ್ನು ರಚಿಸತೊಡಗಿರುತ್ತಾರೆ." (ಕೇಪ್ಟನ್ ಲಿಟಲ್‌ರವರ ಪ್ರವಾಸ) ಸುಲ್ತಾನ ಟೀಪೂ ಶಹೀದರನ್ನು ಅಪಕೀರ್ತಿಗೊಳಿಸುವುದು ಕ್ರೈಸ್ತ ಚರಿತ್ರೆಕಾರರಿಗೆ ಒಂದು ಹೆಮ್ಮೆಯ ಸಾಧನದಂತಿದೆ. ಮಾತ್ರವಲ್ಲ, ಅವರು ಚರಿತ್ರೆ ಬರೆಯುವ ಹವ್ಯಾಸಕ್ಕೆ ಇಳಿದಿರುವುದೇ ಈ 'ಮಹಾಸಾಧನೆ'ಯನ್ನು ನೆರವೇರಿಸಲೋಸುಗವೇ ಎಂದು ಭಾಸವಾಗುತ್ತದೆ. ಆದರೆ ಕಾಲಹೋದಂತೆ ಟೀಪು ಸುಲ್ತಾನ್ ಶಹೀದರ ಕುರಿತು ಹೊಸ ಹೊಸ ಸಂಶೋಧನೆಗಳು ಬೆಳಕಿಗೆ ಬರುತ್ತಿರುವಂತೆ ಈ ಚರಿತ್ರೆಕಾರರ ಮನೋಕಾಂಕ್ಷೆಯು ಮಣ್ಣುಗೂಡುತ್ತಿರುವುದನ್ನು ನಾವು ಕಾಣಬಹುದು.

ಸುಲ್ತಾನ್ ಶಹೀದರಿಗೆ ಇಸ್ಲಾಮಿನ ಮೇಲೆ ತುಂಬಾ ಭಕ್ತಿ ಇತ್ತು. ಆದರೆ ಅವರು ಪರಧರ್ಮಗಳಿಗೂ ಆಶ್ರಯವಿತ್ತಿದ್ದಾರೆಂದು ಸಂಶೋಧನೆಗಳಿಂದ ಸ್ಥಾಪಿತವಾಗಿದೆ. ಶ್ರೀರಂಗಪಟ್ಟಣದಲ್ಲಿರುವ ಜುಮಾಮಸೀದಿಯ ಉದ್ಘಾಟನೆಯಂದು ಯಾರು ಇಮಾಮತ್ (ನಮಾಜಿನ ನಾಯಕತ್ವ) ನಡಿಸಬೇಕೆಂದು ಪ್ರಶ್ನೆ ಬಂದಾಗ, ತನ್ನ ಜೀವಮಾನದಲ್ಲಿ ಒಂದೇ ಒಂದು ನಮಾಜ್ ತಪ್ಪಿ ಹೋಗದವರೇ ಅದಕ್ಕೆ ಯೋಗ್ಯರೆಂದು ತೀರ್ಮಾನವಾಯಿತು. ಮಸೀದಿಯಲ್ಲಿ ನೆರೆದಿದ್ದ ಶೇಖರೂ, ಆಲಿಮರೂ ವಿದ್ವಾಂಸರುಗಳನ್ನೊಳಗೊಂಡ ಸಾವಿರಾರು ಮಂದಿಯ ಪೈಕಿ ಒಬ್ಬನೇ ಒಬ್ಬ ವ್ಯಕ್ತಿಯು ಮುಂದೆ ಬಾರದಾಗ ಸುಲ್ತಾನರು ಮುಂದೆ ಬಂದು "ಅಲ್‌ಹಮ್ದುಲಿಲ್ಲಾಹ್. ನನ್ನ ಒಂದು ನಮಾಜೂ ತಪ್ಪಲಿಲ್ಲ'ವೆಂದು ಹೇಳಿ ಇಮಾಮತ್ ವಹಿಸಿ ನಮಾಜು ನೆರವೇರಿಸಿದ್ದರು. ಈ ಘಟನೆಯಿಂದ ಅವರು ಎಷ್ಟರ ಮಟ್ಟಿಗೆ ಇಸ್ಲಾಮಿನ ಅನುಷ್ಠಾನಗಳನ್ನು ಭಕ್ತಿಯಿಂದ ನೆರವೇರಿಸುತ್ತಿದ್ದರೆಂಬುದು ವ್ಯಕ್ತವಾಗುತ್ತದೆ. ನವಾಬ್ ಹೈದರ್‌ರವರ ಕಾಲದಲ್ಲಿ ಅವರ ಸಂಬಂಧಿಕರಾದ ಶೇಖ್ ಅಯಾಜ್ ಎಂಬವರು ಮಂಗಳೂರಿನ ಅಮಲ್ದಾರರಾಗಿದ್ದು ಅವರು ವಂಚನೆಯಿಂದ ಮಂಗಳೂರು ಕೋಟೆಯನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟ ಅಪರಾಧಕ್ಕಾಗಿ ಸುಲ್ತಾನರು ಅವರನ್ನು ಗಲ್ಲಿಗೇರಿಸಿದರು.

ಮಂಗಳೂರು ಮುಸ್ಲಿಮ್ ಸಮಾಜಕ್ಕೆ ಸುಲ್ತಾನ್ ಶಹೀದರು ಕೊಟ್ಟ ಮರೆಯಲಾಗದ ಕೊಡುಗೆಯೆಂದರೆ ನಮ್ಮ ಕೇಂದ್ರ ಜುಮಾಮಸೀದಿ. ಅದರ

www.bearyinfo.com

# ಅಂತಿಮಕಾಲದಲ್ಲಿ ಇಸ್ಲಾಮಿನ ಸ್ವಾಭಿಮಾನದ ಪ್ರತೀಕ



ಸುಲ್ತಾನ ಟೀಪೂರವರಿಗೆ ಎರಡು ಗುಂಡುಗಳು ತಾಗಿದುವು. ತಾವೂಸ್ (ಕುದುರೆ) ನೆಲಕ್ಕುರುಳಿತು. ಸುಲ್ತಾನರು ಕೈಕೈ ಕಾಳಗಕ್ಕಿಳಿದರು. ಕಡೆಗೆ ಈ ಸ್ವಾಭಿಮಾನ ಮೂರ್ತಿಯು ಮೈಗೆ ಕಡೆಯ ಏಟು ತಗಲಿತು. ನವಮುಸ್ಲಿಮ್ ಮರಾಠ ಗುಲಾಮ್ ರಾಜಾಖಾನನು ಸ್ವಾಮಿದ್ರೋಹ ಮಾಡಿದನು. ಚಿತ್ರದಲ್ಲಿ ಆತನು ಬಂದೂಕು ಹಿಡಕೊಂಡು ಓಡುತ್ತಿದ್ದಾನೆ.

www.bearyinfo.com

# SHERULE FAZLE & CO.,

*Commission Agents, Stockists & Dealers in*

**Supari, Copra, Pepper, Cardamoms, Cashewnuts & other Forest Produce.**

Travelling Agents for "Pilgrimage Booking" & Transport Contractors for Bombay Goods.

## BUNDER, MANGALORE-1, (S. India).

Telegrams: **SHERULABAD.**

MESSRS.

# Haji M. Moidinabba, Haji V. Husain Kunhi & Co.,

MERCHANTS & COMMISSION AGENTS,

**Post Box No. 99, Bunder, Mangalore-1.**

(ESTD. 1935)

Telephone { Office : 209<br>Residence: 210

Telegrams: **MOIDINABBA.**

*Dealers in:* SUPARI, COPRA, CASHEWNUTS, PEPPER & OTHER HILL PRODUCTS.

**Allied Concern: MYSORE TRADING CORPORATION,**

*Dry Fish Merchants & Commission Agents,*

POST BOX NO. 140,

**Bamboo Bazaar, Bunder, Mangalore-1.**

Tel: **BADRIA.** Phone: **209 PP**


www.bearyinfo.com

ಸೌಂದರ್ಯದ ಅರಿವು ಹೊರಗಿನವರಿಗೆ ಇನ್ನೂ ಆಗದಿದ್ದುದೇ ಅದಕ್ಕೆ ತಕ್ಕ ಪ್ರಶಸ್ತಿ ದೊರಕದೆ ಹೋಗಲು ಕಾರಣ. ಈ ಮಸೀದಿಯು ಹಿಂದೆ ವಿವರಿಸಿದಂತೆ ಭಾರತದ ಅತಿ ಪುರಾತನ ಮಸೀದಿಗಳಲ್ಲೊಂದಾಗಿದ್ದು ಇದನ್ನು ಸುಲ್ತಾನರು ಪ್ರತ್ಯೇಕ ಗಮನಕೊಟ್ಟು ಪುನರುಜ್ಜೀವನಗೊಳಿಸಿದುದಲ್ಲದೆ ಕೆತ್ತನೆಯ ಕೆಲಸಗಳಿಂದ ಅದರ ಕಂಬಗಳನ್ನೂ ಬೋಡಿಗೆ, ಮಿಂಬರ್ ಇತ್ಯಾದಿಗಳನ್ನು ಅದ್ವಿತೀಯ ಕಲಾಕೃತಿಯಾಗಿ ಮಾಡಿಸಿಕೊಟ್ಟರು. ಇಂತಹ ಕೆತ್ತನೆಯ ಕೆಲಸವು ದಕ್ಷಿಣ ಕನ್ನಡದಲ್ಲಿ ಮಾತ್ರವಲ್ಲ ಕರ್ಣಾಟಕದಲ್ಲೆಲ್ಲೂ ಇಲ್ಲವೆಂದರೂ ಅತಿಶಯೋಕ್ತಿಯಾಗಲಾರದು.

ಈ ಮಸೀದಿಯನ್ನು ಪುನರುತ್ಥಾನಗೊಳಿಸಿ ಇದಕ್ಕೆ ಮಸ್ಜಿದ್‌ಝೀನತ್ ಬಕ್ಷ್ ಎಂದು ನಾಮಕರಣ ಮಾಡಿದುದಲ್ಲದೆ ಅಂದು ನೆಲೆಗೊಂಡಿದ್ದ ಎಲ್ಲಾ ಮಸೀದಿಗಳಿಗೂ ಅವರು ತಸ್ದೀಖ್‌ಗಳನ್ನು ಕೊಟ್ಟಿರುತ್ತಾರೆ. ಅದು ಇದುವರೆಗೂ ಸಿಗುತ್ತಾ ಬರುತ್ತದೆ.

ಸುಲ್ತಾನ್ ಟೀಪೂ ಶಹೀದರು ಮಂಗಳೂರಿಗೆ ಬಂದಾಗ ಡೊಂಗರಕೇರಿಯ ಮಸೀದಿಯಲ್ಲಿ ಸಯ್ಯಿದ್‌ಶಾಹ್ ಅಮೀರ್ ಎಂಬ ಪ್ರಸಿದ್ಧ ವಲಿಯೊಬ್ಬರು ಇದ್ದರೆಂದೂ, ಅವರನ್ನು ಸುಲ್ತಾನರು ಕಂಡು ಆಶೀರ್ವಾದ ಕೇಳುತ್ತಿದ್ದರೆಂದೂ ಕೆಲವು ಹಿರಿಯರು ಹೇಳುತ್ತಾರೆ. ಸದ್ರಿ ಶಾಹ್ ಅಮೀರ್‌ರವರು ತಾನು ಕಟ್ಟಿಸಿದ ಮಸೀದಿಯ ಪಕ್ಕದಲ್ಲೇ ದಫನ ಹೊಂದಿದಾಗ ಅವರಿಗೆ ಚಂದವಾದ ಗೋರಿಯೊಂದನ್ನು ಕಟ್ಟಿಸಲು ಆಜ್ಞೆಕೊಟ್ಟಿದ್ದರು. ಅಷ್ಟರೊಳಗೆ ಸುಲ್ತಾನರ ರಾಜ್ಯಭಾರವು ಅಂತ್ಯವಾದುದರಿಂದ ಆ ಕೆಲಸವು ಅರ್ಧದಲ್ಲೇ ಉಳಿಯಿತು. ಅದರ ಕುರುಹು ಅವರ ಸಮಾಧಿಯ ಮೇಲೆ ಇಂದಿಗೂ ಇದೆ.

ಸುಲ್ತಾನ್ ಟೀಪೂ ಶಹೀದರ ಕಾಲದಲ್ಲಿ ನಮ್ಮ ಸಮಾಜದ ಹಿರಿಯ ಮುಂದಾಳಾಗಿದ್ದ ಸಾಯಿರಿ ಬ್ಯಾರಿ ಅವರು ಮಂಗಳೂರಿನ ಅಮಲ್ದಾರರಾಗಿದ್ದರು. ಸದ್ರಿಯವರೇ ಜುಮಾ ಮಸೀದಿಯ ಮೊಕ್ತೇಸರರಾಗಿದ್ದರು. ಅವರ ಮೊಕ್ತೇಸರತನ ಕಾಲದಲ್ಲೇ ಮಸೀದಿಯ ಜೀರ್ಣೋದ್ಧಾರವಾಗಿ ಇಂದು ತೋರುವ ರೂಪವು ಅದಕ್ಕೆ ಕೊಡಲಾಯಿತು. ಅದರ ಮರದ ಕಂಬ, ಬೋಡಿಗೆ, ಮಿಂಬರ್ ಮೊದಲಾದವುಗಳ ಮೇಲೆ ಮಾಡಿರುವ ಕೆತ್ತನೆಯ ಕೆಲಸವೂ ಸದ್ರಿಯವರ ಮೊಕ್ತೇಸರತನದ ಕಾಲದಲ್ಲೇ ಟೀಪುಸುಲ್ತಾನ್ ಶಹೀದರ ಆಜ್ಞೆಯಂತೆ ನಡಿಯಿತು. ಮತ್ತು ಅದಕ್ಕೆ ಮಸ್ಜಿದ್ ಝೀನತ್‌ಬಕ್ಷ್ (ಸೌಂದರ್ಯಕೊಡುವ ಮಸೀದಿ) ಎಂಬ ಹೆಸರನ್ನು ಕೊಡಲಾಯಿತು. ಟೀಪುಸುಲ್ತಾನರ ಕಾಲದಲ್ಲಿಯೂ ಸದ್ರಿ ಮಸೀದಿಯು ನಗರದ ಕೇಂದ್ರ ಮಸೀದಿಯಾಗಿದ್ದು ಎಲ್ಲಾ ಮಸೀದಿಗಳಿಗೂ ಸಲ್ಲಬೇಕಾದ ತಸ್ದೀಖ್ ಇಲ್ಲಿಗೆ ಬಂದು ಬಟವಾಡೆಯಾಗುತ್ತಿತ್ತು.



www.bearyinfo.com

ಮಂಗಳೂರಿಗೆ ಸುಲ್ತಾನರು ಜಮಾಲಾಬಾದ್ ಎಂಬ ಹೆಸರನ್ನು ಕೊಟ್ಟಿದ್ದರು. ಇದೇ ಹೆಸರಲ್ಲಿ ಹೊಸದುರ್ಗದಲ್ಲಿ ಒಂದು ಕೋಟೆಯನ್ನೂ ಕಟ್ಟಿಸಿದ್ದರು. ಗುಜರಾತ್ ಮತ್ತು ಕಛ್ ಪ್ರದೇಶಗಳಿಂದ ಸುಲ್ತಾನರ ಕಾಲದಿಂದಲೇ ಮೇಮನ್ ವ್ಯಾಪಾರಿಗಳು ಬರಲುತೊಡಗಿದ್ದರು.

ಸದ್ರಿ ಕಾಲದಲ್ಲೇ ಇಲ್ಲಿ ಕಚ್ಚೀ ಮೇಮನ್ ಮಸೀದಿಯು ಅಲ್ಲಿ ಸೇಟ್ ಎಂಬವರಿಂದ ಕಟ್ಟಿಸಲ್ಪಟ್ಟಿತು. ಸದ್ರಿಯವರು ಪಶ್ಚಿಮಕರಾವಳಿಯಲ್ಲಿ ಏಳು ಮಸೀದಿಗಳನ್ನು ತಾನು ಕಟ್ಟಿಸುವುದಾಗಿ ಹರಕೆಯಿಟ್ಟಿದ್ದರಿಂದೂ ಅದರಂತೆ ಮಂಗಳೂರಿನ ಬಂದರದಲ್ಲಿಯೂ ಒಂದು ಮಸೀದಿಯನ್ನೂ ಕಟ್ಟಿಸಿದರೆಂತಲೂ ಹಿರಿಯರು ಹೇಳುತ್ತಾರೆ. ಮೇಮನರು ಅಂದು ತುಂಬಾ ಹಣವಂತರಾಗಿದ್ದು ತಮ್ಮ ಮಸೀದಿಗೆ ಸರಕಾರದಿಂದ ತಸ್ದೀಖ್ ಅವಶ್ಯವಿಲ್ಲವೆಂದು ಟೀಪೂ ಸುಲ್ತಾನರಿಗೆ ತಿಳಿಸಿದ್ದರು. ಅದರಂತೆ ಈ ಮಸೀದಿಗೆ ಈಗಲೂ ತಸ್ದೀಖ್ ಸಿಗುತ್ತಿರುವುದಿಲ್ಲ.

1779ರಲ್ಲಿ ಸುಲ್ತಾನರ ರಾಜ್ಯವು ಅಂತ್ಯಗೊಂಡಿತು. ಅದೇ ವರ್ಷ ಮೇ ತಿಂಗಳ 4ನೇ ತಾರೀಕಿನಂದು ಸುಲ್ತಾನರು ಎಂದಿನಂತೆ ಸುಬಹ್ ನಮಾಜಿಗಾಗಿ ಮಸೀದಿಗೆ ಹೋದರು. ನಮಾಜು ಮುಗಿದ ಮೇಲೆ ಅವರ ಪ್ರೈವೇಟ್ ಸೆಕ್ರಿಟರಿಯಾಗಿದ್ದ ಮೀರ್ ಹಬೀಬುಲ್ಲಾರು ಅನಿರೀಕ್ಷಿತವಾಗಿ ಧೈರ್ಯದಿಂದ ಮುಂದೆ ಬಂದು ಈ ರೀತಿ ನುಡಿದರು.

"ಒಡೆಯರೇ! ರಾಜಿ ಒಪ್ಪಂದದ ಶರ್ತಗಳಿಂದ ರಾಜ್ಯಕ್ಕೆ ನಷ್ಟವಿದೆ. ಯುದ್ಧ ಜುಲ್ಮಾನೆ ತೆತ್ತು ರಾಜ್ಯದ ಭಂಡಾರವು ಬರಿದಾಗುತ್ತಿದೆ. ಫ್ರೆಂಚ್ ಆಶ್ರಿತರನ್ನು ಆಂಗ್ಲೇಯರ ವಶ ಒಪ್ಪಿಸುವುದರಲ್ಲಿ ಹೇಡಿತನವು ಪ್ರತ್ಯಕ್ಷವಾಗುತ್ತದೆ. (ಇವುಗಳು ಆಂಗ್ಲೇಯರು ಮುಂದೊತ್ತಿದ್ದ ಶರ್ತಗಳಾಗಿದ್ದುವು—ಸಂ.) ಇದೆಲ್ಲವೂ ನಿಜ. ಆದರೆ ಕಾಲದ ಬೇಡಿಕೆಯನ್ನು ದೃಷ್ಟಿ ಮುಂದೆ ಇಟ್ಟು ತಮ್ಮ ಜೀವದ ಮೇಲೆ ಕರುಣೆ ತೋರಬೇಕು. ರಾಜಕುಮಾರರ ಮತ್ತು ರಾಜಕುಮಾರಿಗಳ ತಬ್ಬಲಿತನ ಹಾಗೂ ಸೆರೆಯನ್ನು ತಪ್ಪಿಸಬೇಕು."

ಅದಕ್ಕೆ ಸುಲ್ತಾನರು ಕೊಟ್ಟ ಉತ್ತರವಿದು:

"ಈ ರಾಜ್ಯವು ಸಾಮಾನ್ಯವಾಗಿ ಎಲ್ಲಾ ಪ್ರಜೆಗಳದ್ದು ಮತ್ತು ಪ್ರತ್ಯೇಕವಾಗಿ ಮುಸಲ್ಮಾನರದು. ನಾನು ಏಳು ವರ್ಷಗಳ ತನಕವೂ ಇದರ ಸಂರಕ್ಷಣೆಗಾಗಿ ಹಲವಾರು ಉಪಾಯಗಳನ್ನು ಮಾಡಿದೆನು. ಆದರೆ ರಾಜ್ಯದ ಹಿರಿಯ ಮುಂದಾಳುಗಳು ಪ್ರತಿಸಲವೂ ರಹಸ್ಯವಾಗಿ ಇದರ ವಿನಾಶದಲ್ಲೇ ನಿರತರಾದರು. ಈಗ ಅವರ ಕರ್ಮಕ್ಕೆ ತಕ್ಕ ಪ್ರತಿಫಲವು ಸಿಗಬೇಕಾದುದು ಅವಶ್ಯ. ಉಳಿದುದು ನನ್ನ ಸ್ವಂತ ಜೀವ, ನನ್ನ ಮಕ್ಕಳು ಮರಿಗಳು ಮತ್ತು ನನ್ನ ಸರ್ವ ಸಂಪತ್ತು. ಇವೆಲ್ಲವನ್ನೂ ನಾನು ಮುಹಮ್ಮದೀ ಮತಕ್ಕೆ ಬಲಿದಾನ ಮಾಡಿರುತ್ತೇನೆ."

www.bearyinfo.com

"ಮನುಷ್ಯನಿಗೆ ಮೃತ್ಯು ಬರುವುದು ಕೇವಲ ಒಂದೇ ಬಾರಿ. ಆದ್ದರಿಂದ ಅದನ್ನು ಭಯಪಡುವುದು ನಿರರ್ಥಕ. ಮಾತ್ರವಲ್ಲ, ಅವನಿಗೆ ಯಾವಾಗ ಮೃತ್ಯು ಬರುವುದೆಂಬುದೂ ಪ್ರಧಾನವಲ್ಲ. ಏಕೆಂದರೆ ಅವನು ಸಾಯ ಬೇಕಾದುದು ಯಥಾರ್ಥ. ಇನ್ನೂರು ವರ್ಷ ಆಡಿನಂತೆ ಜೀವಿಸುವುದಕ್ಕಿಂತಲೂ ಎರಡೇ ದಿವಸ ಹುಲಿಯಂತೆ ಜೀವಿಸುವುದನ್ನು ನಾನು ಇಷ್ಟಪಡುತ್ತೇನೆ."

ಇದು ಸುಲ್ತಾನರು ತನ್ನ ಮರಣದ ಕುರಿತು ನುಡಿದ ಭವಿಷ್ಯವಾಣಿಯೆಂದೇ ಸಾಧಾರಣವಾಗಿ ಗ್ರಹಿಸಲಾಗುತ್ತದೆ ಎಂದು ಕರ್ನಲ್ ಮೈಲ್ಸ್ ಅಭಿಪ್ರಾಯ ಪಟ್ಟಿದ್ದಾರೆ.

ತತ್ಸಮಯವೇ ಸುಲ್ತಾನರು ತನ್ನ ಅವಿಾರರನ್ನು ಉದ್ದೇಶಿಸಿ ಮುಂದಕ್ಕೆ ಈ ರಾಜ್ಯದಲ್ಲಿ ನಿಮ್ಮ ಮುಂದಿನ ಸಂತಾನಗಳು ಒಂದೊಂದು ಕಾಳು ಅಕ್ಕಿ ಮತ್ತು ನೀರುಳ್ಳಿಯ ಒಂದು ಸಿಪ್ಪೆಗಾಗಿ ಆಶಿಸುವಾಗ ನಿಮಗೆ ಈ ರಾಜದ್ರೋಹದ ಪ್ರತಿಫಲದ ಅರಿವಾಗುವುದು ಎಂದು ಸಾರಿದರೆಂದೂ ಹೇಳಲಾಗುತ್ತದೆ.

## ಹತ್ತೊಂಬತ್ತನೆ ಶತಮಾನದಲ್ಲಿ

ಅಂತು ಸುಲ್ತಾನರು ಅದೇ ದಿವ್ಸ ಶತ್ರುಗಳೊಂದಿಗೆ ಧೀರತನದಿಂದ ಕಾದಾಡಿ ಶಹೀದರಾದರು. ಅವರೊಂದಿಗೆ ಇತರರಂತೆ ನಮ್ಮ ಸಮಾಜವೂ ಪತನ ಹೊಂದಲಾರಂಭಿಸಿತು. ಸರಕಾರಿ ಹುದ್ದೆಗಳೆಲ್ಲವೂ ನಮ್ಮ ಕೈಯಿಂದ ತಪ್ಪಿದುವು. ವ್ಯಾಪಾರ ವಾಣಿಜ್ಯವೂ ಮೆಲ್ಲಮೆಲ್ಲನೆ ಕ್ಷಯಿಸತೊಡಗಿತು. ಅದರೂ ಬುಚಾನನರು 1800ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಾಗ ಮಾಪಿಳ್ಳೆಯರು ಇನ್ನೂ ಅಂಗಡಿ ವ್ಯಾಪಾರದಲ್ಲಿದ್ದುದಾಗಿ ಕಂಡರೆಂದು ತನ್ನ ಗ್ರಂಥದಲ್ಲಿ ಬರೆದಿರುತ್ತಾರೆ.

ಆ ಕಾಲದಲ್ಲಿ ತಿರುವಾಂಕೂರಿನಿಂದ ಹಿಡಿದು ಮಂಗಳೂರಿನ ವರೆಗೂ ನಮ್ಮ ಸಮಾಜದ ಧಾರ್ಮಿಕ ನೇತೃತ್ವವು ಐನೂರು ಆರುನೂರು ವರ್ಷಗಳ ಪಾರಂಪರ್ಯವಿರುವ ಪೊನ್ನಾನಿಯ ಮಕ್‌ದೂಮ್‌ರವರದ್ದಾಗಿತ್ತೆಂದು ಥರ್ಸ್‌ಟನ್‌ರವರು ತಮ್ಮ ಗ್ರಂಥ "ಕಾಸ್ಟ್‌ಸ್ ಎಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯ"ದಲ್ಲಿ ಬರೆದಿದ್ದಾರೆ.

19ನೇ ಶತಮಾನದಲ್ಲಿ ನಮ್ಮ ಸಮಾಜದ ಸ್ಥಿತಿಗತಿಗಳು ಹೇಗಿದ್ದುವೆಂದು ಕಂಡುಹಿಡಿಯಲು ತಕ್ಕ ಆಧಾರಗಳೇನೂ ಸಿಗುವುದಿಲ್ಲ. ಸುಲ್ತಾನ ಶಹೀದರ ರಾಜ್ಯವು ಉರುಳಿದುದರ ಪರಿಣಾಮವಾಗಿ ರಾಜ್ಯದಲ್ಲೆಲ್ಲೂ ಮುಸ್ಲಿಮರಿಗೆ ತುಂಬಾ ತೊಂದರೆಗಳನ್ನನುಭವಿಸಬೇಕಾಗಿ ಬಂದಂತೆ ನಮ್ಮ ಸಮಾಜವೂ ತುಂಬಾ ಕಷ್ಟಕ್ಕೀಡಾಯಿತು. ಆಳಿದ ಜನಾಂಗದವರಾಗಿದ್ದುದರಿಂದ ಅವರಲ್ಲಿದ್ದ ಅಭಿಮಾನಕ್ಕೆ ದೊಡ್ಡ ಏಟು ಬಿದ್ದುದರ ಪರಿಣಾಮವಾಗಿಯೂ, ಕ್ರೈಸ್ತರಾದ ಆಂಗ್ಲೇಯರು

www.bearyinfo.com

ಮುಸ್ಲಿಮರೊಡನೆ ತೋರಿಸಿದ ಅಪಕೀರ್ತಿಯಿಂದಲೂ ಆಂಗ್ಲೇಯ ಸರಕಾರದಿಂದ ಆದಷ್ಟು ದೂರ ನಿಂತು ವ್ಯಾಪಾರ ವಾಣಿಜ್ಯಗಳಲ್ಲಿ ಹಾಗೂ ತಮ್ಮ ಮತ ಧರ್ಮಗಳ ಸಂರಕ್ಷಣೆಯಲ್ಲೇ ಕಾಲಹರಣೆ ಮಾಡಿದರು. ಅಂದು ಅರಬಿಯಾ ದಿಂದಲೂ, ಗುಜರಾತ್ ಕಚ್ ಇತ್ಯಾದಿ ಕಡೆಗಳಿಂದಲೂ, ಭಟ್ಕಳದಿಂದಲೂ ಹಲವಾರು ಮುಸ್ಲಿಂ ವ್ಯಾಪಾರಿಗಳು ಬಂದು ಮಂಗಳೂರಲ್ಲಿ ವ್ಯಾಪಾರ ವಹಿ ವಾಟುಗಳಲ್ಲಿ ನಿರತರಾಗಿದ್ದರು.

1865ರಲ್ಲಿ ಸ್ಥಳೀಯ ಗವರ್ನ್‌ಮೆಂಟ್ ಕಾಲೇಜಿನ ಸಂಸ್ಥಾಪಕರಲ್ಲೊಬ್ಬ ರಾಗಿ ಸಆದತ್‌ಖಾನ್ ಎಂಬ ಹೆಸರು ಚರಿತ್ರೆಯಲ್ಲಿ ಕಾಣಸಿಗುತ್ತದೆ. ಆದರೆ ಸದ್ರಿಯವರ ಕುರಿತು ವಿಶದ ವಿವರಗಳೇನೂ ತಿಳಿದುಬಂದಿಲ್ಲ.

1881—1891ಕ್ಕೆ ಅಂತ್ಯವಾಗುವ ಹತ್ತು ವರ್ಷಗಳೊಳಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 4000 ಮಂದಿ ಇಸ್ಲಾಮ್ ಸ್ವೀಕರಿಸಿ ನಮ್ಮ ಸಮಾಜದ ಜನಸಂಖ್ಯೆಯನ್ನು ವರ್ಧಿಸಿದರೆಂದು ಚರಿತ್ರೆಯಲ್ಲಿ ಕಾಣು ತ್ತದೆ. ನಮ್ಮ ಸಮಾಜವು ಬಲತ್ಕಾರ ಮತಪರಿವರ್ತನೆಯಿಂದ ಹರಡಿತೆನ್ನುವವರು ಹತ್ತೊಂಬತ್ತನೆ ಶತಮಾನದ ಮತಾಂತರಗಳು ಯಾರ ಬಲತ್ಕಾರದಿಂದ ಆದುವು ಎಂದು ಆಲೋಚಿಸಬೇಕು.

ಈ ಮತಾಂತರ ಕಾರ್ಯವು ಟೀಪೂ ಶಹೀದರ ಕಾಲದಲ್ಲೂ ಅವರ ನಂತರವೂ ನಮ್ಮ ನಗರದಲ್ಲಿ ಹಾಗೂ ಇಡೀ ಜಿಲ್ಲೆಯಲ್ಲಿ ಇಸ್ಲಾಮಿನ ಪ್ರಚಾರ ಕಾರ್ಯವನ್ನು ಮುಂದೊತ್ತುತ್ತಿದ್ದ ಅನೇಕ ಕಾದಿರೀ ಸಿಲ್ಸಿಲದ ಸೂಫಿಯಾ ಗಳಿಂದಲೇ ಆಗಿರಬೇಕೆಂದು ಕಾಣುತ್ತದೆ.

1891ರ ಖಾನೆಶುಮಾರಿಯಂತೆ ಮಂಗಳೂರು ಶಹರಿನಲ್ಲಿ ನಮ್ಮ ಸಮಾಜದ ಜನಸಂಖ್ಯೆಯು 7584 ಇತ್ತು. ಅಂದರೆ ಜುಮ್ಲಾ ಜನಸಂಖ್ಯೆಯಲ್ಲಿ18.53% ಅದೇ ಸಮಯ ಉದ್ಯಾವರ (ಮಂಜೇಶ್ವರ)ದಲ್ಲಿ 1140 ಮುಸಲ್ಮಾನರಿದ್ದರು. ಇಡೀ ಮಂಗಳೂರು ತಾಲೂಕಿನಲ್ಲಿ 30,670 ಮಂದಿ ಮುಸ್ಲಿಮರಿದ್ದರು. 1882–93 ರಲ್ಲಿ ಇಡೀ ಜಿಲ್ಲೆಯಲ್ಲಿ ಖುರಾನ್ ಶಾಲೆಗಳು (ದರ್‌ಸ್‌ಗಳು) 77 ಇದ್ದು 1238 ವಿದ್ಯಾರ್ಥಿಗಳು (200 ವಿದ್ಯಾರ್ಥಿನಿಯರೂ ಸೇರಿ) ಅವುಗಳಲ್ಲಿ ಕಲಿಯುತ್ತಿದ್ದರು. ಆ ಸಮಯ ಮುಸ್ಲಿಮ್ ಸಮಾಜದಲ್ಲಿ ಫಾರ್ಸಿ ಕಲಿತ ಕೆಲವು ಮಹಾಪಂಡಿತರು ಗಳಿದ್ದರೆಂತಲೂ, ಇಂಡಿಯನ್ ಪೆನಲ್‌ಕೋಡನ್ನು ಫಾರ್ಸಿಯಿಂದ ಇಂಗ್ಲೀಷಿಗೆ ತರ್ಜುಮೆ ಮಾಡಿಕೊಟ್ಟವರು ನಮ್ಮ ಸಮಾಜದವರಲ್ಲೊಬ್ಬರಾಗಿದ್ದ ಜನಾಬ್ ಸಫ್ ದರ್ ಸಾಹೇಬರೆಂದೂ ನಮ್ಮ ಹಿರಿಯರು ಹೇಳುತ್ತಾರೆ. ಆದರೆ ಆ ಕಾಲದಲ್ಲಿ ಆಂಗ್ಲೇಯರ ವಿದ್ಯಾಪದ್ಧತಿಯೊಡನೆ ಸಹಕರಿಸಿ ಯಾ ತಮ್ಮ ಮಕ್ಕಳಿಗೆ ಇಂಗ್ಲಿಷ್ ವಿದ್ಯಾಭ್ಯಾಸ ಕೊಡಲು ಬೇಕಾಗಿ ತಾವಾಗಿ ಒಂದು ಹೈಸ್ಕೂಲು ಅಥವಾ ಕಾಲೇಜು

www.bearyinfo.com

ಸ್ಥಾಪಿಸಲು ಅಂದಿನ ನಮ್ಮ ಹಿರಿಯರು ಶ್ರಮ ವಹಿಸಲಿಲ್ಲ. ಕಾಲೇಜನ್ನು ಮೊದಮೊದಲು ಸ್ಥಾಪಿಸಿದವರು ಕ್ರೈಸ್ತ ಪಾದ್ರಿಗಳಾಗಿದ್ದು ಅವರು ವಿದ್ಯಾಭ್ಯಾಸದ ನೆವದಲ್ಲಿ ತಮ್ಮ ಧರ್ಮ ಪ್ರಚಾರ ಮಾಡುತ್ತಿದ್ದಾರೆಂಬ ತಿಳುವಳಿಕೆಯಿಂದ ತಮ್ಮ ಮಕ್ಕಳನ್ನು ಕಾಲೇಜುಗಳಿಗೆ ಕಳುಹಿಸುವುದಂತಿರಲಿ, ಇಂಗ್ಲಿಷ್ ಕಲಿಸುವುದನ್ನೇ ಅವರು ಇಚ್ಛಿಸಲಿಲ್ಲ. ಆದರೆ ಅಲ್ಲಲ್ಲಿ ಖುರಾನ್ ದರ್ಸ್‌ಗಳನ್ನು ಸ್ಥಾಪಿಸಿ ಅರಬಿ, ಉರ್ದು ಫಾರ್ಸಿಗಳನ್ನು ಕಲಿಸುತ್ತಿದ್ದರೆಂದೂ ಗೊತ್ತಾಗುತ್ತದೆ. ಹೀಗಿದ್ದರೂ1892-93ರಲ್ಲಿ ಕೇವಲ 3 ಮಂದಿ ಕಾಲೇಜ್ ಕ್ಲಾಸ್‌ಗಳಲ್ಲಿಯೂ 7 ಮಂದಿ ಅಪ್ಪರ್ ಸೆಕಂಡರಿಯಲ್ಲಿಯೂ 27 ಮಂದಿ ಲೋವರ್ ಸೆಕೆಂಡರಿಯಲ್ಲಿಯೂ ಇದ್ದರು. ಅದೇ ವರ್ಷ ಪ್ರೈಮರಿ ಶಾಲೆಗಳಲ್ಲಿ 1350 ಹುಡುಗರೂ 105 ಹುಡುಗಿಯರೂ ಕಲಿಯುತ್ತಿದ್ದರು.

1894ರಲ್ಲಿ ಪ್ರಕಟವಾದ ಸೌತ್‌ಕೆನರಾ ಮೇನುವಲ್‌ನಲ್ಲಿ ಇಲ್ಲಿಯ ಕಲೆಕ್ಟರರಾಗಿದ್ದ ಜೆ. ಸ್ಟರ್ರಕ್‌ರವರು ನಮ್ಮ ಸಮಾಜದ ಕುರಿತು ಈ ಕೆಳಗಿನಂತೆ ಬರೆದಿದ್ದಾರೆ.. "ಮಾಪಿಳ್ಳೆಯರು ಕಾಸರಗೋಡು ಮತ್ತು ಮಂಗಳೂರಲ್ಲಿ ತುಂಬಾ ಮಂದಿ ಇದ್ದಾರೆ, ಜಿಲ್ಲೆಯ ಅವರ ಒಟ್ಟು ಜನ ಸಂಖ್ಯೆಯ ಅರ್ಧಪಾಲು ಕಾಸರಗೋಡಿನಲ್ಲಿಯೂ ಐದರಲ್ಲಿ ಮೂರಂಶ ಮಂಗಳೂರಿನಲ್ಲಿಯೂ ಇವೆ. ಇವರು ಅರಬರು ಸ್ಥಳೀಯ ಸ್ತ್ರೀಯರನ್ನು ಮದುವೆಮಾಡಿದುದರಿಂದ ಉಂಟಾದ ಸಂತತಿಗಳು. ಇವರ ಸಂಖ್ಯೆಯು ಮತಾಂತರದಿಂದ ಇನ್ನಷ್ಟು ಬಲಗೊಂಡಿದೆ. ಕುಂದಾಪುರ ತಾಲೂಕಿನಲ್ಲಿ ನವಾಯತರೆಂಬ ಮುಸಲ್ಮಾನರ ಒಂದು ಪಂಗಡವಿದೆ. ಅವರ ಕೇಂದ್ರವು ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಅವರು ಏಳನೆ ಶತಮಾನದಲ್ಲಿ ಈರಾನಿನ ಒಬ್ಬ ಗವರ್ನರನ ಕ್ರೌರ್ಯವನ್ನು ಸಹಿಸಲಾರದೆ ಅಲ್ಲಿಗೆ ಬಂದು ನೆಲೆಸಿದವರೆಂಬ ಒಂದು ಪಾರಂಪರ್ಯವಿದೆ. ದಕ್ಷಿಣಕನ್ನಡದ ಉಳಿದ ಮುಸಲ್ಮಾನರು ಹೆಚ್ಚಿನ ಮಟ್ಟಿಗೆ ದಖ್ನಿಗಳು. ಇವರು ಉತ್ತರ ಭಾರತದಿಂದ ದಕ್ಷಿಣಕ್ಕೆ ಹರಡಿ ಬಂದು ಇಲ್ಲಿಯ ಸ್ತ್ರೀಯರನ್ನು ಮದುವೆ ಮಾಡಿದ ದಖ್ನಿಗಳು. ಇವರು ಹೆಚ್ಚಿನ ಮಟ್ಟಿಗೆ ಕೃಷಿಕರು ಅಥವಾ ಸರಕಾರಿ ಖಚೇರಿಗಳಲ್ಲಾಗಲಿ, ಖಾಸಗಿ ಕಂಪೆನಿಗಳಲ್ಲಾಗಲಿ ಪೇದೆಯರಾಗಿಯೂ ಮೆಸ್ಸೆಂಜರರಾಗಿಯೂ ಉದ್ಯೋಗ ನಿರ್ವಹಿಸುತ್ತಾರೆ. ಜಿಲ್ಲೆಯ ಬಂದರುಗಳಲ್ಲಿ ವಿಶೇಷವಾಗಿ ಮಂಗಳೂರಲ್ಲಿ ಬೊಂಬಾಯಿಯ ಮೇಮನ್‌ರೆಂಬ ಮುಸ್ಲಿಮ್ ವ್ಯಾಪಾರಿಗಳೂ ಇದ್ದಾರೆ.

ಮಾಪಿಳ್ಳೆಯರು ಈ ಜಿಲ್ಲೆಯ ಪ್ರಧಾನ ಮುಸ್ಲಿಮ್ ಪಂಗಡ. ಅವರು ಮಲಬಾರಿನಿಂದ ಉತ್ತರಕ್ಕೆ ಹರಡಿ ಬಂದವರು. (ಇದು ಕಾಸರಗೋಡಿನ ಮಟ್ಟಿಗೆ ಸರಿಯಾಗಿದ್ದರೂ ಮಂಗಳೂರಿನ ಮಟ್ಟಿಗೆ ಸರಿಯೆಂದು ತೋರುವುದಿಲ್ಲ. ಸಂ.) ಆದ್ದರಿಂದಲೇ ದಕ್ಷಿಣ ಕರಾವಳಿ ತಾಲೂಕಿನಲ್ಲಿ ಅಧಿಕ ಸಂಖ್ಯೆಯಲ್ಲಿ ಇದ್ದಾರೆ.

www.bearyinfo.com

ಮಲಬಾರಿನಲ್ಲಿ ಮಾಪಿಳ್ಳೆಯವರು ಕೆಲವೊಮ್ಮೆ ರಾಜಕೀಯ ಮಟ್ಟಿನ ಕುತೂಹಲವನ್ನುಂಟುಮಾಡಿದ್ದರೂ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹಾಗೆ ಎಂದೂ ಆಗಲಿಲ್ಲ. ಮತ್ತು ಇಲ್ಲಿಯವರು ಒಳ್ಳೆಯ ಶ್ರಮ ವಹಿಸಿ ದುಡಿಯುವ ಮತ್ತು ಸಾಧಾರಣ ಒಳ್ಳೆಯ ನಡತೆಯ ಜನವಿಭಾಗವಾಗಿದ್ದುಕೊಂಡು ಹೆಚ್ಚಿನ ಮಟ್ಟಿಗೆ ಕೃಷಿಕರಾಗಿಯೂ, ದೋಣಿ ಸಂಚಾಲಕರಾಗಿಯೂ, ಗಾಡಿ ಓಡಿಸುವವರಾಗಿಯೂ ಇದ್ದಾರೆ. ಅವರ ಧಾರ್ಮಿಕ ವಿದ್ಯಾಭ್ಯಾಸದ ಸಂಕುಚಿತತೆಯು ಅವರನ್ನು ಎಷ್ಟರ ಮಟ್ಟಿಗೂ ಪಾಶ್ಚಾತ್ಯ ವಿದ್ಯಾಭ್ಯಾಸದ ಸೌಲಭ್ಯಗಳಿಂದ ಫಲಹೊಂದಲು ಬಿಡುವುದಿಲ್ಲವಾದರೂ ಅವರು ತಮ್ಮ ಮಕ್ಕಳಿಗೆ ಖುರಾನ್ ಕಲಿಸುವ ಕುರಿತು ತುಂಬಾ ಜಾಗರೂಕತೆ ತೆಗೆದುಕೊಳ್ಳುತ್ತಾರೆ. ಅವರು ಸಾಧಾರಣವಾಗಿ ಒಬ್ಬಳೇ ಸ್ತ್ರೀಯನ್ನು ಮದುವೆ ಮಾಡುತ್ತಾರೆ ಮತ್ತು ಅವರ ಸ್ತ್ರೀಯರು ಪರದೆ ತೊಟ್ಟು ಕೊಳ್ಳುವುದಿಲ್ಲ. (ಇದು ಪ್ರಾಯಶಃ ಪುದಿಯ ಇಸ್ಲಾಮ್‌ರೆಂದು ಹೇಳುವ ಇಸ್ಲಾಂ ಸ್ವೀಕರಿಸಿದ ಮೊಗವೀರ ಸಮುದಾಯದವರ ಕುರಿತು ಬರೆದುದಾಗಿರಬೇಕು. ಇವರಲ್ಲಿ ಪರದೆ ಇರುವುದಿಲ್ಲ. ಸಂ). ಅವರು ತಮ್ಮ ಸ್ತ್ರೀಯರಿಗೆ ತುಂಬಾ ಸ್ವಾತಂತ್ರ್ಯ ಕೊಡುತ್ತಾರಾದರೂ ಅದು ದುರುಪಯೋಗ ಹೊಂದದಂತೆ ತುಂಬಾ ಜಾಗ್ರತೆ ವಹಿಸುತ್ತಾರೆ. ಅವರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಮಲೆಯಾಳವನ್ನೂ ಉತ್ತರದಲ್ಲಿ ತುಳು ಭಾಷೆಯನ್ನೂ (?) ಮಾತಾಡುತ್ತಾರೆ."

1891ರ ಖಾನೆಶುಮಾರಿಯಲ್ಲಿ ಮುಸ್ಲಿಮ್ ಸಮಾಜದ ಜನಸಂಖ್ಯೆಯನ್ನು ಜಾತಿ ವರ್ಗದ ಬುನಾದಿಯ ಮೇಲೆ ಹೆರಲ್ಡ್ ಎ. ಸ್ಟುವರ್ಟರ ಸೌತ್ ಕೆನರಾ ಮೆನುವೆಲ್ ಎರಡನೆ ಭಾಗದಲ್ಲಿ ಈ ರೀತಿ ನಮೂದಿಸಲಾಗಿದೆ.

| | | | |
|---|---|---|---|
| ದಖ್ನಿಗಳು (ಕೃಷಿಕರು) | 7 | **ಭಾರತೀಯರಲ್ಲದ ವಂಶಗಳು.** | |
| ಫಕೀರರು (ದೈವಿಕ ಪುರುಷರು) | 2 | ಸಯ್ಯದ್ | 1370 |
| **ವ್ಯಾಪಾರಿಗಳು.** | | ಶೇಖ್ | 11,407 |
| ಬೋರರು | 6 | **ಪ್ರಾದೇಶಿಕ ಭಾಷಾವಾರು ಹಾಗೂ ಪಕ್ಷೀಯ ಹೆಸರುಗಳು.** | |
| ಲೆಬ್ಬೆಗಳು | 49 | | |
| ಮಾಪಿಳ್ಳೆಯರು | 90,645 | ಹನಫೀ | 129 |
| ಮೇಮನರು | 79 | ಮುಸಲ್ಮಾನ್ | 3,605 |
| ನವಾಯತರು | 2,104 | ಪುದಿಯೆ ಇಸ್ಲಾಮ್ | 964 |
| **ಭಾರತೀಯರಲ್ಲದವರು.** | | ಶಾಫೀ | 451 |
| ಅರಬರು | 39 | ಶಿಯಾ | 12 |
| ಬಲೂಚಿಗಳು | 22 | ಸುನ್ನಿ | 144 |
| ಮೊಗಲರು | 93 | ಬ್ಯಾರಿ | 14 |
| ಪಠಾಣರು | 866 | ಪುಸಲಾರ | 5 |

www.bearyinfo.com

ನಮ್ಮ ಸಮಾಜದ ಹಿರಿಯ ಭಾಗವು ಮಾಪಿಳ್ಳೆಯರೆಂದು ಹೇಳಿಸುವ ಮಲೆಯಾಳ ಮಾತಾಡುವ ಶಾಫೀ ಮದ್‌ಹಬಿನ ಮುಸಲ್ಮಾನರನ್ನೊಳಗೊಂಡಿದೆ ಎಂದು ಇದರಿಂದ ವ್ಯಕ್ತವಾಗುತ್ತದೆ. ಇವರ ಸಂಖ್ಯೆಯು ಜಿಲ್ಲೆಯಲ್ಲಿ ಅಂದು 92,223 ಇತ್ತು. ಇವರನಂತರ ದಖ್ನೀಗಳೆಂದು ಹೆಸರಾಂತ ಹನಫಿ ಮುಸಲ್ಮಾನರು 17,479. ಅನಂತರ ನವಾಯತರು 12,104 ಮೇಮನರು 79, ಶಿಯಾಗಳು 19 ಜನರೂ ಇದ್ದರು.

ನವಾಯಿತರಲ್ಲಿ ಮಂಗಳೂರಿಗೆ ಮೊತ್ತಮೊದಲು ಬಂದವರು ಮೊಹ್ತಷಮ್ ಸಾಹೇಬರೆಂತಲೂ, ಶಿಯಾಗಳಲ್ಲಿ ರಜಬ್‌ಅಲೀ ಸೇಟರೆಂತಲೂ ಹಿರಿಯರು ಹೇಳುತ್ತಾರೆ.

19ನೇ ಶತಮಾನದ ಕಡೆಯ ದಶಕಗಳಲ್ಲಿ ನಮ್ಮ ಸಮಾಜವು ವ್ಯಾಪಾರ ವಾಣಿಜ್ಯದಲ್ಲಿ ಇತರ ಜನಾಂಗಗಳಿಗಿಂತಲೂ ಮುಂದುವರಿದಿತ್ತೆಂದು ನಮ್ಮ ಹಿರಿಯರು ಹೇಳುತ್ತಾರೆ. ಆ ಕಾಲದಲ್ಲಿ ನಮ್ಮ ಸಮಾಜದಲ್ಲಿ ಸಪ್ದರ್ ಸಾಹೇಬ್, ಪೀರಾನ್ ಸಾಹೇಬ್ ಮೊದಲಾದವರು ವಿದ್ವಾಂಸರೂ ವಿಖ್ಯಾತರೂ ಆಗಿದ್ದರೆಂತಲೂ, ಸ್ಥಳೀಯ ಮೇಮನ್ ಮಸೀದಿಗೆ ದೊಡ್ಡ ದೊಡ್ಡ ಮೌಲವಿಗಳು ವಾಸ್ ಹೇಳಲು ಬರುತ್ತಿದ್ದರೆಂತಲೂ ಆಗ ಇತರ ಜಾತಿಗಳಿಂದ ಅನೇಕರು ಇಸ್ಲಾಮ್ ಸ್ವೀಕರಿಸುತ್ತಿದ್ದರೆಂತಲೂ ಅವರು ಹೇಳುತ್ತಾರೆ.

ಅಂದಿನವರಲ್ಲಿ ಖಾನ್‌ಬಹದ್ದೂರ್ ಬಾವಾ ಹಾಜಿ (ಹಾಜಿ ಅಬೂಬಕರ್) ಬೈಲ್ ಅಬ್ಬುಬ್ಯಾರಿ, ವ಼ಲ್ಲಿ ಬೆಲ್ತ ಅಬ್ಬುಬ್ಯಾರಿ, ಸಯ್ಯದ್ ಹಾರೂನ್, ಸಯ್ಯದ್ ಯಾಸುಫ್ ಬಾಬಾ ಸಾಹೇಬ್, ದಲಾಲ್ ಹಸನ್‌ಬಾವುಕ, ಅಬ್ದುರ್ರಹ್ಮಾನ್ ಸಾಹೇಬ್, ರಜಬ್ ಸಾಹೇಬ್, ಗನೀ ಸಾಹೇಬ್, ಮಾವುರಿಯಬ್ಬಾಕ, ಕವಿಪ್ಪಾ ಕುಂಞಮ್ಮಾಕ, ಕರ್ತ ಅಬ್ಬುಕ, ವಲ್ಲಿ ಮುಹಮ್ಮಾದ್ ಸಾಹೇಬ್, ವಲ್ಲಿ ಮಾಮುಕ, ಜೈಂತಾನ್ ಮಾಯಬ್ಬಾಕ, ಕಾರ್ನ ಅಬ್ಬುಕ ಮತ್ತು ಇತರ ಅನೇಕರು ಪ್ರಮುಖ ವರ್ತಕರಾಗಿದ್ದರು.

ಆ ಕಾಲದಲ್ಲಿ ಜನಾಬ್ ಅಬುಲ್‌ಕಾಸಿಂ ಎಂಬವರು ಮೊದಲನೆ ಎಂ. ಎಲ್. ಏ. ಆಗಿ ನೇಮಿಸಲ್ಪಟ್ಟರು. ಅಂದು ಹಾಜಿ ಅಬೂಬಕರ್‌ರವರೇ ಜುಮಾ ಮಸೀದಿಯ ಆಡಳಿತೆಯನ್ನು ನಡಿಸಿಕೊಂಡು ಬರುತ್ತಿದ್ದರು. ಅವರು ಪ್ರಧಾನ ವ್ಯಾಪಾರಿಗಳಲ್ಲೊಬ್ಬರಾಗಿದ್ದು ಮಾತಾಡುವ ಮಟ್ಟಿಗೆ ಇಂಗ್ಲಿಷ್, ಫ್ರೆಂಚ್ ಮತ್ತು ಅರಬಿ ಕೂಡಾ ತಿಳಿದವರಾಗಿದ್ದರು. ಇಂಪೀರಿಯಲ್ ಬೇಂಕಿನ ಏಜಂಟರಾಗಿದ್ದ ಪಾಮರ್ ಎಸ್ಕ್ವೈಯರ್‌ರವರ ಮತ್ತು ಐರೋಪ್ಯಸದ್ಗ್ರಹಸ್ಥರ ಮಧ್ಯೆ ಅವರಿಗೆ ತುಂಬಾ ಸ್ನೇಹ-ಪ್ರಭಾವವಿತ್ತು. ಇವರಿಂದಾಗಿ ನಮ್ಮ ಸಮಾಜಕ್ಕೆ ಒಂದು ಮುಖಂಡತ್ವವು ಸಿಕ್ಕಿತ್ತು. ಸದ್ರಿಯವರ ಕಾಲದಲ್ಲೇ ಮಲಬಾರಿನ ಸುಪ್ರಸಿದ್ಧ ಆಲಿಮರಾಗಿದ್ದ (ಮತ ಪಂಡಿತರು.) ಅಲ್ಲಾಮಾ ಹಾಜಿ ಅಬ್ದುಲ್ಲ

www.bearyinfo.com

ತಂಗಳ್‌ರವರು ಜಿಲ್ಲಾ ಖಾಜಿಯಾಗಿ ಊರವರಿಂದ ನೇಮಕಗೊಂಡು ನಮ್ಮ ಧಾರ್ಮಿಕ ಜೀವನವನ್ನು ಬೆಳಗಿಸುತ್ತಿದ್ದರು.

ಸದ್ರಿಯವರು 9 ವರ್ಷಗಳವರೆಗೆ ನಮ್ಮ ಸಮಾಜದ ಖಾಜಿಯಾಗಿದ್ದು ಕೆಲವು ಕಾರಣಾಂತರಗಳಿಂದ ರಾಜಿನಾಮೆ ಕೊಟ್ಟುಬಿಟ್ಟು ಹೋದರು. ಸದ್ರಿಯವರು ಪ್ರಾರ್ಥನೆ ಮೂಲಕ ಮಳೆಗರೆಯಿಸಿದ ಪವಾಡವನ್ನು ಈಗಲೂ ಅನೇಕ ಹಿಂದೂ ಮುಸಲ್ಮಾನರು ನೆನಪಿಟ್ಟು ವಿವರಿಸುತ್ತಾರೆ.

ಇದೇ ಕಾಲದಲ್ಲಿ ಹೈದರಾಬಾದಿನವರಾದ ಮಿರ್ ಶುಜಾಅತ್ ಅಲೀಖಾನರು ಇನ್‌ಚಾರ್ಜ್ ಕಲೆಕ್ಟರರಾಗಿ ನೇಮಕಗೊಂಡು ಬಂದಾಗಲೂ ಅನಂತರ ಬಜ್ಲುಲ್ಲಾ ಕಲೆಕ್ಟರ್ ಹಾಗೂ ಕೆಲವು ಯುರೋಪಿಯನ್ ಕಲೆಕ್ಟರರುಇಲ್ಲಿಯ ಮುಸಲ್ಮಾನರಿಗಾಗಿ ಒಂದು ಹೈಸ್ಕೂಲು ತೆರೆಯಬೇಕೆಂದು ಬಹಳವಾಗಿ ಪ್ರಯತ್ನ ಪಟ್ಟಿದ್ದರೆಂದೂ, ಅಂದಿನ ನಮ್ಮ ಹಿರಿಯರ ಅಸಡ್ಡೆಯಿಂದ ಅದು ಸಾಧ್ಯವಾಗದೆ ಹೋಯಿತೆಂದೂ ನಮ್ಮ ಈಗಿನ ಹಿರಿಯರು ಹೇಳುತ್ತಾರೆ. ಅಂದು ಇಲ್ಲಿ ನಿವಾಸಿಸಿದ್ದ ಮಿಲಿಟರಿಯನ್ನು ಹಿಂತೆಗೆಯಲು ಇಚ್ಛಿಸಿದಾಗ ಹಾಜಿ ಅಬೂಬಕರ್ ಸಾಹೇಬರು 1893ರಲ್ಲಿ ಸರಕಾರಕ್ಕೆ ಸ್ವಂತ ಜವಾಬ್ದಾರಿಕೆಯ ಧೈರ್ಯ ಕೊಟ್ಟು ಅದನ್ನು ತೆಗೆಸಿದರೆಂದೂ ಅದನ್ನು ಮೆಚ್ಚಿ ಸರಕಾರವು ಅವರಿಗೆ ಖಾನ್ ಬಹದ್ದೂರರ ಬಿರುದು ಕೊಟ್ಟು ಸನ್ಮಾನಿಸಿತೆಂದೂ ಹೇಳುತ್ತಾರೆ. ಕದಿರೆಯ ಒಂಬತ್ತು ಕೆರೆಗಳನ್ನು ಮುಸಲ್ಮಾನರು ಉಪಯೋಗಿಸುವುದನ್ನು ತಡೆಯಲು ಅಂದಿನ ಆಡಳ್ತಿದಾರರು ಗೋಡೆಕಟ್ಟಿಸಿದುದನ್ನು ಕೇಳಿ ರಾತ್ರಿ ಬೆಳಗಾಗುವುದರೊಳಗೆ ಸದ್ರಿ ಗೋಡೆಯನ್ನು ಅವರು ಕೆಳಗುರುಳಿಸಿದರೆಂತಲೂ, ಅವರ ಅಭಿಪ್ರಾಯವನ್ನು ಮನ್ನಿಸಿ, ಕಲೆಕ್ಟರರು ಸದ್ರಿ ಕೆರೆಗಳನ್ನು ಜಾತಿಮತಬೇಧವಿಲ್ಲದೆ ಎಲ್ಲರೂ ಉಪಯೋಗಿಸಬಹುದೆಂದು ಆಜ್ಞೆ ಹೊರಡಿಸಿದರೆಂತಲೂ ನಮ್ಮ ಹಿರಿಯರು ಸದ್ರಿ ಖಾನ್‌ಬಹದ್ದೂರರ ಚಾತುರ್ಯದ ಕುರಿತು ಪ್ರಶಂಸೆ ಹೇಳುತ್ತಾರೆ. ಆದರೆ ಮುಸ್ಲಿಮ್ ಸಮಾಜವು ಆರ್ಥಿಕ ನೆಲೆಯಲ್ಲಿ ಪ್ರಗತಿಪಥದಲ್ಲಿದ್ದ ಆ ಕಾಲದಲ್ಲಿ ಖಾನ್‌ಬಹದ್ದೂರ್‌ರಂತಹ ಮೇಧಾವಿಗಳು ನಮ್ಮ ಸಮಾಜದ ವಿದ್ಯಾಭಿವೃದ್ಧಿ ಯಾ ಯಾವುದೇ ತರ ಅಭಿವೃದ್ಧಿಯ ಕೆಲಸ ಮಾಡದಿದ್ದುದು ನಮ್ಮ ದುರಾದೃಷ್ಟವೆನ್ನಬೇಕು. ಅವರು ಒಂದು ಹೈಸ್ಕೂಲು ಆಗಲೀ ಒಂದು ಆಸ್ಪತ್ರೆಯಾಗಲೀ, ಒಂದು ಕೋಪರೇಟಿವ್ ಸೊಸೈಟಿಯಾಗಲಿ ಸ್ಥಾಪಿಸಲಿಲ್ಲವೆಂಬುದು ಮಾತ್ರವಲ್ಲ ಒಂದು ಅರಬಿ ಮದ್ರಸವಾದರೂ ಸ್ಥಾಪಿಸಲಿಲ್ಲವೆಂಬುದು ಶೋಚನೀಯ. ಅದೇಕೆ ಒಂದು ಸಂಘ ಸಂಘಟನೆಯೂ ಅಂದು ಇರಲಿಲ್ಲ. ಅವರ ಪ್ರಭಾವದ ಕುರಿತು ಮಾತಿಲ್ಲ. ಸರಕಾರದಲ್ಲಿಯೂ ಸಮಾಜದಲ್ಲಿಯೂ ಅವರಿಗೊಂದು ಮಹತ್ತಾದ ಸ್ಥಾನವಿತ್ತೆಂಬುದೂ ನಿಜ. ಆದರೆ ಅಂದಿನ ಅವರ ಕಾಲದ ಮುಸ್ಲಿಮ್ ಸಮಾಜಕ್ಕೆ ಹಾಗೂ ಮುಂದಿನ ಪೀಳಿಗೆಗೆ ಅವರ ನಾಯಕತ್ವದಿಂದ ಏನು

www.bearyinfo.com


# ಬಂದರದ ಕಚ್ಛಿ ಮೇಮನ್ ಮಸೀದಿ.




ಹತ್ತೊಂಬತ್ತನೆ ಶತಮಾನದಲ್ಲಿ ಲಕ್ಕನ್ ಸುಲೈಮಾನ್ ಅಲ್ಲಿ ಸೇಟ ಎಂಬ ಮೇಮನ್ ವ್ಯಾಪಾರಿಗಳೊಬ್ಬರಿಂದ ನಿರ್ಮಿಸಲ್ಪಟ್ಟ ಈ ಮಸೀದಿಯು ಮಂಗಳೂರಿನ ಅತ್ಯಂತ ವಿಶಾಲ ಮಸೀದಿ. ಇದರ ಮಾಡಿಗೆ ತಾಮ್ರದ ತಗಡನ್ನು ಉಪಯೋಗಿಸಲಾಗಿದೆ. ಮುಂದುಗಡೆ ಕಾಣುತ್ತಿರುವುದು ಮಸೀದಿಗೆ ಸಂಬಂಧಪಟ್ಟ ಕೆರೆ.

**ಬಜಾರಿನ ಬೂಬುಕರ ಮಸೀದಿ.**

ಹತ್ತೊಂಬತ್ತನೆ ಶತಮಾನದ ಕೊನೆಯಲ್ಲಿ ಬೂಬುಕ ಎಂಬವರಿಂದ ನಿರ್ಮಿಸಲ್ಪಟ್ಟ ಈ ಮಸೀದಿಯು ಇಂದಿಗೂ ಅವರ ಸಂತಾನಗಳ ಆಡಳಿತದಲ್ಲಿದೆ.





**ಕಂದಕದ ಬದ್ರಿಯಾ ಮಸೀದಿ**


1917ರಲ್ಲಿ ಸ್ಥಾಪನೆಗೊಂಡ ಈ ಮಸೀದಿಯು ಅತ್ಯಂತ ಸುವ್ಯವಸ್ಥಿತ ಆಡಳಿತದಲ್ಲಿದೆ. ಇದಕ್ಕೆ ಸದ್ಯದಲ್ಲೇ ಒಂದು ಮಾಳಿಗೆಯನ್ನು ಕಟ್ಟಿಸುವ ಆಲೋಚನೆ ಇರುವುದಾಗಿ ಕೇಳಿ ಬರುತ್ತಿದೆ.

www.bearyinfo.com



ಡೊಂಗರಕೇರಿಯ
ಶಾಹ್ ಅಮೀರ್ ಮಸೀದಿ.

ಇದು ನಗರದ ಅತಿ ಪುರಾತನ ಮಸೀದಿಗಳಲ್ಲೊಂದು. ಟೀಪೂ ಶಹೀದರ ಕಾಲದಲ್ಲಿ ಇದರಲ್ಲಿ ತಂಗಿದ್ದ ಸಯ್ಯಿದ್ ಶಾಹ್ ಅಮೀರ್ ಎಂಬ ಸುಪ್ರಸಿದ್ಧ ವಲಿಯೊಬ್ಬರ ಗೋರಿಯೂ ಇದರಲ್ಲಿದೆ.



ಕಂಡತ್ಪಳ್ಳಿ ಮಸೀದಿ

ಹದಿನೆಂಟನೆ ಶತಮಾನದಲ್ಲಿ ನಿರ್ಮಿಸಲಾದ ಈ ಮಸೀದಿಯ ಅಭಿವೃದ್ಧಿಗಾಗಿ ನವಾಯಿತರು ತುಂಬಾ ಶ್ರಮಪಟ್ಟಿದ್ದಾರೆ. ಇಲ್ಲಿಯೂ ತುಂಬಾ ಕೆತ್ತನೆ ಕೆಲಸವಿದೆ.



ಕಸ್ಸಾಗಲ್ಲಿಯ
ಅಸಾಸುಲ್ ಇಸ್ಲಾಮ್
ಮಸೀದಿ.

ಇತ್ತಲಾಗ್ಯೆ ಕೆಲವು ವರ್ಷಗಳಿಂದ ಇದರ ಜೀರ್ಣೋದ್ಧಾರವಾಗಿ ಈಗ ಕ್ರಮಬದ್ಧವಾಗಿ ನಡಿಯುತ್ತಿದೆ.

www.bearyinfo.com

ಗುಣವುಂಟಾಯಿತೆಂದು ಕೇಳಿದರೆ ಉತ್ತರವು ಶೂನ್ಯ. ಆ ಕಾಲದಲ್ಲಿ 'ಬ್ಯಾರಿ' ಗಳೆಂದು ಹೇಳಿಸುವವರಲ್ಲಿ ಒಬ್ಬಿಬ್ಬರೇನೋ ಇಂಗ್ಲಿಷ್ ಕಲಿತವರಿದ್ದರು. ದಖ್ನಿ ಗಳಲ್ಲಿಯೂ ಬೆರಳೆಣಿಕೆಯಷ್ಟು ಮಂದಿ ಇಂಗ್ಲಿಷ್ ಕಲಿತವರಿದ್ದರು. ಬ್ಯಾರಿಗಳಲ್ಲಿ D. M. ಅಬ್ದುಲ್ಕಾದರ್‌ರವರೂ, ದಖ್ನಿಯವರಲ್ಲಿ ಸಫ್‌ದರ್ ಸಾಹೇಬ್ ಪೀರಾನ್ ಸಾಹೇಬ್ ಮೊದಲಾದವರು ಇಂಗ್ಲಿಷ್ ಕಲಿತವರಾಗಿದ್ದರು. ಪೀರಾನ್ ಸಾಹೇಬರು ಯುರೋಪಿಯನರಿಗೆ ಉರ್ದೂ ಫಾರ್ಸಿ ಕಲಿಸುತ್ತಿದ್ದರು.

19ನೇ ಶತಮಾನದ ಕಡೆಯ ದಶಕದಲ್ಲೇ "ಅಂಜುಮನ್ ಮುನೀರುಲ್ ಇಸ್ಲಾಮ್" ಎಂಬ ಸಂಘವು ಸ್ಥಾಪನೆಹೊಂದಿ ಅದರ ಆಶ್ರಯದಲ್ಲಿ ಒಂದು ಲೋವರ್ ಸೆಕೆಂಡರಿ ಶಾಲೆಯು ತೆರೆಯಲ್ಪಟ್ಟುದು ಕಾಣುತ್ತದೆ. ಅದರ ಸ್ಥಾಪನೆ ಯಲ್ಲೂ ಆಡಳಿತೆಯಲ್ಲೂ ಇಲ್ಲಿಯ ಮೇಮನ್ ಸೇಟರು ತುಂಬಾ ದುಡಿದಿದ್ದಾರೆ. ಈ ಶಾಲೆಯ ಮೆನೇಜರರಾಗಿ ಜನಾಬ್ ಅಹ್ಮದ್ ಹಾಜಿ ಶ್ಯಾಮ್ ಅಹ್ಮದ್ ಪಟೇಲ್ ಸೇಟ್ ಸಾಹೇಬರು ನಡಿಸುತ್ತಿದ್ದು, ಇದಕ್ಕಾಗಿ ಹಾರೂನ್ ಸೇಟರು ತನ್ನ ಒಂದು ಮಾಳಿಗೆಯನ್ನೇ ಬಾಯ್ದೆರೆ ವಖ್ಫಾಗಿ ಬಿಟ್ಟುಕೊಟ್ಟಿದ್ದರು. ಕಾರಣಾಂ ತರಗಳಿಂದ 'ವಖ್ಫ'ನಿಂದ ಫಲಹೊಂದುವ ಸುಯೋಗವು ಶಾಲೆಗೆ ಸಿಗಲಿಲ್ಲ. ಮೊದಲು ಅದು ಕೇವಲ ಒಂದು ಅರಬಿ ಉರ್ದು ಮದ್ರಸವಾಗಿದ್ದು ಮೌಲಾನಾ ಕುಂಞ ಮುಸ್ಲಿಯಾರರೂ, ಬೈಕಂಪಾಡಿ ಕಾಝಿ ಮುಹಮ್ಮದ್ ಮುಸ್ಲಿಯಾರರೂ ಮತ್ತು ಇತರರೂ ಕಲಿಸುತ್ತಿದ್ದರು. ಅನಂತರ ಅದು ಪುರೋಗತಿ ಹೊಂದಿ ಕನ್ನಡ, ಇಂಗ್ಲಿಷ್ ಕೂಡಾ ಕಲಿಸಲ್ಪಡುತ್ತಿದ್ದುದಲ್ಲದೆ, ವೃತ್ತಿ ಶಿಕ್ಷಣವಾಗಿ ನೇಯ್ಗೆ ಹಾಗೂ ಹೊಲಿಗೆ ಕೆಲಸಗಳನ್ನೂ ಕಲಿಸುತ್ತಿದ್ದರು. ಆ ಕಾಲದಲ್ಲಿ ಪಾದ್ರಿಗಳು ಮುಸಲ್ಮಾನರೊಳಗೂ ತಮ್ಮ ಧರ್ಮಪ್ರಚಾರ ಮಾಡಲು ಹವಣಿಸುತ್ತಿದ್ದು ಉರ್ದು ಕಲಿತ ಅನೇಕ ಪಾದ್ರಿಗಳು ಮುಸಲ್ಮಾನರಿಗೆ ಚೇಲಂಜ್ ಹಾಕುತ್ತಿದ್ದರು. ಆ ಕಾಲದಲ್ಲಿ ಹಾಜಿಕುಂಞ ಮುಸ್ಲಿಯಾರರಂತಹ ಹಿರಿಯ ಧಾರ್ಮಿಕ ಮುತ್ಸದ್ದಿ ಗಳು ತಮ್ಮ ಉರ್ದು, ಫಾರ್ಸಿ, ಅರಬಿ ವಿದ್ಯಾಯೋಗ್ಯತೆಗಳಿಂದ ಪಾದ್ರಿಗಳೊಡನೆ ತರ್ಕಿಸಿ ಇಸ್ಲಾಮಿನ ಸತ್ಯತೆಯನ್ನು ಆಧಾರಗಳ ಮೂಲಕ ಸ್ಥಿರಪಡಿಸುತ್ತಿದ್ದರು. ಅಂಜುಮನ್ ಮುನೀರುಲ್ ಇಸ್ಲಾಮ್ ಶಾಲೆಯ ಮುಖ್ಯೋಪಾಧ್ಯಾಯ ರಾಗಿಯೂ ಸದ್ರಿಯವರು ಧಾರ್ಮಿಕ ವಿದ್ಯಾಭ್ಯಾಸವನ್ನು ಹರಡುವುದರಲ್ಲಿ ತುಂಬಾ ಶ್ರಮವಹಿಸಿ ದುಡಿದಿದ್ದಾರೆ.

www.bearyinfo.com

# ಇಪ್ಪತ್ತನೆಯ ಶತಮಾನದಲ್ಲಿ

ಇಪ್ಪತ್ತನೆಯ ಶತಮಾನದ ಆರಂಭದೊಂದಿಗೇ ಒಂದರ ಹಿಂದೆ ಇನ್ನೊಂದರಂತೆ ಅನೇಕ ಆಪತ್ತುಗಳು ನಮ್ಮ ಸಮಾಜವನ್ನು ಆವರಿಸುದುವು. ಪ್ರಪ್ರಥಮವಾಗಿ 1902ರಲ್ಲಿ ನಮ್ಮ ಖಾಜಿಯಾಗಿದ್ದ ಸುಪ್ರಸಿದ್ಧ ಅಬ್ದುಲ್ಲಹಾಜಿ (ಔಲಹಾಜಿ) ಯವರು ನಮ್ಮವರಿಂದ ತುಂಬಾ ಮನನೊಂದು ತನ್ನ ಹುದ್ದೆಗೆ ರಾಜಿನಾಮೆಯಿತ್ತು ಹೊರಟು ಹೋದರು. ಒಂಬತ್ತು ವರ್ಷದ ಅವರ ಖಾಜಿತ್ವ ಕಾಲದಲ್ಲಿ ಅವರು ನಮ್ಮ ಸಮಾಜದ ಧಾರ್ಮಿಕ ಹಾಗೂ ನೈತಿಕ ಸುಧಾರಣೆಗಾಗಿ ತುಂಬಾ ಶ್ರಮ ಪಟ್ಟಿದ್ದರು. ಆರ್ಥಿಕ ದೃಷ್ಟಿಯಿಂದ ಮುಂದಿನ ಸಾಲಿನಲ್ಲಿದ್ದರೂ ಅಂದು ನಮ್ಮ ಸಮಾಜವು ಅಜ್ಞಾನ, ಅಧರ್ಮ, ದುರಹಂಕಾರ, ಅನಾಚಾರಗಳಲ್ಲಿ ಸಿಲುಕಿತ್ತು. ಧಾರ್ಮಿಕ ಯಾ ಲೌಕಿಕ ವಿದ್ಯಾರ್ಜನೆಯ ಹಂಬಲವು ಅವರಲ್ಲಿರಲಿಲ್ಲ. ಮೂಲ ನಿವಾಸಿಗಳೆಂದು ಅಭಿಮಾನಪಡುವ, ಜೈನರಿಂದ ಮತಾಂತರ ಹೊಂದಿದ ಕೆಲವು ಮನೆತನಗಳು ತಮ್ಮ ಕುಲಶ್ರೇಷ್ಟತೆಯ ಕುರಿತು ಒಂದು ಭಯಂಕರ ಮನೋಭಾವಕ್ಕೆ ಕಟ್ಟುಬಿದ್ದು, ಅವರ ವೃತ್ತದ ಹೊರಗಿನ ಮುಸ್ಲಿಮರಿಗೆ ತಮ್ಮ ಹೆಣ್ಣು ಮಕ್ಕಳನ್ನು ಕೊಡುವುದನ್ನೂ ಅಪಮಾನವೆಂದೇ ಗಣಿಸುತ್ತಿದ್ದರು. ಮದುವೆ ಮನೆಗಳಲ್ಲಿ 'ಥಾಳ'ವೆಂಬ ಒಂದು ಅನಿಸ್ಲಾಮಿಕ ರೂಢಿ ಸಂಪ್ರದಾಯವು ಅವರಲ್ಲಿ ಜ್ಯಾರಿಯಲ್ಲಿದ್ದು, ತಮ್ಮ ಸ್ವಯಂನಿರ್ಮಿತ ವೃತ್ತದ ಹೊರಗಿನವರನ್ನು ಹತ್ತು ಸಮಸ್ತರ ಇದುರಿನಲ್ಲಿ ಅಪಮಾನಗೊಳಿಸುವುದು ಒಂದು ವಾಡಿಕೆಯಾಗಿ ಬಿಟ್ಟಿತ್ತು. ಮಾನ ಮರ್ಯಾದೆಯೆಂಬುದು ಕೇವಲ ತಮ್ಮ ವೃತ್ತದೊಳಗಿನವರ ಹಕ್ಕೆಂಬ ಒಂದು ಕಟುತರವಾದ ಪಕ್ಷಭಾವನೆಯು ಅವರಲ್ಲಿ ನೆಲೆಯೂರಿತ್ತು. ಇದು ಒಂದೆಡೆ ಸಮಾಜದಲ್ಲಿ ವಿಶೇಷ ಅನೈಕ್ಯ ಹಾಗೂ ದೈನಂದಿನ ಗೊಂದಲದ ವಾತಾವರಣವನ್ನು ಸೃಷ್ಟಿಸಿದ್ದರೆ ಇನ್ನೊಂದೆಡೆ ಮತಾಂತರ ಕಾರ್ಯಕ್ರಮವು ಮುಂದೆಸಾಗಿ ಸಮಾಜದ ಜನಸಂಖ್ಯೆಯು ವರ್ಧಿಸುವುದನ್ನೂ ತಡೆದಿತ್ತು. ಮಾತ್ರವಲ್ಲ, ಮದುವೆ, ಮುಂಜಿ, ಕಾವುಕುತ್ತು ಮಂಗಿಲ (ಹೆಣ್ಣು ಮಕ್ಕಳ ಕಿವಿಗೆ ಆಭರಣ ಹಾಕುವುದು) ಮೊದಲಾದ ಸಂದರ್ಭಗಳಲ್ಲಿ ಇಸ್ಲಾಮ್ ವಿರುದ್ಧವಾದ ಅಗಣಿತ ಆಚಾರಗಳು ಅಂದು ಬಳಕೆಯಲ್ಲಿದ್ದುವು. ಈ ಸಂದರ್ಭಗಳಲ್ಲಿ ಹಣವನ್ನು ನೀರಿನಂತೆ ಖರ್ಚುಮಾಡಿ ಜನರು ಪಾಪವನ್ನು ಕಟ್ಟಿಕೊಳ್ಳುತ್ತಿದ್ದರು. ಬಡ್ಡಿ ವಹಿವಾಟು, ಅಮಲುಕೋರತನ, ಜೂಜಾಟ ಮುಂತಾದ ಇಸ್ಲಾಮ್ ನಿಷಿದ್ಧವಾದ ಎಲ್ಲ ಕಾರ್ಯಗಳೂ ಅಂದು ದೇವರ ಭಯವಿಲ್ಲದೆ, ಸೃಷ್ಟಿಯ ಲಜ್ಜೆಯಿಲ್ಲದೆ ಸರಾಗವಾಗಿ ಸಾಗುತ್ತಿದ್ದುವು. ಮಾತುಮಾತಿಗೆ ಪೆಟ್ಟು, ಮಾತು ಮಾತಿಗೆ ಇರಿತಗಳು ನಡಿಯುತ್ತಿದ್ದು ಇಡೀ ವಾತಾವರಣವೇ ಭಯಚಕಿತವಾಗಿತ್ತು. ಮೈಕಾಲವೆಂದೊಡನೆ ಮೈ ಜುಮ್ಮೆನಿಸುವ ಕಾಲವಾಗಿತ್ತದು.

www.bearyinfo.com

ಈ ವಸ್ತುಸ್ಥಿತಿಯನ್ನು ಸುಧಾರಿಸಿ ಮುಸ್ಲಿಮ್ ನಾಮಾಂಕಿತ ಈ ಸಮಾಜವನ್ನು ಯಥಾರ್ಥ ಮುಸ್ಲಿಮ್ ಸಮಾಜವಾಗಿ ಪರಿವರ್ತಿಸಲು ಮೌಲಾನಾ ಹಾಜಿ ಅಬ್ದುಲ್ಲ (ಔಲಹಾಜಿಯವರು) ತುಂಬಾ ಶ್ರಮಪಟ್ಟರು. ಆದರೆ ಅವರ ಮಾತಿಗೆ ಕಿವಿಕೊಡುವುದಂತಿರಲಿ, ಅವರನ್ನು ತರತರವಾಗಿ ಅಪಮಾನಗೊಳಿಸಿ ಅವರು ಇಲ್ಲಿಂದ ಪಲಾಯನಗೈಯುವಂತೆ ಒತ್ತಾಯಪಡಿಸಿದರು. ಈ ಜನಕೂಟವು ತನಗೆ ಕೊಡುವ ಅಪಮಾನವನ್ನು ಸಹಿಸಲಾರದೆ ಅವರು ತನ್ನ ಹುದ್ದೆಗೆ ರಾಜಿನಾಮೆಯಿತ್ತು, ಕಾಸರಗೋಡಿಗೆ ಹೋದರು. ನಮ್ಮ ಸಮಾಜವು ಇಂತಹ ದೈವಭಕ್ತ ಹಿರಿಯಧಾರ್ಮಿಕ ವ್ಯಕ್ತಿಯನ್ನೂ ಕಳಕೊಂಡಿತು. ಅವರನ್ನು ಒಂದು ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಅಪಮಾನಗೊಳಿಸಿದ ವ್ಯಕ್ತಿಯು ಅವರು ಹೋದ ದಿವಸದಿಂದಲೇ ಕಾಣೆಯಾಗಿ ತಿರುಗಿಬರಲಿಲ್ಲವೆಂದು ಬಲ್ಲವರು ಹೇಳುತ್ತಾರೆ. ಅಂತು, ಅವರು ಹೋದ ಕೆಲವೇ ವಾರಗಳೊಳಗೆ 'ಪ್ಲೇಗ್ ವ್ಯಾಧಿ'ಯು ನಮ್ಮ ಸಮಾಜವನ್ನು ಆವರಿಸಿತು. ಇಡೀ ಊರನ್ನೇ ವಿನಾಶಕ್ಕೊಯ್ಯುತ್ತಿದ್ದ ಆ ವ್ಯಾಧಿಯು ನಮ್ಮ ಸಮಾಜವನ್ನು ತನ್ನ ಕ್ರೂರ ಕೈಗಳಿಂದ ತುಂಬಾ ನಷ್ಟಕ್ಕೀಡು ಮಾಡಿತು; ನಮ್ಮ ಅಗಣಿತ ಪ್ರಮುಖರನ್ನೂ ಸಹಸ್ರಾರು ತರುಣರನ್ನೂ ಕೊಂಡೊಯ್ಯಿತು. ಒಂದೊಂದು ಮನೆಯಿಂದ 12, 20 ಮಂದಿ ತರುಣರು ಸಾಯುತ್ತಿದ್ದರೆಂದೂ, ಕೇವಲ ಕುಂಞರಕಾನವೆಂಬ ಒಂದೇ ಒಂದು ಮನೆಯಿಂದ 60 ವ್ಯಕ್ತಿಗಳು ಈ ವ್ಯಾಧಿಯ ಬಾಯಿಗೆ ತುತ್ತಾದರೆಂತಲೂ ಹೇಳುತ್ತಾರೆ. ಅಂದಿನ ನಮ್ಮ ನಿಸ್ಸಹಾಯಕತೆಯ ದಾರುಣ ಕಥೆಯನ್ನು ಕೇಳುವಾಗ (ಮತ್ತು ಇಂದಿನ ಸ್ಥಿತಿಗತಿಗಳನ್ನು ಅಳೆಯುವಾಗಲೂ) ಮೈ ಜುಮ್ಮೆನಿಸುವುದು. ದೊಡ್ಡ ದೊಡ್ಡ ಹಣವಂತರೂ, ಬುದ್ಧಿವಂತರೂ ಇದ್ದರೂ ಒಂದೇ ಒಂದು ಆಸ್ಪತ್ರೆ ಅಂದು ಸ್ಥಾಪಿಸಲಾಗಿರಲಿಲ್ಲ. ಜನರು ಒಬ್ಬನ 'ಮಯ್ಯಿತ'ನ್ನು ದಫನ್ ಮಾಡಿ ಹಿಂತಿರುಗುವುದರೊಳಗೆ ಇಬ್ಬರು ಮೂವರು ಪ್ರಾಣ ಬಿಡುತ್ತಿದ್ದರು. ಆದರೂ ಸೆಗ್ರಿಗೇಷನ್ ಶೆಡ್ ಅಥವಾ ಕ್ವಾರಂಟೈನ್ ಅಂದು ಇರಲಿಲ್ಲ. ನಮ್ಮ ಸಮಾಜದ ಬಡವರು ಇದನ್ನು ಧೈರ್ಯಸಹಿತ ಎದುರಿಸುತ್ತಿದ್ದರು. ಆದರೆ ಅವರ ಬಳಿ ಅದಕ್ಕೆ ತಕ್ಕ ವಿದ್ಯೆಯಾಗಲೀ, ಚಿಕಿತ್ಸೆಗಳಾಗಲೀ ಇರಲಿಲ್ಲ. ಈ ಕಾಲದಲ್ಲೇ ಜರ್ಮನ್ ಪಾದ್ರಿ ಫಾದರ್‌ಮುಲ್ಲರ್‌ರವರು ಕಂಕನಾಡಿಯಲ್ಲಿ 'ಪ್ಲೇಗ್' ವಾರ್ಡನ್ನು ಸ್ಥಾಪಿಸಿದ್ದರು. ಹಣವಂತರು ಎಷ್ಟೋ ಮಂದಿ ಊರು ಬಿಟ್ಟು ಪಲಾಯನ ಗೈಯುತ್ತಿದ್ದರು. ಎತ್ತಲೂ ಹಾಹಾಕಾರವೆದ್ದಿತ್ತು. ಜನರಿಗೆ ಒಂದು ಆಶ್ರಯ ಸ್ಥಳವೆಂಬುದೊಂದು ಇರಲಿಲ್ಲ. ನಮ್ಮ ಅನೇಕ ವರ್ತಕಪ್ರಮುಖರೂ ಸಮಾಜದ ಸ್ತಂಭಗಳಂತಿದ್ದ ಅನೇಕಾನೇಕ ತರುಣರೂ ಈ ಪ್ಲೇಗಿನ ಬಾಯಿಗೆ ತುತ್ತಾಗಿ ಸಮಾಜದಲ್ಲಿ ಎಂದಿಲ್ಲದ ಒಂದು ಅವ್ಯವಸ್ಥೆಯು ತಲೆದೋರಿತು. ಈ ವ್ಯಾಧಿಯಿಂದ ನಮ್ಮ ಸಮಾಜದಷ್ಟು ನಷ್ಟವು ಯಾವ ಸಮುದಾಯಕ್ಕೂ ಸಂಭವಿಸಲಿಲ್ಲವೆಂದು ಬಲ್ಲವರು ಹೇಳುತ್ತಾರೆ.

www.bearyinfo.com

ಈ ಸಮಯದಲ್ಲಿ ಇಲ್ಲಿ ಖಾನ್‌ಬಹದ್ದೂರ್ ಅಜೀಜುದ್ದೀನ್ ಸಾಹೇಬರು ಕಲೆಕ್ಟರರಾಗಿ ಬಂದಿದ್ದರು. ಅವರು ಬಂದರದಲ್ಲಿ ರಾಶಿಬಿದ್ದಿದ್ದ ಕಶ್ಮಲವನ್ನೆಲ್ಲಾ ತೆಗೆಯಿಸಿ ಬಂದರದಲ್ಲೇ ಒಂದು ಕ್ವಾರಂಟೈನ್ ಸ್ಥಾಪಿಸಿ ಹೊಸ ರಸ್ತೆಗಳನ್ನು ತೋಡಿಸಿ ತುಂಬಾ ಸಹಾಯ ಮಾಡಿದರು. ಆ ನಂತರ ವ್ಯಾಧಿಯ ವೈಪರೀತ್ಯವು ಕಡಿಮೆಯಾಯಿತು.

ಅಜೀಜುದ್ದೀನ್ ಕಲೆಕ್ಟರರು ನಮ್ಮ ಸಮಾಜಕ್ಕೆ ತುಂಬಾ ಸಹಾಯ ಮಾಡಿದ್ದಾರೆ. ನಮ್ಮ ಮಕ್ಕಳಿಗೆ ಒಂದು ಹೈಸ್ಕೂಲು ಸ್ಥಾಪಿಸಲು ಅವರು ಹಲವಾರು ಸಲ ಶ್ರಮಪಟ್ಟಿದ್ದರು. ಕಡೆಗೆ ಒಂದು ಮುಸ್ಲಿಮ್ ಹೆಮ್ಮಕ್ಕಳ ಶಾಲೆಯನ್ನು ಜನಾಬ್ ವಲ್ಲಿಹುಸೈನಬ್ಬ ಸಾಹೇಬರ ಮನೆಯ ಮಾಳಿಗೆಯಲ್ಲೇ ತೆರೆಯಲು ಅವರಿಗೆ ಸಾಧ್ಯವಾಯಿತು. ಐದನೆ ತರಗತಿ ವರೆಗೆ ಖುರಾನ್, ಉರ್ದು, ಕನ್ನಡ ಮೊದಲಾದವುಗಳನ್ನು ಕಲಿಸುತ್ತಿದ್ದ ಆ ಶಾಲೆಯು ನಮ್ಮ ಸಮಾಜದ ಮೊದಲನೆ ಹುಡುಗಿಯರ ಶಾಲೆಯಾಗಿತ್ತು. ಅದನ್ನು ಕೆಲವು ವರ್ಷಗಳನಂತರ ಮುನಿಸಿಪಾಲಿಟಿಯವರು ತಮ್ಮ ಆಶ್ರಯದಲ್ಲಿ ತೆಗೆದುಕೊಂಡರು. (ಇಂದಿನ ವರೆಗೂ ಆ ಶಾಲೆಯು ನಮ್ಮ ಸಮಾಜದ ಹುಡುಗಿಯರಿಗೆ ವಿದ್ಯೆ ಕೊಡುವ ಏಕಮಾತ್ರ ಎಲಿಮೆಂಟರಿ ಶಾಲೆಯಾಗಿ ಉಳಿದಿದೆ). ಆ ಸಮಯದಲ್ಲಿ ಗಂಡು ಮಕ್ಕಳ ಶಾಲೆಯೊಂದು ಕಸ್ಯಾಗಲ್ಲಿಯಲ್ಲಿ ನಡಿಯುತ್ತಿತ್ತು. ಅಲ್ಲಿ ಮದ್ರಾಸಿನವರಾದ ಕುಬ್ಡೇ ಹಜ್ರತ್ ಎಂಬವರು ಕಲಿಸುತ್ತಿದ್ದರು. ಈ ಶಾಲೆಯಲ್ಲದೆ ಕಂದಕದಲ್ಲಿ ಮುಹಮ್ಮದ್ ಶಾಹ್ ಸಾಹೇಬರೂ, ಕಚ್ಚಿ ಮಸೀದಿಯಲ್ಲಿ ಆ ಮಸೀದಿಯ ಇಮಾಮರೂ, ಕುಞರಕಾನದಲ್ಲಿ ಒಬ್ಬರು ಮೌಲವಿ ಸಾಹೇಬರೂ ಸಮಾಜದಲ್ಲಿ ಅಲ್ಪಸ್ವಲ್ಪ ವಿದ್ಯೆ ಹರಡುವುದರಲ್ಲಿ ತಮ್ಮಿಂದಾದಷ್ಟು ಸೇವೆ ಸಲ್ಲಿಸುತ್ತಿದ್ದರು.

ಒಂದೆಡೆ ಈ ರೀತಿ ಧಾರ್ಮಿಕ ವಿದ್ಯಾಭ್ಯಾಸದ ಪ್ರಚಾರಕ್ಕಾಗಿ ಕೆಲವು ಸಮಾಜ ಬಂಧುಗಳು ದುಡಿಯುತ್ತಿರುವಾಗ ಒಂದು ತಂಡವು ಅಂಜುಮನ್ ಖುವ್ವತುಲ್ ಇಸ್ಲಾಮ್, ಅಂಜುಮನ್ ಇತ್ತಿಹಾದುಲ್ ಇಸ್ಲಾಮ್ ಎಂಬ ಹೆಸರಿನೊಂದಿಗೆ ಪಾಟ್‌ಮಾಲಿಗೆ (ಹಾಡುಗಾರಿಕೆಯ ಸಂಘ)ಗಳನ್ನು ಸ್ಥಾಪಿಸಿ, ತರುಣರಿಗೆ 'ಮಾಪಿಳೆಪ್ಪಾಟ್' ಕಲಿಸುತ್ತಿದ್ದರು. ಮೊಹರಮ್ ತಿಂಗಳಲ್ಲಿ ನಡಿಯುತ್ತಿದ್ದ ಅನಿಸ್ಲಾಮಿಕ ಚಟುವಟಿಕೆಗಳನ್ನಂತೂ ನಮ್ಮ ಸಮಾಜದ ಅನೇಕ ತರುಣರು ಮತ್ತು ಹಿರಿಯರು ತಮ್ಮ ಜೀವನೋದ್ದೇಶವೆಂದೇ ನೆನಸಿದಂತಿತ್ತು. ಮದುವೆ, ಮುಂಜಿ, ಮೌಲೂದ್‌ಗಳಲ್ಲಿ ನಡಿಯುತ್ತಿದ್ದ ದುಂದುಗಾರಿಕೆಯೇ ನಮ್ಮ ಸಮಾಜವನ್ನು ಅಧಃಪತನಕ್ಕಿಳಿಸಿದುವೆಂದು ಅನೇಕ ಹಿರಿಯರು ಇಂದಿಗೂ ಹೇಳುತ್ತಾರೆ. ಈ ಮೊಹರಮ್ ಆಚರಣೆ ಹಾಗೂ ಮದುವೆ ಮುಂಜಿಗಳಲ್ಲಿ ಮಾಡುತ್ತಿದ್ದ 'ಒಪ್ಪನೆ'ಯನ್ನು ನಮ್ಮ ಹಿರಿಯ, ಧಾರ್ಮಿಕ ಮುಂದಾಳಾಗಿದ್ದ

www.bearyinfo.com

ಖಾಜಿ ಅಬ್ದುಲ್ಲಹಾಜಿ ತಂಗಳ್‌ರವರು ಖಂಡಿಸಿದ್ದರೂ ಅವರು ತನ್ನ ಹುದ್ದೆಗೆ ರಾಜಿನಾಮೆ ಕೊಡುವಂತೆ ಮಾಡಿದುದಲ್ಲದೆ ನಮ್ಮ ಹಿರಿಯರು ಈ ಅನಿಸ್ಲಾಮಿಕ ಆಚಾರಗಳನ್ನು ಬಿಟ್ಟುಕೊಡಲಿಲ್ಲ. ಆದರೆ ಅವರ ಹಿಂದಿನಿಂದಲೇ ಪ್ಲೇಗ್ ರೋಗವು ಆಗಮಿಸಿ ನಮ್ಮ ಸಮಾಜದ ಅನೇಕ ಪ್ರಮುಖ ವ್ಯಕ್ತಿಗಳನ್ನು ಕೊಂಡುಹೋಯಿತು.

1914ರಲ್ಲಿ ಡಿಪ್ಯೂಟಿ ಕಲೆಕ್ಟರ ಆಮುರವರ ಕಾಲದಲ್ಲಿ ಖಾನ್‌ಸಾಹೇಬ್ ಮಾಹಿನ್ ಶಂನಾಡ್‌ರವರ ನಾಯಕತ್ವದಲ್ಲಿ ಮಂಗಳೂರಿನಲ್ಲಿ ಸರಕಾರಿ ಹುದ್ದೆಗಳಲ್ಲಿದ್ದ ಹಾಗೂ ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿದ್ದ ಕೆಲವು ಉತ್ಸಾಹೀ ತರುಣರೂ ಸೇರಿ 'ಇಸ್ಲಾಮಿಯಾ ಕ್ಲಬ್' ಎಂಬ ಒಂದು ಸಂಸ್ಥೆಯನ್ನು ಪ್ರಕೃತದ ಸರಸ್ವತಿ ಪ್ರಿಂಟಿಂಗ್ ಪ್ರೆಸ್ಸಿನ ಕಟ್ಟಡದಲ್ಲಿ ತೆರೆದರು. ರಾತ್ರಿ ಶಾಲೆ, ರೀಡಿಂಗ್ ರೂಮ್, ಲ್ಯಾಬ್ರಾರಿ, ಗೇಮ್ಸ್ ಕ್ಲಬ್ ಇತ್ಯಾದಿಗಳಿಂದ ಅವರು ಸಮುದಾಯ ಸೇವೆಯನ್ನು ಮಾಡುತ್ತಿದ್ದರು. ಆದರೆ ಈ ಸಂಸ್ಥೆಯು ಹೆಚ್ಚು ದಿನ ಬಾಳಲಿಲ್ಲ. ಈ ಸಂಸ್ಥೆಯು ಡಿಪ್ಯೂಟಿ ಕಲೆಕ್ಟರ್ ಆಮುರವರಿಗೆ ವರ್ಗವಾದಾಗ ಅವರನ್ನು ಬೀಳ್ಕೊಡಲು ಸೇರಿದ ಸಭೆಯೊಂದರ ಚಿತ್ರವು ಬೇರೊಂದು ಪುಟದಲ್ಲಿ ಕೊಡಲಾಗಿದೆ. ಅದರಲ್ಲಿ ಮುಸಲ್ಮಾನರ ಅಂದಿನ ಧುರೀಣರುಗಳಾಗಿದ್ದ ಜನಾಬ್ ಜಮಾಲುದ್ದೀನ್ ಮಿಯಾಂ ಸಾಹೇಬ್, ವಕೀಲ್ ಉಸ್ಮಾನ್ ಸಾಹೇಬ್, ಡಿ. ಎಂ. ಇದಿನಬ್ಬಾ ಸಾಹೇಬ್, ಕಾಸರಗೋಡಿನ ಮುಹಮ್ಮದ್ ಚಮ್ನಾಡ್ ಸಾಹೇಬ್, ಕಮ್ಲಿ ಸೀದಿಯಬ್ಬಾ ಸಾಹೇಬ್, ಕಮ್ಲಿ ಅಬ್ದುಲ್ ಕಾದರ್ ಸಾಹೇಬ್ ಮತ್ತು ಇತರರನ್ನೂ ಕಾಣಬಹುದು.

ವಿದ್ಯಾಭ್ಯಾಸವು ಕಡಿಮೆಯಾಗಿದ್ದುದರಿಂದ ರಾಷ್ಟ್ರೀಯ ವಿಷಯಗಳಲ್ಲಿ ನಮ್ಮ ಸಮಾಜ ಬಂಧುಗಳಿಗೆ ಆಸಕ್ತಿಯಿರಲಿಲ್ಲವೆಂದೇ ಹೇಳಬಹುದು. ಮಾತ್ರವಲ್ಲ, ಅಂದಿನ ಸರಕಾರಿ ಹುದ್ದೆದಾರರನ್ನು ಸಂತೋಷಗೊಳಿಸಲುಬೇಕಾಗಿ ಎಷ್ಟು ಹಣವನ್ನೂ ಎಷ್ಟು ದೊಡ್ಡ ತ್ಯಾಗವನ್ನೂ ಸಲ್ಲಿಸುತ್ತಿದ್ದರು. ಸಮಾಜದ ಐಶ್ವರ್ಯವೆಲ್ಲವನ್ನು 'ಸಾಹೇಬರು'ಗಳಿಗೆ 'ಡಿನ್ನರ್' ಗಾರ್ಡನ್ ಪಾರ್ಟಿಗಳನ್ನು ಕೊಟ್ಟೇ ಮುಗಿಸುತ್ತಿದ್ದರು. ಆದರೂ ಒಂದು ಪಂಗಡವು ಕೊಡಿಯಾಲ್‌ಬೈಲ್ ಜಮಾಲುದ್ದೀನ್ ಮಿಯಾಂ ಸಾಹೇಬರ ನಾಯಕತ್ವದಲ್ಲಿ—ಡಾ. ಗುಲಾಮ್ ಹೈದರ್, ಜನಾಬ್ ಶಮ್ಸುದ್ದೀನ್ ಸಾಹೇಬ್, ಹಕೀಂ ಶೇಖ್‌ಫರೀದ್ ಸಾಹೇಬ್ ಮೊದಲಾದವರು-ಖಿಲಾಫತ್ ಚಟುವಟಿಕೆಗಳಲ್ಲಿ ಭಾಗವಹಿಸಿತ್ತು. ಆಗ ಪುತ್ತೂರ್ ಸಾಹೇಬರು—ಖಿಲಾಫತ್‌ಕಮಿಟಿಯ ಚೇರ್‌ಮೇನರಾಗಿದ್ದು ತುಂಬಾ ದುಡಿದಿದ್ದರು. ಅವರು ಉತ್ತಮ ತರಗತಿಯ ರಾಷ್ಟ್ರೀಯ ಕಾರ್ಯಕರ್ತರಾಗಿದ್ದುದಲ್ಲದೆ ಉರ್ದು ಭಾಷೆಯಲ್ಲಿ ಒಳ್ಳೆಯ ಭಾಷಣಕರ್ತರೂ ಆಗಿದ್ದರು.

www.bearyinfo.com

ಅಜೀಜುದ್ದೀನ್ ಕಲೆಕ್ಟರರ ಕಾಲದಲ್ಲೇ ಖಾನ್‌ಬಹದ್ದೂರ್ ಸಾಹೇಬರ ನಿಧಾನವಾಯಿತು. ಶ್ರೀಯುತರು ಎಷ್ಟೆಂದರೂ ಸಮಾಜದಲ್ಲಿ ಒಳ್ಳೆಯ ಪ್ರಭಾವ ಶಾಲಿಯಾಗಿದ್ದು, ಅದರ ನಾಯಕರೆಂದೆಣಿಸಿಕೊಳ್ಳುತ್ತಿದ್ದರು. ಅವರ ಅಗಲುವಿಕೆ ಯಿಂದ ನಮ್ಮ ಸಮಾಜದಲ್ಲಿ ಪುನಃ ವಿಕೇಂದ್ರೀಕರಣವು ಮೊಳೆಯಿತು. ಅವರ ಕಾಲದಿಂದಲೇ ತೊಡಗಿದ್ದ ಜುಮಾಮಸೀದಿಯ ಆಡಳ್ತೆ ಕುರಿತಾದ ಮತಬೇಧವು ಅವರ ಮರಣಾನಂತರ ಇನ್ನಷ್ಟು ಊರ್ಜಿತವಾಗಿ ಸಮಾಜದಲ್ಲಿ ಎಂದಿಲ್ಲದ ಅನೈಕ್ಯ ಮತ್ತು ಪರಸ್ಪರ ಅವಿಶ್ವಾಸಗಳು ಬಲಗೊಂಡುವು. 1912ರಲ್ಲಿ ಅಜೀಜು ದ್ದೀನ್ ಕಲೆಕ್ಟರರಿಗೂ ವರ್ಗವಾಯಿತು.

ಬಂದರದಲ್ಲಿ ಈ ರೀತಿಯ ಅವ್ಯವಸ್ಥೆಯು ತಲೆದೋರಿದ್ದಾಗ, ಅತ್ತ ಕಂದಕ ದಲ್ಲಿ ಕೆಲವು ಮುಸ್ಲಿಮ್ ತರುಣರು ಕ್ರಿಯಾತ್ಮಕ ಚಟುವಟಿಕೆಯೊಂದನ್ನು ಆರಂಭಿಸುತ್ತಿದ್ದರು. ಜನಾಬ್ ಹಾಜಿ ಮೂಸಕುಂಞಿಯವರ ನಾಯಕತ್ವದಲ್ಲಿ ಜನಾಬ್ ಅಬ್ದುಲ್ಲ ಬಿನ್ ಅಮ್ಮೂಟಿ, ತೆಂಗಿನಕಾಯಿ ಮೊಯ್ದಿನಬ್ಬಾಕ, ಸೈಕಲ್ ಅಹ್ಮದ್ ಸಾಹೇಬ ಮೊದಲಾದ ತರುಣಧುರೀಣರು ಕಂದಕದಲ್ಲೊಂದು ಮಸೀದಿ ಯನ್ನು ನಿರ್ಮಿಸಲು ನಿರ್ಧರಿಸಿ, ಅದಕ್ಕಾಗಿ ಹಗಲಿರುಳು ಶ್ರಮಿಸತೊಡಗಿದರು. ಕಂದಕದಲ್ಲಿ ಮಲಬಾರಿನಿಂದಲೂ ಉದ್ಯಾವರ, ಮಂಜೇಶ್ವರದಿಂದಲೂ ವಲಸೆಬಂದ ಅನೇಕ ಮುಸ್ಲಿಮ್ ಮನೆತನಗಳು ಉಂಟಾಗಿ ಅದು ತುಂಬಾ ಜನರು ಸೇರಿದ ಒಂದು 'ಕೊಲೊನಿ' ಯಾಗಿ ಬಿಟ್ಟಿತ್ತು. ಇಲ್ಲಿಯ ಮುಸ್ಲಿಮರಿಗೆ ಐದಾವರ್ತಿ ನಮಾಜಿಗೆ ಕಚ್ಚಿ ಮಸೀದಿ, ಜುಮಾ ಮಸೀದಿಗಳಿಗೆ ಹೋಗಲು ದೂರ ವಾಗುತ್ತಿತ್ತು. ಆದ್ದರಿಂದ ಮೊಹಲ್ಲದೊಳಗೇ ಒಂದು ಮಸೀದಿಯನ್ನೂ ಒಂದು ಮದ್ರಸವನ್ನೂ ಸ್ಥಾಪಿಸಲು ಈ ಉತ್ಸಾಹೀ ತರುಣರ ತಂಡವು ನಿರ್ಧರಿಸಿತ್ತು. ಅಂದಿನ 'ಕಾರ್ಣವರೂ, ನಾಟ್‌ಮೂಪಗಳೂ' (ಹಿರಿಯರು) ಅದರ ಕಡೆಗೆ ಹೆಚ್ಚಿನ ಗಮನಕೊಡದಿದ್ದರೂ ಸಮಾಜದ ಸಾರ್ವಜನಿಕರಿಂದ ಹಣ ವಸೂಲು ಮಾಡಿ ಮತ್ತು ಮನೆಮನೆಗಳಿಂದ 'ಪಿಡಿಯರಿ' ಮೂಲಕ ಸ್ವಲ್ಪ ಹಣವನ್ನು ಶೇಖರಿಸಿದರು. ಅವರ ಈ ಪರಿಶ್ರಮವನ್ನು ಮೆಚ್ಚಿ ಈ ಪುಣ್ಯಕಾರ್ಯಕ್ಕೆ ಮನಸಾ ಸಹಾಯವಿತ್ತುದು ಅಂದಿನ ಹಿರಿಯ ಮುಸ್ಲಿಮ್ ವರ್ತಕರೂ ಧರ್ಮಾಭಿಮಾನಿ ಗಳೂ ಆಗಿದ್ದ ಜನಾಬ್ ಸಿ. ಅಬ್ದುರ್ರಹ್ಮಾನ್ ಹಾಜಿಯವರು (ಬೆಂಡಿಯಾಜಾರ್). ಅಂದು ಕಂದಕದ ಹಿರಿಯ ಜಮೀನ್ದಾರರಾಗಿದ್ದ ಹಾಜಿ ಹುಸೈನ್ ಈಸಾಸೇಟ್ ಸಾಹೇಬರು ಮಸೀದಿಗಾಗಿ ¾ ಎಕ್ರೆ ಸ್ಥಳವನ್ನೂ ದಾನ ಮಾಡಿದರು. ಅಂತು 1917ರಲ್ಲಿ ಈ ಮಸೀದಿಯು ನಿರ್ಮಾಣಗೊಂಡು 'ಮಸ್ಜಿದುಲ್ ಬದ್ರಿಯ್ಯಾನ್' ಎಂಬ ಹೆಸರಲ್ಲಿ ಇದರ ಉದ್ಘಾಟನೆಯಾಯಿತು. ನಮ್ಮ ಸಮಾಜದ ಅಂದಿನ ಅಗ್ರಗಣ್ಯ ಮತವಿದ್ವಾಂಸರಾಗಿದ್ದ ಮೌಲಾನಾ ಹಾಜಿ ಕುಂಞ ಮುಸ್ಲಿ ಯಾರರನ್ನು ಮಸೀದಿಯ ಇಮಾಮರಾಗಿ ನೇಮಿಸಲಾಯಿತು. ಸದ್ರಿಯವರು ಇಡೀ ಮೊಹಲ್ಲದಲ್ಲಿ ತುಂಬಾ ಜನಪ್ರಿಯರಾಗಿದ್ದು ಎಲ್ಲರನ್ನೂ ಪ್ರೀತಿಯಿಂದಲೂ

www.bearyinfo.com

ಸಲಿಗೆಯಿಂದಲೂ ನಡಿಸಿಕೊಂಡುಬರುತ್ತಿದ್ದರು. 1924ರಲ್ಲಿ ನಮ್ಮ ಸಮಾಜದ ಹಿರಿಯ ಧರ್ಮಾಭಿಮಾನಿಗಳಾಗಿದ್ದ ಜನಾಬ್ ಸಿ. ಮಹ್ಮೂದ್‌ರವರು (ಜನಾಬ್ ಸಿ. ಅಬ್ದುರ್ರಹ್ಮಾನ್ ಹಾಜಿಯವರ ಹಿರೀ ಮಗ) ಜನಾಬ್ ಎಂ. ಕುಂಞಮ್ಮು, ಜನಾಬ್ ಹಾಜಿ ಎಂ. ಮ್ಯೊದಿನಬ್ಬಾ ಮತ್ತು ಜನಾಬ್ ಟಿ. ಯು. ಅಬೂಬಕರ್ ರವರು ಮುಂದಾಳಾಗಿ ತಮ್ಮ ಆಪ್ತಮಿತ್ರರ ಸಹಾಯ ಸಹಕಾರಗಳಿಂದ 'ದಿ ಮುಸ್ಲಿಮ್ ಎಜ್ಯುಕೇಶನಲ್ ಎಸೋಸಿಯೇಶನ್' ಎಂಬ ಸಂಘವನ್ನು ಸ್ಥಾಪಿಸಿದರು. ಇದರ ಆಶ್ರಯದಲ್ಲಿ ಸಮಾಜದಲ್ಲಿ ಮೊದಲನೆ ಬಾರಿ ಒಂದು ಬಲವಾದ ತಳಹದಿಯ ಮೇಲೆ "ಮದ್ರಸತುಲ್ ಬದ್ರಿಯಾ" ಎಂಬ ಶಾಲೆಯನ್ನು ತೆರೆಯಲಾಯಿತು. (ಇಂದು ಅದು ಬದ್ರಿಯಾ ಹಯರ್ ಎಲಿಮೆಂಟರಿ ಸ್ಕೂಲ್ ಆಗಿ ಪರಿವರ್ತನೆಗೊಂಡಿದೆ). ಸದ್ರಿ ಶಾಲೆಗೆ ಉರ್ದು ಅರಬಿ, ಫಾರ್ಸಿ ಮಲೆಯಾಳ ಇತ್ಯಾದಿ ಭಾಷೆಗಳ ಪಾಂಡಿತ್ಯವಿದ್ದ ತಲಚೇರಿಯ ಇಬ್ರಾಹಿಂಕುಟ್ಟಿ ಮೌಲವಿಯವರನ್ನು ಹೆಡ್ ಮಾಸ್ಟರರಾಗಿ ನೇಮಿಸಲಾಯಿತು. ಸದ್ರಿಯವರು ತನ್ನ ಉತ್ತಮರೀತಿಯ ಶಿಕ್ಷಣಕ್ರಮದಿಂದ ಅತ್ಯಲ್ಪ ಸಮಯದೊಳಗೆ ಮಕ್ಕಳಿಗೆ ಅರಬಿ ಉರ್ದುಗಳ ಪರಿಚಯ ಮಾಡಿಕೊಟ್ಟರು. ಇತರ ಶಾಲೆಗಳಲ್ಲಿ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಖುರಾನ್ ಪೂರ್ತಿ ಓದಿ ಮುಗಿಯುತ್ತಿದ್ದಿಲ್ಲ. ಆದರೆ ಇವರ ಶಿಕ್ಷಣ ಕ್ರಮದಂತೆ ಖುರಾನ್ ಪೂರ್ತಿಯು ಕೇವಲ 3ನೇ ಕ್ಲಾಸಿಗೆ ಮುಗಿದು ನಾಲ್ಕನೇ ಐದನೇ ಕ್ಲಾಸುಗಳಲ್ಲಿ ಮಕ್ಕಳು ಅರಬಿ ಭಾಷೆಯಲ್ಲಿ ಮಾತಾಡಲಿಕ್ಕೆ ಕಲಿಯುತ್ತಿದ್ದರು. ಮಾತ್ರವಲ್ಲ, ವರ್ಷಕ್ಕೊಮ್ಮೆ 'ಮೀಲುದುನ್ನಬೀ' ಸಮಾರಂಭವು ಈ ಶಾಲೆಯಲ್ಲಿ ಬಹಳ ವಿಜೃಂಭಣೆಯಿಂದ ನಡಿಯುತ್ತಿತ್ತು. ವಿದ್ಯಾರ್ಥಿಗಳೂ ಉರ್ದು, ಮಲೆಯಾಳಗಳಲ್ಲಿ ಭಾಷಣ ಕೊಡಲು ಕಲಿಯುತ್ತಿದ್ದರು. ಮಂಗಳೂರಿನಲ್ಲಿ ಈ ಮಹಾನುಭಾವರಿಂದ ಕಲಿತ ಮಕ್ಕಳ ಹಾಗೆ ಚಂದವಾಗಿಯೂ 'ಮಖ್ರಜ್' ಸಹಿತವೂ ಖುರಾನ್ ಓದಲು ಇತರರಿಂದ ಸಾದ್ಯವಿಲ್ಲದಷ್ಟು ಸೊಗಸಾಗಿ ಅವರು ಕಲಿಸಿದ್ದಾರೆ.

ಈ ಶಾಲೆಯನ್ನು ಹಾಜಿ ಹುಸೈನ್ ಈಸಾಸೇಟರು ದಾನವಿತ್ತ ಸ್ಥಳದಲ್ಲಿ ಕಟ್ಟಲಾಗಿತ್ತು. ಜನಾಬ್ ಸಿ. ಮಹ್ಮೂದ್ ಸಾಹೇಬರು ಸುಮಾರು ನಾಲ್ಕು ಸಾವಿರ ರೂಪಾಯಿಗಳ ಖರ್ಚಿನಿಂದ ಯೋಗ್ಯಕಟ್ಟಡವೊಂದನ್ನು ಕಟ್ಟಿಸಿ ಶಾಲೆಗಾಗಿ ಉಚಿತಾರ್ಥವಾಗಿ ಬಿಟ್ಟುಕೊಟ್ಟಿದ್ದರು. ಶಾಲೆಯ ಪ್ರವೇಶ ಮಹೋತ್ಸವವು 1925ರಲ್ಲು ಮೇ ತಿಂಗಳ 11ನೇ ತಾರೀಕಿನಂದು 40 ಮಕ್ಕಳನ್ನು ಸೇರಿಸಿ ಜರಗಿತು. ಶಾಲೆಯ ಆಡಳಿತೆಗೆ ಸಹಾಯಕವಾಗುವಂತೆ ಜನಾಬ್ ಹಾಜಿ ಎಂ. ಮ್ಯೊದಿನಬ್ಬನವರು ವರ್ಷಂಪ್ರತಿ 15 ಮುಡಿ ಅಕ್ಕಿ ಹುಟ್ಟುವಳಿಯಿರುವ ಆಸ್ತಿಯನ್ನೂ, ಶಾಲಾ ಮೆನೇಜರರಾಗಿ ನೇಮಿಸಲ್ಪಟ್ಟ ಜನಾಬ್ ಕುಂಞಮ್ಮು ಸಾಹೇಬರು ವರ್ಷಂಪ್ರತಿ 6 ಮುಡಿ ಅಕ್ಕಿ ಹುಟ್ಟುವಳಿಯಿರುವ ಆಸ್ತಿಯನ್ನೂ ಸಂಘಕ್ಕೆ ದಾನವಾಗಿಕೊಟ್ಟರು. ಈ ಉದಾರಿಗಳೂ ಅನೇಕ ಊರ ಮತ್ತು ಪರವೂರ ಮುಸ್ಲಿಮ್ ಮತ್ತು ಅಮುಸ್ಲಿಮ್ ಬಾಂಧವರ ಹಾಗೂ ಮೊಹಲ್ಲದ ಮುಸ್ಲಿಮ್ ಸಾರ್ವಜನಿಕರ ಸಹಾಯಸಹಕಾರಗಳೊಂದಿಗೆ ಶಾಲೆಯು ದಿನೇ

www.bearyinfo.com

ದಿನೇ ಅಭಿವೃದ್ಧಿ ಹೊಂದುತ್ತಾ ಕೇವಲ ಐದು ವರ್ಷಗಳೊಳಗೆ ಸರಕಾರವು ಅಂಗೀಕರಿಸಿದ ಒಂದು ಎಲಿಮೆಂಟರಿ ಶಾಲೆಯಾಗಿ ಶೋಭಿಸಿತು. ಅತ್ತ ಅಂಜುಮನ್ ಮುನೀರುಲ್ ಇಸ್ಲಾಮ್ ಸಂಸ್ಥೆಯು ನಡಿಸಿಕೊಂಡು ಬರುತ್ತಿದ್ದ 'ಮುನೀರುಲ್ ಇಸ್ಲಾಮ್' ಶಾಲೆಯು ಬಹಳ ಕ್ಷೀಣಸ್ಥಿತಿಗೆ ಬಂದದ್ದರಿಂದ 1926ರಲ್ಲಿ ಅದರ ಆಡಳಿತೆಯೂ ಮುಸ್ಲಿಮ್ ಎಜ್ಯೂಕೇಶನಲ್ ಎಸೋಸಿಯೇಶನಿನವರ ಕೈಗೆ ಬಂದು ಎರಡು ಶಾಲೆಗಳೂ ಒಂದುಗೂಡಿದುವು.

1927ರಲ್ಲಿ ಮಂಗಳೂರು ಮುಸಲ್ಮಾನರ ಚರಿತ್ರೆಯ ಇನ್ನೊಂದು ಮಹತ್ವಪೂರ್ಣ ಸಂಭವವು ನಡಿಯಿತು. ಧಾರ್ಮಿಕ ವಿದ್ಯಾಭ್ಯಾಸದಾಹದಿಂದ ಕಳವಳಗೊಂಡಿದ್ದ ಬಜಾರಿನ ಮೂವರು ಮುಸ್ಲಿಮ್ ತರುಣರು—ಜನಾಬ್ ಇಸ್ಮಾಯಿಲಬ್ಬಾ ಬಿನ್‌ರಹೀಮ್, ಜನಾಬ್ ಪಿ. ಮುಹಮ್ಮದ್ ಹಾಗೂ ಜನಾಬ್ ಮುಹಮ್ಮದ್ ಬಿನ್ ಪಳ್ಳಿಯವರು ಮತ ಪಠನಕ್ಕಾಗಿ ಕಂಡತ್ಪಳ್ಳಿಯ ಒಬ್ಬರು ಮ್ಯೊಲಾರರ ಹತ್ತರ ಹೋಗುತ್ತಿದ್ದರು. ಆಗ ಜುಮಾಮಸೀದಿಯ ಜಮಾತ್ ಖಾನೆಯ ಮಾಳಿಗೆಯು ಖಾಲಿಬಿದ್ದಿತ್ತು. ಒಬ್ಬರು ವಿದ್ವಾಂಸರು ಧಾರ್ಮಿಕ ಮನೋವೃತ್ತಿಯ ಈ ಮುಸ್ಲಿಮ್ ತರುಣರು ಕಷ್ಟ ಪಡುವುದನ್ನು ಕಂಡು ಸದ್ರಿ ಖಾಲಿಬಿದ್ದ ಜಮಾತ್ ಖಾನೆಯ ಮಾಳಿಗೆಯಲ್ಲೇ ಒಂದು ದರಸ್ ಯಾಕೆ ಸ್ಥಾಪಿಸಬಾರದೆಂದು ಕೇಳಿ ಅವರಿಗೆ ಉತ್ತೇಜನ ಕೊಟ್ಟರು. ಈ ರೀತಿ ಮದ್ರಸತುಲ್ ಅಜ್ಹರಿಯಾ ಎಂಬ ದರ್‌ಸ್ 1927ರಲ್ಲಿ ಸ್ಥಾಪಿತವಾಯಿತು. ಜನಾಬ್ ಮೌಲವಿ ಇಸ್ಮಾಯಿಲ್ ರಹೀಮರು ಇಂದಿಗೂ ಬಂದರದ ಮುಸಲ್ಮಾನರ ಪೈಕಿ ಮತಗ್ರಂಥಗಳನ್ನು ಒಳ್ಳೆಯ ತೆರನಾಗಿ ಪಠನಮಾಡಿದ ಹಾಗೂ ಉರ್ದು ಮತ್ತು ಇಂಗ್ಲಿಷ್ ಕೂಡಾ ಗೊತ್ತಿರುವ ಏಕ ಮಾತ್ರ ಯೋಗ್ಯ ಆಲಿಮರಾಗಿರುವರೆಂದು ಹೇಳಿದರೂ ಅತಿಶಯೋಕ್ತಿ ಆಗಲಾರದು.

ಈ ಸಂಘದ ಪ್ರಥಮ ಕಾರ್ಯದರ್ಶಿಯರಾಗಿ ಡಾ. ಮುಹಮ್ಮದ್ ಅಲ್ ಖಾಜಿಯವರೂ ಇತರ ಮಹನೀಯರೂ ಅನಂತರ ತುಂಬಾ ಕಾಲದವರೆಗೆ ಮೆನೇಜರರಾಗಿ ಕೆ. ಅಬ್ದುಲ್ಲ ಇದ್ದಿನಬ್ಬ ಸಾಹೇಬರೂ ಮದ್ರಸವನ್ನು ಅಭಿವೃದ್ಧಿಗೊಳಿಸಲು ತುಂಬಾ ದುಡಿದಿರುತ್ತಾರೆ. ಅನೇಕ ಊರ ಬಂಧುಗಳು ಈ ದರಸಿಗೆ ಆಸ್ತಿಯನ್ನೂ ಇತರ ಹುಟ್ಟುವಳಿಯನ್ನೂ ವಕ್ಫ್ ಮಾಡಿ ಸಹಾಯ ಮಾಡಿದ್ದಾರೆ. ಈ ಮದ್ರಸಕ್ಕೆ ಸದರ್ ಮುದರ್ರಿಸರಾಗಿ ಬಂದ ಕಿಯ್ಯೂರಿನ ದಿ. ಮೌಲಾನಾ ಕೆ. ವಿ. ಮುಹಮ್ಮದ್ ಮೌಲವಿಯವರೂ (ಆಮ್ ಮ್ಯೊಲಾರ್) ಮಂಗಳೂರಿನ ಮುಸಲ್ಮಾನರಲ್ಲಿ ತುಂಬಾ ಜನಪ್ರಿಯ ವ್ಯಕ್ತಿಯಾಗಿದ್ದರು. ಇಲ್ಲಿಗೆ ಅಹ್ಲೆ-ಹದೀಸ್ ಚಳವಳವು ಬಂದಾಗ ಸದ್ರಿಯವರು ಸಮಾಜದ ಐಖ್ಯತೆಯನ್ನು ಕಾಪಾಡಲು ತುಂಬಾ ಪ್ರಯತ್ನಿಸಿದ್ದಾರೆ. ಬಿದ್‌ಅತ್‌ಗಳನ್ನೂ ಅನಾಚಾರಗಳನ್ನೂ ಮೊತ್ತಮೊದಲು ಬಹಿರಂಗವಾಗಿ ಖಂಡಿಸಿ ಸಾರ್ವಜನಿಕರಿಗೆ ದೀನಿನ ಯಥಾರ್ಥ ತಿರುಳನ್ನು ತಿಳಿಯಾಗಿ ತಿಳಿಸಿಕೊಟ್ಟವರೂ ಅವರೇ ಎಂದರೂ ಸರಿಯೆ.

www.bearyinfo.com

# ವಿದ್ಯಾವಂತರ ನಾಯಕತ್ವದಲ್ಲಿ

1930ರಂದು ಹಲವು ಮಂದಿ ಮುಸ್ಲಿಮ್ ತರುಣರು ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿರುವ ದೃಶ್ಯವು ಕಣ್ಣ ಮುಂದೆ ಬರುತ್ತದೆ. ಈ ವರ್ಷದಿಂದಲೇ ಮುಸ್ಲಿಮ್ ವಿದ್ಯಾರ್ಥಿಗಳ ಒಂದು ತಂಡವು ಜನಾಬ್ ಅಬ್ದುರ್ರಹೀಮ್ ಅಹ್ಮದ್‌ರವರ ನಾಯಕತ್ವದಲ್ಲಿ ಸಮಾಜ ಸೇವೆಗಾಗಿ ಕಾರ್ಯರಂಗಕ್ಕಿಳಿದುದು ಕಾಣುತ್ತದೆ. ಅವರಲ್ಲಿ ಅಂದು ಇದ್ದ ಸಂಘಟನಾ ಬುದ್ಧಿ ಹಾಗೂ ಸಮಾಜ ಸೇವೆಯ ಹುರುಪು ಇಂದು ಮಾಯವಾಗಿದೆ. ಬದ್ರಿಯಾ ಶಾಲೆಯ ವಠಾರದಲ್ಲಿ ಈ ವಿದ್ಯಾರ್ಥಿ ಕೂಟವು ದಿ ಮುಸ್ಲಿಮ್ ಲಿಟರರೀ ಎಂಡ್ ಡಿಬೇಟಿಂಗ್ ಸೊಸೈಟಿ ಎಂಬ ಹೆಸರಲ್ಲಿ ಒಂದು ಸಂಘವನ್ನು ಸ್ಥಾಪಿಸಿ, ರಾತ್ರಿಶಾಲೆ, ಚರ್ಚಾ ಕೂಟಗಳು ಮೊದಲಾದ ಕಾರ್ಯಕ್ರಮಗಳಿಂದ ಸಮಾಜಸೇವೆ ನಡಿಸುತ್ತಿದ್ದರು. ಈ ಸಂಘದ ನಾಯಕರಾಗಿ ಮಾಸ್ಟರ್ ಜಿ. ಮುಹಮ್ಮದ್ ಹಾರೂನ್ ಸಾಹೇಬ್, (ಪ್ರಕೃತ ಬದ್ರಿಯಾ ಶಾಲೆಯ ಮುಖ್ಯೋಪಾಧ್ಯಾಯರು) ಜನಾಬ್ ಅಬ್ದುರ್ರಹೀಮ್ ಅಹ್ಮದ್, ದಿ. ಜನಾಬ್ ಅಬ್ದುಲ್‌ಕರೀಮ್ ಅಹ್ಮದ್, ಎಂ. ಎ. ಕರೀಮ್, ಮೊದಲಾದವರು ಮುಂದಿನ ಸಾಲಿನಲ್ಲಿದ್ದರು. ಆ ಕಾಲದಲ್ಲೇ ಸೀರತ್ ಕಮಿಟಿಯು ಮೊದಮೊದಲು ಸ್ಥಾಪನೆಗೊಂಡು ಮಿಲಾದುನ್ನಬೀ ಸಮಾರಂಭವು ವರ್ಷಂಪ್ರತಿ ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಡುತ್ತಿತ್ತು. ಅನಂತರ ಬದ್ರಿಯಾ ಶಾಲೆಯ ಆಡಳ್ತೆದಾರರಿಗೂ, ರಾಷ್ಟ್ರೀಯ ಮನೋವೃತ್ತಿಯ ಈ ತರುಣ ಸಮಾಜ ಸೇವಕರಿಗೂ ಸರಿಬೀಳದೆ, ಸಂಘವು ಆ ವಠಾರದಿಂದ ಹೊರನಡೆಯಬೇಕಾಯಿತು. ಆದರೆ ಈ ಜನಕೂಟವು ಧೈರ್ಯಗುಂದಲಿಲ್ಲ. 1932ರಲ್ಲಿ ಕ್ರಿಸೆಂಟ್ ಕ್ಲಬ್ ಎಂಬ ಹೆಸರಲ್ಲಿ ಒಂದು ಸಂಘವನ್ನು ಸ್ಥಾಪಿಸಿ ಅಂದಿನ ಆಧುನಿಕ ವಿದ್ಯಾರ್ಜಿತ ಜನರೆಲ್ಲರನ್ನೂ ಆ ಸಂಘಟನೆಯೊಳಗೆ ತರಲು ಅವರಿಗೆ ಸಾಧ್ಯವಾಯಿತು. ನನ್ನ ನೆನಪಿನ ಮಟ್ಟಿಗೆ ಇಂತಹ ಒಂದು ಸಂಘಟನೆಯು ನಂತರದ ಕಾಲದಲ್ಲಿ ಒಮ್ಮೆಯೂ ಸ್ಥಾಪನೆ ಹೊಂದಲು ಸಾಧ್ಯವಾಗಲಿಲ್ಲ. ಒಂದು ಒಳ್ಳೆಯ ಲೈಬ್ರರಿ, ಒಂದು ಉತ್ತಮ ವಾಚನಾಲಯ ಹಾಗೂ ಇತರ ಸಾಮಾಜಿಕ ಚಟುವಟಿಕೆಗಳನ್ನೂ ಕಾರ್ಯಕ್ರಮವಾಗಿಟ್ಟುಕೊಂಡು 1940ರ ವರೆಗೂ ಈ ಕ್ಲಬ್ ಮುಸ್ಲಿಮ್ ಸಮಾಜಕ್ಕೆ ತುಂಬಾ ಉಪಕಾರ ಮಾಡಿತು. ಸೀರತ್ ಕಮಿಟಿಯು ಅನಂತರ ಈ ಕ್ಲಬ್ಬಿನ ಆಶ್ರಯದಲ್ಲಿದ್ದು ಸುಪ್ರಸಿದ್ಧ ಭಾಷಣಕಾರರಾದ ಧಾರ್ವಾಡಿನ ಐ. ಯಂ. ಮೌಲವಿ, ಮದ್ರಾಸಿನ ಪ್ರೊ. ಅಬ್ದುಲ್‌ಹಕ್, ಪ್ರೊ. ಅಬ್ದುಲ್ ವಹ್ಹಾಬ್ ಬುಖಾರಿ, ಲಾಹೋರಿನ ಮಿಯಾಂ ಬಶೀರ್ ಅಹ್ಮದ್ ಮತ್ತು ಮಿಸೆಸ್ ಬಶೀರ್ ಅಹ್ಮದ ಮೊದಲಾದವರು ಇಸ್ಲಾಮಿನ ಸಿದ್ಧಾಂತಗಳ ಕುರಿತು ಹಾಗೂ ನಬಿವರ್ಯರ ಪವಿತ್ರ ಜೀವನದ ಕುರಿತು ಭಾಷಣ ನೀಯಲು ಬಂದಿದ್ದರು. ಈ ಕ್ಲಬ್ಬಿನ ಪ್ರಥಮ ಅಧ್ಯಕ್ಷರಾಗಿ ಜನಾಬ್ ಮೊಹ್ಸಿನ್ ಬಿನ್



www.bearyinfo.com

ಅಹ್ಮದ್, ಬಿ.ಎ., (ಅಲಿಘರ್) ಎಲ್.ಟಿ.,ಯವರೂ ಪ್ರಥಮ ಕಾರ್ಯದರ್ಶಿಯಾಗಿ ಜನಾಬ್ ಅಬ್ದುರ್ರಹೀಮ್ ಅಹ್ಮದ್ ಸಾಹೇಬರೂ ತುಂಬಾ ಸೇವೆ ಸಲ್ಲಿಸಿದ್ದಾರೆ. ಕಾರಣಾಂತರಗಳಿಂದ ಈ ಕ್ಲಬ್ಬಿನೊಳಗೂ ಅನೈಕ್ಯವು ನುಸುಳಿ ಎರಡು ಪಂಗಡಗಳನ್ನಾಗಿ ಮಾಡಿತು. ತತ್ಪರಿಣಾಮವಾಗಿ 1937ರಲ್ಲಿ ಕಾರ್ಕಳದ ಸೈಯ್ಯದ್ ಹುಸೈನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜನಾಬ್ ಅಬ್ದುರ್ರಹೀಮ್‌ರವರು 'ಮುಸ್ಲಿಮ್ ವೆಲ್ಫೇರ್‌ಲೀಗ್" ಎಂಬ ಇನ್ನೊಂದು ಸಂಘಟನೆಯನ್ನು ಸ್ಥಾಪಿಸಿದರು. ಇದರಲ್ಲಿಯೂ ವಿದ್ಯಾವಂತ ಜನ ಕೂಟವೇ ಭಾಗವಹಿಸಿದ್ದು ಸಮಾಜವನ್ನು ಪ್ರಗತಿಪಥದಲ್ಲಿ ಹಾಕಲು ತುಂಬಾ ಕಾರ್ಯಕ್ರಮಗಳು ಎದ್ದುವು. ಅಂದಿನ ಚಿತ್ರಮಯ ವಾಲಂಟಿಯರ್ ಕೋರಿನ ಚಿತ್ರವೊಂದು ಇನ್ನೊಂದು ಪುಟದಲ್ಲಿ ಕೊಡಲಾಗಿದೆ; ವೆಲ್ಫೇರ್ ಲೀಗಿನ ಆಶ್ರಯದಲ್ಲಿ ಅನೇಕ ಸಾರ್ವಜನಿಕ ಸಭೆಗಳು ಏರ್ಪಟ್ಟಿದ್ದುವು. ಅವುಗಳಲ್ಲಿ ಪ್ರಧಾನವಾದುದು ಮಲಬಾರಿನ ರಾಷ್ಟ್ರೀಯ ಧುರೀಣರಾದ ಮುಹಮ್ಮದ್ ಅಬ್ದುರ್ರಹ್ಮಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರುಗಿದ ಪೆಲೆಸ್ತೈನ್ ದಿನಾಚರಣೆ. ಅದೊಂದು ಚರಿತ್ರಾರ್ಹ ಸಮಾರಂಭವಾಗಿತ್ತು. ಇದಲ್ಲದೆ ಸುಪ್ರಸಿದ್ಧ ಸೋಶಿಯಲಿಸ್ಟ್ ನಾಯಕರಾಗಿದ್ದ ದಿ। ಮೆಹರಾಲಿಯವರು, ಮದ್ರಾಸ್ ಮಂತ್ರಿಯಾಗಿದ್ದ ದಿ। ಯಾಕೂಬ್ ಹಸನ್ ಸೇಟ್ ಮೊದಲಾದವರೂ ಈ ಸಂಘದ ಆಶ್ರಯದಲ್ಲಿ ಸೇರಿದ ಸಭೆಗಳಲ್ಲಿ ಭಾಷಣಕೊಟ್ಟಿದ್ದರು.

1933ರಲ್ಲಿ ಕುದ್ರೋಳಿಯ ಕೆಲವು ವಿದ್ಯಾವಂತ ಬಂಧುಗಳ ಪರಿಶ್ರಮದಿಂದ ಮುಸ್ಲಿಮ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಉದ್ದೇಶದಿಂದ ಅಂಜುಮನ್ ಹಿದಾಯತುಲ್ ಇಸ್ಲಾಮ್ ಎಂಬ ಒಂದು ಸಂಘವು ಸ್ಥಾಪಿತವಾಯಿತು. ಈ ಸಂಘವು ಸಮಾಜದಲ್ಲಿ ವಿದ್ಯಾಭ್ಯಾಸ ಹರಡುವುದರಲ್ಲಿ ತುಂಬಾ ಕೆಲಸಮಾಡಿದೆ. ಮರುವರ್ಷವೇ ಕಂಡತ್ಪಳ್ಳಿಯ ದರ್ಸ್—ಅಲ್‌ಮದ್ರಸತುಲ್ ಮುಹಮ್ಮದಿಯ ಸಂಘವೂ ಸ್ಥಾಪನೆಗೊಂಡಿತು. ಈ ಎರಡೂ ಸಂಘಗಳೂ ಈ ವರೆಗೂ ತಮ್ಮ ಚಟುವಟಿಕೆಗಳನ್ನು ಮುಂದುವರಿಸುತ್ತಾ ಬಂದಿವೆ.

1939ರಲ್ಲಿ ಮೈಸೂರಿನ ದಿವಾನರಾಗಿದ್ದ ಸರ್. ಮಿರ್ಜಾ ಇಸ್ಮಾಯಿಲರು ಮಂಗಳೂರಿಗೆ ಆಗಮಿಸಿದಾಗ ಮಂಗಳೂರ ಮುಸ್ಲಿಮರ ಪರವಾಗಿ ಒಂದು ಪೌರಸ್ವಾಗತವನ್ನು ನೀಡಲಾಗಿತ್ತು- ಸದ್ರಿ ಸಮಾರಂಭದ ಚಿತ್ರವೊಂದು ಬೇರೊಂದು ಪುಟದಲ್ಲಿ ಕೊಡಲಾಗಿದೆ.

ಜನಾಬ್ ರಹೀಮರು ಸಮಾಜ ಸುಧಾರಣೆಗಾಗಿ ತನ್ನಿಂದಾದಷ್ಟು ಪ್ರಯತ್ನಪಟ್ಟರೂ, ಸಮಾಜದ ಮುಖಂಡರೆನಿಸಿಕೊಳ್ಳುತ್ತಿದ್ದ ಕೆಲವು ಆಢ್ಯ ವ್ಯಕ್ತಿಗಳು ಅವರ ಕ್ರಿಯಾತ್ಮಕ ಚಟುವಟಿಕೆಗಳನ್ನು ಅಪ್ರತ್ಯಕ್ಷವಾಗಿ ಎದುರಿಸುತ್ತಾ

www.bearyinfo.com

ಕಡೆಗೆ ಅವರ ವೆಲ್ಫೇರ್‌ಲೀಗನ್ನೂ ವಾಲಂಟಿಯರ್ ಕೋರನ್ನು ಮುರಿದು ಹಾಕುವುದರಲ್ಲಿ ಜಯಶೀಲರಾದರು. ಜನಾಬ್ ರಹೀಮರಿಗೆ ಯೋಗ್ಯ ಸಹ ಕಾರವು ಸಿಕ್ಕದ ಕಾರಣ ಸಮಾಜದ ಆಶಾಪೂರ್ಣ ಸಂಸ್ಥೆಯೊಂದು ಕೆಳಗುರುಳಿತು. ಸದ್ರಿ ಸಂಘದ ಲೈಬ್ರರಿ ಗ್ರಂಥಗಳು ಫರ್ನಿಚರುಗಳು ವಾಲಂಟಿಯರ್ ಕೋರಿನ ಸಮವಸ್ತ್ರ ಇತ್ಯಾದಿ ಎಲ್ಲಿ ಮಾಯವಾಯಿತೆಂಬುದು ಈಗಲೂ ಒಂದು ರಹಸ್ಯ ವಾಗಿದೆ. ಈ ದುರ್ಘಟನೆಯು ಎಷ್ಟೇ ನಿರಾಶಾಜನಕವಾಗಿದ್ದರೂ ಮಿ. ರಹೀಮರು ಇದರಿಂದ ಮನಗುಂದದೆ ತಮ್ಮ ತ್ಯಾಗದಿಂದ ಸಮಾಜಕ್ಕೆ ಯೋಗ್ಯ ಮಾರ್ಗ ದರ್ಶನವೀಯುವರೆಂದು ಕೆಲವು ವಿದ್ಯಾವಂತ ತರುಣರು ಆಶಿಸಿದ್ದರು. ಆದರೆ ಮಿ. ರಹೀಮರು ಇದರಿಂದ ತುಂಬಾ ಮನನೊಂದು, ಸಮಾಜವನ್ನು ಅರ್ಧ ದಾರಿಯಲ್ಲಿಯೇ ಬಿಟ್ಟು ಹೋದರು. ಅಂತು ಮಿಸ್ಟರ್ ರಹೀಮರಿಂದ ತುಂಬಾ ಆಶೆಯಿಟ್ಟುಕೊಂಡಿದ್ದ ಸಮಾಜ ಬಂಧುಗಳು ಇದರಿಂದ ತುಂಬಾ ನಿರಾಶೆ ಗೊಳಗಾದರು. ಮಾತ್ರವಲ್ಲ, ಅವರು ತೊಡಗಿದ್ದ ಕಾರ್ಯಗಳೆಲ್ಲವೂ ಹಗಲು ಕನಸಾಗಿ ಪರ್ಯಾವಸಾನಗೊಂಡಿತೆನ್ನುವಾಗ ವ್ಯಸನವಾಗುತ್ತದೆ. ಆದರೂ ಆಧುನಿಕ ಕಾಲದಲ್ಲಿ ಮುಸ್ಲಿಮ್ ವಿದ್ಯಾವಂತ ತಂಡದಲ್ಲಿ ಸಮಾಜಸೇವಾ ಜಾಗೃತಿಯುಂಟುಮಾಡಿದ ಭಾರವು ಅವರದೇ ಎನ್ನುವುದರಲ್ಲಿ ಸಂದೇಹವಿಲ್ಲ.

ಮಿಸ್ಟರ್ ರಹೀಮರು ಇನ್ನು ಸ್ವಲ್ಪ ತ್ಯಾಗ ಬುದ್ಧಿ ತೋರಿಸುತ್ತಿದ್ದರೆ ಮಂಗಳೂರ ಮುಸ್ಲಿಮ್ ಸಮಾಜದ ಧುರೀಣತ್ವದ ಕಿರೀಟವು ಅವರ ತಲೆಯಲ್ಲಿ ಶೋಭಿಸುತ್ತಿತ್ತು; ಅಂತು ಅವರು ಸಮಾಜವನ್ನು ಈ ರೀತಿ ಕವಲು ದಾರಿಯಲ್ಲಿ ಬಿಟ್ಟಂದಿನಿಂದ ಸಮಾಜದಲ್ಲಿ ಅವ್ಯವಸ್ಥೆಯು ತಲೆದೋರಿದೆಯೆನ್ನ ಬಹುದು. ವೆಲ್ಫೇರ್‌ಲೀಗಿನ ಪತನದ ಬಳಿಕ ಮಿಸ್ಟರ್ ರಹೀಮರು ಮುಸ್ಲಿಮ್ ಯೂತ್‌ಲೀಗ್ ಎಂತಲೂ, ಇಸ್ಲಾಮಿಯಾ ಕ್ಲಬ್ ಎಂತಲೂ ಹಲವಾರು ಸಂಘ ಸಂಸ್ಥೆಗಳನ್ನು ಮಗುದೊಮ್ಮೆ ಸ್ಥಾಪಿಸಿದ್ದರೂ, ಭಯಂಕರ ನಿರಾಶೆಗೊಳಗಾದ ವಿದ್ಯಾವಂತ ತಂಡವು ಇವರಿಗೆ ಬೇಕಾದ ಸಹಕಾರವನ್ನೀಯದಿದ್ದುದರಿಂದ ಅವು ಯಶಸ್ವಿಯಾಗಲಿಲ್ಲ.

1939ರಲ್ಲಿ ಮಿಸ್ಟರ್ ರಹೀಮರ ಪ್ರಯತ್ನದಿಂದ ಮಂಗಳೂರಿನ ಚರಿತ್ರೆ ಯಲ್ಲೇ ಮೊದಲಬಾರಿ ಎಂಬಂತೆ ಒಂದು ಮುಸ್ಲಿಂ ಕನ್ನಡ ವಾರ ಪತ್ರಿಕೆ "ಹಂದರ್ದ್" ಎಂಬ ಹೆಸರಲ್ಲಿ ಸ್ಥಾಪನೆಗೊಂಡು ಎರಡು ಮೂರು ವರ್ಷಗಳ ವರೆಗೂ ನಡಿಯಿತು. ಮಿಸ್ಟರ್ ರಹೀಮರು ಮುಸ್ಲಿಮ್ ಪ್ರೆಸ್ಸೊಂದನ್ನು ಸ್ಥಾಪಿಸ ಬೇಕೆಂದೂ ಬಹಳ ಮಟ್ಟಿಗೆ ಶ್ರಮಿಸಿದ್ದರು. ಅದು ಹಲವಾರು ಕಾರಣಗಳಿಂದ ಸಾಧ್ಯವಾಗದೇ ಹೋಯಿತು.

1940ರಲ್ಲಿ ಜಿಲ್ಲಾ ಕಲೆಕ್ಟರರೊಬ್ಬರ ಪರಿಶ್ರಮದಿಂದ ಮುಸ್ಲಿಮ್ ವೆಲ್ಫೇರ್ ಲೀಗ್ ಮತ್ತು ಕ್ರೆಸೆಂಟ್ ಕ್ಲಬ್ ಈ ಎರಡೂ ಸಂಘಟನೆಗಳನ್ನು ಒಂದು

www.bearyinfo.com

ಗೂಡಿಸಲಾಯಿತು. ಆದರೆ ಈ ಒಂದುಗೂಡುವಿಕೆಯು ಎರಡೂ ಸಂಘಟನೆಗಳನ್ನು ಮಣ್ಣುಗೂಡಿಸಿ ಬಿಟ್ಟಿತು. ಕ್ರೆಸೆಂಟ್ ಕ್ಲಬ್ ಕೂಡಾ ಪತನ ಹೊಂದಿತು. ಅಂದಿಗೆ ನಮ್ಮ ವಿದ್ಯಾವಂತ ಜನ ಕೂಟದ ಹಿಡಿತವು ನಮ್ಮ ಸಾರ್ವಜನಿಕರಿಂದ ತಪ್ಪಿತೆನ್ನಬಹುದು. ಈ ಎರಡು ಪ್ರಬಲ ಸಂಘಟನೆಗಳ ಪತನವು ನಮ್ಮ ವಿದ್ಯಾವಂತರಲ್ಲಿ ಒಂದು ತರ ನಿರಾಶೆಯನ್ನು ಉತ್ಪನ್ನಮಾಡಿ ಅದು ಇಂದಿನ ವರೆಗೂ ಮುಂದುವರಿಯುತ್ತಿದೆಯೆಂದರೆ ಹೆಚ್ಚಾಗಲಾರದು.

ಒಂದು ಸಮಾಜದ ನಾಯಕತ್ವದಿಂದ ವಿದ್ಯಾವಂತ ಜನ ಕೂಟವು ಕೈತೊರೆದು, ಅದನ್ನು ಜನ ಸಾಮಾನ್ಯರ ಕೈಯಲ್ಲಿ ಕೊಡುವುದೆಂದರೆ ಸಮಾಜದಲ್ಲಿ ಅರಾಜಕತೆಯನ್ನು ಸೃಷ್ಟಿಸುವುದಾಗಿದೆ. ವಿದ್ಯಾವಂತ ಜನ ಕೂಟವು ಸಮಾಜದ ನಾಯಕತ್ವವನ್ನು ಇನ್ನೊಮ್ಮೆ ವಹಿಸಿಕೊಂಡು ಸಮಾಜವನ್ನು ಪ್ರಗತಿ ಪಥದಲ್ಲಿ ಹಾಕಬೇಕಾದ ಕಾಲವು ಇದೀಗ ಸನ್ನಿಹಿತವಾಗಿದೆ. ಈ ಜವಾಬ್ದಾರಿಕೆಯನ್ನು ಸಮಾಜದ ವಿದ್ಯಾವಂತ ಬಂಧುಗಳು ಹೇಗೆ ನೆರವೇರಿಸುವರೆಂದು ಸಮಾಜವು ಆತುರದಿಂದ ಈಕ್ಷಿಸುವುದು.

www.bearyinfo.com

# ಮಾಯವಾದ ನಮ್ಮ ಸಂಘ—ಸಂಸ್ಥೆಗಳು

| | ಸಂಘದ ಹೆಸರು | ಸ್ಥಾಪನೆಯಾದ ವರ್ಷ | ಚಟುವಟಿಕೆಗಳು |
|---|---|---|---|
| 1. | ಅಂಜುಮನ್ ಮುನೀರುಲ್ ಇಸ್ಲಾಮ್ | 1902 | ಒಂದು ಪ್ರೈಮರಿ ಶಾಲೆ. |
| 2. | ಇಸ್ಲಾಮಿಯಾ ಕ್ಲಬ್ | 1914 | ವಾಚನಾಲಯ ಇತ್ಯಾದಿ. |
| 3. | ಅಂಜುಮನ್ ಇತ್ತಿಹಾದುಲ್ ಇಸ್ಲಾಮ್ | 1916 | ಪಾಟ್ ಮಾಲಿಗೆಗಳು. |
| 4. | ,, ಖುವ್ವತುಲ್ ಇಸ್ಲಾಮ್ | 1916 | ಪಾಟ್ ಮಾಲಿಗೆಗಳು. |
| 5. | ಬದ್ರಿಯಾ ಲಿಟರರಿ & ಡಿಬೇಟಿಂಗ್ ಸೊಸೈಟಿ | 1930 | ಮಯಸ್ಕರ ರಾತ್ರಿಶಾಲೆ, ವಾಚನಾಲಯ ಇತ್ಯಾದಿ. |
| 6. | ಸೀರತ್ ಕಮಿಟಿ | 1930 | ನಬಿ ದಿನಾಚರಣೆ. |
| 7. | ಕ್ರೆಸೆಂಟ್ ಕ್ಲಬ್ | 1932 | ವಾಚನಾಲಯ ಇತ್ಯಾದಿ. |
| 8. | ಮುಸ್ಲಿಮ್ ವೆಲ್ಫೇರ್‌ಲೀಗ್ | 1937 | ವಾಚನಾಲಯ, ಸ್ವಯಂಸೇವಕ ದಳ ವಯಸ್ಕರ ರಾತ್ರಿಶಾಲೆ. |
| 9. | ಯಂಗ್‌ಮೆನ್ಸ್ ಮುಸ್ಲಿಮ್ ಎಸೋಸಿಯೇಶನ್ | 1937 | ವಾಚನಾಲಯ, ರಾತ್ರಿಶಾಲೆ ಇತ್ಯಾದಿ. |
| 10. | ನುಸ್ರತುಲ್ ಇಸ್ಲಾಮ್ | 1940 | ಪಾಟ್ ಮಾಲಿಗೆ. |
| 11. | ಮುಸ್ಲಿಮ್ ಯೂತ್ ಲೀಗ್ | 1940 | ವಾಚನಾಲಯ ಇತ್ಯಾದಿ. |
| 12. | ಹಿಲಾಲ್ ಮಜ್ಲಿಸ್ | 1940 | ,, |
| 13. | ಅಂಜುಮನ್ ಮುಫೀದುಲ್ ಇಸ್ಲಾಂ | 1942 | ವ್ಯಾಪಾರಿಗಳಿಗೆ ಸಹಾಯ. |
| 14. | ಅಂಜುಮನ್ ಇಂದಾದುಲ್ ಇಸ್ಲಾಮ್ | 1942 | ದರಸ್ ಸ್ಥಾಪನೆ. |
| 15. | ಯಂಗ್‌ಮೆನ್ಸ್ ಮುಸ್ಲಿಮ್ ಎಸೋಸಿಯೇಶನ್ (ಎರಡನೆ ಬಾರಿ) | 1945 | ವಾಚನಾಲಯ, ವಯಸ್ಕರ ರಾತ್ರಿ ಶಾಲೆ. ಸ್ಕೋಲರ್ ಶಿಪ್ ಫಂಡ್ ಇತ್ಯಾದಿ. |
| 16. | ಇಸ್ಲಾಮಿಯಾ ಕ್ಲಬ್ | 1942 | ವಾಚನಾಲಯ ಇತ್ಯಾದಿ. |
| 17. | ಮಜ್ಲಿಸೆ ನೌನಿಹಾಲ್ | 1945 | ರಾತ್ರಿ ಶಾಲೆ, ವಾಚನಾಲಯ. |
| 18. | ಮಜ್ಲಿಸೆ ತಂಜೀಮ್ | 1947 | ತ್ರೈಮಾಸಿಕ ಪತ್ರಿಕೆ ಯೊಂದರ ಸ್ಥಾಪನೆ. |
| 19. | ಸೀರತ್ ಕಮಿಟಿ | 1949 | ಮಿಲಾದುನ್ನಬೀ ದಿನಾಚರಣೆ. |

www.bearyinfo.com

# ನಮ್ಮ ಧಾರ್ಮಿಕ ಸಂಸ್ಥೆಗಳು

**ಮಸೀದಿಗಳು:**

1. ಮಸ್ಜಿದ್ ಜೀನತ್ ಬಕ್ಷ್ (ಕೇಂದ್ರ ಜುಮಾ ಮಸೀದಿ) ಗೋಳಿಕಟ್ಟಾ ಬಜಾರ್
2. ಕಚ್ಛಿ ಮೇಮನ್ ಮಸೀದಿ (ಜುಮಾ ಮಸೀದಿ) ,,
3. ಶಾಹ್ ಅಮೀರ್ ಮಸೀದಿ ( ,, ) ಡೊಂಗರಿಕೇರಿ
4. ಜೋಡ್ ಮಸೀದಿ (ಇದರಲ್ಲೊಂದು ಜುಮಾಮಸೀದಿ) ಕುದ್ರೋಳಿ
5. ನಡುಪಳ್ಳಿ (ಇದು ಸದ್ಯದಲ್ಲೇ (ಜುಮಾ ಮಸೀದಿ ಆಗಿದೆ) ,,
6. ಕಂಡತ್ಪಳ್ಳಿ (ಜುಮಾ ಮಸೀದಿ) ಕರ್ಬಲಾರೋಡ್
7. ಮುಹಿಯದ್ದೀನ್ ಮಸೀದಿ (ಜುಮಾ ಮಸೀದಿ) ಬೋಳಾರ
8. ಮುಹಿಯದ್ದೀನ್ ಮಸೀದಿ (ಜುಮಾ ಮಸೀದಿ) ಜಪ್ಪು
9. ಮುಹಿಯದ್ದೀನ್ ಮಸೀದಿ (ಜುಮಾ ಇಲ್ಲ) ಕುದ್ರೋಳಿ
10. ಬೂಬುಕರ ಮಸೀದಿ ( ,, ) ಗೋಳಿಕಟ್ಟೆ ಬಜಾರ್
11. ಬದ್ರಿಯಾ ಮಸೀದಿ (ಜುಮಾ ಇಲ್ಲ) ಕಂದಕ
12. ಅಸಾಸುಲ್ ಇಸ್ಲಾಮ್ ಮಸೀದಿ ( ,, ) ಕಸ್ಯಾಗಲ್ಲಿ
13. ಚಿಲಿಂಬಿ ಮಸೀದಿ (ಜುಮಾ ಇಲ್ಲ) ಬೋಳಾರ
14. ಪೋಲೀಸ್ ಲೈನ್ ಮಸೀದಿ ( ,, )

**ಮದ್ರಸಗಳು:**

1. **ಮದ್ರಸತುಲ್ ಅಜ್‌ಹರಿಯ್ಯ**—1927ರಲ್ಲಿ ಸ್ಥಾಪನೆಗೊಂಡ ಈ ಮದ್ರಸದಲ್ಲಿ ಈಗ 240 ಮಕ್ಕಳು ಧಾರ್ಮಿಕ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಕಳೆದ ವರ್ಷ ಇದು ಕಂದಕದ ತನ್ನ ಸ್ವಂತ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಿದೆ. ಇದರ ಶಿಕ್ಷಣಾ ಪದ್ಧತಿಯನ್ನು ಸುಧಾರಿಸಿ ಪರವೂರ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಿನ ಗಮನ ಊರಮಕ್ಕಳಿಗೆನೇ ಕೊಡಲು ಹಲವಾರು ಸೂಕ್ತ ಬದಲಾವಣೆಗಳಾಗುತ್ತಿವೆಯೆಂದು ಕೇಳುತ್ತೇವೆ.

2. **ಮದ್ರಸತುಲ್ ಮುಹಮ್ಮದಿಯ್ಯಾ**-1934ರಲ್ಲಿ ಸ್ಥಾಪನೆಗೊಂಡ ಈ ಮದ್ರಸದಲ್ಲಿ ತತ್ಕಾಲ 85 ವಿದ್ಯಾರ್ಥಿಗಳಿದ್ದಾರೆ. ಪಠನಾಕ್ರಮವು ಪುರಾತನ ಸಂಪ್ರದಾಯದಂತೆ ನಡಿಯುತ್ತದೆ. ಇದು ಕಂಡತ್ಪಳ್ಳಿಯ ಮಾಳಿಗೆಯಲ್ಲಿದೆ.

3. **ಮದ್ರಸತುದ್ದೀನಿಯ್ಯ**—(ಕಚ್ಛೀ ಮಸೀದಿಯಲ್ಲಿ) 1945ರಲ್ಲಿ ಸ್ಥಾಪನೆಗೊಂಡ ಈ ಮದ್ರಸವು ನಮ್ಮ ಜಿಲ್ಲೆಯ ಹಿರಿಯ ಧಾರ್ಮಿಕ ವಿದ್ವಾಂಸರಾದ ಹಾಫಿಜ್ ಸಯ್ಯದ್ ಮುಹಮ್ಮದ್ ಯೂಸುಫ್ ಸಾಹೇಬರಿಂದ ಸ್ಥಾಪಿ

www.bearyinfo.com

ಸಲ್ಪಟ್ಟು ಈಗ ಅವರ ಶಿಷ್ಯವರ್ಯರಾದ ಮೌಲವಿ ಸೈಯದ್ ಯೂಸುಫ್ ಸಾಹೇಬರಿಂದ ನಡೆಸಲ್ಪಡುತ್ತದೆ. ಇಲ್ಲಿ ಉರ್ದು, ಅರಬಿ, ಫಾರ್ಸಿ ಕಲಿಸ್ಪಸಡುವುದಲ್ಲದೆ ಮಕ್ಕಳ ಗುಣನಡತೆಯ ಕುರಿತು ಹೆಚ್ಚಿನ ಗಮನವನ್ನು ಕೊಡಲಾಗುತ್ತದೆ. ತತ್ಕಾಲ 50 ವಿದ್ಯಾರ್ಥಿಗಳಿದ್ದಾರೆ.

4. **ಮದ್ರಸ: ಜಿಯಾವುಲ್ ಉಲೂಮ್**—(ಶಾಹ್ ಅಮೀರ್ ಮಸೀದಿಯಲ್ಲಿ) ಈ ಮದ್ರಸವನ್ನು ಸದ್ರಿ ಹಾಫಿಜ಼್ ಸಾಹೇಬರ ಇನ್ನೊಬ್ಬ ಶಿಷ್ಯರಾದ ಮೌಲವಿ ಅಬ್ದುಲ್ಕಾದರ್‌ರವರು ನಡಿಸಿಕೊಂಡು ಬರುತ್ತಿದ್ದಾರೆ. ಇಲ್ಲಿಯೂ ಉರ್ದು ಅರಬಿ ಫಾರ್ಸಿ ಕಲಿಸಲ್ಪಡುತ್ತದೆ. 30 ವಿದ್ಯಾರ್ಥಿಗಳಿದ್ದಾರೆ.

5. **ಮದ್ರಸ: ಬನಾತುದ್ದೀನಿಯ್ಯ**—ಇದು ಕಸ್ಸಾಯಿಗಲ್ಲಿ ಮಸೀದಿಯ ಸಮೀಪ ಹಾಜಿ ಸಿ. ಅಬ್ಬಾಸ್‌ರವರ ಮಾಳಿಗೆಯಲ್ಲಿ ನಡಿಯುತ್ತಾ ಬರುತ್ತದೆ. ನಗರದ ಏಕಮಾತ್ರ ಮುಸ್ಲಿಮ್ ಹೆಮ್ಮಕ್ಕಳ ಧಾರ್ಮಿಕ ಶಾಲೆಯಿದು. ಸುಮಾರು 70 ಹುಡುಗಿಯರು ಇದರಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದಾರೆ.

6. **ಮದ್ರಸ: ನೂರುಲ್ ಹುದಾ**—ಬೋಳಾರ ಜಾಮಿಯಾ ಮುಹ್ಯುದ್ದೀನ್ ಮಸೀದಿಯ ವಠಾರದಲ್ಲಿ ನಡೆಯುತ್ತಿರುವ ಈ ಮದ್ರಸವು 1947ರಲ್ಲಿ ಸ್ಥಾಪನೆಗೊಂಡಿತು. ಈಗ ಇದರಲ್ಲಿ 75 ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ದರಸ್ ಕಟ್ಟಡವು ತುಂಬಾ ಅಪಾಯ ಸ್ಥಿತಿಯಲ್ಲಿದ್ದು, ಬೋಳಾರದ ಧನಿಕ ಮುಸ್ಲಿಮ್ ಬಂಧುಗಳು ಈ ಕಡೆಗೆ ಗಮನಕೊಡದಿದ್ದುದು ತುಂಬಾ ಖೇದಾಸ್ಪದವಾಗಿದೆ.

7. **ಮದ್ರಸ: ನೂರುಲ್ ಇಸ್ಲಾಮ್**:—ಇದು ಜಪ್ಪು ಜುಮಾ ಮಸೀದಿಯ ವಠಾರದಲ್ಲಿದೆ. ಸುಮಾರು 60 ಮಕ್ಕಳು ಧಾರ್ಮಿಕ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದಾರೆ. ಊರವರ ಪರಿಶ್ರಮದಿಂದ ಇದಕ್ಕೊಂದು ಯೋಗ್ಯ ಕಟ್ಟಡವು ತಯಾರಾಗಿದೆ.

8. **ಮದ್ರಸ: ಇಸ್ಲಾಹುದ್ದೀನ್**:—ಕುದ್ರೋಳಿ ನಡುಪಳ್ಳಿಯ ಮಾಳಿಗೆಯಲ್ಲಿ ಇದು ನಡಿಯುತ್ತಿದೆ. ಸುಮಾರು 15 ವಿದ್ಯಾರ್ಥಿಗಳಿದ್ದಾರೆ. ಅವರಲ್ಲಿ ಹೆಚ್ಚಿನವರು ವಯಸ್ಕರು.

9. **ಮದ್ರಸತು ಮುಹ್ಯಿದ್ದೀನ್ ಮಸೀದಿ**:—ಕುದ್ರೋಳಿಯ ಮುಹ್ಯುದ್ದೀನ್ ಮಸೀದಿಯಲ್ಲಿ ನಡಿಯುತ್ತಿರುವ ಈ ಮದ್ರಸದಲ್ಲಿ ಸುಮಾರು 45 ಮಕ್ಕಳು ಧಾರ್ಮಿಕ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

10. **ಮದ್ರಸ: ರೌಳತುಲ್ ಉಲೂಮ್**:—ಕುದ್ರೋಳಿಯ ನಡುಪಳ್ಳಿಯ ಎದುರ್ಗಡೆಯಲ್ಲಿ ದಿವಂಗತ ಜನಾಬ್ ಕುದ್ರೋಳಿ ಹುಸೈನಬ್ಬಾಕರ

www.bearyinfo.com

ವರಿಂದ ಸ್ಥಾಪಿಸಲ್ಪಟ್ಟ ಈ ಮದ್ರಸದಲ್ಲಿ ಈಗ 50 ಮಕ್ಕಳು ಧಾರ್ಮಿಕ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

11. **ಮದ್ರಸ: ಬೂಬುಕಾನ್ ಮಸೀದಿ:**—1955ರಲ್ಲಿ ಸ್ಥಾಪನೆಗೊಂಡ ಈ ಮದ್ರಸವು ಬೂಬುಕರ ಮಸೀದಿಯ ವಠಾರದಲ್ಲಿ ನಡಿಯುತ್ತಿದೆ. ಇಲ್ಲಿ ಸುಮಾರು 25 ಮಕ್ಕಳು ದೀನೀ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

12. **ಮದ್ರಸತುಲ್ ಮುಸ್ಲಿಮೀನ್:**—ಕುದ್ರೋಳಿಯ ಜಮಾತುಲ್ ಮುಸ್ಲಿಮೀನ್ ಮಸೀದಿಯ ವಠಾರದಲ್ಲಿ ನಡಿಯುತ್ತಿರುವ ಈ ಮದ್ರಸದಲ್ಲಿ 60 ಮಕ್ಕಳು ಕಲಿಯುತ್ತಿದ್ದಾರೆ.

13. **ಮದ್ರಸ ದಅವತುಲ್ ಇಸ್ಲಾಮ್, ಕಂದಕ:**—1938ರಲ್ಲಿ ಸ್ಥಾಪನೆಗೊಂಡ ಈ ಮದ್ರಸವು ಹಲವಾರು ಬದಲಾವಣೆಗಳನ್ನು ಹೊಂದುತ್ತಾ ಈಗ ಆಡಳ್ತಿದಾರರ ಅಶ್ರದ್ಧೆಯಿಂದಾಗಿ ಮುಚ್ಚುವ ಪರಿಸ್ಥಿತಿಗೆ ಬಂದಿದೆ.

**ವಿಮರ್ಶೆ:**— ನಮ್ಮ ನಗರದ 13 ಮದ್ರಸಗಳಲ್ಲಿ ಸಾಧಾರಣ 800 ವಿದ್ಯಾರ್ಥಿಗಳು ಮತವಿದ್ಯಾಭ್ಯಾಸವನ್ನು ಪಡೆಯುತ್ತಿದ್ದಾರೆ. ಆದರೆ ಈ ಮದ್ರಸಗಳಲ್ಲಿ ಈಗಿನ ಕಾಲಕ್ಕೊಪ್ಪುವಂತೆ ಕ್ಲಾಸ್‌ಸಿಸ್ಟಮ್ ಮತ್ತು ಬರವಣಿಗೆಯೊಂದಿಗೆ ಭಾಷಾರೂಪವಾಗಿಯೂ ಅರಬಿ ಉರ್ದು ಕಲಿಸುವ ಏರ್ಪಾಡು ಮಾಡಿದಲ್ಲಿ ನಮ್ಮ ಮಕ್ಕಳಿಗೆ ಯಥಾರ್ಥ ಧಾರ್ಮಿಕ ವಿದ್ಯೆಯು ಸಿಕ್ಕಿ ಸಮಾಜವು ಅದರಿಂದ ಫಲ ಹೊಂದಬಹುದು. ಇಲ್ಲವಾದರೆ ಈ ಮದ್ರಸದಲ್ಲಿ ಕಲಿಸುವ ಕೆಲವು ಮುಕ್ರಿ ಮ್ಯೊಲಾರರಿಗೆ ಜೀವನೋಪಾಯದ ಒಂದು ದಾರಿಯಾಗುವುದೇ ಹೊರತು ನಮ್ಮ ಮಕ್ಕಳಿಗೆ ಏನೊಂದು ಲಾಭವಾಗಲಾರದು.

ನಮ್ಮ ಸಮಾಜದ ವಿದ್ಯಾವಂತ ತರುಣರು ಈಗೀಗ ಈ ವಸ್ತುಸ್ಥಿತಿಯನ್ನು ಮನಗಂಡು ಇದನ್ನು ಸುಧಾರಿಸಲು ಶ್ರಮಿಸುತ್ತಿರುವರು. ಅಲ್ಲಾಹನು ಅವರ ಪರಿಶ್ರಮವನ್ನು ಪೂರ್ತಿಗೊಳಿಸಿ ಸಮಾಜದ ಮಕ್ಕಳಿಗೆ ಯಥಾರ್ಥ ದೀನೀ ವಿದ್ಯಾಭ್ಯಾಸವು ಸಿಗುವಂತೆ ತೌಫೀಖ್ ಒದಗಿಸಲೆಂದು ಪ್ರಾರ್ಥಿಸುತ್ತೇವೆ.

www.bearyinfo.com

# ಮಾಯವಾದ ನೋಟಗಳು


## ಮೊಹರಮ್ ಆಚಾರ

ಮೊಹರಂ ತಿಂಗಳ ಮೊದಲಿನ ಹತ್ತು ದಿವಸಗಳಲ್ಲಿ ಮಂಗಳೂರಿನಲ್ಲಿ ನಡಿಯುತ್ತಿದ್ದ ಇಸ್ಲಾಮ್‌ನಿಷಿದ್ಧ ಅನಾಚಾರಗಳು ಮಾಯವಾಗಿ ಈಗ ಅವುಗಳ ನೆನಪು ಮಾತ್ರ ಉಳಿದಿದೆ. ಈ ಅನಾಚಾರಗಳಿಗೆ ಮೂಲ ಆಧಾರ 'ಪಂಜ'ಗಳ ಪವಾಡದ ರಹಸ್ಯವನ್ನು ಖಾನ್‌ಸಾಹೇಬ್ ಮಾಹಿನ್ ಜಮ್ಮಾಡರು ಪ್ರತ್ಯಕ್ಷವಾಗಿ ಬಯಲಿಗೆಳೆದು ತುಂಬಾ ಉಪಕಾರ ಮಾಡಿದರು. ಅನಂತರ ಈ ಅನಿಸ್ಲಾಮಿಕ ಆಚಾರಗಳನ್ನು ಶಾಶ್ವತವಾಗಿ ನಿರ್ಮೂಲಗೊಳಿಸಿ, ಮಂಗಳೂರಿನ ಮುಸ್ಲಿಮ್ ವಾತಾವರಣವನ್ನು ನಿರ್ಮಲಗೊಳಿಸಿದ ಭಾರವು ಅಲ್‌ಹಾಜ್ ಮೌಲಾನಾ ಹಾಫಿಜ್ ಸಯ್ಯಿದ್ ಮುಹಮ್ಮದ್ ಯೂಸುಫ್ ಸಾಹೇಬ್ ಅವರದು. ತಮ್ಮ ಆಕರ್ಷಣೀಯ ಮತಪ್ರಬೋಧನೆಗಳಿಂದ ಅವರು ಇದನ್ನು ಆಚರಿಸುತ್ತಿದ್ದ ಜನಕೂಟದ ವಿಚಾರಕೋನದಲ್ಲಿ ಬದಲಾವಣೆಯನ್ನುಂಟುಮಾಡುವುದರಲ್ಲಿ ಜಯಶೀಲರಾದರು.

ಕೆಳಗಿನ ಲೇಖನವು ನಮ್ಮ ಸಮಾಜದ ಹಿರಿಯ ಸಾಹಿತಿಗಳೊಬ್ಬರ ಕೃತಿಯು. "ಉದಯಚಂದ್ರ" ಪತ್ರಿಕೆಯಿಂದ ಇದನ್ನು ಆಯ್ದು ಇಲ್ಲಿ ಪ್ರಕಟಿಸಿರುತ್ತೇವೆ. ಸಂ.]

---

## ಮೊಹರಂ ಆಚಾರದ ಕೇಂದ್ರವಾಗಿದ್ದ ಬೀಬಿ ಅಲಾಬಿ ಆಶೂರಖಾನಾ



ಮೊಹರಂ ಆಚಾರ ನಿಂತುಹೋದ ಬಳಿಕ ಅನಧಿಕೃತ ಭಿಕ್ಷುಕ ಗೃಹವಾಗಿ ಪರಿಣಮಿಸಿರುವ ಈ ಕಟ್ಟಡವು ಮಂಗಳೂರು ಮುಸ್ಲಿಮ್ ಸಮಾಜದ ದಯನೀಯಾವಸ್ಥೆಯ ಪ್ರತೀಕದಂತಿದೆ. ಸಾಧಾರಣ ಒಂದು ಎಕ್ರೆ ಯಿರುವ ಈ ಸ್ಥಳವನ್ನು ಖರೀದಿಸಿ ಸಮಾಜದ ಬಡ ಮಕ್ಕಳ ಉಪಯೋಗಕ್ಕಾಗಿ ಇದರಲ್ಲಿ ಒಂದು ಯತೀಂಖಾನ ಕಟ್ಟಿಸಿಬಿಡಲು ನಮ ಸಮಾಜದ ಧರ್ಮಾಭಿಮಾನಿಗಳಿಗೆ ಮನಸ್ಸು ಬರುವುದೇ?



www.bearyinfo.com

ಮೊಹರಂ ಮಾಸವು ಹಿಜರಿ ಕಾಲಗಣನೆಯ ಪ್ರಥಮ ಮಾಸವೆಂದು ಪರಿಗಣಿಸಲ್ಪಡುತ್ತಿದೆ. ಇಸ್ಲಾಮೀ ಚರಿತ್ರೆಯಲ್ಲಿ ಇದಕ್ಕೆ ಒಂದು ತರದ ವಿಶೇಷತೆ ಇದೆ. ಅದನ್ನು ವಿಶದವಾಗಿ ಬರಿಯುವುದು ಈ ಲೇಖನದ ಉದ್ದೇಶವಲ್ಲ. ಪರಂತು ಹಿಂದೀ ಮುಸಲ್ಮಾನರು ಈ ಮಾಸವನ್ನು ಹಬ್ಬದ ರೂಪದಲ್ಲಿ ಆಚರಿಸುವ ವಾಡಿಕೆಯಾಗಿದೆ. ಅದರಲ್ಲೂ ಪ್ರಥಮ ಹತ್ತು ದಿನಗಳನ್ನು ಬಹಳ ವಿಜೃಂಭಣೆಯಿಂದ ಆಚರಿಸುವುದುಂಟು. ಈ ಉತ್ಸವದಲ್ಲಿ ಜಾತಿಭೇದವಿಲ್ಲದೆ ಜನರೆಲ್ಲರೂ ಸಂತೋಷದಿಂದ ಭಾಗವಹಿಸುವರು. ಆಪರಿ ಕೆಲವು ಕಡೆಗಳಲ್ಲಿ ಮುಸ್ಲಿಮರ ಇತ್ತಂಡಗಳೊಳಗೆ ತಿಕ್ಕಾಟವಾಗುವುದು ರೂಢಿಯಲ್ಲಿದೆ. ಲಕ್ನೋದಲ್ಲಿ ವರ್ಷಂಪ್ರತೀ ನಡಿಯುತ್ತಿದ್ದ ಶೀಯಾ—ಸುನ್ನಿ ಜಗಳವು ಮೊಹರಂ ಕಾರಣದಿಂದಲೇ.

ಸರಿ! ಪರವೂರುಗಳ ಮಾತಂತಿರಲಿ! ನಮ್ಮೂರಲ್ಲಿ ನಡಿಯುತ್ತಿದ್ದ ಈ ಉತ್ಸವದಲ್ಲಿ ತರತರದ ಆಹ್ಲಾದಕರವಾದ ಹಾಗು ಅಶ್ಲೀಲ ನೋಟಗಳನ್ನು ಕಾಣುತ್ತಿದ್ದೆವು. ಆದರೆ ಇಂದವು ಮಾಯವಾಗಿವೆ. ಹಿರಿಯರ ಕಾಲದಿಂದಲೂ ನಡೆದು ಬರುತ್ತಿದ್ದ ಈ ಉತ್ಸವವನ್ನು ಈಗ ಗಮನಕ್ಕೆ ತರುವವರು ವಿರಳ; ಪಾಪ; ಹಿರಿಯರ ಆತ್ಮಕ್ಕೆ ಶಾಂತಿ ದೊರೆಯದಂತೆ ಮಾಡಿಬಿಟ್ಟರು. ಆದರೂ ಅಲ್ಲಲ್ಲಿ ಒಬ್ಬಿಬ್ಬರು ಹಣ್ಣಾದ ಮುದುಕರು ಹಿರಿಯರ ಮೇಲಣ ನಿಷ್ಠೆಯಿಂದ, ಅವರ ಆತ್ಮಕ್ಕೆ ಶಾಂತಿ ದೊರೆಯಲೆಂದೊ ಅಲ್ಪಸ್ವಲ್ಪ ತಿಲೋದಕವನ್ನು ಅರ್ಪಿಸುತ್ತಿರುವರು. ಅವರ ತರುವಾಯ ಹಿರಿಯರ ಆತ್ಮಕ್ಕೆ ದೇವರೇ ಗತಿ!

ಇನ್ನು ಮೊಹರಂ ಉತ್ಸವದ ಕುರಿತು ಒಂದೆರಡು ಮಾತು ಬರೆಯಲು ಇಚ್ಛಿಸುವೆ. ಪ್ರಿಯ ವಾಚಕರಿಗೆ ಬೇಸರವುಂಟಾಗದೆಂದು ನೆನಸುತ್ತೇನೆ.

ಬಕ್ರೀದ್ ಅಮವಾಸ್ಯೆ ದಿನದ ಮಾರಣೆಯ ಸಂಜೆಯಲ್ಲಿ ನಮ್ಮವರ ಕಣ್ಣುಗಳು ಬಾಲಚಂದ್ರನನ್ನು ಹುಡುಕುತ್ತಾ ಪಶ್ಚಿಮ ಆಕಾಶದ ಕಡೆಗೆ ತಿರುಗುತ್ತಿತ್ತು. ಅದರಲ್ಲೂ ಮಕ್ಕಳು ನಾಲ್ಕು ಕಣ್ಣು ಮಾಡಿಕೊಂಡು ಹುಡುಕುತ್ತಿದ್ದರು. ಸುದೈವವಶಾತ್ ಅಂದು ಚಂದ್ರ ಕಾಣಿಸಿಕೊಂಡರೆ ಅವರ ಸಂತೋಷಕ್ಕೆ ಪಾರವೇ ಇರುತ್ತಿದ್ದಿಲ್ಲ. ಗುಂಪುಕಟ್ಟಿ ಹಗ್ಗ ಹಿಡಿದುಕೊಂಡು ಬೀದಿಯ ಆ ತುದಿಯಿಂದ ಈ ತುದಿಯ ವರೆಗೆ ಗುಲ್ಲೆಬ್ಬಿಸುತ್ತಾ ಓಡಾಡುತ್ತಿದ್ದರು. ಇದಕ್ಕೆ 'ಗುದ್ದಲಿ' ಹಾಕುವುದೆಂದು ಹಿರಿಯರು ಕಿರಿಯರಿಗೆ ಹೇಳಿಕೊಟ್ಟಿದ್ದರು. ಅಂತು, ಅನಂತರದ ದಶ ದಿನಗಳು ವೈಭವದ ದಿನಗಳು. ಒಂದೆಡೆ, ಅಂದರೆ ಆಶೂರಖಾನೆ (ಬೀಬಿಅಲಾಬಿ) ದೊಡ್ಡ ಮೈದಾನ, ಬೋಳಾರ, ಕುದ್ರೋಳಿ ಇತ್ಯಾದಿ ಕಡೆಗಳಲ್ಲಿ ಪಂಜ (ಅಲಾಯಿ ದೇವರು)ಗಳನ್ನು ಪ್ರತಿಷ್ಟಿಸಿ, ಕ್ರಮಪ್ರಕಾರ ಹರಕೆ ಪಡೆಯುತ್ತಿದ್ದ ನೋಟವು ಕಣ್ಣಿಗೆ ಬೀಳುತ್ತಿದ್ದರೆ, ಇನ್ನೊಂದೆಡೆ ತಾಬೂತುಗಳನ್ನು ಜೋಡಿಸಿ ದಕ್ಷಿಣೆ ಪಡೆಯುತ್ತಿದ್ದುದನ್ನೂ ಕಾಣುತ್ತಿದ್ದೆವು. ಇಡೀ ನಗರದಲ್ಲಿ ತರತರದ ವೇಷಧಾರಿಗಳು ಹುಲಿ, ಕರಡಿ, ಗುಬ್ಬಿ, ಗಂಧರ್ವ,

www.bearyinfo.com

ಕೊರಗರು, ಕೂಲಿಕಾರ, ರೊಟ್ಟಿ ಮಾರುವ, ಮೀನು ಹಿಡಿಯುವ, ಕಾಫಿ ಕೇರುವ, ಹಾಲು ಮಾರುವ ವೇಷಗಳು; ಒಂದು ಕಡೆ ಕೃಷ್ಣಾರ್ಜುನರು, ಇನ್ನೊಂದೆಡೆ ರಾಮಸೀತೆಯರು, ಮಗುದೊಂದೆಡೆ ನಾರದ ಹನುಮಂತರ ಗೋಚರವಾದರೆ, ಬೇರೊಂದೆಡೆ ಅರಬಿ, ಕಂದಾರಿಗಳ ವೇಷಧಾರಿಗಳು, ಅಂತು ವಿಧವಿಧದ ವೇಷಗಳು. ಯಾರಿಗೆ ಯಾವ ವೇಷ ಪಸಂದಾಗುತ್ತಿತ್ತೋ ಅದನ್ನು ಕಟ್ಟಿಕೊಂಡು ಕುಣಿಯತೊಡಗುತ್ತಿದ್ದರು. ಅವರೊಂದಿಗೆ ವೇಷರಹಿತರಾದ ಪರಿಚಾರಕರು ಅತ್ತಿತ್ತ ಓಡಾಡುತ್ತಿದ್ದುದನ್ನೂ ಕಾಣುತ್ತಿದ್ದೆವು.

ಸಂಕ್ಷಿಪ್ತ ಬರೆಯುವುದಾದರೆ ಹತ್ತನೇ ದಿವಸ ಬಹಳ ಕೋಲಾಹಲದ ದಿನ. ಅಂದು ರಾತ್ರಿ (ಚಂದ್ರಮಾಸ ಗಣನೆಯಂತೆ ಮೊದಲು ರಾತ್ರಿ ಅನಂತರ ಹಗಲು) ನಗರದಲ್ಲಿ ನಿದ್ದೆ ಕಡಿಮೆಯೆಂದೇ ಹೇಳಬಹುದು. ಹಲವರಿಗೆ ನಮ್ಮವರ ಮದುವೆ ಸಮಾರಂಭದಲ್ಲಿ ಭಾಗವಹಿಸಿದವರಂತೆ ಬೆಳಗ್ಗಿನ ವರೆಗೆ ನಿದ್ರೆ ಬಳಿ ಸೇರುತ್ತಿದ್ದಿಲ್ಲ. ರಾತ್ರಿಯಲ್ಲಿ ಕೆಲವು ಪ್ರತ್ಯೇಕ ಕರ್ಮಗಳು ನೆರವೇರುವ ವಾಡಿಕೆ. 'ಯಾವುಸೇನ' ಪಂಜಗಳ ಓಡಾಟ, ವೇಷಧಾರಿಗಳ ಅಂತ್ಯದ ಅಗ್ನಿ ಪ್ರದಕ್ಷಿಣೆ ಮತ್ತು ಹೋಮವು ಮೊದಲನೆಯ ದಿನದಿಂದ ಪ್ರಾರಂಭವಾಗಿ ಹತ್ತು ದಿನಗಳ ಪರಿಯಂತರ ಎಡೆಬಿಡದೆ ನಡಿಯುತ್ತಿತ್ತು. ದಶಮಿಯ ಹೋಮ ಕುಂಡವು 'ದಕ್ಷಯಜ್ಞ'ವನ್ನೂ ಮೀರಿಸುವಂತಿತ್ತು. ಇಲ್ಲವೇ ಬೆಬಿಲೋನಿನ (ಬಾಬಲ್)ದ ನಮ್ರೂದನ ಪ್ರಭುತ್ವದಲ್ಲಿ ಇಬ್ರಾಹೀಮ ಪ್ರವಾದಿ (ಅ.ಸ.)ಯನ್ನು ಆಹುತಿ ಕೊಡಬೇಕೆಂದು ತಯಾರಿಸಿದ ಅಗ್ನಿಕುಂಡವನ್ನೂ ನಾಚಿಸುವಂತಿತ್ತು. ಒಟ್ಟಾರೆ ಅಂದಿನ ರಾತ್ರಿ ಅಗ್ನಿಮಹಾರಾಯನಿಗೆ ಭಾರೀ ಔತಣ! ಕಟ್ಟಿಗೆ ಸೂಡಿ ಗಳು, ಮರದ ಕೊಂಬೆಗಳು, ತೋಡಿಗೆ ಹಾಸಿದ ಮರದ ಹಲಗೆ (ಪಾಲ)ಗಳು, ಬಾವಿಯ ನೀರು ಸೇದಲು ದಂಡೆಗೆ ಹಾಕಿದ್ದ ಪರರ ಬಡ-ಮರದ ತುಂಡುಗಳು ಗೇಟಿನ ಬಾಗಿಲುಗಳು, ಬೇಲಿಯ ಕುಂಟಗಳು, ಮುರುಕು ಚಪ್ಪರದ ಪಕ್ಕಾಸು ತುಂಡುಗಳು, ಕೂತುಕೊಳ್ಳಲು ತಂದಿಟ್ಟ ಸಣ್ಣ ಬೆಂಚುಗಳು, ಪ್ರೇಕ್ಷಕರ ಟೊಪ್ಪಿ ಗಳು ಇತ್ಯಾದಿ ಅಗ್ನಿ ಮಹಾಶಯನಿಗೆ ಕಾಣಿಕೆಗಳು. ಅಹಹಾ! ಎಷ್ಟು ರಂಜ ನೆಯ ನೋಟವಾಗಿತ್ತದು! ಇನ್ನೆಂದು ನೋಡಸಿಗುತ್ತದೋ ಸೈತಾನನೇ ಬಲ್ಲ. ಆ ಮೇಲೆ ಬೆಳಗ್ಗಿನ ಜಾವದಲ್ಲಿ ದೊಡ್ಡ ಮೈದಾನದಲ್ಲಿ ನಡೆಯುತ್ತಿದ್ದ ಪಂಜಗಳ ಪರಸ್ಪರ ಭೇಟಿಯು (ಮುಲಾಖಾ) "ಸಮ್ಮಿಟ್" ಭೇಟಿಗೂ ಮಿಗಿಲೆನ್ನಬಹುದು. ಈ ಭೇಟಿಯಲ್ಲಿ ಪಂಜಗಳು ಅನ್ಯೋನ್ಯ ಅಪ್ಪಿಕೊಳ್ಳದಂತೆ ಬಹಳ ಜಾಗ್ರತೆ ವಹಿಸುತ್ತಿದ್ದರು. ಎಂದಾದರೂ ಅವು ಪ್ರೇಮಾಲಿಂಗನ ಗೈದರೆ, ಸರ್ವನಾಶವಾಗುತ್ತ ದೆಂದು ಜನರ ಮೂಢನಂಬಿಕೆಯಾಗಿತ್ತು. ಇದೆಲ್ಲಾ ಸಾಂಗವಾಗಿ ನೆರವೇರಿದ ಬಳಿಕ ಬೆಳ್ಳಗೆ ಬೆಳಗಾಗುತ್ತಿತ್ತು. ಮುಂದೆ ಹಗಲಿನ ಕಾರ್ಯಕಲಾಪಗಳು! ಹಗಲು ಪಂಜಗಳು ಸ್ನಾನಕ್ಕೆ ಹೋಗುವ ದಿನ. ಪಂಜ, ತಾಬೂತ್ ಮತ್ತು

www.bearyinfo.com

ಇತರ ಸಕಲ ವೇಷಗಳನ್ನೊಡಗೊಂಡು ಪ್ರಚಂಡ ಮೆರವಣಿಗೆಯೊಂದು ಸೆಂಟ್ರಲ್ ಮೈದಾನದಿಂದ ಹೊರಟು ಕರ್ಬಲಾ ಮೈದಾನನ್ನು ಸೇರಿ ಅಂತ್ಯಗೊಳ್ಳುತ್ತಿತ್ತು. ಮೆರವಣಿಗೆ ಹೊರಡುವ ಮುಂಚಿತವಾಗಿ ಉಸೇನ ಪಂಜಗಳೆರಡು ಮೈದಾನ ದಿಂದ ಹೊರಟು ರಸ್ತೆಯುದ್ದಕ್ಕೂ ಕೋಲಾಹಲದೊಡನೆ ಮುಂದೆ ಓಡುತ್ತಾ ಹಿಂದೆ ತಿರುಗುತ್ತಾ ವೀರತೆಯಿಂದ ಗುರಿಮುಟ್ಟುತ್ತಿದ್ದ ಅಂದಿನ 'ನೋಟವನ್ನು ಸ್ಮರಿಸುವಾಗ ಮೈಜುಮ್ಮೆನ್ನಿಸುತ್ತಿದೆ. ಪ್ರೇಕ್ಷಕರು ಭಯಭೀತರಾಗಿ ಅವು ಬರು ತ್ತಿದ್ದುದನ್ನು ಕತ್ತೆತ್ತಿ ನಿರೀಕ್ಷಿಸುತಿದ್ದರು. ಕಂಡಕೂಡ್ಲೆ ಜನರು ಚಲ್ಲಾಪಿಲ್ಲಿ ಯಾಗಿ ಚೆದರಿ ಹೋಗಿ ತಂತಮ್ಮ ಸ್ಥಾನಗಳನ್ನು ಬಲಪಡಿಸುತ್ತಿದ್ದರು. ಅವು ಗಳಲ್ಲಿ ಗಂಧದ ಪಂಜವು ಬಹಳ ಜೋರಿನದಂತೆ. ಒಂದು ಬೆರಳಿನದು ಸಾಧು ಸ್ವಭಾವದ್ದಂತೆ; ಆದರೆ ಕೋಪಬಂತೆಂದರೆ ಇದಕ್ಕೆ ಸಾಟಿಯಿಲ್ಲವೆಂದೇ ಹೇಳುತ್ತಿ ದ್ದರು. ಅವುಗಳ ಕೋಪವನ್ನು ಶಾಂತಗೊಳಿಸಲು ದಾರಿಯುದ್ದಕ್ಕೂ ಮಾರು ತ್ತಿದ್ದ 'ಉದಾಪೀರ್' (ಅರಸಿನದ ಹುಡಿ?) ಜನರು ವಿಕ್ರಯಿಸಿಕೊಂಡು ಅವುಗಳ ಮೇಲೆ ಚೆಲ್ಲುತ್ತಿದ್ದರು. ಹಲವು ಹಣವಂತರು 'ಸಬೀಲ್' ಹಂಚುತ್ತಿದ್ದರು. ಅಂದರೆ, ನಿಂಬೆರಸ ಮಿಶ್ರಿತ ಸಕ್ಕರೆ ನೀರನ್ನು ಗುಡಾಣಗಳಲ್ಲಿ ತುಂಬಿಟ್ಟು ಜನರಿಗೆ ಧರ್ಮಾರ್ಥ ಪಾನಮಾಡಿಸುತ್ತಿದ್ದರು. ಅಂತು, ಹತ್ತನೇ ದಿನ ಅಂತ್ಯದ ಸಂಭ್ರಮ

---

ಮೊಹರಮಿನ ಸಮಯ ರಂಜಿಸುತ್ತಿದ್ದ
ಮಂಗಳೂರಿನ 'ಕರ್ಬಲಾ' ನಟನೆರಂಗ



ಮೊಹರಂ ಕಾಲದ 'ಪಂಜ'ಗಳೂ ವೇಷಗಳೂ ಎಲ್ಲವೂ ಇಲ್ಲಿಗೆ ಬಂದು ಮುಕ್ತಾಯ ಗೊಳ್ಳುತ್ತಿದ್ದುವು. ಸುಮಾರು 2½ ಎಕ್ರೆಯಿರುವ ಈ ವಿಶಾಲ ಮೈದಾನು ಕುದ್ರೋಳಿಯ ನಡುಪಳ್ಳಿಯ ಅಡಳಿತಲ್ಲಿದೆ. ಖಾಲಿ ಬಿದ್ದಿರುವ ಈ ಪ್ರದೇಶವು ಮಂಗಳೂರ ಮುಸ್ಲಿಮ್ ಸಮಾಜದ ಉಪಯೋಗಕ್ಕಾಗಿ ಉಪಯೋಗಿಸಲ್ಪಡುವ ಸುಯೋಗವು ಎಂದು ದೊರಕು ವುದೋ ದೇವನೇ ಬಲ್ಲ.

www.bearyinfo.com

ನಡೆದು ಉತ್ಸವ ಸಮಾಪ್ತಿಗೊಳ್ಳುವುದು. ಮಾರಣೆಯ ದಿನ ನಗರವು ಶವ ಸಂಸ್ಕಾರ ಮುಗಿಸಿದ ಮನೆಯಂತೆ ಭಾಸವಾಗುತ್ತಿತ್ತು.

ಅಧಿಕ ಪ್ರಸಂಗವಾಗಬಹುದೆಂದು ಮೊಹರಂ ಆಚಾರಗಳಲ್ಲಿ ಕೆಲವಂಶಗಳನ್ನು ಮಾತ್ರ ವಿವರಿಸಿದ್ದೇನೆ.

ಈ ಆಚಾರಗಳನ್ನೂ, ಇನ್ನಿತರ ಅನಿಸ್ಲಾಮಿಕ ಆಚಾರಗಳನ್ನೂ ಇಮಾಮ್ ಮಜ್ಲೂಮ್ ಹಸನ್ ಮತ್ತು ಹುಸೈನ್ (ರ. ಅ.)ರವರ ನೆನಪಿಗಾಗಿ ಆಚರಿಸುತ್ತಿದ್ದುದೆಂದು ಅಂದುಕೊಳ್ಳುತ್ತಿದ್ದರು. ಎಂತಹ ಮೂಢ ವಿಶ್ವಾಸವಾಗಿತ್ತದು! ಎಂತಹ ಅನೀತಿ ಅನಾಚಾರವಾಗಿತ್ತದು! ಅವೆಲ್ಲವೂ ನಿಷೇಧವೆಂಬುದನ್ನು ಅಂದಿನವರು ಸಂಪೂರ್ಣ ಮರೆತಂತಿತ್ತು. ಈಗ ಮಾಯವಾಗುತ್ತಾ ಬರುತ್ತಿದೆ! ಮುಸಲ್ಮಾನರು ಈಗ ತಿಳಿಯಾಗುತ್ತಾ ಬರುತ್ತಿದ್ದಾರೆ. ಅನಿಸ್ಲಾಮಿಕ ಆಚಾರ, ವಿಚಾರಗಳು ಈಗ ನೋಟಕ್ಕೆ ಕೆಡುಕಾಗಿ ಕಂಡುಬರುತ್ತಿರುವುದು ಶುಭ ಚಿಹ್ನೆ. ನಮ್ಮ ಸಮುದಾಯವು ಎಲ್ಲಾ ತರದ ಇಸ್ಲಾಮ್ ವಿರುದ್ಧ, ದುಷ್ಟ, ಅಶ್ಲೀಲ ವರ್ತನೆ, ಆಚಾರಗಳಿಂದ ಪರಿಶುದ್ಧವಾಗಿ, ಪವಿತ್ರ, ಸಭ್ಯ, ಸುಶೀಲ, ಸುಸಂಸ್ಕೃತ ಜಮಾಅತ್ತಾಗಿ ಜಗತ್ತಿನಲ್ಲಿ ತಲೆಯೆತ್ತಿ ನಿಲ್ಲುವಂತೆ ಮಾಡಬೇಕಾದುದು ಪ್ರತೀ ಮುಸ್ಲಿಮನ ಮೊದಲ ಕರ್ತವ್ಯವಾಗಿರುತ್ತದೆ. ದೇವರು ಈ ಪವಿತ್ರ ಕಾರ್ಯದ ಹೋರಾಟದಲ್ಲಿ ನಮಗೆ ಆತ್ಮಶುದ್ಧಿಯನ್ನೂ ನೈತಿಕ ಬಲವನ್ನೂ ದಯಪಾಲಿಸಲಿ.

---

ವೈಕಾಲ ಪ್ರಕಾಶನದ ಮುಂದಿನ ಪ್ರಕಟನೆ:

## ತುಳುನಾಡಿನ ಮುಸ್ಲಿಮರು

(ಸಚಿತ್ರ)

ದಕ್ಷಿಣಕನ್ನಡ ಜಿಲ್ಲೆಯ ಮುಸಲ್ಮಾನ ವಿವಿಧ ಸಮಾಜಗಳ ಚರಿತ್ರೆ, ಹಿಂದಿನ ಮತ್ತು ಇಂದಿನ ಸ್ಥಿತಿಗತಿಗಳು, ಧಾರ್ಮಿಕ ಸಂಘ-ಸಂಸ್ಥೆಗಳು ವಿದ್ಯಾ ಸಂಸ್ಥೆಗಳು, ವ್ಯಾಪಾರ-ವಾಣಿಜ್ಯ, ಕೆಲವು ಪ್ರಮುಖರ ವ್ಯಕ್ತಿಪರಿಚಯ ಇತ್ಯಾದಿಗಳನ್ನೊಳಗೊಂಡು ಪ್ರಕಟನೆ ಹೊಂದಲಿದೆ. ಜಿಲ್ಲೆಯ ಮುಸಲ್ಮಾನರ ಸಂಪೂರ್ಣ ಸಹಕಾರವನ್ನು ಆಶಿಸಲಾಗಿದೆ.

—ಸಂಪಾದಕ.

www.bearyinfo.com

# ಮರೆಯಲಾಗದ ಘಟನೆಗಳು

[ನಮ್ಮ ಸಮಾಜದ ಚರಿತ್ರೆಯಲ್ಲಿ ಮರೆಯಲಾಗದ ಅನೇಕ ಘಟನೆಗಳು ಸಂಭವಿಸಿರುವುವು. ಅವುಗಳೆಲ್ಲವನ್ನೂ ಕೂಲಂಕುಷವಾಗಿ ವಿವರಿಸಲು ಅವಕಾಶ ವಿಲ್ಲ. ಕೇವಲ ಒಂದು ಪ್ರಧಾನ ಘಟನೆಯನ್ನು ಮಾತ್ರ ಇಲ್ಲಿ ಚಿತ್ರೀಕರಿಸಿರುತ್ತೇವೆ. ಇದನ್ನು ಸುಪ್ರಸಿದ್ಧ ಸಾಹಿತಿ ಟಿ. ಉಬೈದ್ ಸಾಹೇಬರ ಲೇಖನವೊಂದರಿಂದ ಭಾಷಾಂತರಿಸಿದುದಾಗಿದೆ. ಸಂ.]

## ಪ್ರಾರ್ಥನೆ ಮೂಲಕ ಮಳೆ

1898ರ ಸುದ್ದಿಯಿದು. ಜೂನ್ ತಿಂಗಳು ದಾಟಿಹೋಗಿದ್ದರೂ ಮಂಗಳೂರಲ್ಲಿ ವಾಡಿಕೆಯಂತೆ ಮಳೆಗರೆಯದೆ ಜನರು ತುಂಬಾ ಕಷ್ಟಕ್ಕೊಳಗಾಗಿದ್ದರು. ಇಡೀ ನಗರವನ್ನೇ ಬಾಧಿಸಿದ್ದ ಈ ಶೋಚನೀಯ ಅವಸ್ಥೆಯು ಜಾತಿಮತಬೇಧವಿಲ್ಲದೆ ಎಲ್ಲರನ್ನೂ ಚಿಂತಾಕುಲರನ್ನಾಗಿ ಮಾಡಿಬಿಟ್ಟಿತ್ತು. ಹಿಂದುಗಳು ದೇವಾಲಯಗಳಲ್ಲಿಯೂ ಕ್ರೈಸ್ತರು ಚರ್ಚ್‌ಗಳಲ್ಲಿಯೂ ಪ್ರಾರ್ಥನೆಗಳನ್ನೂ ಹರಕೆಗಳನ್ನೂ ನಡಿಸುತ್ತಿದ್ದರು. ಆದರೆ ದಿನಗಳು ಉರುಳಿದಂತೆ ಮಳೆಗರೆಯುವ ಕುರುಹುಗಳೇನೂ ಕಾಣಿಸುತ್ತಿರಲಿಲ್ಲ. ಮನುಷ್ಯರೂ ಮೃಗಗಳೂ ಒಂದೇ ತೆರನಾಗಿ ದುಃಖ ಅನುಭವಿಸುವ ಸನ್ನಿವೇಶವದು. ಆಗ ಮಂಗಳೂರಿನ ಮುಸಲ್ಮಾನರು ಕಾಸರಗೋಡಿಗೆ ಹೋಗಿ ತಮ್ಮ ಖಾಜಿ ಅಲ್ಲಾಮಃ ಅಬ್ದುಲ್ಲಹಾಜಿ (ಔಲಾಜಿ) ಯವರನ್ನು ಸಮೀಪಿಸಿ, ಸಂಗತಿಗಳನ್ನೆಲ್ಲಾ ಅವರಿಗೆ ಹೇಳಿ ತಿಳಿಸಿದರು. ಕೂಡಲೇ ಅವರು ಮಂಗಳೂರಿಗೆ ಚಿತ್ತೈಸಿ ಮುಸ್ಲಿಮರು ಮೂರು ದಿವ್ಸಗಳ ತನಕ ಉಪವಾಸ ಕೈಕೊಳ್ಳಬೇಕೆಂದು ಆಜ್ಞಾಪಿಸಿದರು. ಮುಸ್ಲಿಮರು ಕೌತುಕದೊಂದಿಗೆ ಸದ್ರಿ ಆಜ್ಞೆಯನ್ನು ಪಾಲಿಸಿದರು. ಮೂರನೇ ದಿವಸ ಅಲ್ಲಾಮ ಅಬ್ದುಲ್ಲ ಹಾಜಿಯವರೂ ಆಬಾಲವೃದ್ಧರೆಂಬ ವ್ಯತ್ಯಾಸವಿಲ್ಲದೆ ಊರಿನ ಮುಸ್ಲಿಮರೆಲ್ಲರೂ ಭಯಂಕರ ಬಿಸಿಲಲ್ಲಿ (ಒಂದೇ ಒಂದು ಕೊಡೆಯಿಲ್ಲದೆ) ಮೆರವಣಿಗೆಯಾಗಿ ನಗರವನ್ನು ಸುತ್ತಿ ಈದ್ಗಾಹ್ ಪ್ರಾರ್ಥನಾಲಯವನ್ನು ಮುಟ್ಟಿದರು. ನಗರದ ಇತರ ಮತಸ್ಥರು ಮುಸ್ಲಿಮರ ಈ ನೂತನ ಕಾರ್ಯಕ್ರಮವನ್ನು ತುಂಬಾ ಆಶ್ಚರ್ಯದೊಂದಿಗೂ ಕುತೂಹಲದೊಂದಿಗೂ ನೋಡುತ್ತಿದ್ದರು. ಮಳೆ ಬಾರದೆ ಹೋದಾಗ ನಿರ್ವಹಿಸಬೇಕಾದ ಸಲಾತುಲ್ ಇಸ್ತಿಸ್ಕಾ (ಮಳೆ ನೀರಿಗಾಗಿ ಪ್ರಾರ್ಥನೆ) ನಮಾಜನ್ನು ಆ ಕಿಕ್ಕಿರಿದು ನೆರೆದಿದ್ದ ಜನಕೂಟವು ಅಲ್ಲಾಮ ಸಾಹೇಬರ ಇಮಾಮತ್ತಿನಲ್ಲಿ (ನಾಯಕತ್ವದಲ್ಲಿ) ನಿರ್ವಹಿಸಿತು. ನಮಾಜು ಮುಗಿದು ಆ ಪುಣ್ಯವಂತರು 'ಇಸ್ತಿಸ್ಕಾ'ದ ಖುತ್ಬಾ (ಉಪದೇಶ) ಆರಂಭಿಸಿದರು. ನಮಾಜಿನ ಆರಂಭದಿಂದಲೇ ಅವರ ನಯನಗಳಿಂದ ಸುರಿದುಕೊಂಡಿದ್ದ ಕಣ್ಣೀರು ಖುತ್ಬಾ ಆರಂಭಿಸಿದೊಡನೆ ಒಂದೇಸಮನೆ ವರ್ಧಿಸಲಾರಂಭಿಸಿತು. ಕಡು ಬಿಸಿಲಿನ ತಾಪ

www.bearyinfo.com

ದಿಂದ ಉರಿಯುತ್ತಾ ನಿಂತಿದ್ದ ಜನಕೂಟವು ಕೌತುಕದೊಂದಿಗೆ ಈಕ್ಷಿಸುತ್ತಿತ್ತು. ಅಲ್ಲಾಮರವರು ಖುತ್ಬಾ ಪೀಠದಿಂದ ತನ್ನ ಎರಡು ಕೈಗಳನ್ನೆತ್ತಿ ಪ್ರಾರ್ಥಿಸುತ್ತಿದ್ದಾರೆ. ಕಣ್ಣೀರು ಸುರಿದು ಅವರ ಬಟ್ಟೆಗಳೂ ಒದ್ದೆಯಾಗಿ ಬಿಟ್ಟಿದ್ದುವು. ನಯನಗಳಿಂದ ರಕ್ತ ಸುರಿಯುತ್ತಿರುವುದೋ ಎಂಬಷ್ಟು ಕೆಂಪಾಗಿತ್ತು ಅವು. ಜನರು ಗದ್ಗದ ಸ್ವರದಿಂದ ಆಮೀನ್ ಹೇಳುತ್ತಿದ್ದಾರೆ.

ಜನರ ದೃಷ್ಟಿಯು ಆಕಾಶದ ಕಡೆಗೆ ನೆಟ್ಟಿತ್ತು. ಏನದ್ಭುತವಿದು! ನಿರ್ಮಲವಾಗಿಯೂ ಶೂನ್ಯವಾಗಿಯೂ ಇದ್ದ ಗಗನದಲ್ಲಿ ಕಾರ್ಮೋಡಗಳ ಕುರುಹು ಕಾಣತೊಡಗಿತು. ಕ್ಷಣದಲ್ಲಿ ಅದು ಗಟ್ಟಿಯಾಗಹತ್ತಿತು. ಈದ್ಗಾ ಮಸೀದಿಯ ಸುತ್ತಲೂ ಅಮುಸ್ಲಿಮ್ ಬಂಧುಗಳು ಬಂದು ನೆರೆಯುತ್ತಿದ್ದರು. ಅಸಾಧಾರಣವೂ ಅತ್ಯದ್ಭುತಕರವೂ ಆದ ಆ ದೃಶ್ಯವನ್ನು ಕಾಣಲು ಯಾರು ತಾನೆ ಬಂದು ಸೇರಲಾರರು? ಪುಣ್ಯಾತ್ಮರಾದ ಅಲ್ಲಾಮ ಹಾಜಿ ಅಬ್ದುಲ್ಲ ಸಾಹೇಬರ ಖುತ್ಬಾ ಉಪದೇಶವು ಅವಸಾನಗೊಳ್ಳುವುದಕ್ಕೂ ಮುಂಚಿತವಾಗಿ ಅಲ್ಲಾಹುವಿನ ಕರುಣಾ ಕಟಾಕ್ಷದಿಂದ ಮಳೆಸುರಿಯಲಾರಂಭಿಸಿತು. ಎಡಬಿಡದ ಸುರಿಮಳೆ. ಬಿಸಿಲಲ್ಲಿ ಕೊಡೆಯಿಲ್ಲದೆ ಬಂದಿದ್ದ ಜನಕೂಟವು ಸಂಪೂರ್ಣ ಒದ್ದೆಯಾಗಿ ಹಿಂತಿರುಗಿತು. ಈ ಅದ್ಭುತ ಸಂಭವಕ್ಕೆ ದೃಕ್ಸಾಕ್ಷಿಗಳಾಗಿ ನಿಂತ ಹಲವಾರು ಮುಸ್ಲಿಮರೂ ಅಮುಸ್ಲಿಮರೂ ಮಂಗಳೂರಲ್ಲಿ ಇಂದಿಗೂ ಜೀವಂತವಿದ್ದಾರೆ.

---


ಚರಿತ್ರೆಯಲ್ಲಿ ಮೊದಲನೆ ಬಾರಿ

## ವಿಶ್ವಕವಿ ಅಲ್ಲಾಮ: ಇಕ್ಬಾಲರ

ಸುಪ್ರಸಿದ್ಧ ಉರ್ದು ಕವಿತೆ "ಶಿಕ್ವಾ ವ ಜವಾಬೆ ಶಿಕ್ವಾ"
ಇದರ ಕನ್ನಡ ಭಾವಾನುವಾದ ಕಾವ್ಯರೂಪದಲ್ಲಿ—
ಜಿಲ್ಲೆಯ ಸುಪ್ರಸಿದ್ಧ ದ್ವಿಭಾಷಾ ಕವಿ
ಜನಾಬ್ ಟಿ. ಉಬೈದ್ ಸಾಹೇಬರ ಅಮೋಘ ಕೃತಿ.
ಸದ್ಯದಲ್ಲೇ ಪ್ರಕಟವಾಗಲಿರುವುದು.

—ಸಂಪಾದಕ.


www.bearyinfo.com

ಕ್ರಿ. ಶ. 1893ರಿಂದ 1902ರ ತನಕ

# ನಮ್ಮ ಜಿಲ್ಲಾ ಖಾಜಿಯಾಗಿದ್ದ ದಿವಂಗತ ಅಲ್ಲಾಮ ಅಬ್ದುಲ್ಲಹಾಜಿ (ಔಲಾಜಾರ್)

## ಅವರ ಸಂಕ್ಷಿಪ್ತ ವ್ಯಕ್ತಿಪರಿಚಯು

1893ರಲ್ಲಿ ಕಾಸರಗೋಡಿನಲ್ಲಿ ಖಾಜಿಯಾಗಿದ್ದ ಅಲ್ಲಾಮ ಅಬ್ದುಲ್ಲಹಾಜಿಯುವರ ಕೀರ್ತಿಯು ಮಂಗಳೂರಿನ ಮುಸಲ್ಮಾನ ಸಮಾಜಕ್ಕೂ ತಲಪಿ, ಸದ್ರಿಯವರನ್ನು ನಮ್ಮ ಜಿಲ್ಲಾ ಖಾಜಿಯಾಗಿ ನೇಮಿಸಿಕೊಳ್ಳಬೇಕೆಂಬ ಹಂಬಲವು ಅವರಲ್ಲಿ ಉಂಟಾಯಿತು. ಕೆಲವು ಊರ ಮಹನೀಯರು ಕಾಸರಗೋಡಿಗೆ ಹೋಗಿ ತಮ್ಮ ಆಹ್ವಾನವನ್ನು ಸ್ವೀಕರಿಸುವಂತೆ ಅವರನ್ನು ಕೇಳಿಕೊಂಡರು. ಅಲ್ಲಾಮರು ಅದೇ ವರ್ಷ ಜಿಲ್ಲಾ ಖಾಜಿಯಾಗಿ ನೇಮಕಗೊಂಡು ನಮ್ಮ ಸಮಾಜದ ಮಾರ್ಗದರ್ಶನದ ಜವಾಬ್ದಾರಿಯನ್ನು ವಹಿಸಿಕೊಂಡರು.

ಅಬ್ದುಲ್ಲಹಾಜಿಯವರು ನಮ್ಮ ಜಿಲ್ಲೆಯ ತ್ರಿಕರ್ಪೂರಿನ ಕೊಯಂಗರ ಎಂಬಲ್ಲಿ ಹಿಜ್ರ 1261ರಲ್ಲಿ ಹುಟ್ಟಿದರು. ಅವರ ತಂದೆ ಅಹ್ಮದ್ ಮೌಲವಿಯವರು ಜನಪ್ರಿಯ ಮತಪಂಡಿತರಾಗಿದ್ದರು. ಅವರು ಕುರಾನ್ ಪಠನ ಹಾಗೂ ತಜ್ವೀದ್ ಇತ್ಯಾದಿ ತಂದೆಯವರಿಂದ ಕಲಿತರು. ಊರಲ್ಲೇ ಪ್ರಾಥಮಿಕ ಮತ ವಿದ್ಯಾಭ್ಯಾಸವನ್ನು ಸಂಪಾದಿಸಿದರು. ಅನಂತರ ಕಿಯ್ಯೂರಿಗೆ ಹೋಗಿ ಸುಪ್ರಸಿದ್ಧ ಮತ ಪಂಡಿತರುಗಳಾಗಿದ್ದ ಸಈದ್ ಮೌಲವಿ, ಕಿಯೂರ್ ಇಬ್ರಾಹಿಮ್ ಮೌಲವಿ ಮೊದಲಾದವರಿಂದ ಕಲಿತು, ಪೊನ್ನಾನಿಗೆ ಹೋಗಿ ಬಿರುದು ಪಡಕೊಂಡು ಮುಸ್ಲಿಯಾರರಾಗಿ ಹಿಂತಿರುಗಿದರು. ಅನಂತರ ಮಕ್ಕಕ್ಕೆ ಹೋಗಿ ಹಜ್ ಅನುಷ್ಠಾನ ಮುಗಿಸಿದ ಬಳಿಕ ಅಲ್ಲಿಯ ಸುಪ್ರಸಿದ್ಧ ಆಲಿಮರುಗಳಾಗಿದ್ದ ಇಮಾಮ್ ಅಲೀಬಿನ್ ಅಹ್ಮದಿರ್ರಹ್ಬಾನಿಲ್ ಮಿಸ್ರಿ, ಸಯ್ಯದ್ ಅಹ್ಮದ್ ಸೈನಿದ್ದಹ್ಲಾನ್, ಮಸ್ಜಿದುಲ್ ಹರಾಮಿನ ಮುದರ್ರಿಸರಾಗಿದ್ದ ಮುಹಮ್ಮದ್ ಹಸ್ಬುಲ್ಲಾಹಿ ಬಿನ್ ಸುಲೈಮಾನ್ ಎಂಬವರಿಂದ ಹಲವು ವಿಶಿಷ್ಟ ಗ್ರಂಥಗಳನ್ನು ಓದಿದುದಲ್ಲದೆ ತರೀಖತ್ತು ಸಂಬಂಧವಾದ ಹಲವು ವಿಜ್ಞಾನಸೂತ್ರಗಳನ್ನೂ ಇಜಾಸತ್ತುಗಳನ್ನೂ ಸಂಪಾದಿಸಿಕೊಂಡರು.

ಹಿಜಾಸಿನಿಂದ ಹಿಂತಿರುಗಿದ ನಂತರ ತನ್ನ ಶೈಖರಾದ ಮುಹಮ್ಮದ್ ಹಸ್ಬುಲ್ಲಾರ ಉಪದೇಶವನ್ನನುಸರಿಸಿ ಮತನಿಷಿದ್ಧವಾದ ಅಳಿಯಸಂತಾನ ಕಟ್ಟನ್ನು ಮುಂದರಿಸಲು ಹಟಹಿಡಿದಿದ್ದ ತನ್ನ ಊರನ್ನೇ ತ್ಯಜಿಸಿ ಕಿಯ್ಯೂರಲ್ಲಿ ಬಂದು ನೆಲೆಸಿದರು. ಅಲ್ಲಿ ಅವರು ತನ್ನ ಉಸ್ತಾದ್ ಇಬ್ರಾಹೀಮ್ ಮೌಲವಿಯವರ ತಂಗಿಯನ್ನು ವಿವಾಹವಾದರು.

30 ವರುಷ ಪ್ರಾಯದಲ್ಲೇ ಅವರ ಕೀರ್ತಿಯು ನಾಲ್ಕೂ ದಿಕ್ಕಿನಲ್ಲಿ ಹರಡಿತು. ಅವರಲ್ಲಿ ಅಸಾಧಾರಣವಾದ ಪಾಂಡಿತ್ಯ ಮತ್ತು ಅತ್ಯಲ್ಪ ಮತಭಕ್ತಿ ಎರಡೂ ಸಮ

www.bearyinfo.com

ನ್ವಯಗೊಂಡು ಇಸ್ಲಾಮಿನ ಸೇವೆಗಾಗಿ ಅವರು ಸದಾ ಸನ್ನದ್ಧರಾಗಿದ್ದರು. ಅವರ ವಾರ್ಝ್ ಕೇಳಲು ತುಂಬಾ ಜನರು ಬಂದು ಸೇರುತ್ತಿದ್ದರು. ಅವರು ಒಮ್ಮೆ ಮಲಬಾರಿನ ಕೊಟ್ಟಯಂ ಎಂಬಲ್ಲಿ ವಾಸ್ ಮಾಡುತ್ತಿರುವಾಗ ಅವರ ಭಾಷಣ ವನ್ನೂ ಪಾಂಡಿತ್ಯವನ್ನೂ ಮೆಚ್ಚಿ ಒಬ್ಬಳು ಮುಸ್ಲಿಮ್ ಐಶ್ವರ್ಯವಂತೆ ಮಹಿಳೆಯು ತನ್ನ 600 ರೂಪಾಯಿ ಬೆಲೆ ಬಾಳುವ ಒಂದು ಭಂಗಾರದ ಮಾಲೆಯನ್ನೇ ಅವರಿಗೆ ಬಹುಮಾನವಾಗಿ ಕೊಟ್ಟುದಾಗಿ ಕೇಳುತ್ತೇವೆ.

ಇವರ ಕೀರ್ತಿಯು ವ್ಯಾಪಿಸುತ್ತಿರುವಾಗಲೇ ಕಾಸರಗೋಡಿನ ಖಾಜಿ ಯಾಗಿದ್ದ ಅಬ್ದುಲ್ಲ ಮುಸ್ಲಿಯಾರರು ನಿಧನಹೊಂದಿದರು. ಅವರ ಉಪದೇಶದಂತೆ ಹಿ. 1299ರಲ್ಲಿ ಅಲ್ಲಾಮ ಅಬ್ದುಲ್ಲ ಹಾಜಿಯವರನ್ನು ತಮ್ಮ ಖಾಜಿಯಾಗಿ ನೇಮಿಸಿದರು. ಈ ಹುದ್ದೆಯಲ್ಲಿ ಅವರು 40 ವರ್ಷಕಾಲ ದುಡಿದರು. ಇವರಿಂದಾಗಿ ಆಗ ದಕ್ಷಿಣ ಕನ್ನಡ ಜಿಲ್ಲೆಗೇ ಅಭಿಮಾನವಿತ್ತು. ಮಂಗಳೂರಲ್ಲಿ ಕೇವಲ ಒಂಬತ್ತು ವರ್ಷಕಾಲ ಖಾಜಿಯಾಗಿ 1902ರಲ್ಲಿ ಇಲ್ಲಿಯವರಿಂದ ಬೇಸರ ಗೊಂಡು ಹೊರಟು ಹೋದರು.

ಮೌಲಾನಾರವರು ಅರಬಿ ಸಾಹಿತ್ಯದಲ್ಲಿ ತುಂಬಾ ಪಾಂಡಿತ್ಯವನ್ನುಗಳಿಸಿದ್ದ ರೆಂಬುದು ಅವರು ತಮ್ಮ ಸ್ನೇಹಿತರುಗಳಿಗೆ ಬರೆದಿದ್ದ ಪತ್ರಗಳ ಸಮೂಹದಿಂದ ಗೊತ್ತಾಗುತ್ತದೆ. ಹೆಚ್ಚಿನ ಮಟ್ಟಿಗೆ ಪತ್ರಗಳನ್ನು ಅರಬಿ ಕಾವ್ಯದಲ್ಲೇ ಬರೆಯು ತ್ತಿದ್ದರು. ಇಲ್ಲವಾದರೆ ಒಂದೆರಡು ಪದ್ಯಗಳನ್ನಾದರೂ ಸೇರಿಸಿಕೊಳ್ಳದೆ ಪತ್ರ ಗಳನ್ನು ಪೂರೈಸುತ್ತಿರಲಿಲ್ಲ.

ನಮ್ಮ ಸಮಾಜದ ಅಂದಿನ ಹಿರಿಯ ಮುಂದಾಳಾಗಿದ್ದ ಖಾನ್‌ಬಹದ್ದೂರ್ ಹಾಜಿ ಅಬೂಬಕರ್ ಸಾಹೇಬರ ಕುರಿತು ಹಾಗೂ ಇನ್ನೊಬ್ಬರು ಪ್ರಮುಖರಾಗಿದ್ದ ಹಾಜಿ ಮುಹಮ್ಮದ್‌ತಾಹಿರ್ ಸಾಹೇಬರ ಕುರಿತೂ ಕವಿತೆಗಳನ್ನು ರಚಿಸಿದ್ದರು. ಮಂಗಳೂರು ಜುಮಾಮಸೀದಿಯ ಜಮಾತ್‌ಖಾನೆ ಕಟ್ಟಡವನ್ನು ನಿರ್ಮಿಸಿದ ತಾರೀಕನ್ನು ಸೂಚಿಸುವ ಒಂದು ಅರಬಿ ಕವಿತೆಯನ್ನೂ ಬರೆದಿದ್ದರು. ಸದ್ರಿ ಕಟ್ಟಡವು ಹಿಜ್ರ 1317ರಲ್ಲಿ (ಎಂದರೆ ಸುಮಾರು ಕ್ರಿ. ಶ. 1899ರಲ್ಲಿ) ಕಟ್ಟಿಸ ಲಾಯಿತೆಂದು ಆ ಕವಿತೆಯಿಂದ ಬಹಿರಂಗವಾಗುತ್ತದೆ.

ಮೌಲಾನಾರೊಬ್ಬರೇ ಅಲ್ಲ, ಅವರ ಮಕ್ಕಳೂ ಸಹ ಅರಬಿ ಸಾಹಿತ್ಯದಲ್ಲಿ ಅಸಾಧಾರಣ ಪಾಂಡಿತ್ಯವನ್ನು ಪ್ರಕಟಿಸಿರುತ್ತಾರೆ. ಈ ಮತಭಕ್ತ ಕುಟುಂಬದ ಅರಬಿ ಕವಿತೆಗಳ ಸಮೂಹವೊಂದನ್ನು ನಮ್ಮ ದ್ವಿಭಾಷಾ ಕವಿ ಹಾಗೂ ಸಾಹಿತಿ ಗಳಾದ ಜನಾಬ್ ಟಿ. ಉಬೈದ್ ಸಾಹೇಬರು ಶೇಖರಿಸಿಟ್ಟಿರುತ್ತಾರೆ.

---

www.bearyinfo.com

# ನನ್ನ ಕಾಲದ ತ್ರೈಕಾಲ

## ಸಮಾಜದ ಹಿರಿಯ ಬಂಧುಗಳ ಹೇಳಿಕೆಗಳು

[ಮಂಗಳೂರಿನ ಮುಸಲ್ಮಾನರ ಸ್ಥಿತಿಗತಿಗಳು 20ನೇ ಶತಮಾನದ ಆರಂಭದಲ್ಲಿ ಹೇಗಿದ್ದುವು ಎಂಬುದನ್ನು ನಮ್ಮ ಸಮಾಜದ ಕೆಲವು ಹಿರಿಯ ಬಂಧುಗಳು ಮುಂದಿನ ಪುಟಗಳಲ್ಲಿ ವರ್ಣಿಸಿದ್ದಾರೆ.

ಈ ಹೇಳಿಕೆಗಳನ್ನು ಈ ಗ್ರಂಥದ ಸಂಪಾದಕರು ಸದ್ರಿ ಹಿರಿಯರ ಬಳಿಗೆ ಸ್ವತಃ ಹೋಗಿ ಅವರು ಉರ್ದು ಮತ್ತು ಮಲೆಯಾಳದಲ್ಲಿ ಹೇಳಿದುದನ್ನು ಬರೆದು ತೆಗೆದುಕೊಂಡು ಅದನ್ನು ಕನ್ನಡೀಕರಿಸಿದುದಾಗಿದೆ. ಆದುದರಿಂದ ಇದರಲ್ಲಿ ಏನಾದರೂ ಹೆಚ್ಚುಕಡಿಮೆ ತೋರಿದರೆ ಅದು ಸಂಪಾದಕರ ತಪ್ಪೆಂದೇ ತೆಗೆದು ಕೊಳ್ಳಬೇಕು. ಈ ಹೇಳಿಕೆ ಇತ್ತವರಲ್ಲಿ ಅನೇಕರಿಗೆ 70, 80 ವರ್ಷಗಳು ದಾಟಿವೆ. ಆದರೂ ತಮ್ಮ ಜ್ಞಾಪಕಶಕ್ತಿಯನ್ನು ಮಿತಿಮೀರಿ ಉಪಯೋಗಿಸಿ ಅವರು ಈ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಹಿಂದಿನ ಮತ್ತು ಇಂದಿನ ಸ್ಥಿತಿಗತಿಗಳನ್ನು ಕಣ್ಣಾರೆ ಕಂಡ ಈ ಸಮಾಜ ಬಾಂಧವರಿಗೆ ಹಿಂದಿನವರು ವಿದ್ಯೆಯ ಕಡೆಗೆ ತೋರಿಸಿದ ಅಸಡ್ಡೆಭಾವದ ಕುರಿತು ಒಂದೆಡೆ ಬೇಸರವಿದ್ದರೆ ಇಂದಿನವರು ಅನಿಯಂತ್ರಿತಾವಸ್ಥೆಯಲ್ಲಿ, ಅನೈಕ್ಯದಲ್ಲಿ ದಿನ ದೂಡುವುದನ್ನು ಕಂಡು ಅವರು ಮರುಗುತ್ತಿದ್ದಾರೆ. ಸಂ.]

### ಈ ಲೇಖನಮಾಲೆಯಲ್ಲಿ ಭಾಗವಹಿಸಿದವರು:

೧. ಜನಾಬ್ ಮುಕಾಡಮ್ ಮ್ಹೊದಿನ್‌ಹಾಜಿ ಸಾಹೇಬ್, ಬಂದರ್.
೨. ,, ಬಿ. ಎಸ್. ಅಬ್ದುರ್ರಹ್ಮಾನ್ ಸಾಹೇಬ್, ಕುದ್ರೋಳಿ.
೩. ,, ಅಬ್ದುಲ್ಲತೀಫ್ ಸಾಹೇಬ್, ಬೋಳಾರ.
೪. ,, ಶೇಖ್ ಮದಾರ್ ಸಾಹೇಬ್, ಕಂದಕ.
೫. ,, ಉಳ್ಳಾಲ ಸೀದಿಯಬ್ಬಾ ಸಾಹೇಬ್, ಬಂದರ್.
೬. ,, ವಲ್ಲಿ ಅಬೂಬಕರ್ ಸಾಹೇಬ್, ಬಂದರ್.
೭. ,, ಹಕೀಂ ಶೇಖ್ ಫರೀದ್ ಸಾಹೇಬ್, ಮಂಗಲಪಾಡಿ.
೮. ,, ಕುಂಞಮ್ಮದ್ ಮುಕ್ರಿಕ ಸಾಹೇಬ್, ಕಂದಕ.

www.bearyinfo.com

## ಜನಾಬ್ ಮುಕಾದಮ್ ಮೊೖದಿನ್ ಹಾಜಿ, ಬಂದರ್.

ನನ್ನ ಕಾಲದಲ್ಲಿ ಮಂಗಳೂರ ಮುಸ್ಲಿಮ್ ಸಮಾಜವು ವ್ಯಾಪಾರದಲ್ಲಿ ತುಂಬಾ ಮುಂದುವರಿದಿದ್ದು ಕಾಫಿ, ಏಲಕ್ಕಿ, ಅಕ್ಕಿ ಇತ್ಯಾದಿಗಳನ್ನು ಪರದೇಶಗಳಿಗೆ ರಫ್ತು ಮಾಡುವ ಅನೇಕ ಪ್ರಮುಖ ವ್ಯಾಪಾರಿಗಳು ಇದ್ದರು. ಅವರಲ್ಲಿ ಪ್ರಮುಖರಾಗಿ ಖಾನ್ ಬಹದ್ದೂರ್ ಹಾಜಿ ಅಬೂಬಕರ್ ಸಾಹೇಬ್, ಕರ್ತ ಅಬ್ಬುಕ, ಬೆಲ್ತ ಅಬ್ಬುಕ, ಅಬ್ದುಲ್ ಅಲೀ ಸೇಟ್ ಮೊದಲಾದವರು ಹಿರಿಯ ವರ್ತಕರಾಗಿದ್ದರು.

ಖಾನ್ ಬಹದ್ದೂರ್ ಸಾಹೇಬರು ನಮ್ಮ ಸಮಾಜದ ನಾಯಕರಾಗಿದ್ದು, ಜುಮಾಮಸೀದಿಯ ಆಡಳ್ತೆಯು ಅವರ ಕೈಯಲ್ಲಿದ್ದುದಲ್ಲದೆ ಸರಕಾರದಲ್ಲಿಯೂ ಅವರಿಗೆ ದೊಡ್ಡಸ್ಥಾನವಿತ್ತು. ಮಂಗಳೂರಿನಿಂದ ಮಿಲಿಟರಿಯನ್ನು ಹಿಂತೆಗೆಯಲು ಸರಕಾರವು ಇಚ್ಛಿಸಿದಾಗ ತನ್ನ ಸ್ವಂತ ಜವಾಬ್ದಾರಿಕೆಯ ಭರವಸೆ ಕೊಟ್ಟು ಅದನ್ನು ತೆಗೆಸಿದವರು ಖಾನ್ ಬಹದ್ದೂರ್ ಸಾಹೇಬರು. ಅವರು ನಿಧನ ಹೊಂದಿದಾಗ ಅಜೀಜುದ್ದೀನ್ ಕಲೆಕ್ಟರ್‌ರವರು ಇಲ್ಲಿ ಇದ್ದರು. ಆದರೆ ಅವರಿಗೆ ಯಾರೂ ಸುದ್ದಿ ಕೊಡದಿದ್ದುದಕ್ಕೆ ಸರಕಾರದಲ್ಲಿಯೂ ಇಷ್ಟೊಂದು ಪ್ರಭಾವವಿರುವ ವ್ಯಕ್ತಿಯು ನಿಧನಹೊಂದಿದಾಗ ನೀವು ನನಗೆ ತಿಳಿಸದಿದ್ದುದು ವಿಷಾದಕರವೆಂದು ಅವರು ಹೇಳಿದುದು ನಾನು ಸ್ವತಃ ಕೇಳಿದ್ದೇನೆ.

ಆ ಕಾಲದಲ್ಲಿ ಮೇಮನ್ ಸೇಟರುಗಳಿಗೆ ಬಜಾರಿನಲ್ಲಿಯೂ ಕಂದಕದಲ್ಲಿಯೂ ತುಂಬಾ ಆಸ್ತಿಯಿದ್ದುವು. ಅವರ ಸಹಾಯದಿಂದಲೇ ಮುನೀರುಲ್ ಇಸ್ಲಾಮ್ ಶಾಲೆಯು ನಡಿಯುತ್ತಿತ್ತು. ಶಾಲಾ ಮಕ್ಕಳಿಗೆ ಗಂಜಿಯನ್ನೂ ಹಂಚುತ್ತಿದ್ದರು. ಕಾರಣಾಂತರಗಳಿಂದ ಇದು ನಿಂತುಹೋಯಿತು. ಅಂತೆಯೇ ಅವರ ಆಸ್ತಿಗಳೂ ಮಾರಿಹೋದುವು.

ಸಮಾಜದಲ್ಲಂದು ವಿದ್ಯಾಭ್ಯಾಸವು ಅಷ್ಟು ಇರಲಿಲ್ಲವಾದರೂ ಜನರಲ್ಲಿ ಐಖ್ಯಭಾವನೆಯಿತ್ತು. ಸಮಾಜದ ಒಳ್ಳಿತಕ್ಕೆ ಬೇಕಾಗಿ ಎಲ್ಲರೂ ಒಂದುಗೂಡಿ ಪ್ರಯತ್ನಿಸುವ ಸಹಕಾರ ಬುದ್ಧಿ ಹಾಗೂ ತ್ಯಾಗಬುದ್ಧಿಯು ಅಂದು ಇತ್ತು. ಅದು ಇಂದು ಮಾಯವಾಗಿ ನಮ್ಮ ಸಮಾಜವು ಇಳಿಮುಖವಾಗಿದೆ.

## ಜನಾಬ್ ಬಿ. ಎಸ್. ಅಬ್ದುರ್ರಹ್ಮಾನ್ ಸಾಹೇಬ್, ಕುದ್ರೋಳಿ

ನನ್ನ ತಾರುಣ್ಯದ ಕಾಲದಲ್ಲಿ ಮಂಗಳೂರಲ್ಲಿ ಹತ್ತುಸಾವಿರ ಮುಸಲ್ಮಾನರಿರ ಬಹುದು. ಶಾಫಿಗಳಲ್ಲಿಯೂ ಹನಫಿಗಳಲ್ಲಿಯೂ ಅನೇಕ ಪ್ರಮುಖ ವರ್ತಕ ರಿದ್ದರು. ಆ ಕಾಲವು ಖಾನ್‌ಬಹದ್ದೂರ್ ಹಾಜಿ ಅಬೂಬಕರ್ ಅವರ ನಾಯ ಕತ್ವದ ಕಾಲವಾಗಿತ್ತು. ಇವರು ಪ್ರಮುಖ ವರ್ತಕರಾಗಿದ್ದುದಲ್ಲದೆ ಸಮಾಜ

www.bearyinfo.com

ದಲ್ಲಿಯೂ ಸರಕಾರದಲ್ಲಿಯೂ ತುಂಬಾ ಪ್ರಭಾವಶಾಲಿಗಳಾಗಿದ್ದರು. ಇವರ ಹೊರತು ಶಾಫಿಯರಲ್ಲಿ ಬೈಲ್ ಅಬ್ಬುಬ್ಯಾರಿ, ಸೊಂಟು ಕೈ ಮಾಮುವಾಕ, ವಲ್ಲಿ ಮಾಮುಕ ಮೊದಲಾದವರೂ ಹನಫಿಯರಲ್ಲಿ ಗನಿ ಸಾಹೇಬ್, ರಜಬ್ ಸಾಹೇಬ್, ಶಿಪ್ದಾರ್ ಅಹ್ಮದ್ ಸಾಹೇಬ್ ಮೊದಲಾದವರು ಅಂದಿನ ಪ್ರಮುಖ ಧುರೀಣರುಗಳೂ ಧನಿಕರೂ ಆಗಿದ್ದರು. ಶಿಯಾ ಜನರಲ್ಲಿ ಅಬ್ದುಲ್ ಅಲೀ ಸೇಟರೂ ನಾನಾ ಬ್ಯಾ ಸೇಟರೂ ಇದ್ದರು. ಮೇಮನರಲ್ಲಿ ಪ್ರಮುಖ ಧುರೀಣರಾಗಿ ಊಸಿ ಸೇಟರಿದ್ದರು.

ಅಂದು ಮುಸಲ್ಮಾನರು ಆರ್ಥಿಕ ದೃಷ್ಟಿಯಿಂದ ತುಂಬಾ ಮುಂದುವರಿದಿದ್ದರು. ಐಶ್ವರ್ಯವು ಅವರ ಕಾಲುಬುಡವನ್ನು ಚುಂಬಿಸುತ್ತಿತ್ತು. ಎಲ್ಲೆಡೆಯಲ್ಲಿಯೂ ಮಾನ ಮರ್ಯಾದೆಯೂ ಪ್ರಭಾವವೂ ಮುಸಲ್ಮಾನರಿಗೆ ಇತ್ತು. ಆದರೆ ಆರ್ಥಿಕವಾಗಿ ಇಷ್ಟು ಮುಂದುವರಿದಿದ್ದರೂ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂಬ ಲವಲವಿಕೆಯು ಅವರಲ್ಲಿರಲಿಲ್ಲ. ಲೌಕಿಕ ವಿದ್ಯಾಭ್ಯಾಸವಂತಿರಲಿ, ಧಾರ್ಮಿಕ ವಿದ್ಯಾಭ್ಯಾಸದ ಕುರಿತೂ ಅಷ್ಟೊಂದು ಚಿಂತೆ ಇರಲಿಲ್ಲ. ಹನಫಿಗಳಾಗಲೀ ಶಾಫಿಗಳಾಗಲೀ ತಮ್ಮ ಐಶ್ವರ್ಯವೆಲ್ಲವನ್ನೂ ಮದುವೆ, ಮುಂಜಿ, ಮೌಲೂದ್ ಇತ್ಯಾದಿ ವಿಶೇಷ ಸಂಭ್ರಮಗಳಲ್ಲೇ ವ್ಯಯಿಸುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಎಷ್ಟು ಖರ್ಚುಮಾಡಿದರೂ ಅವರಿಗೆ ಮನಸ್ಸು ಸಮಾಧಾನವಾಗುತ್ತಿದ್ದಿಲ್ಲ. ಇನ್ನೊಬ್ಬನಿಗಿಂತ ತಾನು ಹೆಚ್ಚು ಹಣ ಖರ್ಚುಮಾಡಿರುವೆನೆಂಬ ಖ್ಯಾತಿಯನ್ನು ಪಡೆಯಲೋಸುಗ ತಮ್ಮ ಆಸ್ತಿಯನ್ನು ಅಡವಿಟ್ಟು ಇಂತಹ ಮುಂಜಿ ಮದುವೆಗಳನ್ನು ನೆರವೇರಿಸುತ್ತಿದ್ದರು.

ನನ್ನ ಕಾಲದಲ್ಲಿ ಸುಪ್ರಸಿದ್ಧ ಮತಪಂಡಿತರಾಗಿದ್ದ ಔಲಾಹಾಜಿಯವರು ಖಾಜಿಯಾಗಿದ್ದರು. ಇಲ್ಲಿಯ ಜನರನ್ನು ಅಜ್ಞಾನದಿಂದಲೂ ದುಂದುಗಾರಿಕೆಯಿಂದಲೂ ಅನಿಸ್ಲಾಮಿಕ ಆಚಾರ ಕಟ್ಟಳೆಗಳಿಂದಲೂ ರಕ್ಷಿಸಲು ಅವರು ತುಂಬಾ ಪರಿಶ್ರಮಿಸಿದರು. ಆದರೆ ಇಲ್ಲಿಯವರು ಅವರಿಗೆ ತುಂಬಾ ಅಪಮಾನವನ್ನು ಕೊಟ್ಟರು. ಅದನ್ನು ಸಹಿಸಲಾರದೆ ಅವರು ತನ್ನ ಕೆಲಸಕ್ಕೆ ರಾಜಿನಾಮೆಯಿತ್ತು ಹೊರಟು ಹೋದರು. ಮದುವೆ ಸಂಭ್ರಮಗಳಲ್ಲಿ 'ಒಪ್ಪನೆ' ಕ್ರಮವನ್ನು ಅವರು ತುಂಬಾ ಆಕ್ಷೇಪಿಸುತ್ತಿದ್ದರು. ಮಾತ್ರವಲ್ಲ, ಮೊಹರಂ ಆಚಾರಗಳನ್ನು ಮಾಡುವುದನ್ನೂ ಅವರು ಖಂಡಿಸುತ್ತಿದ್ದರು. ಆದರೆ ಜನರು ಅವರ ಮಾತನ್ನು ಕೇಳಲಿಲ್ಲ. ಅಂತೆಯೇ ಅವರು ರಾಜಿನಾಮೆಕೊಟ್ಟು ಹೋದರು.

ಅವರು ಹೋದ ಬಳಿಕ ಇಲ್ಲಿಗೆ ಭೀಕರ ಪ್ಲೇಗ್ ವ್ಯಾಧಿಯು ಆಕ್ರಮಿಸಿ ನಮ್ಮ ಸಮಾಜದ ಹಲವಾರು ಜನರನ್ನು ಕೊಂಡು ಹೋಯಿತು. ಅನೇಕ ಪ್ರಮುಖ ವ್ಯಕ್ತಿಗಳೂ ಸಹಸ್ರಾರು ಯುವಕರೂ ಇದರ ಬಾಯಿಗೆ ತುತ್ತಾದರು.

www.bearyinfo.com

ಅಂದು ಮುಸಲ್ಮಾನರಲ್ಲಿ ಅಜ್ಞಾನವು ನೆಲೆಯೂರಿದ್ದರೂ ಅವರಲ್ಲಿ ಒಂದು ಮುಖ್ಯ ಗುಣವಿತ್ತು. ಸಮಾಜದಲ್ಲಿ ಐಖ್ಯತೆ ಮತ್ತು ಶಿಸ್ತು ಇತ್ತು. ಸಮಾಜಕ್ಕೆ ಆಪತ್ತು ಬರುವಾಗ ಎಲ್ಲರೂ ಒಂದುಗೂಡುತ್ತಿದ್ದರು. ಖಾನ್‌ಬಹದ್ದೂರರಂತಹ ಮೇಧಾವಿಗಳಿದ್ದುದರಿಂದ ಉತ್ತಮ ಧುರೀಣತ್ವವೂ ಇತ್ತು. ಇಂದಿನಂತೆ ಇರುವ ನಿಸ್ಸಹಾಯಕತೆ ಹಾಗೂ ವಿಕೇಂದ್ರೀಕರಣವು ಅಂದು ಇರಲಿಲ್ಲವೆಂಬುದನ್ನು ನಾನು ಒತ್ತಿ ಹೇಳುತ್ತೇನೆ.

### ಜನಾಬ್ ಅಬ್ದುಲ್ಲತೀಫ್ ಸಾಹೇಬ್, ಬೋಳಾರ

ನಾನು ಕಣ್ಣು ತೆರೆಯುವಾಗ ಮಂಗಳೂರಲ್ಲಿ ಸುಮಾರು 10,000 ಮುಸಲ್ಮಾನರಿರಬಹುದು. ಅವರ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿತ್ತು. ಕಾಫಿ, ಏಲಕ್ಕಿ, ಅಕ್ಕಿ, ಟಿಂಬರ್ ಇತ್ಯಾದಿಗಳ ದೊಡ್ಡದೊಡ್ಡ ಅನೇಕ ವ್ಯಾಪಾರಿಗಳು ಮಾಪಿಳ್ಳೆಯವರಲ್ಲಿಯೂ, ದಖ್ನಿಗಳಲ್ಲಿಯೂ ತುಂಬಾ ಮಂದಿ ಇದ್ದರು. ವ್ಯಾಪಾರವಿಡೀ ಮುಸಲ್ಮಾನರ ಕೈಯಲ್ಲೇ ಇತ್ತೆಂದರೂ ಸರಿಯೆ.

ಇಡೀ ಗೋಳಿಕಟ್ಟೆ ಬಜಾರಿನಲ್ಲಿ ಮೇಮನರ ವ್ಯಾಪಾರವಿತ್ತು ಮತ್ತು ಅವರು ತುಂಬಾ ಧನಿಕರಾಗಿದ್ದು ಸಮಾಜಸೇವೆಯ ಅನೇಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಬೋಳಾರದಲ್ಲಿ ಹೆಚ್ಚಿನ ಮಟ್ಟಿಗೆ ದಖ್ನಿಗಳಿದ್ದು ಇಲ್ಲಿಯ ಪ್ರಮುಖ ಧನಿಕರಾಗಿ ಮುಹಮ್ಮದ್ ಸುಲೈಮಾನ್ ಎಂಬವರು ತುಂಬಾ ಪ್ರಭಾವಶಾಲಿಗಳಾಗಿದ್ದರು.

ಆದರೂ ಶೈಕ್ಷಣಿಕವಾಗಿ ಮುಸಲ್ಮಾನರು ತುಂಬಾ ಹಿಂದುಳಿದಿದ್ದರು. ಮೊತ್ತಮೊದಲನೆದಾಗಿ ಇಲ್ಲಿ ಉರ್ದು ಶಾಲೆ ತೆರೆದವರೆಂದರೆ ಮಿರ್ಾ್ ಶುಜಾಅತ್ ಅಲೀ ಖಾನ್ ಎಂಬ ಇನ್‌ಚಾರ್ಜ್ ಕಲೆಕ್ಟರ್‌ರವರು. ಅವರು ಇಲ್ಲಿಯ ಮುಸಲ್ಮಾನರಿಗೆ ವಿದ್ಯೆಕೊಡಲು ಸಲುವಾಗಿ ಒಂದು ಹೈಸ್ಕೂಲು ಸ್ಥಾಪಿಸಲು ತುಂಬಾ ಶ್ರಮಪಟ್ಟಿದ್ದರು. ಅವರ ನಂತರ ಬಂದ ಬಜ್ಲುಲ್ಲಾ ಕಲೆಕ್ಟರರೂ ಆಜೀಜುದ್ದೀನ್ ಕಲೆಕ್ಟರರೂ ಈ ಕುರಿತು ತುಂಬಾ ಪ್ರಯತ್ನಿಸಿದ್ದರು. ಆದರೆ ಅಂದಿನವರ ಅಸಡ್ಡೆಯಿಂದ ಒಂದು ಒಳ್ಳೆಯ ಮಟ್ಟಿನ ಶಾಲೆಯೂ ಸ್ಥಾಪನೆಗೊಳ್ಳಲಿಲ್ಲ. ಕಸ್ಸೈಗಲ್ಲಿಯಲ್ಲಿ ನಡಿಯುತ್ತಿದ್ದ ಕೇವಲ ಒಂದು ಶಾಲೆಯ ಹೊರತು ಬೇರೊಂದು ಶಾಲೆ ಅಂದು ಇರಲಿಲ್ಲ.

ಬೋಳಾರದ ಮಸೀದಿಯು ತುಂಬಾ ಪುರಾತನ ಕಾಲದ್ದು. ಚಿಲಿಂಬಿಯವರ ಮಸೀದಿಯೂ ಸುಮಾರು ಒಂದು ನೂರು ವರ್ಷ ಮುಂಚಿನದು.

ನನ್ನ ಕಾಲದಲ್ಲೇ ಔಲಹಾಜಿಯವರು ಪ್ರಾರ್ಥನೆ ಮೂಲಕ ಮಳೆಗೆರಿಯುವ ಪವಾಡವನ್ನು ತೋರಿಸಿದುದು. ಈ ಮಹಾನುಭಾವರು ಈ ಮಂಗಳೂರ ಮುಸ್ಲಿಮ್ ಸಮಾಜವನ್ನು ಸುಧಾರಿಸಲು ತುಂಬಾ ಶ್ರಮವಹಿಸಿ ದುಡಿದರು.

www.bearyinfo.com

ಆದರೆ ಇಲ್ಲಿಯವರು ಕೊಡುತ್ತಿದ್ದ ಅಪಮಾನವನ್ನು ಸಹಿಸಲಾರದೆ 1902ರಲ್ಲಿ ತನ್ನ ಹುದ್ದೆಗೆ ರಾಜಿನಾಮೆಕೊಟ್ಟು ಹೊರಟು ಹೋದರು.

ಅಜೀಜುದ್ದೀನ್ ಕಲೆಕ್ಟರರ ಕಾಲದಲ್ಲಂತೂ ಬೆರಳೆಣಿಕೆಯಷ್ಟು ವಿದ್ಯಾವಂತರು ಇದ್ದರೂ ಇಂಗ್ಲಿಷ್ ಕಲಿತವರು ಇದ್ದುದು ದಖ್ನಿಯವರಲ್ಲಿಯೇ ಹೊರತು ಮಾಪಿಳ್ಳೆಯವರಲ್ಲಿ ಯಾರೂ ಇರಲಿಲ್ಲವೆಂದೇ ನನ್ನ ನೆನಪು.

ಒಂದು ಸಂಗತಿಯನ್ನು ಮಾತ್ರ ನಾನು ಅಡಗಿಸಲಾರೆ. ಅವಿದ್ಯಾವಂತರೇ ಅಧಿಕವಿದ್ದ ಆ ಕಾಲದಲ್ಲಿದ್ದಷ್ಟು ಐಖ್ಯತೆ ಮತ್ತು ಶಿಸ್ತು, ವಿದ್ಯೆಯು ಹರಡಿರುವ ಇಂದಿನ ಕಾಲದಲ್ಲಿ ನಮ್ಮ ಸಮಾಜದಲ್ಲಿ ಕಂಡು ಬರುವುದಿಲ್ಲ.

**ಜನಾಬ್ ಶೇಖ್ ಮದಾರ್ ಸಾಹೇಬ್, ಕಂದಕ.**

ನನ್ನ ಕಾಲದಲ್ಲಿ ಮಂಗಳೂರಿನಲ್ಲಿ ಮುಸಲ್ಮಾನರು ಸುಮಾರು ಹತ್ತು ಸಾವಿರ ಮಂದಿ ಇದ್ದರು. ದಖನಿಯವರಲ್ಲಿಯೂ ಮಲಬಾರಿಗಳಲ್ಲಿಯೂ, ಮೇಮನರಲ್ಲಿಯೂ, ಭಟ್ಕಳಿಯವರಲ್ಲಿಯೂ ತುಂಬಾ ಮಂದಿ ಪ್ರಮುಖ ವ್ಯಾಪಾರಿಗಳಿದ್ದರು. ನನ್ನ ಅರಿವಿನ ಮಟ್ಟಿಗೆ ಬೈಲ್ ಅಬ್ಬು ಬ್ಯಾರಿ, ವಲ್ಲಿ ಬೆಲ್ತ ಅಬ್ಬುಕ, ಖಾನ್ ಬಹದ್ದೂರ್ ಅಬೂಬಕರ್ ಸಾಹೇಬ್, ಸಯ್ಯಿದ್ ಹಾರೂನ್, ಸಯ್ಯಿದ್ ಯೂಸುಫ್ ಬಾಬಾ ಸಾಹೇಬ್, ದಲಾಲ್ ಹಸನ್‌ಬಾವುಕ, ಅಬ್ದುರ್ರಹ್ಮಾನ್ ಸಾಹೇಬ್, ರಜಬ್ ಸಾಹೇಬ್, ಗನೀ ಸಾಹೇಬ್ ಮೊದಲಾದವರು ಸುಪ್ರಸಿದ್ಧ ವ್ಯಾಪಾರಿಗಳೂ ಸಮಾಜದ ಅಂದಿನ ಪ್ರಮುಖ ಧುರೀಣರೂ ಆಗಿದ್ದರು.

ಇಲ್ಲಿಗೆ ಖಾಜಿಯಾಗಿ ಮೊತ್ತಮೊದಲು ಅಬ್ದುರ್ರಹ್ಮಾನ್ ಮೌಲವಿ ಎಂಬವರೂ ಅವರ ನಂತರ ಇನ್ನೊಬ್ಬರೂ, ಅನಂತರ ಸುಪ್ರಸಿದ್ಧ ಔಲಹಾಜಿಯವರೂ ಬಂದರು. ಔಲಹಾಜಿಯವರು ಪ್ರಾರ್ಥನೆ ಮೂಲಕ ಮಳೆಬರುವಂತೆ ಮಾಡಿದ ಪವಾಡವನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಅವರು ಇಲ್ಲಿಯ ಮುಸಲ್ಮಾನರ ಸುಧಾರಣೆಗಾಗಿ ತುಂಬಾ ಪ್ರಯತ್ನಪಟ್ಟಿದ್ದರು. ಆದರೆ ಅವರ ಮಾತನ್ನು ಇಲ್ಲಿಯವರು ಲೆಕ್ಕಿಸದೆ ಅವರನ್ನು ಅಪಮಾನಗೊಳಿಸಿದರು. ತನಗಾದ ಅಪಮಾನವನ್ನು ಸಹಿಸಲಾರದೆ ಅವರು ತನ್ನ ಹುದ್ದೆಗೆ ರಾಜಿನಾಮೆಕೊಟ್ಟು ಹೊರಟುಹೋದರು.

ಆ ಕಾಲದಲ್ಲಿ ಖಾನ್ ಬಹದ್ದೂರ್ ಅಬೂಬಕರ್ ಸಾಹೇಬರು ಬಹಳ ಪ್ರಸಿದ್ಧಿಯನ್ನು ಪಡೆದಿದ್ದರು. ಅವರು ಅಷ್ಟೊಂದು ವಿದ್ಯಾವಂತರಾಗಿರಲಿಲ್ಲವಾದರೂ ಗವರ್ನ್‌ಮೆಂಟಿನಲ್ಲಿ ಅವರಿಗೆ ಒಳ್ಳೆಯ ಸ್ಥಾನವಿತ್ತು. ಅವರ ಕಾಲದಲ್ಲಿ ಕಚ್ಛೀ ಮಸೀದಿಯಲ್ಲಿ ಖುತ್ಬಾ ತೊಡಗಲು ಮೇಮನರು ಪ್ರಯತ್ನಿಸಿದಾಗ ಅವರ ಪ್ರಭಾವದಿಂದ ಅದು ಸಾಧ್ಯವಾಗದೆ ಹೋಯಿತು. ಜಾಮ್ಮಾ ಮಸೀದಿಯಲ್ಲಿ ಜನರು ಕಮ್ಮಿಯಾಗಿ ಬಿಡುವರೆಂಬ ಹೆದರಿಕೆಯಿಂದ ಕಚ್ಛೀಮಸೀದಿಯಲ್ಲಿ ಖುತ್ಬಾ ತೊಡಗುವುದು ಅವರಿಗೆ ಇಷ್ಟವಾಗಲಿಲ್ಲ.

www.bearyinfo.com

ನನ್ನ ಕಾಲದಲ್ಲಿ ಕ್ರಮಪ್ರಕಾರವಾದ ಒಂದು ಶಾಲೆಯೆಂಬುದು ತೊಡಗಿದುದು ಹೈದರಾಬಾದಿನ ವಿಾರ್ ಶುಜಾಅತ್ ಅಲೀಯವರು ಮೊದಲನೆ ಮುಸ್ಲಿಮ್ ಡಿಪ್ಯೂಟಿ ಕಲೆಕ್ಟರರಾಗಿ ನೇಮಕಗೊಂಡು ಈ ಜಿಲ್ಲೆಗೆ ಬಂದಾಗ ಕಸ್ಸೈಗಲ್ಲಿಯಲ್ಲಿ ಕುಬ್ದೇ ಹಜ್ರತ್ ಎಂಬವರು ನಡಿಸುತ್ತಿದ್ದ ಶಾಲೆಯೇ ಮೊದಲನೆ ಉರ್ದುಶಾಲೆಯಾಗಿತ್ತು. ಅನಂತರ ಹಲೀಮ್ ಪಾಶಾ, ಪೀರ್‌ಪಾಶಾ ಮೊದಲಾದವರು ತಮ್ಮ ಮನೆಯಲ್ಲೇ ಉರ್ದು ಫಾರ್ಸಿ ಮೊದಲಾದವುಗಳನ್ನು ಕಲಿಸಲು ತೊಡಗಿದರು. ಹಾರೂನ್ ಮಾಸ್ಟರರ ತಂದೆ ಮುಹಮ್ಮದ್ ಶಾಹ್ ಸಾಹೇಬ್ ಎಂಬವರು ಕಂದಕದಲ್ಲಿ ಒಂದು ಶಾಲೆಯನ್ನು ನಡಿಸಿ ಗಂಡು—ಹೆಣ್ಣು ಮಕ್ಕಳಿಗೆ ಉರ್ದು-ಫಾರ್ಸಿ ಕಲಿಸುತ್ತಿದ್ದರು.

ದಖ್ನಿಯವರ ಪೈಕಿ ಸಫ್‌ದರ್ ಸಾಹೇಬ್, ಪೀರಾನ್ ಸಾಹೇಬ್ ಮೊದಲಾದವರು ಫಾರ್ಸಿ ಉರ್ದು ಇಂಗ್ಲಿಷ್‌ಗಳಲ್ಲಿ ವಿದ್ಯಾವಂತರಾಗಿದ್ದುದಲ್ಲದೆ ತುಂಬಾ ಪ್ರಸಿದ್ಧಿಯನ್ನೂ ಪಡೆದಿದ್ದರು. ಪೀರಾನ್ ಸಾಹೇಬರು ಯುರೋಪಿಯನರಿಗೆ ಉರ್ದು ಫಾರ್ಸಿ ಇತ್ಯಾದಿಯನ್ನು ಕಲಿಸುತ್ತಿದ್ದರು. ಮೇಮನ್ ಮಸೀದಿಗೆ ಆಗಾಗ ದೊಡ್ಡ ದೊಡ್ಡ ಮೌಲವಿಗಳು ವಾಸ್ ಹೇಳಲು ಬರುತ್ತಿದ್ದರು. ನನ್ನ ಕಾಲದಲ್ಲಿ ಆಗಾಗ ಇತರ ಧರ್ಮಗಳಿಂದ ಇಸ್ಲಾಮಿಗೆ ಮತಾಂತರಗಳಾಗುತ್ತಿದ್ದುವು.

ಮುಸಲ್ಮಾನರಲ್ಲಿ ಆರ್ಥಿಕ ಬಲವು ಅಧಿಕವಾಗಿದ್ದರೂ ಶೈಕ್ಷಣಿಕ ಅಭಿವೃದ್ಧಿ ಇಲ್ಲದ ಕಾರಣ ಸಮಾಜವು ದಿನೇ ದಿನೇ ಕ್ಷಯಿಸತೊಡಗಿತು. ತಮ್ಮ ಬಳಿ ಇದ್ದ ಸರ್ವ ಸಂಪತ್ತುಗಳನ್ನೂ ಆಸ್ತಿಪಾಸ್ತಿಗಳನ್ನೂ ಮದುವೆ ಮುಂಜಿ ಇತ್ಯಾದಿಗಳಲ್ಲಿ ಅನಾವಶ್ಯ ಖರ್ಚುಮಾಡಿ ನಾಶಮಾಡಿದರು. ಎಷ್ಟೋ ದೊಡ್ಡ ವ್ಯಾಪಾರಿಗಳ ಕೈಕೆಳಗೂ ಗುಮಾಸ್ತರಾಗಿ ಮುಸ್ಲಿಮೇತರರೇ ಕೆಲಸ ನೋಡುತ್ತಿದ್ದರು.

ಒಂದು ಸಂಗತಿ ಮಾತ್ರ ಪ್ರಧಾನವಾಗಿತ್ತು. ಅದೆಂದರೆ ಅಂದಿನ ಕಾಲದಲ್ಲಿ ಮುಸ್ಲಿಮ್ ಸಮಾಜದಲ್ಲಿ ಐಖ್ಯತೆ ಹಾಗೂ ಸಮಾಜಕ್ಕಾಗಿ ಒಂದುಗೂಡುವ ಭಾವನೆಯಿತ್ತು. ಇಂದಿನಂತೆ ಅನಿಯಂತ್ರಿತಾವಸ್ಥೆಯಲ್ಲಿ ಮುಸಲ್ಮಾನರು ದಿನ ದೂಡುತ್ತಿದ್ದಿಲ್ಲ. ಆದ್ದರಿಂದಲೇ ಅಂದು ಅವರಿಗೆ ವಿದ್ಯೆಯಿಲ್ಲದಿದ್ದರೂ ಎತ್ತಲೂ ಮಾನ ಮರ್ಯಾದೆಯಿತ್ತು.

### ೫. ಜನಾಬ್ ಉಳ್ಳಾಲ್ ಸೀದಿಯಬ್ಬಾಕ—ಬಂದರ್.

ನನ್ನ ನೆನಪಿನ ಮಟ್ಟಿಗೆ ಅಂದು ಸುಮಾರು ಹತ್ತು ಹನ್ನೆರಡು ಸಾವಿರ ಮುಸಲ್ಮಾನರು ಮಂಗಳೂರಲ್ಲಿದ್ದರು. ಗೋಳಿಕಟ್ಟೆ ರೋಡಿನಲ್ಲಿಯೂ ಅನ್ಸಾರಿ ರೋಡಿನಲ್ಲಿಯೂ ಅನೇಕ ಪ್ರಖ್ಯಾತ ಮುಸ್ಲಿಮ್ ವ್ಯಾಪಾರಿಗಳಿದ್ದರು. ಆ ಸಮಯ ಕೊಯಿಲಾಂಡಿಯ ಕೋಯತಂಗಳ್‌ರವರು ಖಾಜಿಯಾಗಿದ್ದರು. ಮೇಲೆ ಹೇಳಿದ

www.bearyinfo.com

ಎರಡು ಮಾರ್ಗಗಳಲ್ಲಿ ಸುಮಾರು 25 ಮಂದಿ ಪ್ರಮುಖ ಮುಸ್ಲಿಮ್ ವ್ಯಾಪಾರಿಗಳಿದ್ದರು. ವ್ಯಾಪಾರದಿಂದಾಗಿ ಮುಸಲ್ಮಾನರ ಆರ್ಥಿಕ ಸ್ಥಿತಿಯು ಒಳ್ಳೆಯದಿತ್ತು. ಈ ವ್ಯಾಪಾರಿಗಳಿಗೆಲ್ಲರಿಗೂ ಗುಮಾಸ್ತರಾಗಿ ಮುಸ್ಲಿಮೇತರರೇ ಕೆಲಸ ಮಾಡುತ್ತಿದ್ದರು. ವಿದ್ಯಾಭ್ಯಾಸವು ಅಂದಿನ ನಮ್ಮ ಸಮಾಜದಲ್ಲಿ ಇಲ್ಲದಿದ್ದುದೇ ಇದರ ಕಾರಣ. ಕಾಫಿ ಮತ್ತು ಅಕ್ಕಿಯ ವ್ಯಾಪಾರವೇ ಮುಖ್ಯವಾಗಿ ಇತ್ತು. ಬಗಲೆಗಳು ಬಹಳ ಕಮ್ಮಿಯಾಗಿದ್ದರೂ ತುಂಬಾ ಮಂದಿ ಅರಬ್ಬಿಯರು ಬರುತ್ತಿದ್ದರು.

ಮುಸಲ್ಮಾನರಿಗೆ ಕದ್ರಿಯಲ್ಲಿಯೂ, ಕಂಕನಾಡಿಯಲ್ಲಿಯೂ, ಜಪ್ಪುವಿನಲ್ಲಿಯೂ ಎಲ್ಲೆಡೆಗಳಲ್ಲಿಯೂ ಮಾನಮರ್ಯಾದೆಯು ಸಿಗುತ್ತಿತ್ತು. ಅಂದು ಧಾರ್ಮಿಕ ಬುದ್ಧಿ ಇಂದಿನಷ್ಟು ಬೆಳೆದಿರಲಿಲ್ಲವಾದರೂ ಹಿಂದೂ—ಮುಸಲ್ಮಾನರೊಳಗೆ ಬಿಕ್ಕಟ್ಟು ಏನೂ ಇರುತ್ತಿದ್ದಿಲ್ಲ. ಅಂದಿನ ಹಿರಿಯರಾಗಿ ಬಾವಾಜಿ (ಹಾಜಿ ಅಬೂಬಕರ್) ಕರ್ತಬ್ಬುಕ, ವಲ್ಲಿ ಹುಸೈನಬ್ಬಾಕ, ವಲ್ಲಿ ಮಾಮುಕ, ಬೆಳ್ಳುಳ್ಳಿ ಇದ್ದಿನಬ್ಬಾಕ ಪ್ರಖ್ಯಾತರಾಗಿದ್ದರು.

ಅಂದಿನ ಜನರು ಮದುವೆ-ಮುಂಜಿ, ಕಾವುಕುತ್ತು ಮಂಗಿಲ, ಮೌಲೂದ್, ರಾತೀಬ್ ಮೊದಲಾದ ಸಂದರ್ಭಗಳಲ್ಲಿ ಸಾವಿರಾರು ಜನರಿಗೆ ಔತಣಕೊಟ್ಟು 200, 300 ಮುಡಿ ಅಕ್ಕಿ ಖರ್ಚುಮಾಡಿ 10-15 ಸಾವಿರ ರೂಪಾಯಿ ವ್ಯಯಿಸಿ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಈ ವಿಷಯವಾಗಿ ಅವರೊಳಗೆ ತಾನು ಮೇಲು ತಾನು ಮೇಲು ಎಂಬ ಪೈಪೋಟಿಯು ಪ್ರಚಾರದಲ್ಲಿತ್ತು.

ಆದರೂ ಮುಸಲ್ಮಾನರಲ್ಲಿ ಇಂದಿನಂತಿನ ಅನೈಕ್ಯ, ಅವ್ಯವಸ್ಥೆ, ಚಿಕ್ಕಪುಟ್ಟ ವಿಷಯಗಳಿಗಾಗಿ ಸಮಾಜವನ್ನು ಬಲಿಕೊಡುವ ದುರಭ್ಯಾಸವು ಇರಲಿಲ್ಲ. ಸಮಾಜಕ್ಕೆ ಏನಾದರೂ ಆಪತ್ತು ಬಂದರೆ ಎಲ್ಲರೂ ಒಂದುಗೂಡುತ್ತಿದ್ದರು. ಸಮಾಜದಲ್ಲಿ ಐಖ್ಯತೆ ಹಾಗೂ ಕೇಂದ್ರ ನಾಯಕತ್ವವು ಇತ್ತು ಎಂಬುದು ಪ್ರಧಾನ ಸಂಗತಿಯೆನ್ನಬೇಕು.

## ಜನಾಬ್ ವಲ್ಲಿ ಅಬೂಬಕರ್ ಸಾಹೇಬ್, ಬಂದರ್

ನನ್ನ ಕಾಲದಲ್ಲಿ ಮಂಗಳೂರಲ್ಲಿ ಮುಸಲ್ಮಾನರು ಬಹಳ ಮಟ್ಟಿಗೆ ಒಳ್ಳೆಯ ಸ್ಥಿತಿಯಲ್ಲಿದ್ದರು. ಸಾಧಾರಣ ಇಡೀ ಬಂದರದ ವ್ಯಾಪಾರವೇ ಮುಸಲ್ಮಾನರ ಕೈಯಲ್ಲಿತ್ತು. ಮೇಲೆ ಬೀದಿ ಕೆಳಗಿನ ಬೀದಿಗಳು ಸಾಧಾರಣ ಯುರೋಪಿನ ನಗರಕ್ಕೆ ಹೋಲುತ್ತಿದ್ದುವು. ಅಂದು ಕುದ್ರೋಳಿ, ಬೋಳಾರ, ಕಂದಕ ಮತ್ತು ಬಜಾರ್ ಈ ನಾಲ್ಕೂ ಕಡೆಗಳಲ್ಲಿ ತುಂಬಾ ಹಣವಂತರೂ ಮರ್ಯಾದಸ್ಥ ಗೃಹಸ್ಥರೂ ಮುಸಲ್ಮಾನ ಸಮಾಜದಲ್ಲಿದ್ದರು.

www.bearyinfo.com

ಮೊತ್ತಮೊದಲು ಅಬ್ದುಲ್ಖಾದರ್ ಮ್ಯೊಲಾರ್ ಎಂಬವರು ಖಾಜಿಯಾಗಿದ್ದರು. ಅನಂತರ ಬಂದವರು ಪ್ರಸಿದ್ಧ ವಿದ್ವಾಂಸರಾಗಿದ್ದ ಔಲಹಾಜಿಯವರು. ಅವರು ನಮ್ಮ ಸಮಾಜವನ್ನು ಸುಧಾರಿಸಲು ತುಂಬಾ ಶ್ರಮವಹಿಸಿದ್ದರು. ಔಲ ಹಾಜಿಯವರು ನಮ್ಮೂರಿಂದ ಹೋದದ್ದು ಮನನೊಂದು, ಬೇಜಾರಿನಲ್ಲಿ. ನನ್ನ ಮಟ್ಟಿಗೆ ಅದಕ್ಕೆ ಕಾರಣವೆಂದರೆ ನಮ್ಮೂರಿನ ಕುಂಞಾಲಿ ಬಾವಾಕ, ಚಿಲ್ಲಾಕ ಮೊಯ್ಸಬ್ಬಕ ಎಂಬ ಮೂವರು ಅವರನ್ನು ಮಸೀದಿಯಲ್ಲಿ ಕಾಸರಗೋಡಿನಿಂದ ಬಂದಿದ್ದ ಕೆಲವು ಮುಸ್ಲಿಮ್ ಸದ್ಗ್ರಹಸ್ಥರ ಮುಂದೆ ನಕ್ಲಿ ಮಾಡಿದ್ದರು. ಈ ಘಟನೆಯಿಂದ ಮನನೊಂದು ತನ್ನ ಕೆಲಸಕ್ಕೆ ರಾಜಿನಾಮೆಕೊಟ್ಟು ಅವರು ಹೋದರು. ಆದರೆ ಅವರು ಹೋದ ನಂತರವೇ ಕುಂಞಾಲಿ ಬಾವಾಕನವರು ಕಾಣದಾದರು. ಅವರು ಎಲ್ಲಿರುವರೆಂದು ಈ ತನಕವೂ ಪತ್ತೆಯಾಗಿಲ್ಲ. ಖಾಜಿ ಅಬ್ದುಲ್ಲ ಹಾಜಿಯವರನ್ನು ಅಪಮಾನಗೊಳಿಸಿದುದು ವಿಶೇಷವಲ್ಲ. ನಮ್ಮ ಸಮಾಜದ ಹಿರಿಯರು ಇಲ್ಲಿಗೆ ಬಂದ ಒಬ್ಬನೇ ಒಬ್ಬ ಖತೀಬರನ್ನಾಗಲಿ ಖಾಜಿಯನ್ನಾಗಲಿ ಮನನೋಯಿಸದೆ ಬಿಡಲಿಲ್ಲ.

ಔಲಹಾಜಿ ಹೋದ ಕೆಲವೇ ವಾರಗಳೊಳಗೆ ಪ್ಲೇಗ್ ವ್ಯಾಧಿಯು ಬಂತು. ನಮ್ಮ ಸಮಾಜದ ತುಂಬಾ ಜನರು ತೀರಿ ಹೋದರು. ಆ ಕಾಲದಲ್ಲಿ ಅಜೀಜುದ್ದೀನ್ ಕಲೆಕ್ಟರರು ನಮ್ಮ ಸಮಾಜದ ಉಪಯೋಗಕ್ಕೆ ಉರ್ವ ಮೈದಾನನ್ನು ಬಿಟ್ಟುಕೊಡುತ್ತೇನೆಂದು ಹೇಳಿದಾಗ ನಮ್ಮ ಹಿರಿಯರು ಒಪ್ಪಲಿಲ್ಲ.

ವಿದ್ಯಾಭ್ಯಾಸದಲ್ಲಿ ಆ ಕಾಲದಲ್ಲಿ ಮುಸ್ಲಿಮರು ಬಹಳ ಹಿಂದುಳಿದಿದ್ದರು. ಕೇವಲ ಒಂದೆರಡು ಶಾಲೆಗಳು ಮಾತ್ರ ಇದ್ದುವು. ಮುನಿಸಿಪಲ್ ಶಾಲೆಯೂ, ಕುಂಞರಕಾನದಲ್ಲಿ ಹಿಂದುಸ್ಥಾನಿ ಶಾಲೆಯೂ, ಬಂದರದಲ್ಲಿ ಮುನೀರುಲ್ ಇಸ್ಲಾಮ್ ಶಾಲೆಯೂ ಇದ್ದುವು. ಅಂದು ಇಂಗ್ಲಿಷ್ ಕಲಿತವರಾಗಿ ನಮ್ಮ ಮಾಪಿಳ್ಳೆಯವರಲ್ಲಿ ಒಬ್ಬರು ಇದ್ದುದು ಡಿ. ಎಂ. ಅಬ್ದುಲ್ಖಾದರ್ ಎಂಬವರು ಮಾತ್ರ. ಮತ ವಿದ್ಯಾಭ್ಯಾಸದಲ್ಲಿ ಕುಂಞಾಲಿಕ್ಕರ ಹಸನಬ್ಬಾಕನವರು ಹೆಸರುವಾಸಿಯಾಗಿದ್ದರು.

ಅಂದು ನಾಟ್ಟುಮೂಪರಾಗಿದ್ದವರು ಖಾನ್‌ಬಹದ್ದೂರ್ ಬಾವಾಜಿ, ಮಾವುರಿಯಬ್ಬಾಕ, ಕಮ್ಮಿ ಕುಂಞಮ್‌ಕ, ಕರ್ತ ಅಬ್ಬುಕ, ಬೆಸ್ತೆ ಅಬ್ಬುಕ, ವಲ್ಲಿ ಮುಹಮ್ಮದ್, ವಲ್ಲಿ ಬೆಸ್ತೆ ಅಬ್ಬುಕ, ವಲ್ಲಿ ಮಾಮುಕ, ಜೈಂತಾನ್ ಮಾಯಬ್ಬಾಕ, ಕಾರ್ಣ ಅಬ್ಬುಕ ಮೊದಲಾದವರು. ಆಗ ಅಬುಲ್‌ಕಾಸಿಂಕ ಎಂಬವರು ಮೊದಲನೆ ಎಂ. ಎಲ್. ಏ. ಆಗಿ ಮದ್ರಾಸಿಗೆ ಹೋಗಿದ್ದರು. ಕರ್ತ ಅಬ್ಬುಕನವರು ಮಾಪ್ಲಾ ರಿಲಿಜಸ್ ಎಂಡೊಮೆಂಟ್ ಕಮಿಟಿಯ ಸದಸ್ಯರಾಗಿದ್ದರು. ಮಸೀದಿಯ ಜಮಾತ್‌ಖಾನೆಯಾದದ್ದು ಅದೇ ಕಾಲದಲ್ಲಿ. ಮೊದಲು ಮಸೀದಿಯ ಆಡಳಿತೆಯನ್ನು ಬಾವಾಜಿಯವರೇ ನಡಿಸುತ್ತಿದ್ದರು. ಅನಂತರ ಭಿನ್ನಾಭಿಪ್ರಾಯ


www.bearyinfo.com

ವುಂಟಾಯಿತು. ಮೊದಲನೆದಾಗಿ ಕರ್ತ ಅಬ್ಬುಕ, ಕವ್ವಿ ಕುಂಞಂಕ, ಬಾವಬ್ಯಾರಿ ಈ ಮೂವರು ರಿಲೀಜಸ್ ಕಮಿಟಿಯ ಸದಸ್ಯರಾಗಿ ನೇಮಕ ಗೊಂಡರು. ಅನಂತರ ಮೊದಲನೆ ಮೊಕ್ತೇಸರರಾಗಿ ಸೂಪಿ ಮಾಯಬ್ಬಾಕ, ಶೇಕಂ ಯಾನೆ ಬಾವಬ್ಯಾರಿ, ಸೊಂಟು ಕೈ ಮಾಮುವಾಕ ಇವರು ಮೊಕ್ತೇಸರರಾಗಿ ಚುನಾಯಿತರಾದರು. ಅನಂತರ ಕಮಿಟಿಯಲ್ಲಿ ವಲ್ಲಿ ಹುಸೈನಬ್ಬಾಕ, ಉಳ್ಳಾಲ ಸೀದಿಯಬ್ಬಾಕ, ಒಡೆಯರ್ ಇದ್ದಿನಬ್ಬಾಕ ಈ ಮೂವರು ನೇಮಕಗೊಂಡರು. ಇವರು ಮಾಂಕಾಕನವರನ್ನು ಸಸ್ಪೆಂಡ್ ಮಾಡಿದರು. ಈ ರೀತಿ ಪರಸ್ಪರ ಜಗಳದಿಂದ ಮಸೀದಿಯ ಆಡಳ್ತೆಯೂ ಕೋರ್ಟಿನ ವಶವಾಯಿತು.

## ಜನಾಬ್ ಹಕೀಮ್ ಶೇಖ್ ಫರೀದ್ ಸಾಹೇಬ್.

ನನ್ನ ಎಳೆ ಪ್ರಾಯದಲ್ಲಿ ಮುಸಲ್ಮಾನರು ಆರ್ಥಿಕವಾಗಿ ಮುಂದುವರಿದಿದ್ದರೂ ವಿದ್ಯಾಭ್ಯಾಸದಲ್ಲಿ ತುಂಬಾ ಹಿಂದುಳಿದಿದ್ದರು. ನಾನು ಮತ್ತು ನನ್ನ ಕೆಲವು ಮಿತ್ರರು ಆ ಸಮಯ ಒಂದು ರಾತ್ರಿ ಶಾಲೆಯನ್ನು ಬಂದರದಲ್ಲಿ ತೆರೆದು ಕೆಲವರಿಗೆ ಅಕ್ಷರಜ್ಞಾನ ಕಲಿಸಲು ಪ್ರಯತ್ನಪಟ್ಟೆವು. ಆದರೆ ನಾವು ಖಿಲಾಫತ್ ಚಳುವಳಿ ಯಲ್ಲಿ ಭಾಗವಹಿಸಿದ ಕಾರಣ ನಮಗೆ ಆಗಾಗ ದೊಡ್ಡ ದೊಡ್ಡ ಕಾನ್ಫರೆನ್ಸುಗಳಿಗೂ ಸಭೆಗಳಿಗೂ ಹೋಗಲು ಬರುತ್ತಿತ್ತು. ಕೋಕನಾಡದಲ್ಲಿ ಜರುಗಿದ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಇಲ್ಲಿಂದ ಜನಾಬ್ ಜಮಾಲುದ್ದೀನ್ ಮಿಯಾಂ ಸಾಹೇಬರ ನೇತೃತ್ವದಲ್ಲಿ ನಾವು ಕೆಲವು ಖಿಲಾಫತ್ ಕಾರ್ಯಕರ್ತರೂ ಹೋಗಿದ್ದೆವು. ಬೆರಳೆಣಿಕೆಯಷ್ಟು ಜನರೇ ಅಂದು ವಿದ್ಯಾವಂತರಾಗಿದ್ದ ಕಾರಣ ಅವರನ್ನುಳಿದು ಸಾಮಾನ್ಯರಲ್ಲಿ ರಾಷ್ಟ್ರೀಯವಾಗಲಿ, ಸಾಮಾಜಿಕವಾಗಲೀ ಯಾವ ತರದ ಜಾಗೃತಿಯೂ ಇರಲಿಲ್ಲ.

ಆ ಕಾಲದಲ್ಲಿ ಪುತ್ತೂರ್ ಸಾಹೇಬರು ಖಿಲಾಫತ್ ಕಮಿಟಿಯ ಅಧ್ಯಕ್ಷ ರಾಗಿದ್ದರು. ಅವರು ಫಾರ್ಸಿ ಉರ್ದುಗಳಲ್ಲಿ ಒಳ್ಳೆಯ ವಿದ್ವಾಂಸರಾಗಿದ್ದರು. ಮುನಿಸಿಪಲ್ ಕೌನ್ಸಿಲರಾಗಿಯೂ ದುಡಿದಿದ್ದಾರೆ. ಮುನಿಸಿಪಲ್ ಶಾಲೆಗಳಲ್ಲಿ ಖುರಾನ್ ಕಲಿಸಬಾರದೆಂಬ ಅಂದಿನ ಅಭಿಪ್ರಾಯವನ್ನು ಬಲವಾಗಿ ಎದುರಿಸಿ ಖುರಾನ್ ಖಡ್ಡಾಯವಾಗಿ ಕಲಿಸಬೇಕೆಂದು ಸೂಚಿಸಿದ್ದರು. ಅವರು ಒಳ್ಳೆಯ ಭಾಷಣಕರ್ತರೂ, ಧಾರ್ಮಿಕ ಮನೋವೃತ್ತಿಯ ಮುಸ್ಲಿಮ್ ಧುರೀಣರೂ ಆಗಿದ್ದರು.

ಅಂದು ಮುಸ್ಲಿಮ್ ಸಮಾಜದ ಧುರೀಣರ ಪೈಕಿ ವಿದ್ಯಾವಂತರಾಗಿದ್ದವರು ಬೆರಳೆಣಿಕೆಯಷ್ಟೇ ಜನರಿದ್ದರು. ಅದರಲ್ಲೂ ಹೆಚ್ಚಿನ ಮಟ್ಟಿಗೆ ದಖ್ನಿಗಳಲ್ಲೇ. ಆದರೂ ಸಮಾಜದಲ್ಲಿ ಇಂದಿನಂತಹ ಅನಿಯಂತ್ರಿತಾವಸ್ಥೆ ಹಾಗೂ ಅಶಾಂತಿಯು ಅಂದು ಇರಲಿಲ್ಲ. ಮುಸಲ್ಮಾನರಿಗೆ ಎಲ್ಲಿಯೂ ಮರ್ಯಾದೆ ಇತ್ತು. ಅನಿಸ್ಲಾಮಿಕ

www.bearyinfo.com

ಆಚಾರಗಳೂ ವಿಶ್ವಾಸಗಳೂ ಜನರ ಹೃದಯಗಳಲ್ಲಿ ನೆಲೆಯೂರಿದ್ದುವು. ಮೊಹರಂ ಆಚಾರವಂತೂ ಇಸ್ಲಾಮಿನ ಏಕಮಾತ್ರ ಅನುಷ್ಠಾನವೆಂಬಷ್ಟು ಉತ್ಸಾಹದಿಂದ ಹಾಗೂ ನಿಷ್ಠೆಯಿಂದ ನೆರವೇರಿಸಲ್ಪಡುತ್ತಿತ್ತು. ಈ ಇಸ್ಲಾಮ್‌ವಿರುದ್ಧ ಆಚಾರಗಳನ್ನು ನಮ್ಮ ಸಾಮಾಜಿಕ ಜೀವನದಿಂದ ಹೊರತಳ್ಳಿ ಅವರಲ್ಲಿ ಇಸ್ಲಾಮಿನ ಜ್ಞಾನ ಜ್ಯೋತಿಯು ಬೆಳಗಲು ಶ್ರಮಿಸಿದವರೆಂದರೆ ಹಿಂದಿನ ಕಾಲದಲ್ಲಿ ದಿವಂಗತ ಮೌಲಾನಾ ಅಬ್ದುಲ್ಲ ಹಾಜಿಯವರೂ ಆಧುನಿಕ ಕಾಲದಲ್ಲಿ ಮೌಲಾನಾ ಅಲ್ ಹಾಫಿಝ್ ಸಯ್ಯಿದ್ ಮುಹಮ್ಮದ್ ಯೂಸುಫ್ ಸಾಹೇಬರು.

## ಜನಾಬ್ ಕುಂಞಮ್ಮದ್ ಮುಕ್ರಿ—ಕಂದಕ.

ನಾನು ಮಂಗಳೂರಿಗೆ ಬಂದು ಇಳಿಯುವಾಗ ನನ್ನ ಅಣ್ಣನವರಾದ ಖಾಜಿ ಮುಹಮ್ಮದ್ (ಬೈಕಂಪಾಡಿ ಖಾಜಿ)ರವರು ಬಂದರದ ಮುನೀರುಲ್ ಇಸ್ಲಾಮ್ ಶಾಲೆಯಲ್ಲಿ ಕಲಿಸುತ್ತಿದ್ದರು. ಅಲ್ಲಿ ಕುಂಞಿ ಮುಸ್ಲಿಯಾರರು ಮುಖ್ಯೋಪಾಧ್ಯಾಯರಾಗಿದ್ದರು. ಆ ಶಾಲೆಯ ಹೊರತು ಕಸ್ಬಾಗಲ್ಲಿಯಲ್ಲಿ ಮುನಿಸಿಪಲ್ ಶಾಲೆಯೂ ನಡಿಯುತ್ತಿತ್ತು.

ಕಂದಕದ ಬದ್ರಿಯಾ ಮಸೀದಿಯು ನನ್ನ ಕಣ್ಣಮುಂದೆ ನಿರ್ಮಾಣವಾಯಿತು. ಸದ್ರಿ ಮಸೀದಿಗೆ ಸ್ಥಳಕೊಟ್ಟುದು ಊಸೀಸೇಟ್ ಸಾಹೇಬರು. ಮಸೀದಿಯ ನಿರ್ಮಾಣಕಾರ್ಯದಲ್ಲಿ ಎದುರು ನಿಂತು ದುಡಿದವರಲ್ಲಿ ಹಾಜಿಮೂಸಾ ಕುಂಞಿ, ಅಬ್ದುಲ್ಲಬಿನ್ ಅಮೂಟಿಕ, ಸೈಕಲ್ ಅಹ್ಮದ್‌ಕ, ತೆಂಗಿನಕಾಯಿ ಮೊಯಿದಿನಬ್ಬಾಕ ಮೊದಲಾದವರು ಮುಂದಿನ ಸಾಲಿನಲ್ಲಿ ನಿಲ್ಲುತ್ತಾರೆ. ಅವರಿಗೆ ಪ್ರೋತ್ಸಾಹಕೊಟ್ಟು ಮಸೀದಿಯ ನಿರ್ಮಾಣ ಕಾರ್ಯದಲ್ಲಿ ನೆರವಾದವರು ಹಾಜಿ ಅಬ್ದುರ್ರಹ್ಮಾನ್ ಸಾಹೇಬರು (ಬೆಂಡಿಯಾಜಾರ್).

ನನ್ನ ಕಾಲದಲ್ಲಿ ಮಂಗಳೂರಿನಲ್ಲಿ ತುಂಬಾ ಮುಸ್ಲಿಮ್ ವ್ಯಾಪಾರಿಗಳು ಇದ್ದರು. ವಿದ್ಯಾವಂತರು ಅಷ್ಟು ಹೆಚ್ಚಿಗೆ ಇರಲಿಲ್ಲವಾದರೂ ಮುಸಲ್ಮಾನರಿಗೆ ಎಲ್ಲಿಯೂ ತುಂಬಾ ಆದರವಿತ್ತು. ಆ ಸಮಯ ಮುಸಲ್ಮಾನರ ಧುರೀಣರಾಗಿ ಪುತ್ತೂರ್ ಸಾಹೇಬರೂ, ಮಿಯಾಂ ಸಾಹೇಬರು ಮೊದಲಾದವರೂ ಮತಪಂಡಿತರಾಗಿ ಹಾಜಿ ಕುಂಞಿಮುಸ್ಲಿಯಾರರೂ ಇದ್ದರು.

ಬದ್ರಿಯಾ ಶಾಲೆಯು ಸ್ಥಾಪಿತವಾಗಿ ಕೆಲವು ವರ್ಷಗಳ ಒಳಗೆ ಮುನೀರುಲ್ ಇಸ್ಲಾಮ್ ಶಾಲೆಯನ್ನೂ ಇದಕ್ಕೆ ಸೇರಿಸಿಕೊಂಡರು. ಮುನೀರುಲ್ ಇಸ್ಲಾಮ್ ಶಾಲೆಯನ್ನು ಅಂದಿನ ಮೇಮನ್ ಸೇಟರೂ ಮಿಯಾಂ ಸಾಹೇಬ್ ಮೊದಲಾದ ಧುರೀಣರೂ ಸೇರಿ ನಡಿಸುತ್ತಿದ್ದರು. ಅದರಲ್ಲಿ ಅರಬಿ ಉರ್ದು ಕನ್ನಡ ಇಂಗ್ಲಿಷ್‌ಗಳಲ್ಲದೆ ಹೊಲಿಗೆ ಮತ್ತು ನೇಯ್ಗೆ ಕೆಲಸವನ್ನೂ ಕಲಿಸುತ್ತಿದ್ದರು.

www.bearyinfo.com

# ಕಣ್ಮರೆಯಾದ ನಮ್ಮ ಹಿರಿಯ ರತ್ನಗಳು

## ಇಸ್ಲಾಮಿಯಾ ಕ್ಲಬ್ – 1914ರಲ್ಲಿ

ಎದುರುಗಡೆ ಪುಟದಲ್ಲಿ ತೋರುವ ಚಿತ್ರವು ನಮ್ಮ ಸಮಾಜದ ಆಧುನಿಕ ವಿದ್ಯಾರ್ಜಿತ ಜನಕೂಟದ ಮೊದಲನೆ ಸಂಘ ಇಸ್ಲಾಮಿಯಾ ಕ್ಲಬ್—ಇದರ ಆಶ್ರಯದಲ್ಲಿ ಅಂದಿನ ಡಿಪ್ಯೂಟಿ ಕಲೆಕ್ಟರ್ ಆಮು ಸಾಹೇಬರನ್ನು ಬೀಳ್ಕೊಡಲು ಏರ್ಪಡಿಸಿದ ಸತ್ಕಾರಕೂಟದಂದು ತೆಗೆದ ಭಾವಚಿತ್ರ.

ಇದರಲ್ಲಿ ನೆಲದಲ್ಲಿ ಕುಳಿತವರು; ಎಡದಿಂದ ಬಲಕ್ಕೆ:

ಜನಾಬ್ ಹಾರಿಸ್ (ಸರ್ಕಲ್ ಇನ್ಸ್‌ಪೆಕ್ಟರ್ ಶೇಖ್ ಅಬ್ದುಲ್ಲಾಕದರ್‌ರವರ ಮಗ) ಶೇಖ್ ಇಬ್ರಾಹೀಮ್ ಸಾಹೇಬ್ (ರಿಟೈರ್ಡ್ ಕೋಪಿಸ್ಟ್,) ಜನಾಬ್ ಮಾಹಿನ್ ಶಂನಾಡ್ ಸಾಹೇಬರು (ಕ್ಲಬ್ಬಿನ ಸಂಸ್ಥಾಪಕರು) ಮಜೀದ್ ಖಾನ್ (ಮಣೆಗಾರ್) ಇಮಾಮುದ್ದೀನ್ ಸಾಹೇಬ್, ಬಿ.ಎ., ಬಿ.ಎಲ್., ಫಕೀರ್ ಸಾಹೇಬ್, (ಪೋಸ್ಟ್‌ಮಾಸ್ಟರ್ ಆಗಿದ್ದವರು.)


ಕುಳಿತವರು: ಎಡದಿಂದ ಬಲಕ್ಕೆ:

ದಿ। ವಕೀಲ್ ಉಸ್ಮಾನ್ ಸಾಹೇಬ್. (ಇವರು ಮುನಿಸಿಪಲ್ ಕೌನ್ಸಿಲರೂ ಆಗಿದ್ದರು.) ದಿ। ಜನಾಬ್ ಮಹ್ಮೂದ್‌ಖಾನ್, ರಿಟೈರ್ಡ್ ಮೇಜಿಸ್ಟ್ರೇಟ್. ದಿ। ಜನಾಬ್ ಡಿ. ಎಂ. ಇದಿನಬ್ಬಾ ಸಾಹೇಬ್ (ಬೆಂಚ್ ಮೇಜಿಸ್ಟ್ರೇಟ್), ದಿ। ಜನಾಬ್ ಶೇಖ್ ಅಬ್ದುಲ್ಲಾಕದರ್, ಸರ್ಕಲ್ ಇನ್ಸ್‌ಪೆಕ್ಟರ್. ದಿ। ಜನಾಬ್ ಆಮು, ಡಿಪ್ಯೂಟಿ ಕಲೆಕ್ಟರ್ (ಮಧ್ಯದಲ್ಲಿ) ದಿ। ಜನಾಬ್ ಜಮಾಲುದ್ದೀನ್ ಮಿಯಾಂ ಸಾಹೇಬ್ (ದಕ್ಷಿಣರಿಲೀಜಿಯಸ್ ಕಮಿಟಿ ಸದಸ್ಯರು) ದಿ। ಖಾನ್ ಬಹದ್ದೂರ್ ಮಹಮ್ಮದ್ ಶಂನಾಡ್ ಎಂ. ಎಲ್. ಎ., (ಕಾಸರಗೋಡ್) ದಿ। ಕಮಿಟಿ ಸೀದಿಯಬ್ಬಾ ಸಾಹೇಬ್, ದಿ। ಕಮಿಟಿ ಅಬ್ದುಲ್‌ಕಾದರ್ ಸಾಹೇಬ್ (ಮಾಪ್ಲಾ ರಿಲೀಜಿಯಸ್ ಕಮಿಟಿ ಸದಸ್ಯರು).

ಮತ್ತು ಇತರರನ್ನೂ ಕಾಣಬಹುದು.

---

www.bearyinfo.com



www.bearyinfo.com

# ಕಣ್ಮರೆಯಾದ ನಮ್ಮ ಹಿರಿಯ ರತ್ನಗಳು

ಮಾಪಿಳ್ಳೆಯವರಲ್ಲಿ ಮೊದಲನೆ
ಡಿಪ್ಯೂಟಿ ಕಲೆಕ್ಟರರಾದ



ದಿ। ಜನಾಬ್ ಪಿ. ಕುಂಞಾಯನ್.

ಇಪ್ಪತ್ತನೇ ಶತಮಾನದ ಮೂರನೆ ದಶಕದ
ಅತ್ಯಂತ ಜನಪ್ರಿಯ ಮುಸ್ಲಿಮ್ ನಾಯಕರಾಗಿದ್ದ



ದಿ। ಜನಾಬ್ ಪುತ್ತೂರ್ ಸಾಹೇಬ್.

ಜಿಲ್ಲೆಯಲ್ಲಿ ಮುಸ್ಲಿಂ ಪತ್ರಿಕೋದ್ಯಮದ
ಮೊದಲಿಗರೂ ಪ್ರಸಿದ್ಧ ಮುಸ್ಲಿಂ ಧುರೀಣರೂ ಆಗಿದ್ದ



ದಿ। ಜನಾಬ್ ಮುಹಮ್ಮದ್ ಶರೀಫ್ ಸಾಹೇಬರು.

www.bearyinfo.com

ಮಾಪಿಳ್ಳಾ ವಿದ್ಯಾಭ್ಯಾಸ ಪ್ರಚಾರದ
ಮೊದಲಿಗರೆಂದು ಹೆಸರಾಂತ



ಕಾಸರಗೋಡಿನ ದಿ। ಜನಾಬ್ ಮಹ್ಮೂದ್ ಶಂನಾಡ್
ಎಂ. ಎಲ್. ಎ. (ಸೆಂಟ್ರಲ್).

ದಿ. ಆರ್ಕುಳ ಇದಿನಬ್ಬ ಒಡೆಯರ್



ಮಾಪ್ಲಾ ರಿಲೀಜಿಯಸ್ ಎಂಡೋವ್ಮೆಂಟ್ ಕಮಿಟಿಯ
ಸದಸ್ಯರಲ್ಲೊಬ್ಬರಾಗಿದ್ದ ಇವರು ತನ್ನ ಅವಸಾನ
ಕಾಲದ ವರೆಗೂ ಮಂಗಳೂರ ಮುಸ್ಲಿಮರ
ಧುರೀಣರೆನಿಸಿಕೊಳ್ಳುತ್ತಿದ್ದರು.

ಇತ್ತೀಚೆಗಿನ ವರೆಗೂ ಜಿಲ್ಲೆಯ ಮುಸ್ಲಿಮ್
ಜನಪ್ರಿಯ ಎಂ. ಎಲ್. ಎ. ಆಗಿದ್ದು ಸಮಾಜದ
ಏಳಿಗೆಗೋಸ್ಕರ ಹಲವಾರು ರೀತಿ ದುಡಿದ



ಕಾರ್ಕಳದ
ದಿ। ಜನಾಬ್ ಎಚ್. ಎಸ್. ಹುಸೈನ್
ಬಿ. ಎ., ಬಿ. ಎಲ್., ಎಂ. ಎಲ್. ಎ.

www.bearyinfo.com



www.bearyinfo.com

## ಎದುರುಗಡೆ ತೋರುವ ಚಿತ್ರದಲ್ಲಿ

**ಎಡದಿಂದ ಬಲಕ್ಕೆ (ಕುಳಿತವರು):**

ಎರಡನೆಯವರು: ದಿವಂಗತ ಜನಾಬ್ ಟಿ. ಯು. ಅಬೂಬಕರ್— ಸುಶಿಕ್ಷಿತರೂ ಸಭ್ಯವಂತರೂ ಆಗಿದ್ದ ಈ ಹಿರಿಯರು ಉರ್ದು ಫಾರ್ಸಿ ಇಂಗ್ಲಿಷ್ ಇತ್ಯಾದಿಗಳ ವಿದ್ವಾಂಸರಾಗಿದ್ದರು. ಮುನೀರುಲ್ ಇಸ್ಲಾಮ್ ಶಾಲೆಯ ಮೆನೇಜರರಾಗಿ ದುಡಿದಿದ್ದಾರೆ.

ಮೂರನೆಯವರು: ದಿವಂಗತ ಹಾಜಿ ಕುಂಞಿ ಮುಸ್ಲಿಯಾರರು - ಮುನೀರುಲ್ ಇಸ್ಲಾಮ್ ಮದ್ರಸದ ಮುಖ್ಯೋಪಾಧ್ಯಾಯರಾಗಿಯೂ, ಬದ್ರಿಯಾ ಮಸೀದಿಯ ಇಮಾಮರಾಗಿಯೂ ಇವರು ತುಂಬಾ ಸೇವೆ ಸಲ್ಲಿಸಿದ್ದಾರೆ. ನಮ್ಮ ಸಮಾಜದ ಅಗ್ರಗಣ್ಯ ವಿಧ್ವಾಂಸರಾಗಿದ್ದರು.

ಐದನೆಯವರು: ದಿವಂಗತ ಅಬ್ದುರ್ರಹ್ಮಾನ್ ಸಾಹೇಬರು (ಡಿಪ್ಯೂಟಿ ಇನ್ಸ್‌ಪೆಕ್ಟರ್).

ಏಳನೆಯವರು: ದಿ। ಹಾಜಿ ಎಂ. ಮೊಯ್ದಿನಬ್ಬಾ—ಅವರು ಮುಸ್ಲಿಮ್ ಎಜ್ಯುಕೇಶನಲ್ ಎಸೋಸಿಯೇಶನಿನ ಸಂಸ್ಥಾಪಕರಲ್ಲೊಬ್ಬರಾಗಿದ್ದು ಬದ್ರಿಯಾ ಶಾಲೆ ಹಾಗೂ ಮಸೀದಿಗೆ ತುಂಬಾ ಸಹಾಯ ಮಾಡಿದ್ದಾರೆ.

ಎಂಟನೆಯವರು: ದಿ। ಜನಾಬ್ ಅಹ್ಮದ್ ಚೆಯ್ಯಬ್ಬಾ—ಮುಸ್ಲಿಮ್ ಎಜ್ಯುಕೇಶನಲ್ ಎಸೋಸಿಯೇಶನಿನ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿದ್ದು ಇವರು ಬದ್ರಿಯಾ ಶಾಲೆಗಾಗಿ ತುಂಬಾ ಸಹಾಯ-ಸಹಕಾರಗಳನ್ನಿತ್ತಿದ್ದಾರೆ.

**ನಿಂತವರು: (ಮೊದಲನೆ ಸಾಲಿನಲ್ಲಿ)**

ಮೊದಲನೆಯವರು: ದಿವಂಗತ ಮೂಸಾಕಾ—(ಶಾಲೆಯ ಪೇದೆಯಾಗಿ ಕೆಲಸ ಮಾಡಿದವರು).

ಎರಡನೆಯವರು: ದಿ। ಜನಾಬ್ ಪಿ. ಕೆ. ಪಕ್ಕಿ—ತುಂಬಾ ಸಮಯ ಬದ್ರಿಯಾ ಮಸೀದಿಯ 'ಮುತವಲ್ಲಿ'ಯಾಗಿ ಸೇವೆ ಸಲ್ಲಿಸಿದ್ದಾರೆ. ಬದ್ರಿಯಾ ಮಿನಾರವು ಇವರ ಪ್ರಯತ್ನದಿಂದಲೇ ನಿರ್ಮಿಸಲ್ಪಟ್ಟಿತು.

ಹತ್ತನೆಯವರು: ದಿ। ಜನಾಬ್ ಎಂ. ಅಬ್ದುರ್ರಹ್ಮಾನ್—ಮುಸ್ಲಿಮ್ ಸಮಾಜದ ಆರ್ಟಿಸ್ಟರಾಗಿದ್ದ ಇವರು ಬದ್ರಿಯಾ ಶಾಲೆಯಲ್ಲಿ ಡ್ರಾಯಿಂಗ್ ಮಾಸ್ಟರರಾಗಿದ್ದರು.

**ಕಡೆಯ ಸಾಲಿನಲ್ಲಿ ಮೊದಲನೆಯವರು:**

ತಲಚೇರಿಯ ಜನಾಬ್ ಇಬ್ರಾಹಿಮ್‌ಕುಟ್ಟಿ ಮೌಲವಿ—ಬದ್ರಿಯಾ ಶಾಲೆಯ ಪ್ರಥಮ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡಿದ ಇವರು ಅರಬಿ, ಉರ್ದು, ಫಾರ್ಸಿ, ಮಲೆಯಾಳ ಇತ್ಯಾದಿಗಳ ವಿದ್ವಾಂಸರು. ಈಗ ಇವರು ತಲಚೇರಿಯ

www.bearyinfo.com

(ಹಿಂದಿನ ಪುಟದಿಂದ ಮುಂದುವರಿದುದು.)
ಒಂದು ಮದ್ರಸದಲ್ಲಿ ಮುಖ್ಯೋಪಾಧ್ಯಾಯರಾಗಿರುತ್ತಾರೆ. ಇವರ ಶಿಕ್ಷಣ ಕ್ರಮದಂತೆ ಅತ್ಯಲ್ಪ ಸಮಯದೊಳಗೆ ಸಮಾಜದ ಮಕ್ಕಳು ಅತ್ಯಧಿಕ ಇಸ್ಲಾಮೀ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಿದ್ದರು. ಇವರನ್ನು ನಿಲ್ಲಿಸಿಕೊಳ್ಳಲು ಸಾಧ್ಯವಾಗದ ನಮ್ಮ ಸಮಾಜವು ನಿಜವಾಗಿಯೂ ಅದೃಷ್ಟ ಹೀನರೆನ್ನುವುದರಲ್ಲಿ ಸಂದೇಹವೇನು?

**ಎದುರುಗಡೆ ತೋರುವ ಚಿತ್ರದಲ್ಲಿ**

1939ರಲ್ಲಿ ಮೈಸೂರಿನ ದಿವಾನರಾಗಿದ್ದ ದಿವಂಗತ ಸರ್ ಮಿರ್ಜಾ ಇಸ್ಮಾಯಿಾಲರಿಗೆ ಮಂಗಳೂರ ಮುಸ್ಲಿಮರು ಕೊಟ್ಟ ಸಂಭ್ರಮದ ಸ್ವಾಗತದಂದು ತೆಗೆದ ಭಾವ ಚಿತ್ರದಲ್ಲಿ ಈ ಕೆಳಗಿನ ಹಿರಿಯರನ್ನು ಕಾಣಬಹುದು.

**ಕುಳಿತವರು: ಎಡದಿಂದಬಲಕ್ಕೆ:**

ಮಧ್ಯದಲ್ಲಿ–ದಿವಂಗತ ಸರ್ ಮಿರ್‌ಜಾ ಇಸ್ಮಾಯಿಾಲರು. ಅವರ ನಂತರ ಎರಡನೆಯವರು ದಿವಂಗತ ಜನಾಬ್ ಸಿ. ಮಹ್ಮೂದ್ ಸಾಹೇಬರು—ನಮ್ಮ ಸಮಾಜದ ಅತ್ಯಂತ ಜನಪ್ರಿಯ ಧರ್ಮಾಭಿಮಾನಿಗಳಾಗಿದ್ದರು. ಬದ್ರಿಯಾ ಮಸೀದಿಯ ಸ್ಥಾಪನೆಯಲ್ಲೂ ಬದ್ರಿಯಾ ಶಾಲೆಯ ಸ್ಥಾಪನೆಯಲ್ಲೂ ಮೊದಲಿನ ಸಾಲಿನಲ್ಲಿ ದುಡಿದ ವ್ಯಕ್ತಿ. ಬದ್ರಿಯಾ ಶಾಲೆಯ ಮೂಲಕಟ್ಟಡವು ಇವರು ಕಟ್ಟಿಸಿ ಸಮಾಜಕ್ಕೆ ಬಿಟ್ಟು ಕೊಟ್ಟುದಾಗಿದೆ. ತನ್ನ ಮರಣಕ್ಕೆ ಕೆಲವೇ ಸಮಯ ಹಿಂದೆ ಪೋಲೀಸ್ ಲೈನ್ ಮಸೀದಿಯ ಬಳಿ ಒಂದು ಮುಸ್ಲಿಮ್ ಹೋಸ್ಟೆಲನ್ನು ನಿರ್ಮಿಸಿ ಮುಸ್ಲಿಮ್ ಎಜ್ಯುಕೇಶನಲ್ ಎಸೋಸಿಯೇಶನಿಗೆ ವಖ್ಫ್ ಮಾಡಿರುತ್ತಾರೆ.

ನಾಲ್ಕನೆಯವರು: ದಿವಂಗತ ಹಾಜಿ ಕೆ. ಅಬ್ದುಲ್ಕಾದರ್ ಬಾವಾ—ಸಮಾಜದ ಪ್ರಸಿದ್ಧ ವರ್ತಕರಲ್ಲೊಬ್ಬರಾಗಿದ್ದ ಇವರು ಮುಸ್ಲಿಮ್ ಎಜ್ಯುಕೇಶನಲ್ ಎಸೋಸಿಯೋಶನಿನ ಸದಸ್ಯರಾಗಿದ್ದುದಲ್ಲದೆ ಅದರಲ್ಲಿ ಸ್ಕೋಲರ್ ಶಿಪ್ ಫಂಡ್ ಒಂದರ ಸ್ಥಾಪಕರೂ ಆಗಿದ್ದರು. ಮಾತ್ರವಲ್ಲ, ಇವರು ವಖ್ಫ್ ಮಾಡಿದ ಮೂರು ಸ್ಕೋಲರ್‌ಶಿಪ್‌ಗಳು ಕೆನರಾ ಹೈಸ್ಕೂಲಿನಲ್ಲಿಯೂ ಇವೆ.

ಚಿತ್ರದಲ್ಲಿ ಹಿಂದೆ ನಿಂತಿರುವವರು ಮುಸ್ಲಿಮ್ ವೆಲ್ಫೇರ್‌ಲೀಗಿನ ಚಿತ್ರಮಯ ಮುಸ್ಲಿಮ್ ವಾಲಂಟಿಯರ್ ಕೋರ್ ಸದಸ್ಯರು. ಈ ವಾಲಂಟಿಯರ್ ಕೋರಿನ ಅಸ್ತಿತ್ವವು ಅಳಿದುದಲ್ಲದೆ ಅದರ ಸಮವಸ್ತ್ರಕೂಡಾ ಮಾಯವಾಗಿ ಹೋಯಿತು.

www.bearyinfo.com

# "ಈ ಗತಿಗೆಟ್ಟ ಸಮಾಜದ ಅಭ್ಯುದಯಕ್ಕಾಗಿ ಪ್ರಾರ್ಥಿಸಿರಿ"

## ಮಂಗಳೂರು ಕಚ್ಚಿಮಸೀದಿ ಖತೀಬರಾಗಿದ್ದ ಅಲ್‌ಹಾಜ್ ಅಲ್ಲಾಮಃ ಹಾಫಿಝ್ ಸಯ್ಯಿದ್ ಮುಹಮ್ಮದ್ ಯೂಸುಫ್ ಸಾಹೇಬ್

### ಅವರು ಹಜ್ ಯಾತ್ರೆಗೆ ಹೊರಟಾಗ ಮಂಗಳೂರು ಮುಸಲ್ಮಾನರು ಅರ್ಪಿಸಿದ ಮಾನಪತ್ರ.

ಸುಪ್ರಸಿದ್ಧ ಮತಪಂಡಿತರೂ ಕಳೆದ ಹತ್ತು ಹದಿನೈದು ವರ್ಷಗಳಿಂದ ಎಡೆಬಿಡದೆ ಇಸ್ಲಾಮೀ ವಿದ್ಯಾಪ್ರಚಾರಕ್ಕಾಗಿ ದುಡಿಯುತ್ತಾ ಬಂದ, ಜಿಲ್ಲೆಯ ಮುಸಲ್ಮಾನರಿಗೆಲ್ಲರಿಗೂ ಸುಪರಿಚಿತರಾದ ಹಾಫಿಝ್ ಸಾಹೇಬರು ಹಜ್ ಅನುಷ್ಠಾನ ನೆರವೇರಿಸಲಿಕ್ಕಾಗಿ ಮಕ್ಕಾ ಯಾತ್ರೆಗೆ ಹೊರಡಲು ನಿರ್ಧರಿಸಿದ ಪ್ರಯುಕ್ತ ಅವರನ್ನು ಬೀಳ್ಕೊಡಲು ಮಂಗಳೂರು ಮುಸಲ್ಮಾನರ ಒಂದು ಮಹಾಸಭೆಯು ಕಳೆದ ತಾ. 4—4—54 ರಲ್ಲಿ ಕಚ್ಚೀಮಸೀದಿಯಲ್ಲಿ ಜರಗಿತ್ತು. ಸ್ಥಳೀಯ ಮುನಿಸಿಪಲ್ ಕೌನ್ಸಿಲರ್ ಆಗಿದ್ದ ಜನಾಬ್ ಬಿ. ಎಂ. ಹಸನ್ ಹಾಜಿ ಮೊಹಿಯದ್ದೀನ್ ಅವರು ಅಧ್ಯಕ್ಷತೆ ವಹಿಸಿದ್ದರು. ಸದ್ರಿ ಸಭೆಯಲ್ಲಿ ಮೌಲನಾರವರಿಗೆ ಮಂಗಳೂರು ಮುಸಲ್ಮಾನರ ಪರವಾಗಿ ಸಮರ್ಪಿಸಲಾದ ಮಾನಪತ್ರದ ಕನ್ನಡ ಅನುವಾದವನ್ನು ಈ ಕೆಳಗೆ ಕೊಡಲಾಗಿದೆ. ಇದರಲ್ಲಿ ಮಂಗಳೂರ ಮುಸ್ಲಿಮ್ ಸಮಾಜದ ಅಂದಿನ ನಿಜ ಸ್ಥಿತಿಗತಿಗಳನ್ನು ಚಂದವಾಗಿ ಚಿತ್ರಿಸಲ್ಪಟ್ಟಿರುವುದರಿಂದ ಈ ಲೇಖನವನ್ನು 'ನವಶಕ್ತಿ' ಪಕ್ಷ ಪತ್ರಿಕೆ ತಾ. 15—4—1954 ರ ಸಂಚಿಕೆಯಿಂದ ಆಯ್ದು ಪ್ರಕಟಿಸಲಾಗಿದೆ—ಸಂ]

ಸನ್ಮಾನ್ಯ ಮೌಲಾನಾರವರೇ!

ಅಸ್ಸಲಾಮು ಅಲೈಕುಂ ವರಹ್ಮತುಲ್ಲಾಹ್.

ನಿಮ್ಮ ಹಜ್ ಪ್ರಯಾಣಕ್ಕೆ ಸಿದ್ಧತೆಯ ಸುದ್ದಿ ಕೇಳಿ ನಮ್ಮ ಹೃದಯಗಳಲ್ಲಿ ಉಬ್ಬಿ ಬಂದ ಸಂತೋಷ ಮತ್ತು ವ್ಯಸನದ ಮಿಶ್ರಿತ ಭಾವಗಳನ್ನು ನಿಮ್ಮ ಮುಂದೆ ಪ್ರಕಟಿಸಲು ಬೇಕಾಗಿ ನಾವು ಇಲ್ಲಿ ಬಂದು ಸೇರಿದ್ದೇವೆ. ಹೃದಯದ ವಿಕಾರಗಳಿಗೆ ಶಬ್ದಗಳ ವೇಷ ಹಾಕುವುದು ಸುಲಭಸಾಧ್ಯ ಕೆಲಸವಲ್ಲದಿದ್ದರೂ, ಈ ರೀತಿ ನಮ್ಮ ಭಾವನೆಗಳ ಪ್ರಕಟನೆಯಿಂದ ಕನಿಷ್ಟ ಪಕ್ಷ ನಮ್ಮ ಮನಸ್ಸಿನ ನೋವನ್ನಾದರೂ ನಿಮ್ಮ ಮುಂದೆಯೂ ನಮ್ಮ ಸಮಾಜದ ಮುಂದೆಯೂ ಇಡಬಹುದೆಂದು ಈ ಪ್ರಯತ್ನ ಮಾಡಿರುತ್ತೇವೆ. ನಮ್ಮ ನಿಮ್ಮ ಸಂಬಂಧವು ನಿನ್ನೆ ಮೊನ್ನೆದಲ್ಲ. ಕಳೆದ ಹತ್ತು ವರ್ಷಗಳ ಎಡೆಬಿಡದ ಸಂಬಂಧವದು. ಈ ಹತ್ತು ವರ್ಷಗಳಲ್ಲಿ

www.bearyinfo.com

ತಾವು ನಮ್ಮ ಸಮಾಜಕ್ಕೆ ಮಾಡಿದ ಮಹೋಪಕಾರಗಳಿಗೆ ನಾವು ತಮಗೆ ಚಿರ ಋಣಿಯಾಗಿರುತ್ತೇವೆ.

ತಾವು ಇಲ್ಲಿಗೆ ಬರುವುದಕ್ಕೆ ಮೊದಲಿನ ಮತ್ತು ಇಂದಿನ ಮಂಗಳೂರಿನ ಪರಿಸ್ಥಿತಿಗಳನ್ನು ನಾವು ಅವಲೋಕಿಸಿ, ಇಷ್ಟು ದೊಡ್ಡ ಕ್ರಾಂತಿ ಮತ್ತು ಬದಲಾವಣೆಗೆ ಕಾರಣಭೂತವು ತಮ್ಮ ಅನುಗ್ರಹಪ್ರದ ವ್ಯಕ್ತಿಯೆಂಬುದನ್ನು ನೆನಪಿಗೆ ತರುವಾಗ ಕೃತಜ್ಞತೆಯ ಭಾವಗಳಿಂದ ನಮ್ಮ ಹೃದಯವು ತುಂಬಿ ತುಳುಕುತ್ತದೆ. ತಮ್ಮ ವೃದ್ಧಾಪೆಯ ಈ ಸಮಯದಲ್ಲಿ ತಾವು ಎಷ್ಟೊಂದು ತರುಣ ಹುರುಪುಗಳಿಂದ ದೀನಿನ ನಿಷ್ಕಪಟ ಸೇವೆ ಮಾಡುವಿರೋ ಅದು ಪಾಪಿಗಳಾದ ನಮಗೆ—ನಮ್ಮ ಸಮಾಜದ ನಾಯಕರುಗಳಿಗೆ—ಆದರ್ಶಪ್ರಾಯವಾಗಿದೆ. ತಮ್ಮ ಅನುದಿನದ ಪ್ರಯತ್ನಗಳ ಕಾರಣದಿಂದ ನಮ್ಮ ಸಮಾಜದ ಒಂದು ಭಾಗವು ಬಿದ್‌ಅತ್ (ದೀನಿನಲ್ಲಿ ಅಡಿಸ್ಥಾನವಿಲ್ಲದ ಆಚಾರಗಳು) ಗಳಿಂದಲೂ, ಅನಿಸ್ಲಾಮಿಕ ಆಚಾರ ವಿಚಾರಗಳಿಂದಲೂ ಶುದ್ಧರಾಗಿ ಇಸ್ಲಾಮೀ ಅನುಷ್ಠಾನಗಳಲ್ಲಿ ಅನುರಾಗವನ್ನು ಬೆಳೆಯಿಸಿ ಅವುಗಳನ್ನು ಅನುಸರಿಸುವಂತಾಯಿತು. ಈ ಹತ್ತುವರ್ಷಗಳಲ್ಲಿ ನಿಮ್ಮ ಕೈಗಳಿಂದ ನಮ್ಮ ಈ ಅವನತಿ ಹೊಂದಿದ ಜನಾಂಗದಲ್ಲಿ ಉಂಟಾದ ಕ್ರಾಂತಿಯನ್ನು ವಿಶೇಷವಾಗಿ ಲೋಕ ಪೂಜೆಯಲ್ಲಿಯೂ ಸುಖಾಡಂಭರಗಳಲ್ಲಿಯೂ ಮೆರಿ ಮೆರಿದು ಮೈಮರೆತಿದ್ದ ನಮ್ಮ ತರುಣ ವೃಂದದಲ್ಲಿ ಉಂಟಾದ ದೀನಿನ ಮೇಲಿನ ಪ್ರೇಮ ಮತ್ತು ಲಕ್ಷ್ಯವನ್ನು ತಿಳಿಯಲು ಮಂಗಳೂರಿನ ಅವಸ್ಥೆಗಳ ಪರಿಚಯವಿರುವ ಮತ್ತು ಇಲ್ಲಿಯ ಮುಸ್ಲಿಮರ ಭೂತ ವರ್ತಮಾನಕಾಲ ಸ್ಥಿತಿಗತಿಗಳ ಜ್ಞಾನವಿರುವವರಿಗಲ್ಲದೆ ಸಾಧ್ಯವಿಲ್ಲ.

ಮಂಗಳೂರಿನ ಭೂಮಿಯು ಇಸ್ಲಾಮೀ ವಿದ್ಯಾಜ್ಞಾನಗಳಿಗೆ ಬಂಜರು ಭೂಮಿಯಂತಿದೆ. ಜನರು ಅಲ್ಲಾಹನ ದೀನನ್ನು ಖುರಾನ್ ಮತ್ತು ಹದೀಸಿನ ಬೆಳಕಿನಲ್ಲಿ ಗ್ರಹಿಸುವ ಬದಲು ತಮ್ಮ ಅಜ್ಜ ತಾತರ ರೂಢಿ ಸಂಪ್ರದಾಯ ಗಳಿಂದಲೇ ತಿಳಿಯುವ ಹಟ ಹಿಡಿದಿರುವ ಈ ವಾತಾವರಣದಲ್ಲಿ ತಾವು ಅಷ್ಟೊಂದು ಸಮಾಧಾನ ಚಿತ್ತದಿಂದ ಇಲ್ಲಿಯ ಧನಿಕ—ಬಡವ, ವಿದ್ಯಾವಂತ, ಅವಿದ್ಯಾವಂತ ಎಂಬೀ ವ್ಯತ್ಯಾಸಗಳೇನೂ ಇಡದೆ ಎಲ್ಲಾ ಪಂಗಡಗಳ ಜನರಲ್ಲಿ ಇಸ್ಲಾಮೀ ವಿಚಾರ ಬೆಳಕನ್ನು ಬೆಳಗಿಸಿದಿರಿ. ಮೌಢ್ಯ ಮತ್ತು ಅಜ್ಞಾನದ ಈ ಕತ್ತಲೆಯ ವಾತಾವರಣದಲ್ಲಿ ಜ್ಞಾನ ದೀಪವನ್ನು ಹಚ್ಚಿಸಿದಿರಿ. ತಮ್ಮ ಈ ಚಟುವಟಿಕೆ, ದೀನಿನ ಪ್ರಚಾರ—ಸೇವೆಯ ಮಾರ್ಗದಲ್ಲಿ ತಮ್ಮ ಎಡೆಬಿಡದ ಪರಿಶ್ರಮಗಳು ಕಣ್ಣಿದ್ದವರೆಲ್ಲರ ದೃಷ್ಟಿಮುಂದೆ ಇದೆ. ಇಂದು ಮಂಗಳೂರು ಮುಸ್ಲಿಮ್ ಜನತೆಯಲ್ಲಿ ದೀನಿನ ಕಡೆಗೆ ಎಳ್ಳಷ್ಟಾದರೂ ಶ್ರದ್ಧೆಯು ಕಾಣುತ್ತಿರುವುದಾದರೆ ಅದನ್ನು ಸೃಷ್ಟಿಸುವುದರಲ್ಲಿ ತಮ್ಮ ಪಾಲು ದೊಡ್ಡದು ಎಂಬುದನ್ನು ಮರೆಯಲಾಗುವುದಿಲ್ಲ. ಮಾತ್ರವಲ್ಲ ಜನರು ದೀನಿ ಅನುಷ್ಠಾನಗಳನ್ನು ಕ್ರಮ ಪ್ರಕಾರ

www.bearyinfo.com

ಅನುಸರಿಸಲು ಉದ್ಯುಕ್ತರಾದುದೂ ತಮ್ಮ ಪ್ರೇರೇಪಣೆ ಬೋಧನೆಗಳ ಫಲವಾಗಿ ಎಂದರೂ ಅತಿಶಯೋಕ್ತಿಯಾಗಲಾರದು.

ಇದೀಗ ತಾವು ಹಜ್ ನಿರ್ವಹಿಸಲಿಕ್ಕಾಗಿ ಹೋಗಲು ಎದ್ದಿರುವಾಗ ತಮ್ಮ ಅಭಾವದ ಯೋಚನೆಯು ನಮ್ಮನ್ನು ಪೀಡಿಸತೊಡಗಿದೆ. ತಮ್ಮ ಅಭಾವವು ನಮ್ಮ ಸಮಾಜಕ್ಕೆ ಒಂದು ಅಮೂಲ್ಯ ಶಕ್ತಿಯಿಂದ ವಿರಹಿತಗೊಳಿಸುವುದು. ತಾವು ನಮಗೆ ಜ್ಞಾನದ ದೀಪ ಸ್ಥಂಭರಾಗಿದ್ದೀರಿ. ಅರಿವಿನ ಕೇಂದ್ರವಾಗಿದ್ದೀರಿ. ನಮ್ಮ ಸಮಾಜಕ್ಕೆ ನಮ್ಮ ನಾಡಿಗೆ ತಮ್ಮ ಅನುಗ್ರಹಪ್ರದ ವ್ಯಕ್ತಿತ್ವವು ತುಂಬಾ ಮಾನ ಮರ್ಯಾದೆಗಳಿಗೆ ಕಾರಣ ಭೂತವಾಗಿದ್ದಿತು. ಇದೀಗ ತಾವು ನಮ್ಮನ್ನು ಅಗಲಿ ಹೋಗಲೆದ್ದಿರುವ ಈ ಸಂದರ್ಭದಲ್ಲಿ ತಮ್ಮಂತಹ ದೇವ ಭಕ್ತ ಸತ್ಪುರುಷರು ನಮ್ಮ ಜನಾಂಗದಲ್ಲಿ ನಮ್ಮ ನಾಡಿನಲ್ಲಿ ಎಲ್ಲಿಯೂ ನಮಗೆ ಕಾಣಸಿಗುವುದಿಲ್ಲ. ಎಷ್ಟೇ ದೊಡ್ಡ ಮತ ಪಂಡಿತರನ್ನೂ ಶಾಶ್ವತವಾಗಿ ಒಲಿಸಿಕೊಳ್ಳಲು ಅವರನ್ನು ಇಲ್ಲೇ ಇರಿಸಿಕೊಳ್ಳಲು ನಮ್ಮ ಮುಸ್ಲಿಮ್ ಸಮಾಜಕ್ಕೆ ಏಕೆ ಸಾಧ್ಯವಾಗುವುದಿಲ್ಲವೋ, ಇದರ ರಹಸ್ಯವು ದೇವರಿಗೇ ಗೊತ್ತು. ಮಾತ್ರವಲ್ಲ, ನಮ್ಮ ಸಮಾಜವು ಇಷ್ಟು ವರ್ಷಗಳಿಂದಲೂ ಒಬ್ಬನೇ ಒಬ್ಬ ಯೋಗ್ಯ ಮತ ಪಂಡಿತನನ್ನು ತಾವಾಗಿ ತಯ್ಯಾರಿಗೊಳಿಸಲೂ ಇಲ್ಲ. ಇಷ್ಟೇ ಅಲ್ಲ. ಇಸ್ಲಾಮೀ ವಿದ್ಯಾಜ್ಞಾನಗಳಿಂದ, ವಿದ್ವಾಂಸರುಗಳಿಂದ ಬೇಕಾದಷ್ಟು ಫಲ ಹೊಂದುವುದರಲ್ಲಿಯೂ ನಮ್ಮ ಸಮಾಜವು ತುಂಬಾ ಹಿಂದೆ ಇದೆ. ಮಂಗಳೂರಿನ ಮುಸಲ್ಮಾನರು ಉನ್ನತಿಗೇರುವ ಬದಲು ಅವನತಿಯ ಕಡೆಗೆ ಇಳಿಯುತ್ತಿದ್ದಾರೆಂಬುದಕ್ಕೆ ಇದೊಂದು ದೃಷ್ಟಾಂತವಲ್ಲವೆ? ನಮ್ಮ ನಾಯಕರು ವಿಶೇಷವಾಗಿ ನಮ್ಮ ತರುಣರು ಈ ಕುರಿತು ಆಲೋಚಿಸಬೇಕಾಗಿದೆ.

ಇದೀಗ ತಾವು ನಮ್ಮನ್ನು ಬಿಟ್ಟು ಅಗಲುತ್ತಿದ್ದೀರಿ. ಸುದೈವವಶಾತ್ ಒಂದು ಅನುಗ್ರಹಪ್ರದ ಯಾತ್ರೆಗಾಗಿ ಹೊರಡುತ್ತಿರುವಿರಿ. ಅಲ್ಲಾಹನು ತಮ್ಮ ಉದ್ದೇಶಗಳನ್ನು ಪೂರ್ತಿಗೊಳಿಸಲಿ. ತಾವು ಎಷ್ಟೊಂದು ನಿಸ್ವಾರ್ಥ ಮನಸ್ಸಿನಿಂದ, ಎಷ್ಟೊಂದು ಧೈರ್ಯದಿಂದ ನಮ್ಮಿ ದುರಾದೃಷ್ಟ ಸಮಾಜದ ಸೇವೆ ಮಾಡುತ್ತಿದ್ದಿರೋ ಅದಕ್ಕಾಗಿ ಅಲ್ಲಾಹನು ತಮಗೆ ಒಳ್ಳೆಯ ಪ್ರತಿಫಲ ಕೊಡಲಿ. ಆಮೀನ್.

**ತಾವು ಯಾವುದೇ ಪರಿಸ್ಥಿತಿಯಲ್ಲಿದ್ದರೂ, ಯಾವುದೇ ಸ್ಥಳದಲ್ಲಿದ್ದರೂ ನಮಗಾಗಿ, ನಮ್ಮ ಈ ಗತಿಗೆಟ್ಟ ಮತ್ತು ಕೃತಘ್ನ ಸಮಾಜದ ಅಭ್ಯುದಯಕ್ಕಾಗಿ ಅಲ್ಲಾಹನೊಡನೆ ಪ್ರಾರ್ಥಿಸಿರಿ.** ಪವಿತ್ರ 'ದೇವರ ಮನೆ' (ಬಯ್ತುಲ್ಲಾ)ಯ ಸಂದರ್ಶನದ ಸಮಯ ತಮ್ಮ ತಾತ ಮತ್ತು ನಮ್ಮ ಪ್ರಿಯ ರಸೂಲರಾದ ಹ. ಮುಹಮ್ಮದ್ (ಸ. ಅ.)ರವರ ಸನ್ನಿಧಿಯಲ್ಲಿ ಹಾಜರಾಗುವ

www.bearyinfo.com


ಸಂದರ್ಭದಲ್ಲಿ, ಪಾಪಿಗಳೂ ದುರಾದೃಷ್ಟರೂ ಆದ ನಮಗಾಗಿ ಪ್ರಾರ್ಥಿಸಲು ಮರೆಯಬೇಡಿರಿ.

ನಮ್ಮ ಹೃದಯಗಳು ಇಂದು ಒಂದರಿಂದೊಂದು ಮುರಿದು ನಿಂತಿರುವುವು. ಅವು ಒಂದುಗೂಡುವಂತೆ ಪ್ರಾರ್ಥಿಸಿರಿ. ನಮ್ಮ ಸಮಾಜವು ಇಂದು ಅನಾವಶ್ಯಕವೂ ತಲೆಬುಡವಿಲ್ಲದ ಚಿಕ್ಕಪುಟ್ಟ ವಿಷಯಗಳಲ್ಲಿ ತನ್ನ ಸಮಯವನ್ನೂ ಶಕ್ತಿಯನ್ನೂ ವ್ಯಯಿಸುತ್ತಿರುವುದು. ಅದು ನಿಲ್ಲುವಂತಾಗಿ ನಾವು ದೀನಿನ ಪ್ರಚಾರಕ್ಕಾಗಿ ಹಾಗೂ ಅದರ ಸ್ಥಾಪನೆಗಾಗಿ ಶ್ರಮವಹಿಸುವಂತೆ ಇಹ ಪರಗಳೆರಡರಲ್ಲಿಯೂ ಜಯಹೊಂದುವಂತೆ ತಾವು ಪ್ರಾರ್ಥಿಸಿರಿ—

ಇಂತಿ, ನಿಮ್ಮ ಸೇವಕರು,
**ಮಂಗಳೂರು ಮುಸಲ್ಮಾನರು.**

---

**ಸ್ಥಳೀಯ ಕಚ್ಚಿ ಮಸೀದಿಯ ಮಿಂಬರ್ ಮತ್ತು ಮಿಹ್ರಾಬ್.**



ಈ ಮಿಂಬರ್‌ನ ಮೇಲೆ ನಿತ್ತು ಮೌಲಾನಾ ಹಾಫಿಜ್ ಸಾಹೇಬರು ಕೊಡುತ್ತಿದ್ದ ಶುಕ್ರವಾರ ಖುತ್ಬಗಳಿಂದಾಗಿ ನಮ್ಮ ಸಮಾಜದಲ್ಲಿ ಒಂದು ಅಪೂರ್ವ ಜಾಗೃತಿಯು ಉಂಟಾಯಿತು. ಮೌಲಾನಾರವರು ಈಗ ಕುಲಶೇಕರದ ಮಸೀದಿಯಲ್ಲಿ ಖತೀಬರಾಗಿದ್ದಾರೆ.

www.bearyinfo.com

# ನಮ್ಮ ಸಮಾಜದ ಸುಧಾರಣೆಯ ಕುರಿತು ಕೆಲವು ಅಭಿಪ್ರಾಯಗಳು

[ಇತ್ತಲಾಗೆ ಕೆಲವು ಸಮಯದಿಂದ ನಮ್ಮ ಸಮಾಜ ಬಾಂಧವರಲ್ಲಿ ತಮ್ಮ ದಯನೀಯಾವಸ್ಥೆಯ ಕುರಿತು ಒಂದು ಅಪೂರ್ವ ಪ್ರಜ್ಞೆಯು ಮೂಡಿದಂತಿದೆ. ಹಲವು ಧನಿಕರೂ ವಿದ್ಯಾವಂತರೂ ಆದ ಮುಸ್ಲಿಮ್ ತರುಣರು ಸಮಾಜದಲ್ಲಿ ತಲೆದೋರಿರುವ ಸ್ಥಂಬನವನ್ನು ಕೊನೆಗೊಳಿಸಲೋಸುಗ ತಮ್ಮ ಎಲ್ಲಾ ವೈಯಕ್ತಿಕ ಅಭಿಪ್ರಾಯ ವ್ಯತ್ಯಾಸಗಳನ್ನು ಬದಿಗೊತ್ತಿ ಸಮಾಜದ ಹಿತಾಭಿವೃದ್ಧಿಗಳಿಗೆ ಸಹಾಯಕವಾಗ ಬಲ್ಲ ಸೂಕ್ತ ಮಾರ್ಗಗಳನ್ನು ಹುಡುಕುತ್ತಿದ್ದಾರೆ.

ನಮ್ಮ ಸಮಾಜದ ಇಂದಿನ ಯಥಾರ್ಥ ಪರಿಸ್ಥಿತಿಯನ್ನು ಅವರ ಮುಂದೆ ತೆರೆದಿಡಲು ಸಹಾಯಕವಾಗುವಂತೆ ಈ ಚರಿತ್ರೆ ಗ್ರಂಥದಲ್ಲಿ ಸಮಾಜ ಸುಧಾರಣೆಯ ಕುರಿತು ಒಂದು 'ಸಿಂಪೋಸಿಯಂ' (ಲೇಖನ ಮಾಲೆ) ಆರಂಭಿಸಿದುದಾಗಿದೆ.

ಮಂಗಳೂರ ಮುಸ್ಲಿಮ್ ಸಮಾಜದ ಅಂಗಗಳೇ ಆಗಿರುವ ಹಾಗೂ ತಮ್ಮ ನಿಸ್ವಾರ್ಥ ಸಮಾಜ ಸೇವೆಯಿಂದ ಎಲ್ಲರಿಗೂ ಸುಪರಿಚಿತರಾಗಿರುವ ಹತ್ತು ಮಂದಿ ವಿದ್ಯಾವಂತ ತರುಣ ನಾಯಕರು ಈ ಲೇಖನ ಮಾಲೆಯಲ್ಲಿ ಭಾಗವಹಿಸಿ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಸಮಾಜದ ಸುಧಾರಣೆ ಹೇಗೆ ಸಾಧ್ಯವೆಂಬ ಕುರಿತು ತಂತಮ್ಮ ವಿಚಾರಕೋನದಿಂದ ಬರೆದಿರುತ್ತಾರೆ.

ಈ ಲೇಖನ ಮಾಲಿಗೆ ಮೂಲವಾಗಿ ಸಂಪಾದಕರು ಈ ಕೆಳಗಿನ ಮೂರು ಪ್ರಶ್ನೆಗಳನ್ನು ಲೇಖಕರ ಮುಂದೆ ಇಟ್ಟಿದ್ದರು:

೧. ನಮ್ಮ ಸಮಾಜದಲ್ಲಿ ತುಂಬಾ ಸಮಯದಿಂದ ನೆಲೆಯೂರಿ ಈ ವರೆಗೂ ಮುಂದುವರಿಯುತ್ತಿರುವ 'ಸ್ಥಂಬನ'ಕ್ಕೆ ಕಾರಣಗಳಾವುವು?

೨. ಈ ಸ್ಥಂಬನವನ್ನು ಹೋಗಲಾಡಿಸಿ ಸಮಾಜವನ್ನು ಪುರೋಗತಿಯ ಮಾರ್ಗದಲ್ಲಿ ಹಾಕಲು ಯಾವ ಕಾರ್ಯಕ್ರಮವನ್ನು ಕೈಕೊಳ್ಳಬೇಕು?

೩. ಕೇಂದ್ರ ನಾಯಕತ್ವವು ಇಲ್ಲದಿರುವ ಇಂದಿನ ಪರಿಸ್ಥಿತಿಯಲ್ಲಿ ಸಮಾಜದಲ್ಲಿ ಐಕ್ಯಮತ್ಯ ಹಾಗೂ ಶಿಸ್ತನ್ನು ಬಲಪಡಿಸಲು ಯಾವ ಬದಲು ಕ್ರಮವನ್ನು ನಿರ್ವಹಿಸಬೇಕಾಗುವುದು?

ಈ ಮೂರು ಪ್ರಶ್ನೆಗಳಿಗೆ ಉತ್ತರವಾಗಿಯೇ ಈ ಲೇಖಕರು ತಂತಮ್ಮ ಲೇಖನಗಳನ್ನು ಬರೆದಿರುತ್ತಾರೆ. ಇದರಿಂದ ವಾಚಕವೃಂದಕ್ಕೆ ನಮ್ಮ ಸಮಾಜದ


www.bearyinfo.com

ಈ ಜನಪ್ರಿಯ ಸದಸ್ಯರು ಸಮಾಜ ಸುಧಾರಣೆಯ ಕುರಿತು ಯಾವ ರೀತಿ ಯೋಚಿಸುತ್ತಾರೆ ಎಂಬುದು ಮುಂದಟ್ಟಾಗುವುದು.

ಅಂತು ಈ ಲೇಖನ ಮಾಲೆಯಿಂದ ಸರ್ವರಿಗೂ ಏಕರೀತಿ ಪ್ರಿಯವಾಗಿರುವ ನಮ್ಮ ಸಮಾಜದ ಸುಧಾರಣಾ ಕಾರ್ಯಕ್ರಮಕ್ಕೆ ಪ್ರೇರಣೆ ಹಾಗೂ ಪ್ರೋತ್ಸಾಹ ದೊರಕುವುದೆಂದು ಆಶಿಸುತ್ತೇವೆ. ಸಂ.]

**ಈ ಲೇಖನ ಮಾಲೆಯಲ್ಲಿ ಭಾಗವಹಿಸಿದವರು:**

೧. ಜನಾಬ್ ಡಾಕ್ಟರ್ ಎಂ. ಎಂ. ಸಾಲಿಹೀ, ಜಪ್ಪು.
೨. „ ಮುಹಮ್ಮದ್ ಕಮಾಲ್ ಸಾಹೇಬ್, ಬಂದರ್.
೩. „ ಪಿ. ಬಿ. ಹುಸೈನ್ ಕುಂಞಿ ಸಾಹೇಬ್, ಬೋಳಾರ.
೪. „ ಸಿ. ಅಬ್ದುಲ್ ಹಮೀದ್ ಸಾಹೇಬ್, ಫಳ್ನೀರ್.
೫. „ ಕೆ. ಹಸನಬ್ಬಾ ಸಾಹೇಬ್, ಕುದ್ರೋಳಿ.
೬. „ ಅಮೀರ್ ಹುಸೈನ್ ಸಾಹೇಬ್, ಅಜೀಜುದ್ದೀನ್ ರೋಡ್.
೭. „ ಡಾಕ್ಟರ್ ಎಂ. ಎಂ. ಹಸನ್ ಸಾಹೇಬ್, ಕುದ್ರೋಳಿ.
೮. „ ಎಂ. ಏ. ಖಾದರ್, ಕಂಡತ್ಪಳ್ಳಿ.
೯. „ ಎಂ. ಹಸನ್ ಸಾಹೇಬ್, ಬಿ.ಎ., ಬಿ.ಟಿ., ಡೊಂಗರಕೇರಿ.
೧೦. „ ಕೆ. ಮೈದಿನ್ ಬಾವಾ, ಕಂದಕ.



ನಮ್ಮ ಕೇಂದ್ರ ಸಂಸ್ಥೆ 'ಮುಸ್ಲಿಮ್ ವೆಲ್ಫೇರ್ ಕಮಿಟಿ'ಯ ಪರಿಶ್ರಮದಿಂದ ಮಸೀದಿಯಾಗಿ' ಮಾರ್ಪಟ್ಟ ಈದ್‌ಗಾಹ್ ಮಸೀದಿ.

www.bearyinfo.com

# ಡಾ. ಎಂ. ಎಂ. ಸಾಲಿಹೀ, ಜಪ್ಪು.



[ನಮ್ಮ ಸಮಾಜದಲ್ಲಿ ಡಾ. ಸಾಲಿಹೀಯವರ ಪರಿಚಯವಿಲ್ಲದವರು ಬಹಳ ಕಡಿಮೆ.

ಮಂಗಳೂರು ಮುಸ್ಲಿಮ್ ಧುರೀಣರ ಪೈಕಿ ಅತ್ಯಂತ ಜನಪ್ರಿಯವಾಗಿರುವ ವ್ಯಕ್ತಿ. ಮುಸಲ್ಮಾನರ ಪ್ರತಿಯೊಂದು ಸಂಘ, ಸಂಘಟನೆಗಳಲ್ಲಿ ಅವರು ಒಂದಲ್ಲ ಒಂದು ನೆಲೆಯಲ್ಲಿ ಸಂಬಂಧಿಸಿದ್ದಾರೆ. ಇಲ್ಲಿಯ ಮುಸ್ಲಿಮರ ಅತಿ ಪುರಾತನ ಸಜೀವ ವಿದ್ಯಾಸಂಸ್ಥೆ ಬದ್ರಿಯಾ ಮುಸ್ಲಿಮ್ ಎಜೂಕೇಶನಲ್ ಎಸೋಸಿಯೇಶನಿನ ಕಾರ್ಯದರ್ಶಿ ಅವರು. ಅತಿನೂತನ ಕೇಂದ್ರ ಸಮಿತಿ ಮುಸ್ಲಿಮ್ ಹಿತಚಿಂತನಾ ಸಮಿತಿಯ ಕಾರ್ಯದರ್ಶಿಯೂ ಅವರೇ. ಪ್ರಮುಖ ವ್ಯಾಪಾರಿಗಳಲ್ಲೊಬ್ಬರು; ವ್ಯಾಪಾರಕ್ಷೇತ್ರದಲ್ಲಿ ಸಾಹಿತ್ಯಕಲೆಗಳ ಅಭಿರುಚಿಯಿರುವವರು ನಮ್ಮ ಸಮಾಜದಲ್ಲಿ ಇವರೊಬ್ಬರೇ ಎಂದರೂ ಅತಿಶಯೋಕ್ತಿಯಾಗಲಾರದು. ಪತ್ರಿಕೋದ್ಯಮದಲ್ಲೂ ದುಡಿದ ವ್ಯಕ್ತಿ —ಸಂ.]

---

ನಮ್ಮ ಸುತ್ತುಮುತ್ತಲಿನ ಜಗತ್ತಿನೆಡೆಗೆ ನಾವೊಮ್ಮೆ ದೃಷ್ಟಿಯನ್ನು ಹಾಯಿಸಿ ಶಾಂತಚಿತ್ತದಿಂದ ನೋಡುವುದಾದರೆ ವಿಚಿತ್ರವಾದ ಬದಲಾವಣೆಗಳನ್ನು ನಾವು ಕಾಣಬಲ್ಲೆವು. ಜಗತ್ತು ತನ್ನ ಪುರಾತನ ಉಡುಪನ್ನು ತೊಡವಿಹಾಕಿ ಹೊಸ ಉಡುಪನ್ನು ಧರಿಸಿ ಮೆರೆಯುತ್ತಿರುವಂತೆ ನಮಗೆ ಭಾಸವಾಗುವುದು. ಯಾವುದೋ ಒಂದು ತರದ ಪ್ರಗತಿಯ ಕೈವಾಡವು ವಿದ್ಯುತ್ವೇಗದಿಂದ ತನ್ನ ಪವಾಡವನ್ನು ತೋರಿಸುತ್ತಿರುವಂತೆ ಗೋಚರವಾಗದಿರಲಾರದು. ಆದರೆ ಜಗತ್ತಿನ ಪ್ರಗತಿಯ ಪ್ರವಾಹದೊಂದಿಗೆ ನಮ್ಮ ಮುಸ್ಲಿಮ್ ಸಮಾಜವೂ ಮುಂದುವರಿಯುತ್ತಿದೆಯೋ ಎಂದೊಮ್ಮೆ ಚಿಂತಿಸುವುದಾದರೆ, ನಮ್ಮೆಲ್ಲರ ಹೃದಯವನ್ನು ಕಲಕುವಷ್ಟು ಚಿಂತಾಜನಕವಾದ 'ನ'ಕಾರದ ಪ್ರತ್ಯುತ್ತರವಲ್ಲದೆ ಬೇರೆ ಯಾವ ಉತ್ತರವೂ ನಮಗೆ ಸಿಗಲಾರದು. ಕಾಲ ಮತ್ತು ಸಮಯದ ಕರೆಗೆ ಓಗೊಟ್ಟು ಜಗತ್ತಿನ ಇತರ ಜನಾಂಗಗಳೊಡನೆ ಭುಜಕ್ಕೆ ಭುಜ ತಾಗಿಸಿ ನಮ್ಮ ಜನಾಂಗವೂ ಕೂಡಾ ಪ್ರಗತಿಯ ಮುಂದಿನಸಾಲಿನಲ್ಲಿ ನಿಂತಿರುವುದು ಎಂದು ಎದೆತಟ್ಟಿ ಸಾರುವಷ್ಟು ಎದೆಗಾರಿಕೆಯು ಯಾರಿಗೂ ಇರಲಾರದೆಂದು ಧೈರ್ಯವಾಗಿ ಹೇಳಬಲ್ಲೆ. ಇದಕ್ಕೆ ಕಾರಣವೇನು? ಲೋಕದಲ್ಲಿ ನಡಿಯುತ್ತಿರುವ ಪ್ರಗತಿಗೆ ನಾವೂ ಅರ್ಹರಲ್ಲವೇ? ನಾವೇಕೆ ಈ ಪರಿ ಹಿಂದುಳಿದಿದ್ದೇವೆ? ಈ ವ್ಯಾಧಿಗೆ ಚಿಕಿತ್ಸೆಯೇನು ಎಂಬ ಪ್ರಶ್ನಾವಳಿಗಳು ಸ್ವಾಭಾವಿಕವಾಗಿ ಉದ್ಭವಿಸುತ್ತವೆ. ಈ ದಿಸೆಯಲ್ಲಿ ಗಾಢವಾಗಿ ಆಲೋಚಿಸಿ

www.bearyinfo.com

ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದುದು ನಮ್ಮ ಸಮಾಜದವರ ಕರ್ತವ್ಯ ವಾಗಿರುವುದು. ಇಲ್ಲವಾದರೆ ಇತಿಹಾಸದ ಪುಟಗಳಲ್ಲಿ ನಾವೆಲ್ಲರೂ ಕಾರ್ಯ ಭ್ರಷ್ಟರೆಂದೇ ಪರಿಗಣಿಸಲ್ಪಡುವೆವು.

ನಮ್ಮ ಸಮಾಜವು ಘೋರವಾದ ರೋಗದ ಪೀಡೆಗೆ ತುತ್ತಾಗಿರುತ್ತದೆ. ಇಷ್ಟರಲ್ಲಿಯೇ ಅದು ಸಮಾಜದ ಜೀವಾಳವನ್ನೇ ನಾಶಮಾಡಿದಂತಿದೆ. ಕೂಡಲೇ ಅದನ್ನು ಕಿತ್ತೊಗೆದು ಯೋಗ್ಯ ಪೌಷ್ಠಿಕಾಹಾರವನ್ನು ಕೊಡದಿದ್ದಲ್ಲಿ ಅದರ ಅಸ್ತಿತ್ವವೇ ಅಳಿದುಹೋಗುವುದರಲ್ಲಿ ಸಂದೇಹವಿಲ್ಲ. ಈ ಮಹಾವ್ಯಾಧಿಯು ನಮ್ಮವರಲ್ಲಿ ಬೇರೂರಿಕೊಂಡಿರುವ ಅನೈಕ್ಯತೆಯಲ್ಲದೆ ಬೇರೊಂದಲ್ಲ. ನಮ್ಮಲ್ಲಿ ಎದ್ದು ಕಾಣಬಹುದಾದ ಈ ಕೊರತೆಯನ್ನು ಮೊದಲಾಗಿ ನಿರ್ಮೂಲಮಾಡಬೇಕು. ಸಮಾಜದ ಪ್ರತಿಯೋರ್ವನಲ್ಲಿಯೂ ಈ ಪ್ರಜ್ಞೆಯು ಮೂಡಿ ಎಲ್ಲರೂ ಒಟ್ಟಾಗಿ, ಪರಸ್ಪರ ಸ್ನೇಹಸೌಹಾರ್ದತೆಯಿಂದಲೂ, ಒಮ್ಮತದಿಂದಲೂ ಸಹಜೀವನಗೈದು ಸಮಾಜೋದ್ಧಾರದ ಪವಿತ್ರ ಕಾರ್ಯರಂಗದಲ್ಲಿ ಅವಿರತವಾಗಿ ದುಡಿಯಬೇಕು. ಇದಕ್ಕೆ ಸಹಾಯಕವಾಗಿ ನಮ್ಮವರಲ್ಲಿ ವಿದ್ಯಾಭ್ಯಾಸವು ಇನ್ನಷ್ಟು ಕ್ಷಿಪ್ರಗತಿಯಲ್ಲಿ ಮುಂದುವರಿಯಬೇಕು. ಅದು ಕೇವಲ ಧಾರ್ಮಿಕವೂ-ಯಾ-ಬರೇ ಲೌಕಿಕವೂ ಆಗಿರದೆ, ಧಾರ್ಮಿಕ ವಿದ್ಯಾಭ್ಯಾಸದ ಅಡಿಸ್ಥಾನದ ಆಧಾರಗೊಂಡು ಲೌಕಿಕ ವಿದ್ಯಾಭಾಸವು ವಿಪುಲವಾಗಿ ದೊರೆಯಬೇಕು. ಈ ವಿಧದ ವಿದ್ಯಾಭ್ಯಾಸವು ನಮ್ಮವರಿಗೆ ದೊರೆಯದಕಾರಣ ಸಮಾಜವು ಇಂದು ಹಳೇಯ ಸಾಂಪ್ರದಾಯಿಕ ರಾದ ಮತಾಂಧರು – ಮತ್ತು –ಆಧುನಿಕ ವಿದ್ಯಾವಂತರಾದ ಸ್ವೇಚ್ಛಾಛಾರಿಗಳಾದ ನವತರುಣರು—ಎಂದೆಣಿಸಲ್ಪಡುವ ಪ್ರತ್ಯೇಕ ಪ್ರತ್ಯೇಕವಾದ ಎರಡು ತಂಡಗಳಾಗಿ ನಿಂತಿರುವುದು. ಈ ಎರಡು ತಂಡಗಳ ಒಕ್ಕೂಟವಾಗಿ (fusion) ಒಮ್ಮತವು ಮೂಡಬೇಕು. ಇದು ಒರಿಯಂಟಲ್ ಹ್ಯಾಸ್ಕೂಲು ಶಿಕ್ಷಣ ಪದ್ಧತಿಯಿಂದ ಮಾತ್ರ ಸಾಧ್ಯವೆಂದೇ ನನ್ನ ಅಭಿಮತ. ನಮ್ಮ ಬಾಲಕರಿಗೆ ಈ ಕ್ರಮದಲ್ಲಿ ಶಿಕ್ಷಣವು ಲಭಿಸುವಂತಾದರೆ ಧಾರ್ಮಿಕ ಮತ್ತು ಲೌಕಿಕ ವಿದ್ಯೆಯ ವಿಭಿನ್ನತೆ ಮತ್ತು ಇವೆರಡರ ಸಮನ್ವಯದಿಂದ ವ್ಯಾವಹಾರಿಕ ಹಾಗೂ ಸಾಮಾಜಿಕ ಪ್ರಯೋಜನಗಳ ಲಭ್ಯತೆ ಮತ್ತು ಉಪಯುಕ್ತತೆಯ ಅರಿವು ಮೂಡುತ್ತದೆ. ಮಾತ್ರವಲ್ಲ ಲೌಕಿಕ ತೆಯ ಪ್ರವಾಹದಲ್ಲಿ ವಿನಾಶದೆಡೆಗೆ ಕೊಚ್ಚಿಹೋಗತಕ್ಕ ಸನ್ನಿವೇಶಗಳಲ್ಲಿ ಧಾರ್ಮಿ ಕತೆಯ ರಕ್ಷಣಾಕವಚವು ಲಭಿಸಿದಂತಾಗುವುದು. ನಮ್ಮ ಜಿಲ್ಲೆಯಲ್ಲಿ ಮುಸ್ಲಿ ಮೇತರರ ಎಷ್ಟೆಷ್ಟೋ ಓರಿಯಂಟಲ್ ಹೈಸ್ಕೂಲುಗಳು ಇರುವುದಾದರೂ ಇಂತಹ ಒಂದೇ ಒಂದು ಶಾಲೆಯು ನಮ್ಮವರದಾಗಿ ಇಲ್ಲದಿರುವುದು ಅತ್ಯಂತ ವಿಷಾದಕರ. ನಮ್ಮ ಹಿರಿಯರು ಹಾಗೂ ಕಿರಿಯರು ಈ ಕ್ಷೇತ್ರದಲ್ಲಿ ಪರಿಶ್ರಮಿಸದಿರುವುದು ಶೋಚನೀಯ. ನಮ್ಮ ಜಡತೆಯನ್ನು ತೊಡವಿ ಮುಂದೆ ಬಂದು ಪ್ರಯತ್ನಿಸು ವುದಾದರೆ ಈ ಭಾಗದಲ್ಲಿ ಇನ್ನೂ ಅವಕಾಶವಿದೆ; ಭವಿಷ್ಯತ್ತೂ ಇದೆ. ಸಮಾಜದ ಪ್ರತಿಯೋರ್ವರೂ ಈ ವಿಷಯದಲ್ಲಿ ಗಹನವಾಗಿ ಆಲೋಚಿಸಬೇಕಾಗಿದೆ.

www.bearyinfo.com

ಇದರಂತೆಯೇ ನಿರ್ಲಕ್ಷ್ಯದಿಂದ ಇಂದು ನಮ್ಮ ಕೈಬಿಟ್ಟುಹೋಗಿರುವ ವ್ಯಾಪಾರೋದ್ಯಮವನ್ನು ಪುನಃ ಕರಗತಮಾಡುವಂತೆ ನಾವು ಪ್ರಯತ್ನಿಸ ಬೇಕಾದುದೂ ಮುಖ್ಯ. ಸಣ್ಣದೊಡ್ಡ ವ್ಯಾಪಾರಗಳಲ್ಲದೆ ಗುಡಿಕೈಗಾರಿಕೆ, ಕುಶಲಕೈಗಾರಿಕೆ ಮೊದಲಾದುವುಗಳನ್ನು ವೈಯಕ್ತಿಕವಾಗಿಯೂ ಸಹಕಾರಸಂಘ ಗಳ ರೂಪಗಳಲ್ಲಿಯೂ ಕೈಗೊಳ್ಳಬೇಕು. ಇದರಿಂದ ಸಮಾಜದ ಆರ್ಥಿಕಸ್ಥಿತಿಯು ಸುಧಾರಿಸುವುದಲ್ಲದೆ ಜನತೆಯಲ್ಲಿ ಜಡತೆಯು ನೀಗಿ ಕ್ರಿಯಾತ್ಮಕ ಚಟುವಟಿಕೆಗಳು ಪ್ರಚೋದನೆಗೊಳ್ಳುವುವು. ಈ ಪ್ರಚೋದನೆಯೇ ಬೆಳೆದು ಬಲಿತು ಮುಂದೆ ಸಾಗುವುದಾದರೆ, ಈ ಶಕ್ತಿಸಂಪತ್ತನ್ನು ಸಮಾಜ ಸುಧಾರಣಾ ಕಾರ್ಯಗಳಲ್ಲಿ ಧಾರಾಳವಾಗಿ ಪ್ರಯೋಗಿಸಿಕೊಳ್ಳಬಹುದು.

ಇಂತಹ ಕಾರ್ಯಗಳನ್ನು ಸಾಧಿಸುವುದಾದರೆ, ಸಮಾಜದವರನ್ನು ಒಟ್ಟು ಗೂಡಿಸಿ ಒಂದೇ ನೆಲೆಯಲ್ಲಿ ನಡೆಸಿಕೊಂಡು ಹೋಗುವರೆ ಪ್ರಬಲವಾದ ನಾಯ ಕತ್ವದ ಆವಶ್ಯಕತೆ ಇದೆಯೆಂದು ನನ್ನ ಗೆಳೆಯರಲ್ಲನೇಕರು ವಾದಿಸಬಹುದು. ನಾನು ಕೂಡಾ ಅವರ ಅಭಿಮತವು ಸಮಂಜಸವಾದುದೆಂದು ತಲೆದೂಗಬಹುದಾ ದರೂ, 'ಕಾಲದ ಕರೆ' ಏನು ಎಂದರಿತರೆ ಇದರ ಸಾಧ್ಯಾಸಾಧ್ಯತೆಯು ನಮಗೆ ಅರಿವಾಗಬಹುದು. ಏಕನಾಯಕತ್ವದಲ್ಲಿ ಒಂದು ಸಮಾಜವನ್ನು ಒಬ್ಬನು ತನ್ನ ವಜ್ರಮುಷ್ಟಿಯ ಅಂಕಿತದಲ್ಲಿಡುವ ಪ್ರಧಾನವಾದ ಅಸ್ತ್ರವು ಸರ್ವಾಧಿಕಾರವೆಂದು ಎಲ್ಲರೂ ಒಪ್ಪಬೇಕಾಗಿದೆ. ಸರ್ವಾಧಿಕಾರವು ಸಫಲವಾಗಬೇಕಾದರೆ ಅದರ ಆಶ್ರಯಿತರು ಒಂದುತರದ ವಿಧೇಯತೆಯಿಂದಿರಬೇಕಾದುದು ಅನಿವಾರ್ಯ. ಆದರೆ ಈ ವಿಧೇಯತೆಯು ಹಲವೊಮ್ಮೆ ಅಂಧಶ್ರದ್ಧೆಯ ವರೆಗೂ ವ್ಯಾಪಕವಾಗ ಬಹುದು. ನಾಯಕನ ಆಜ್ಞೆಯನ್ನು ಶಿರಸಾವಹಿಸಿ ಚಾಚೂತಪ್ಪದೆ ನಡೆಸಿಕೊಂಡು ಬರುವಂತಾಗಬೇಕು. ಆದರೆ ಜನರಲ್ಲಿ ವಿದ್ಯೆಯ ಮೂಲಕ ಜ್ಞಾನಸಂಪತ್ತೂ ಸ್ವತಂತ್ರ ವಿಚಾರಶಕ್ತಿಯೂ ಮೂಡುವಾಗ ಅಂಧಶ್ರದ್ಧೆಯ ಕವಚವು ತಾನಾಗಿಯೇ ಕಳಚಿಬೀಳುವುದು. ನಾಯಕನ ಆಜ್ಞೆಯು ಜನಹಿತಾಸಕ್ತಿಗೆ ವ್ಯತಿರಿಕ್ತವಾದಲ್ಲಿ ಅದನ್ನೊಡಂಬಡಲು ಯಾರೂ ಸಿದ್ಧವಿರಲಾರರು. ಇಂತಹ ಪರಿಸ್ಥಿತಿಯಲ್ಲಿ ನಾಯಕನ ನಾಯಕತ್ವದ ಪ್ರತಿಭೆಯು ಕುಂದುವುದು. ಕಾಲಕ್ರಮೇಣ ಅದು ಸಂಪೂರ್ಣವಾಗಿ ಅಳಿದು ಹೋಗುವುದು ದಿಟ. ಇಂದಿನ ಕಾಲವೂ ಅದಕ್ಕೆ ಪೂರಕ ವಾಗಿಯೇ ಇದೆ. ಲೋಕದಾದ್ಯಂತ ಸಾಮ್ರಾಜ್ಯತ್ವವು ಮಾಯವಾಗಿ ಅದರ ಸ್ಥಳವನ್ನು ಪ್ರಜಾಸತ್ತೆಯು ಆಕ್ರಮಿಸಿಕೊಂಡು ದಶದಿಸೆಗಳಲ್ಲಿಯೂ ತನ್ನ ಬೇರು ಗಳನ್ನು ಬಿಟ್ಟು ಸುಭದ್ರವಾಗಿ ನೆಲೆಯೂರುತ್ತಾ ಬರುತ್ತಿದೆ. ಇದರಿಂದಾಗಿ ಜನರ ಒಲವೂ ವಿಶಾರಶಕ್ತಿಯೂ ಇದೇ ರೂಪದಲ್ಲಿ ಮಾರ್ಪಡುತ್ತಿರುವುದೂ ಸ್ವಾಭಾವಿಕವೇ ಆಗಿದೆ. ಇದೀಗ—ಈ 'ಕಾಲದ ಕರೆ' ಎಂದರೂ ತಪ್ಪಾಗದು. ಆದುದರಿಂದ ಸಮಾಜದ ನಾಯಕತ್ವವೂ ಇದೇ ಮಾದರಿಯಲ್ಲಿ ಮಾರ್ಪಡ

www.bearyinfo.com


ಬೇಕಾದುದು ಅತ್ಯಾವಶ್ಯಕ. ನಗರದ ನಾನಾ ಭಾಗಗಳಲ್ಲಿರುವ ಮೊಹಲ್ಲಾ, ಮಸೀದಿ, ಸಂಘ ಸಂಸ್ಥೆಗಳನ್ನು ಪ್ರತಿನಿಧೀಕರಿಸುವ ಪ್ರಬಲವಾದ ಕೇಂದ್ರ ಸಂಸ್ಥೆಯೊಂದರ ರಚನೆಯಾಗಬೇಕು. ಅದಕ್ಕೆ ಸಮಾಜದವರ ಸಂಪೂರ್ಣ ಸಹಕಾರ ಮತ್ತು ಬೆಂಬಲವಿರಬೇಕು. ಈ ಸಂಸ್ಥೆಯಲ್ಲಿ ಸಮಾಜದ ನಾನಾ ಮುಖವಾದ ಪರಿಸ್ಥಿತಿಗಳನ್ನು ಒಂದೊಂದಾಗಿ ಪರ್ಯಾಲೋಚಿಸಿ ಯೋಗ್ಯ ರೀತಿಯ ಒಮ್ಮತದ ತೀರ್ಮಾನಕ್ಕೆ ಬಂದು, ಸೂಕ್ತ ಪರಿಹಾರ ಮಾರ್ಗವನ್ನು ಕಂಡುಹಿಡಿದು ಒಟ್ಟಾಗಿ ಕಾರ್ಯಪ್ರವೃತ್ತರಾಗಬೇಕು. ಈ ಕಾರ್ಯವು ಅತ್ಯಂತ ಪವಿತ್ರವಾದುದೆಂದು ಎಲ್ಲರೂ ಅರಿತು, ತಂತಮ್ಮ ವೈಯಕ್ತಿಕ ಭಿನ್ನಾಭಿಪ್ರಾಯ ಗಳನ್ನು ಮರೆತು ಶುದ್ಧಮನಸ್ಸಿನಿಂದ ಸೇವೆಯನ್ನು ಸಲ್ಲಿಸುವಂತಾಗಬೇಕು. ಸ್ವಾರ್ಥದ ಹಾಗೂ ಜನಸ್ತುತಿಯಲಾಲಸೆಯ ದುರ್ಗಂಧದಿಂದ ಸಂಪೂರ್ಣವಿರ ಹಿತವಾದ ಸೇವೆ ಮಾತ್ರವೇ ಇಂತಹ ಕಾರ್ಯಗಳಲ್ಲಿರುವ ಯಶಸ್ಸು. ಈ ಪರಿ ರೂಪಿತವಾಗುವ ಕೇಂದ್ರ ಸಮಿತಿಗೆ ಪೂರಕವಾಗಿ ಪ್ರತಿಯೊಂದು ಮೊಹಲ್ಲಾ ದಲ್ಲಿಯೂ ಉಪಸಮಿತಿಗಳನ್ನು ರಚಿಸಬೇಕು. ಆಯಾ ಮೊಹಲ್ಲಾದವರ ಆವಶ್ಯಕತೆಯನ್ನು ಉಪಸಮಿತಿಯು ಪರ್ಯಾಲೋಚಿಸಿ ಅದನ್ನು ಕೇಂದ್ರ ಸಮಿತಿಗೆ ಸೂಚಿಸತಕ್ಕದ್ದು—ಕೇಂದ್ರ ಸಮಿತಿಯ ಮುಖಾಂತರ ಅದರ ಪರಿಹಾರ ಕಾರ್ಯವು ಸಾಗಬೇಕು. ಇದರಂತೆಯೇ ಪ್ರತಿಯೊಂದು ತಾಲೂಕಿನಲ್ಲಿಯೂ ಇಂತಹ ಸಮಿತಿಗಳು ರಚಿತವಾಗಿ ಅವೆಲ್ಲವೂ ಜಿಲ್ಲೆಯ ಕೇಂದ್ರ ಸಮಿತಿಗೆ ಸೇರ್ಪಡೆಹೊಂದಿ ತನ್ಮೂಲಕ ಒಂದು ವ್ಯವಸ್ಥಿತ ರೀತಿಯಲ್ಲಿ ಜಿಲ್ಲೆಯಾದ್ಯಂತ ಸಂಪರ್ಕವನ್ನಿರಿಸಿ ಪ್ರತಿಯೊಂದು ಸಮಿತಿಯು ಅನ್ಯೋನ್ಯತೆಯಿಂದ ಸಮಾಜ ಸುಧಾರಣೆಯ ಸೇವೆಗೆ ಇಳಿದರೆ ಸಮಾಜವನ್ನಿದಿರಿಸುವ ನಾನಾ ಸಮಸ್ಯೆಗಳನ್ನು ಸುಲಭರೀತಿಯಲ್ಲಿ ಪರಿಹರಿಸಬಹುದು. ಇಂತಹ ವ್ಯವಸ್ಥೆಯು ಅಪ್ರಾಯೋಗಿಕ ವಲ್ಲ; ಕಷ್ಟಸಾಧ್ಯವೂ ಅಲ್ಲ. ಸಮಾಜದ ಪ್ರತಿಯೋರ್ವರೂ ನಿರಾಶೆಗೆಡೆಗೊಡದೆ ಆಶಾವಾದಿಗಳಾಗಿ ಪ್ರವೃತ್ತಿಸುವುದಾದರೆ ಸಮಾಜಸುಧಾರಣೆಯ ಕಾರ್ಯವನ್ನು ಸುಲಭವಾಗಿ ಸಾಧಿಸಬಹುದು. ಸಮಯವಿನ್ನೂ ಮೀರಿಲ್ಲ—ನಮ್ಮವರ ನಿರ್ಧಾರ, ಸಂಘಟನೆ ಮತ್ತು ಐಖ್ಯತೆಯೊಂದಿಗೆ ಅಲ್ಲಾಹುವಿನ ಅನುಗ್ರಹದಲ್ಲಿ ಅಚಲವಾದ ಭಕ್ತಿವಿಶ್ವಾಸ ಮಾತ್ರ ಬೇಕಾದುದು. ಆದುದರಿಂದ ಸಮಾಜದ ಹಿರಿಯ-ಕಿರಿಯ ಸದಸ್ಯರೆಲ್ಲರೂ ಈ ದಿಸೆಯಲ್ಲಿ ಗಾಢವಾಗಿ ಆಲೋಚಿಸುವಂತೆ ನನ್ನ ನಮ್ರವಿನಂತಿ.

**ಡಾ. ಎಮ್. ಎಮ್. ಸಾಲಿಹಿ,**
ಪ್ರಧಾನ ಕಾರ್ಯದರ್ಶಿ
ದಿ ಮುಸ್ಲಿಮ್ ವೆಲ್‌ಫೇರ್ ಕಮಿಟಿ
ಮಂಗಳೂರು.

---

www.bearyinfo.com

# ಜನಾಬ್ ಮುಹಮ್ಮದ್ ಕಮಾಲ್ ಸಾಹೇಬ್, ಬಂದರ.



[ಜನಾಬ್ ಮುಹಮ್ಮದ್ ಕಮಾಲರು ಚಿಕ್ಕ ಪ್ರಾಯದಿಂದಲೇ ಸಾಮಾಜಿಕ ಚಟುವಟಿಕೆಗಳಲ್ಲಿ ಎಡೆಬಿಡದೆ ಭಾಗವಹಿಸಿ ಸಮಾಜ ಬಾಂಧವರಿಗೆಲ್ಲರಿಗೂ ಸುಪರಿಚಿತರಾಗಿರುವ ವ್ಯಕ್ತಿ. ಅನೇಕ ಸಂಘ-ಸಂಸ್ಥೆಗಳ ಸಂಸ್ಥಾಪಕರು ಹಾಗೂ ವ್ಯವಸ್ಥಾಪಕರು. ಸಂಘಟನಾಯೋಗ್ಯತೆಯು ಅವರಲ್ಲಿ ಅಪಾರವಾಗಿ ಬೆಳೆದಿದೆ. ಸಮಾಜದ ಪ್ರತಿಯೊಂದು ಆಗು-ಹೋಗುಗಳ ಕುರಿತು ಕಮಾಲ್ ಸಾಹೇಬರಿಗಿದ್ದಷ್ಟು ಪರಿಜ್ಞಾನವು ಇತರರಿಗಾರಿಗೂ ಇರುವುದಿಲ್ಲವೆಂದರೆ ಅತಿಶಯೋಕ್ತಿ ಆಗಲಾರದು—ಸಂ]

---

ನಮ್ಮ ಸಮಾಜದಲ್ಲಿ ತಲೆಯೆತ್ತಿರುವ ಪಕ್ಷಭಾವನೆ ಹಾಗೂ ಅನೈಕ್ಯವೇ ಇಂದು ಎದ್ದುಕಾಣುವ ಸ್ಥಂಬನಾ ಪರಿಸ್ಥಿತಿಗೆ ಮೂಲಕಾರಣವೆಂದು ನನ್ನ ಅಭಿಮತ. ಆದ್ದರಿಂದಲೇ ಸಮಾಜದಲ್ಲಿ ಎಲ್ಲಿಯಾದರೂ ಒಳ್ಳೆಯ ಕಾರ್ಯವೊಂದು ತೊಡಗಿತೆಂದರೆ ನಮ್ಮ ಸಮಾಜದವರೇ ಅದನ್ನು ಎದುರಿಸಲು ಮುಂದಾಗುತ್ತಾರೆ. ಆ ವಿಶೇಷ ಕಾರ್ಯವು ಕೆಟ್ಟದೆಂದಲ್ಲ, ಅದನ್ನು ಆರಂಭಿಸಿರುವ ವ್ಯಕ್ತಿಯನ್ನು ಅವರು ಮೆಚ್ಚುವುದಿಲ್ಲವೆಂಬುದೇ ವಿರೋಧಕ್ಕೆ ಕಾರಣ.

ಇನ್ನೊಂದು ಕಾರಣವೆಂದರೆ ಈಗೀಗ ನಮ್ಮ ಸಮಾಜದಲ್ಲಿ ನುಸುಳಿಕೊಂಡಿರುವ ಚಿಲ್ಲರೆ ಧಾರ್ಮಿಕ ಅಭಿಪ್ರಾಯ 'ಪುರೂಈ ಮಸಾಯಿಲ್'ಗಳ ಕುರಿತು ನಾವು ತಾಳುವ ಕಠೋರ ಅಸಹಿಷ್ಣುತೆ. ಈ ಚಿಕ್ಕ ಪುಟ್ಟ ಅಭಿಪ್ರಾಯ ವ್ಯತ್ಯಾಸಗಳ ಬುನಾದಿಯ ಮೇಲೆ ಸಮಾಜವನ್ನು ಇಬ್ಭಾಗಮಾಡಿ ಪರಸ್ಪರ ಎಲ್ಲಾ ಸ್ನೇಹಸಂಬಂಧಗಳನ್ನೂ ಮುರಿದು ಹಾಕಿದರು. ಈ ಗತ ಕೆಲವು ವರ್ಷಗಳಲ್ಲಿ ಅಂತರ್-ಸಾಮಾಜಿಕ ಭಿನ್ನಾಭಿಪ್ರಾಯಗಳನ್ನು ಆಧರಿಸಿಕೊಂಡು ನಮ್ಮ ಸಮಾಜದಲ್ಲಿ ಒಂದು ತರ "ಅಂತಃಕಲಹ"ವೇ ನಡೆಯಿತೆನ್ನಬಹುದು.

ವಿದ್ಯಾವಂತ ನವತರುಣರ ಕೊರತೆಯೇ ಮೂರನೆಯ ಕಾರಣವೆನ್ನಬೇಕು. ಮಂಗಳೂರಲ್ಲಿ ನಮ್ಮ ಸಮಾಜದಲ್ಲಿ ಇಂದಿಗೂ ಅರ್ಧ ಡಜನ್ ಗ್ರೇಜ್ವೇಟರಿಲ್ಲವೆಂದರೆ ತಪ್ಪಾಗಲಾರದು.

ಕೇಂದ್ರ ಧುರೀಣತ್ವದ ಕೊರತೆಯು ನಮ್ಮ ಪತನದ ಮುಖ್ಯ ಕಾರಣ. ಜನಾಬ್ ಅಬ್ದುರ್ರಹೀಂ ಅಹ್ಮದ್ ಬಿ.ಏ., ಬಿ.ಎಲ್., ಅವರು ಮುಸ್ಲಿಮ್



www.bearyinfo.com

ವೆಲ್ಫೇರ್ ಲೀಗ್ ಹಾಗೂ ಮುಸ್ಲಿಮ್ ವಾಲಂಟಿಯರ್ ಕೋರ್ ಮೊದಲಾದವುಗಳನ್ನು ಸಂಘಟಿಸಿ ಅವುಗಳ ಮೂಲಕ ಸಮಾಜಸೇವೆಯನ್ನು ಮಾಡುತ್ತಿದ್ದ ದೃಶ್ಯವು ಇಂದಿಗೂ ನಮ್ಮ ಕಣ್ಣ ಮುಂದೆ ಅಚ್ಚಳಿಯದೆ ಉಳಿದಿದೆ. ಇಂತಹ ಕೇಂದ್ರ ನಾಯಕತ್ವವನ್ನು ಮಗುದೊಮ್ಮೆ ಸಂಘಟಿಸುವುದು ಅವಶ್ಯ.

ಅಂತು, ನನ್ನ ಅಭಿಪ್ರಾಯದಲ್ಲಿ ಇವೇ ಕೊರತೆಗಳು ನಮ್ಮ ಸಮಾಜದಲ್ಲಿ ಸ್ಥಂಬನವನ್ನು ಸೃಷ್ಟಿಸಲು ಕಾರಣಭೂತವಾದುವು.

2. ಇನ್ನು ಈ ಸ್ಥಂಬನವನ್ನು ಕೊನೆಗೊಳಿಸಲು ನಾನು ಈ ಕೆಳಗಿನ ಕಾರ್ಯಕ್ರಮವನ್ನು ಸೂಚಿಸುತ್ತೇನೆ.

ಮೊತ್ತಮೊದಲಾಗಿ ಸಮಾಜದ ಎಲ್ಲಾ ವಿಚಾರಕೋನಗಳ ವಿವಿಧ ಪಂಗಡಗಳ ಜನರನ್ನೊಳಗೊಂಡ ಒಂದು ಕೇಂದ್ರ ಸಮಿತಿಯನ್ನು ಸ್ಥಾಪಿಸಿ ಸಮಾಜದಲ್ಲಿ ಐಖ್ಯತೆಯನ್ನೂ ಸಹಿಷ್ಣುತೆಯನ್ನೂ ಸೃಷ್ಟಿಸಬೇಕಲ್ಲದೆ ಕಮ್ಮಿಯಲ್ಲಿ ಪ್ರಾಥಮಿಕ ಪ್ರಾಧಾನ್ಯತೆಯನ್ನು ವಹಿಸಿರುವ ಸಮಾಜದ ಸಾರ್ವಜನಿಕ ಹಿತಾಸಕ್ತಿಗಳ ವಿಷಯದಲ್ಲಾದರೂ ಈ ವಿವಿಧ ವಿಚಾರ ಪಂಗಡಗಳ ಪ್ರತಿನಿಧಿಗಳು ಸಮಾನ ರಂಗದಲ್ಲಿ ಒಂದುಗೂಡುವಂತಾಗಬೇಕು. ಸ್ಥಳೀಯ ಅಲ್‌ಅಝ್‌ಹರಿಯಾ ಸಂಘವು ಈ ತರ ಒಂದು ಕೇಂದ್ರ ಸಮಿತಿಯ ಆವಶ್ಯಕತೆಯನ್ನು ಮನಗಂಡು ಮಂಗಳೂರಿನಲ್ಲಿ ನಮ್ಮ ಎಲ್ಲಾ ಸಂಘ-ಸಂಘಟನೆಗಳ ಪ್ರತಿನಿಧಿಗಳ ಒಂದು ಸಭೆಯನ್ನು ತಾ. 25—10—59ರಲ್ಲು ಜರುಗಿಸಿ ನಮ್ಮ ಸಮಾಜದ ಕ್ಷೇಮಾಭಿವೃದ್ಧಿಪ್ರಾಪ್ತಿಗಾಗಿ ಯಾವಾಗಲೂ ಕಂಕಣಬದ್ಧರಾಗಿರುವ ಹಾಗೂ ಹಿರಿಯ ಮತಭಕ್ತರೂ ಸಮಾಧಾನಚಿತ್ತರೂ ಆದ ಜನಾಬ್ ಯು. ಅಹ್ಮದ್ ಹುಸೈನ್ ಸಾಹೇಬರ ಅಧ್ಯಕ್ಷತೆಯಲ್ಲಿ 'ಮುಸ್ಲಿಮ್ ವೆಲ್ಫೇರ್ ಕಮಿಟಿ'ಯೆಂಬ ಹೆಸರಲ್ಲಿ ತಾ. 25—10—59ರಲ್ಲಿ ಒಂದು ಸಂಘವು ಸ್ಥಾಪನೆಗೆಗೊಂಡಿತು. ಸಮಾಜದಲ್ಲಿ ಐಕ್ಯಭಾವನೆಯನ್ನು ಸೃಷ್ಟಿಸುವ ಸಂಬಂಧವಾಗಿ ಇಂತಹ ಕೇಂದ್ರ ಸಮಿತಿಯಿಂದ ಕರಸ್ಥವಾದ ಶೀಘ್ರ ಫಲವನ್ನು—ಕಳೆದ ವರ್ಷದ ಮಿಲಾದುನ್ನಬೀ ಸಮಾರಂಭಕ್ಕೆ ಈದ್ಗಾ ಪ್ರಾರ್ಥನಾಲಯದಲ್ಲಿ ಮಂಗಳೂರಿನ ಚರಿತ್ರೆಯಲ್ಲೇ ಹಿಂದೆ ಒಮ್ಮೆಯೂ ಕಾಣದ ಮುಸ್ಲಿಮ್ ಜನಸ್ತೋಮವನ್ನು—ನಾವು ಕಂಡೆವು. ಈ ಐಕ್ಯತೆಯನ್ನು ಸಮಾಜದಲ್ಲಿ ನೆಲೆಯೂರಿಸಿ, ನಮ್ಮ ಇತರ ಸಂಘ-ಸಂಘಟನೆಗಳಂತೆ ಈ ಕೇಂದ್ರ ಸಂಘವು ಮುರಿದು ಬೀಳುವುದರಿಂದ ಇದನ್ನು ತಪ್ಪಿಸಲು ನಾವು ಸತತ ಪ್ರಯತ್ನಿಸಬೇಕಾದುದು ಸಮಾಜದ ಪ್ರಾಥಮಿಕ ಕರ್ತವ್ಯವಾಗಿರುತ್ತದೆ.

ಇನ್ನೊಂದು ಸಂಗತಿ. ಮುನಿಸಿಪಲ್ ಇಲೆಕ್ಷನ್ ಸಮಯ ಒಬ್ಬರಿಗೊಬ್ಬರು ವಿರುದ್ಧವಾಗಿ ಚುನಾವಣೆಗೆ ನಿಲ್ಲುವುದನ್ನು ತಡೆಯಬೇಕು. ಇದು ಸಾಧಾರಣವಾಗಿ ನಮ್ಮ ಸಮಾಜದಲ್ಲಿ ತುಂಬಾ ಕಾಲದ ವರೆಗೂ ಪ್ರತಿಕ್ರಿಯೆಯನ್ನುಂಟುಮಾಡಿದ

www.bearyinfo.com

ಕಹಿ ಅನುಭವವು ನಮ್ಮ ಮುಂದೆ ಇದ್ದೇ ಇದೆ. ಇದು ಎಲ್ಲಾ ಕೆ
ಮೂಲವೆಂದೇ ಹೇಳಬೇಕಾಗಿದೆ. ಆದ್ದರಿಂದ ನಮ್ಮ ಸಮಾಜಬಾಂಧವ
ಈ ರೀತಿಯ ಚುನಾವಣಾ ಸ್ಪರ್ಧೆಯು ಯಾವ ನೆಲೆಯಲ್ಲಿಯೂ ನಡೀ
ನಮ್ಮ ಧುರೀಣರು ನೋಡಿಕೊಳ್ಳಬೇಕು.

ಮೌಲವಿಗಳು, ಉಲೆಮಾಗಳು ತಮ್ಮ ಮತ ಪ್ರಬೋಧನೆ ಸಮಯ
ಧಾರ್ಮಿಕ ವಿಷಯಗಳಲ್ಲಿ ಸಹಿಷ್ಣುತೆಯನ್ನು ಉಪದೇಶಿಸಲಿಕ್ಕೂ ಸ
ವಿವಿಧ ಪಂಗಡಗಳೊಳಗೆ ಐಕ್ಯಮತ್ಯವನ್ನು ಬೆಳೆಸಲಿಕ್ಕೂ, ಪ್ರಯತ್ನಿಸಲು ಅ
ಕೇಳಿಕೊಳ್ಳತಕ್ಕದ್ದು.

ನಮ್ಮ ಸಮಾಜದಲ್ಲಿ ಬಡ, ಯೋಗ್ಯ ತರುಣ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣ-ಪೂರ್ತಿಗಾಗಿ ಆರ್ಥಿಕ ಸಹಾಯ ಸಹಕಾರಗಳನ್ನು ಶಾಲಾವೇತನ ರೂಪದಲ್ಲಿ ಅಥವಾ ಸಾಲರೂಪದಲ್ಲಿ ಕೊಡಬಹುದಾದ ಸಂಘಟನೆಗಳ ಕೊರತೆ ಇದೆ. ಈ ಕಾರ್ಯಕ್ಕೆ ಪರಮ ಪ್ರಾಧಾನ್ಯತೆಯನ್ನು ಕೊಟ್ಟು ಇದನ್ನು ಸಂಘಟಿಸಬೇಕು. ಹೆಚ್ಚಿನ ಮಟ್ಟಿಗೆ 'ಟೆಕ್ನಿಕಲ್' ವಿದ್ಯಾರ್ಜನೆಗೆ ಪ್ರೋತ್ಸಾಹಕೊಡಬೇಕಾಗಿದೆ. ಸ್ತ್ರೀ ವಿದ್ಯಾಭ್ಯಾಸದ ಕಡೆಗೂ ನಿಗಾಕೊಡಬೇಕಾದುದು ಅವಶ್ಯ.

ಅಂತು ಮೇಲೆ ಹೇಳಿದಂತೆ ಒಂದು ಕೇಂದ್ರನಾಯಕತ್ವವು ನಮ್ಮ ಸಮಾಜದ ಎಲ್ಲಾ ಸಂಕಷ್ಟಗಳನ್ನೂ ನಿವಾರಿಸುವುದು ಮತ್ತು ಸಮಾಜದ ಕ್ಷೇಮಾಭಿವೃದ್ಧಿಯ ಚಿಂತೆಯಿರುವ ಪ್ರತಿಯೊಬ್ಬನ ಪ್ರಾಥಮಿಕ ಗುರಿಯೂ ಇದೇ ಆಗಿರತಕ್ಕದ್ದು ಎಂದೇ ನನ್ನ ಅಭಿಪ್ರಾಯ.

www.bearyinfo.com

# ಜನಾಬ್ ಪಿ. ಬಿ. ಹುಸೈನ್‌ಕುಂಞಿ.



[ಜನಾಬ್ ಪಿ. ಬಿ. ಹುಸೈನ್‌ಕುಂಞಿಯವರು ನಮ್ಮ ಸಮಾಜದ ಪ್ರಮುಖ ವರ್ತಕರಲ್ಲೊಬ್ಬರು. ಕೆಲವು ವರ್ಷಗಳಿಂದ ಅವರು ಸಮಾಜಸೇವೆಯ ಕಾರ್ಯದಲ್ಲಿ ನಿರತರಾಗಿದ್ದಾರೆ. ಸ್ಥಳೀಯ ಅಝ್ಹರಿಯ ಅಸೋಸಿಯೇಶನ್, ಬದ್ರಿಯಾ ಮುಸ್ಲಿಮ್ ಎಜ್ಯುಕೇಶನಲ್ ಎಸೋಸಿಯೇಶನ್, ಇವುಗಳ ಆಡಳಿತ ಸಮಿತಿಯ ಸದಸ್ಯರಾಗಿರುವುದಲ್ಲದೆ ಹೊಸತಾಗಿ ಸ್ಥಾಪಿತವಾದ ಮುಸ್ಲಿಮ್ ವೆಲ್ಫೇರ್ ಸಮಿತಿಯ ಆಡಳಿತ ಮಂಡಳಿಯಲ್ಲೂ ಸದಸ್ಯರಾಗಿದ್ದಾರೆ. ತಮ್ಮ ಹಿತಚಿಂತನಾ ಮನೋವೃತ್ತಿ ಹಾಗೂ ಸಮಾಜಸೇವಾಬುದ್ಧಿಯಿಂದಾಗಿ ಈಗಾಗಲೇ ಅವರು ಸಮಾಜದಲ್ಲಿ ಜನಾದರಣೀಯರಾಗಿದ್ದಾರೆ. —ಸಂ.]

---

ವಿದ್ಯಾವಿಹೀನತೆ ಮತ್ತು ಆರ್ಥಿಕ ಅಧೋಗತಿ—ಇವೆರಡು ಮೂಲಕಾರಣಗಳಿಂದಾಗಿ ನಮ್ಮ ಸಮಾಜದಲ್ಲಿ ಪೂರ್ಣ ಸ್ತಂಭನೆಯು ನೆಲೆಯೂರಿರುವುದಾಗಿ ನನ್ನ ಅಭಿಪ್ರಾಯ. ಅಂದರೆ ಬ್ರಿಟಿಷರು ಇಲ್ಲಿಗೆ ಬರುವಮೊದಲು ಮುಸ್ಲಿಮರು ಆಳುವ ಜನಾಂಗವಾಗಿದ್ದರು. ಟಿಪ್ಪೂಸುಲ್ತಾನರ ಸೋಲು ನಮ್ಮ ಸಮಾಜಕ್ಕೆ ಒಂದು ಮಹಾ ವಿಪತ್ತಾಗಿ ಪರಿಣಮಿಸಿತು. ಆಳುವವರು ದಾಸರಾದರು. ಒಂದು ಕಾಲದಲ್ಲಿ ಆಳುತ್ತಿದ್ದು ಇದೀಗ ಒಮ್ಮೆಲೇ ದಾಸ್ಯಕೂಪಕ್ಕೆ ದೂಡಲ್ಪಟ್ಟಾಗ ಹೊಸ ಸನ್ನಿವೇಶಕ್ಕೆ ಒಪ್ಪುವಂತೆ ತಮ್ಮನ್ನು ಮಾರ್ಪಾಟಗೊಳಿಸುವಷ್ಟು ಶಕ್ತಿಯು ಅವರಲ್ಲಿ ಉಳಿಯಲಿಲ್ಲ. ಹೊಸ ಸರಕಾರದೊಡನೆ ಸಹಕರಿಸುವುದಿರಲಿ, ಸರಕಾರದವರು ಸಾರ್ವಜನಿಕರ ಹಿತಕ್ಕಾಗಿ ತೆರೆಯುತ್ತಿದ್ದ ವಿದ್ಯಾಸಂಸ್ಥೆಗಳಿಗೂ ತಮ್ಮ ಮಕ್ಕಳನ್ನು ಕಳುಹಿಸಲು ಅವರು ಹಿಂಜರಿದರು. ಇದರ ಫಲಸ್ವರೂಪವಾಗಿ ಸರಕಾರಿ ಹುದ್ದೆಗಳೂ ಅವುಗಳ ಮುಖಾಂತರ ಲಭಿಸುವ ಇತರ ಸೌಲಭ್ಯಗಳಾವೂ ಮುಸ್ಲಿಮರಿಗೆ ಸಿಗದಂತಾಯಿತು. ಈತನ್ಮಧ್ಯೆ ಇತರ ಸಮುದಾಯಗಳು ನಾಮುಂದೆ ತಾಮುಂದೆ ಎಂಬಂತೆ ಹೊಸ ಸರಕಾರದೊಡನೆ ಸಂಪೂರ್ಣ ಸಹಕರಿಸಿ ಅವರು ಮುಂದೆ ತರುವ ಎಲ್ಲಾ ಸಹಾಯ ಸಹಕಾರಗಳಿಂದ ಲಾಭಪಡೆದು, ವಿದ್ಯಾಸಂಸ್ಥೆಗಳಲ್ಲಿ ಸೇರಿ ಆಧುನಿಕ ವಿದ್ಯಾಭ್ಯಾಸವನ್ನು ಕರಸ್ಥಮಾಡಿ ಪುರೋಗಮನ ಹಾದಿಯಲ್ಲಿ ಚಲಿಸಲಾರಂಭಿಸಿದುವು. ಮುಸಲ್ಮಾನರಲ್ಲಿ ವಿದ್ಯಾವಿಹೀನತೆಯು ನೆಲೆಯೂರಿ ಸಮಾಜದ ಅಧಃಪತನಕ್ಕೆ ಅದು ಮೂಲಕಾರಣವಾಗಿ ಮುಂದರಿಯಿತು.

ಆಳುವ ಹಾಗೂ ಸಿರಿವಂತ ಜನಾಂಗವಾಗಿದ್ದ ಅವಸ್ಥೆಗೆ ಮುಸಲ್ಮಾನರ ಜೀವನಮಟ್ಟವು ಇತರ ಜನಾಂಗಗಳಿಗಿಂತಲೂ ಎಷ್ಟಕ್ಕೊ ಮೇಲ್ತರದ್ದಾಗಿತ್ತು. ಅವರು ತಮ್ಮ ದೈನಂದಿನದ ಆವಶ್ಯಕತೆಗಳಿಗಾಗಿ ತುಂಬಾ ಹಣವನ್ನು ವ್ಯಯಿಸು

www.bearyinfo.com

ತ್ತಿದ್ದರು. ಮಾತ್ರವಲ್ಲ, ಅವರ ಸ್ವಾ
ಇತ್ಯಾದಿ ಸಮಾರಂಭಗಳಲ್ಲಿ ಮಿತಿ
ಸ್ಥಿತಿಗತಿಗಳು ಅವರನ್ನು ಕವಲುದಾ
ವರಂತೆ ಅವರು ದೇಶದಲ್ಲಿ ಉಂಟಾ
ತಮ್ಮನ್ನು ಬದಲಾಯಿಸಿಕೊಳ್ಳುವ ಗ
ದೊಡನೆ ಸಹಕರಿಸದೆ ಹೊಸ ಸರಕಾ
ಯಾಗಿ ಜೀವನ ನಡಿಸತೊಡಗಿದರು. ಮುಸ
ತಮ್ಮ ಪಿತ್ರಾರ್ಜಿತ ಆಸ್ತಿಪಾಸ್ತಿಗಳ ಮೇಲೆ ಆಧರಿ
ಶ್ರಮಗಳಿಂದಲೂ ದಿನದೂಡಲಾರಂಭಿಸಿದರು. ಅಂ
ಕರಿಸಿದ ಕಾರಣದಿಂದ, ಸರಕಾರದಿಂದ ಸಿಗಬಹುದಾ
ವೆಲ್ಲವೂ ಅವರಿಗೆ ಸಿಗದಂತಾಯಿತು. ಈ ರೀತಿ ಆರ್ಥಿಕ
ಅಧಃಪತನವನ್ನು ತಾಳಿದರು. ಒಂದು ಕಾಲದಲ್ಲಿ ಆಳುತ್ತಿದ್ದ
ಗಕ್ಕೆ ಇಳಿಯುವುದು ಎಷ್ಟಕ್ಕೂ ಅಪಮಾನಕರವೆಂಬ ಡಂಭ ಅಭಿಮಾ
ಕಟ್ಟಿಕೊಂಡು ಯಾವತ್ತೂ ದೈಹಿಕ ಪರಿಶ್ರಮದ ಮೂಲಕ ಜೀವನ ನಡಿ
ಅವರು ಹಿಂಜರಿದರು. ಕಡೆಗೆ ಆಸ್ತಿಪಾಸ್ತಿಗಳನ್ನು ಅಡವಿಟ್ಟು, ಹೆಚ್ಚಿನ ಮಟ್ಟಿ
ಸಾಲಪೂರ್ತಿಗಾಗಿ ಅವುಗಳನ್ನು ಮಾರಿ ಹೀನಾವಸ್ಥೆಗೊಳಗಾದರು. ಈ
ಪರಿಸ್ಥಿತಿಯು ಸಮಾಜದ ಸ್ಥಂಬನಕ್ಕೆ ಕಾರಣವಾಯಿತು.

2. ಅಭಿವೃದ್ಧಿಯ ಕುರಿತು ಮಾತನಾಡುವಾಗ ಮೊತ್ತಮೊದಲನೆಯದಾಗಿ ನಾವು ನೆನಪಿಡಬೇಕಾದುದು ಏನೆಂದರೆ ನಮ್ಮ ದೃಷ್ಟಿಕೋನವು ಎಲ್ಲಾ ಸಮಯವೂ ಒಂದೇ ತೆರನಾಗಿರಬಾರದು. ಸುತ್ತುಮುತ್ತಲಿನ ಬದಲಾವಣೆಗಳನ್ನು ದೃಷ್ಟಿ ಮುಂದೆ ಇಟ್ಟು ನಾವು ಕಾಲಕ್ಕೊಪ್ಪುವಂತೆ ತಮ್ಮನ್ನು ಬದಲಾಯಿಸತಕ್ಕದ್ದು. ಈ ಮನೋವೃತ್ತಿಯ ಅಭಾವವೇ ನಮ್ಮ ಸಮಾಜದ ಮಹಾ ಕೊರತೆ. ದೃಷ್ಟಾಂತವಾಗಿ, ನಾವು ಸಂಪಾದಿಸುವುದಕ್ಕಿಂತಲೂ ಹೆಚ್ಚು ಖರ್ಚು ಮಾಡಬಾರದು. ನಾವು ರಾಜ್ಯದ ಸರಕಾರದ ಅಚ್ಚುಕಟ್ಟಿನಿಂದ ದೂರವಾಗಿ ಪ್ರೇಕ್ಷಕರಾಗಿ ನಿಲ್ಲುವುದನ್ನು ಬಿಟ್ಟು ಅದರ ಒಳಗೆ ಪ್ರವೇಶಿಸಿ ನಮ್ಮ ಪಾಲಿನ ಕರ್ತವ್ಯಗಳನ್ನು ನೆರವೇರಿಸುತ್ತಾ ನಮ್ಮ ಸಮಾಜದ ಹಿತಾಸಕ್ತಿಗಳಿಗನುಗುಣವಾಗಿ ಅದರಿಂದ ಲಾಭಪಡೆಯಬೇಕಾಗಿದೆ. ನಮ್ಮ ಸಂಕಷ್ಟಗಳನ್ನು ಸರಕಾರದ ಮುಂದಿಟ್ಟು ಸರಕಾರದ ಸರ್ವಖಾತೆಗಳಲ್ಲಿಯೂ ಪ್ರವೇಶಿಸಿ ಹೆಚ್ಚು ಹೆಚ್ಚಿನ ಲಾಭಗಳನ್ನು ನಮ್ಮ ಸಮಾಜಕ್ಕೆ ಒದಗಿಸಿಕೊಡಬೇಕಾಗಿದೆ.

ನಮ್ಮ ಸಮಾಜವನ್ನು ಪ್ರಗತಿ ಪಥದಲ್ಲಿ ಹಾಕಲು ಮೇಲೆ ವಿವರಿಸಿದ ಕಾರ್ಯಕ್ರಮವಲ್ಲದೆ ಈ ಕೆಳಗಿನ ಸೂಚನೆಗಳೂ ಉಪಯುಕ್ತವಾಗಬಹುದು.

ನಾವು ಹಿರಿಯರಿಂದ ಕಲಿತು ಬಂದಿರುವ ಮದುವೆ ಮುಂಜಿಗಳಲ್ಲಿ ದುರ್ವ್ಯಯ ಮಾಡುವ ಹವ್ಯಾಸವನ್ನು ಬಿಟ್ಟುಬಿಡತಕ್ಕದ್ದು.

www.bearyinfo.com

ಹಾಗೂ ವೈಯಕ್ತಿಕ ಖರ್ಚು
...ತತಕ್ಕದ್ದು.

...ಕ್ಕಳಿಗೂ ಧಾರ್ಮಿಕ ವಿದ್ಯಾಭ್ಯಾಸ
...ಡುವ ಏರ್ಪಾಡು ಮಾಡತಕ್ಕದ್ದು.

...ತಾಯದ ಭಾವನೆಯು ಉತ್ಪನ್ನವಾಗ
...ನ್ನ ಬಿಟ್ಟು ಆಡಂಬರ ಜೀವನಕ್ಕೆ ಕೈಹಾಕ
...ನಲ್ಲಿಯೂ ಒಂದು ತರ ಮಿತವ್ಯಯ ಬೋಧವು

...ವಿದ್ಯಾಪ್ರಸಾರ, ಇನ್ನೊಂದೆಡೆ ಆರ್ಥಿಕ ಅಭಿವೃದ್ಧಿ ಈ
... ನಾವು ಎಂದು ಕಾರ್ಯಪ್ರವೃತ್ತರಾಗುವೆವೋ ಅಂದು
...ಂದಿಯಲ್ಲಿ ನಾವು ಕಾಲಿಡುವೆವು ಎಂದು ತಿಳಿದುಕೊಳ್ಳಬೇಕು.

...೬. ಕೇಂದ್ರ ಧುರೀಣತ್ವವು ಒಂದು ಸಜೀವ ಸಮಾಜಕ್ಕೆ ಭೂಷಣವು. ...ಲ್ಲದಿದ್ದರೆ ಸಮಾಜ ದಾರಿಕಾಣದ ಕುರುಡನಂತೆ ಎಡವಿ ಬೀಳುವುದರಲ್ಲಿ ಸಂದೇಹವಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ನಮಗೊಂದು ಕೇಂದ್ರ ಆಡಳಿತಾ ಬೋರ್ಡು ಇಲ್ಲದಿರುವುದರಿಂದಲೇ ಅನೈಕ್ಯ ಮತ್ತು ಶಿಸ್ತುವಿಹೀನತೆಯು ನಮ್ಮ ಸಮಾಜದಲ್ಲಿ ಎತ್ತಲೂ ಎದ್ದು ಕಾಣುತ್ತಿರುವುದು. ಕೇಂದ್ರ ನಾಯಕತ್ವದ ಅಭಾವದಲ್ಲಿ ನಾವು ಮಂಗಳೂರ ಮುಸ್ಲಿಮ್ ಪ್ರಮುಖರನ್ನೊಳಗೊಂಡ ಯಾ ಸ್ಥಳೀಯ ಮಸೀದಿ ಜಮಾತುಗಳಿಂದ ಮತ್ತು ಸಂಘಟನೆಗಳಿಂದ ನೇರವಾಗಿ ಚುನಾಯಿಸಿದ ಪ್ರತಿನಿಧಿಗಳನ್ನೊಳಗೊಂಡ ಒಂದು ಸಲಹಾಮಂಡಳಿಯನ್ನು ನೇಮಿಸಬಹುದು. ಈ ಸಲಹಾ ಮಂಡಳಿಯು ಕೇಂದ್ರನಾಯಕತ್ವದ ಉದಯಕ್ಕಾಗಿ ಪರಿಶ್ರಮಿಸಬೇಕು. ಮತ್ತು ಅದು ಕರಸ್ಥವಾದ ಬಳಿಕವೂ ಅದಕ್ಕೆ ಸಲಹೆಗಳನ್ನೀಯುವ ಕಾರ್ಯಕ್ರಮವನ್ನು ಮುಂದರಿಸಬಹುದು. ಈಗ ಕಾರ್ಯಪ್ರವರ್ತಿಸುತ್ತಿರುವ ಮುಸ್ಲಿಮ್ ಹಿತಚಿಂತನಾ ಸಮಿತಿಯು ಈ ಮಾರ್ಗದ ಮೊದಲ ಯಶಸ್ವಿ ಹೆಜ್ಜೆಯೆಂದು ನನ್ನ ಅಭಿಪ್ರಾಯ.

---

www.bearyinfo.com

# ಜನಾಬ್ ಸಿ. ಅಬ್ದುಲ್

['ತಂದೇ



ಯಲ್ಲವೆ?
ಎಂದು ಹೇ
ದಿ। ಸಿ.
ದಿ।
ಥಾ
ಆ
ಇನ್ನಷ್ಟು ಕಳೆಕೊಟ್ಟಿದೆ.
ಪ್ರಾಮುಖ್ಯರು ಎಂಬುದ

---

ನಮ್ಮ ಸಮಾಜ
ಹಾಗೂ ಆರ್ಥಿಕ ಪತ
ನಮ್ಮಲ್ಲಿ ಹರಡಿರುವ
ಗಳೆಂದು ನನಗನ್ನಿಸುತ್ತದೆ
ಯಿದ್ದರೂ, ವ್ಯಾಪಾರ-ವಹಿವಾ
ದವರಾಗಿದ್ದರು. ಮಾತ್ರವಲ್ಲ
ಇದ್ದುವು ಎಂದು ನಾವು ಕೇಳುತ್ತ
ವರಿಯುವಾಗಲಂತೂ ನಮ್ಮ ಆರ್ಥಿಕ
ಜನಾಂಗವೇ ವ್ಯಾಪಾರ ವಹಿವಾಟು
ನಮ್ಮ ಹಿರಿಯರನ್ನು 'ಬ್ಯಾರಿ' ಎಂದು
ಇಂದಿನ ಕಾಲದಲ್ಲಿ 'ಬ್ಯಾರ'ವು (ವ್ಯಾಪಾರವು,
ಹೆಸರು ಸ್ವತಃ ನಮ್ಮವರಿಗೇ ಅಸಹ್ಯವಾಗಿ ಬಿಟ್ಟಿ

ಈ ರೀತಿಯ ಆರ್ಥಿಕ ಮುಗ್ಗಟ್ಟಿಗೆ ನಾವು
ನಮ್ಮ ಹಿರಿಯರು ವಿದ್ಯೆಯ ಕಡೆಗೆ ತೋರಿಸಿದ ಅ
ಕಾಲದ ಬೇಡಿಕೆಯನ್ನು ಅವರು ಸರಿಯಾಗಿ ಮನ
ಸಂಪತ್ತು ಎಂದೆಂದಿಗೂ ತಮ್ಮನ್ನು ಅಗಲದೆಂದೆಣಿಸಿಯೆ
ಳಿಗೆ ಆಧುನಿಕ ವಿದ್ಯಾಭ್ಯಾಸ ಕೊಡಲು ಹಿಂಜರಿದ
ವ್ಯಾಪಾರ ವಹಿವಾಟುಗಳು ಸಹ ಮೆಲ್ಲಮೆಲ್ಲನೆ ಅವರ ... ಇತರ
ಸಮಾಜಗಳ ಕೈವಶವಾಯಿತು. ನಮ್ಮ ಹಿರಿಯರ ಕಾಲದಲ್ಲಿ ಒಂದು ಮುಸ್ಲಿಮ್
ಹೈಸ್ಕೂಲನ್ನು ಸ್ಥಾಪಿಸಲು ಹಲವಾರು ಪ್ರಯತ್ನಗಳನ್ನು ಅಂದಿನ ಕಲೆಕ್ಟರರುಗಳು

www.bearyinfo.com

ನಿಯ ವಿದ್ಯೆ ಅವಶ್ಯವಿಲ್ಲವೆಂದು ಅವರು
ರ್ಗಗಳನ್ನು ಧಿಕ್ಕರಿಸಿದರಿಂದೂ ನಮ್ಮ
ಾಗಿ ಹೊಸ ಸನ್ನಿವೇಶಗಳಿಗೆ ಒಪ್ಪು
ವಹಾರಜ್ಞಾನವು ವಿದ್ಯಾಭ್ಯಾಸದ
ಪತ್ತು ಮಾತ್ರ. ಅದು ಅನು
ಾವು ಕಣ್ಣು ತೆರೆಯುವಾಗ
ರಿಯಲ್ಲಿ ಬಂದು ನಿಂತಿದೆ.
ಯಿಂದ ಅದನ್ನು ಎಚ್ಚರ
ನ ಕಾರ್ಯಕ್ರಮವನ್ನು

ಂದಮೊದಲು ಶ್ರಮಿಸ
ನಿಕ ವಿದ್ಯಾಜ್ಞಾನಗಳ
ಕೊರತೆಗಳು ಹಾಗೂ
ರ್ಾರ್ಥಿಕ ಸುಧಾರಣಾ
ಇಂದು ಕಾಣುತ್ತಿರುವ
ನ್ನು ಕೊನೆಗೊಳಿಸಬೇಕು.
ದ್ಯಾಭ್ಯಾಸವನ್ನು ಸಮಾಜದಲ್ಲಿ
ಸ್ಕರ ಶಿಕ್ಷಣ ಹಾಗೂ ಸಮಾಜ
ಗೊಳಿಸಲು ಒಂದು ಪತ್ರಿಕೆಯು
ಅದು ಯಾವುದೇ ಬಿನ್ನಾಭಿಪ್ರಾಯ
ದ ಯಾವುದೇ ಜನವಿಭಾಗದ ಮನ
ತಿ ಪ್ರಿಯವಾಗಿರುವ ನಮ್ಮ ಸಮಾಜದ
ತನ್ನ ಗುರಿಯಾಗಿಟ್ಟು, ಯೋಗ್ಯರೂ ನಿಷ್ಪಕ್ಷ
ುಗಳಿಂದ ನಡಿಸಲ್ಪಡಬೇಕು.

ರ್ಮದಲ್ಲಿ ಸಮಾಜದ ಸ್ವಾಧೀನವಿರುವ ಎರಡು
ಾ ಶಾಲೆ ಹಾಗೂ ಮದ್ರಸತುಲ್ ಅಜ್ಹರಿಯಾವನ್ನು
ೀಗಿಸಿದಲ್ಲಿ ಕೆಲಸವು ಸುಲಭವಾಗಬಹುದು. ಬದ್ರಿಯಾ
ಒಂದು ಹೈಸ್ಕೂಲ್ ಆಗಿಯೂ, ಅನಂತರ ಒಂದು
ಕಾಲೇಜಾಗಿಯೂ, ಮದ್ರಸತುಲ್ ಅಜ್‌ಹರಿಯವನ್ನು ಒಂದು ಉಚ್ಚ ಮದ್ರಸವಾಗಿಯೂ ಪರಿವರ್ತಿಸಿದುದಾದರೆ ಕೆಲವೇವರ್ಷಗಳಲ್ಲಿ ನಮ್ಮ ಸಮಾಜವು ಒಂದು ವಿದ್ಯಾವಂತ ಸಮುದಾಯವಾಗಿ ಮಾರ್ಪಡಬಹುದು.

www.bearyinfo.com

ಅಂತೆಯೇ ಸ್ತ್ರೀ ವಿದ್ಯಾಭ್ಯಾಸದ ಕಡೆಗೂ ನಾವು ಶ್ರದ್ಧೆಕೊಡಬೇಕಾಗಿದೆ. ಒಂದು ಸ್ತ್ರೀಗೆ ವಿದ್ಯಾಭ್ಯಾಸ ಕೊಟ್ಟೆವೆಂದರೆ ಇಡೀ ಕುಟುಂಬಕ್ಕೆ ವಿದ್ಯಾಭ್ಯಾಸ ಕೊಟ್ಟಂತೆ. ಈ ವಿಷಯದಲ್ಲಿ ನಮ್ಮ ಧರ್ಮವು ನಮಗೆ ಮಾರ್ಗದರ್ಶನವಿತ್ತಿರುವುದಾದರೂ, ಈ ಕಡೆಗೆ ನಾವು ಬೇಕಾದಷ್ಟು ಲಕ್ಷ್ಯಕೊಡಲಿಲ್ಲವೆಂಬುದು ಹೆಮ್ಮಕ್ಕಳಿಗಾಗಿ ನಮ್ಮ ಸಮಾಜದ ಪರವಾಗಿ ಒಂದೇ ಒಂದು ಶಾಲೆಯಿರುವುದಿಲ್ಲವೆಂಬ ನಗ್ನಸತ್ಯದಿಂದ ಬಹಿರಂಗವಾಗುತ್ತದೆ. ನಾವು ಇಸ್ಲಾಮಿನ ಆಜ್ಞೆಗಳನ್ನು ಮೀರಿ ಸ್ತ್ರೀಗೋಶಾ ಪದ್ಧತಿಯನ್ನು ರದ್ದುಗೊಳಿಸಿ, ಹೆಣ್ಣು ಮಕ್ಕಳಿಗೆ ಆಧುನಿಕ ವಿದ್ಯಾಭ್ಯಾಸದ ಪ್ರಧಾನ ಅಂಶಗಳಾದ ಗಾಯನ-ನರ್ತನ ಇತ್ಯಾದಿಗಳನ್ನು ಕೊಡಬೇಕೆಂದಿಲ್ಲ. ಮುಸ್ಲಿಮ್ ಹೆಮ್ಮಕ್ಕಳಿಗಾಗಿ ಒಂದು ಪ್ರತ್ಯೇಕ ಶಾಲೆಯನ್ನು ತೆರೆದು ಅದರಲ್ಲಿ ಇಸ್ಲಾಮೀ ವಿದ್ಯಾಜ್ಞಾನಗಳೊಂದಿಗೆ ಆವಶ್ಯಕವಾದ ಆಧುನಿಕ ವಿದ್ಯಾಭ್ಯಾಸದ ಅಂಶಗಳನ್ನು ಮಾತ್ರ ಕೊಟ್ಟರೇ ಸಾಕು ಎಂದೇ ನನ್ನ ಅಭಿಪ್ರಾಯ.

ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನಿವಾರಿಸಲು ಒಂದು ಸುಲಭ ಉಪಾಯವೆಂದರೆ ಧನಿಕರಾದ ಕೆಲವು ಮುಸ್ಲಿಮ್ ಮಹನೀಯರ ಸಹಾಯದಿಂದ ಶೀಘ್ರದಲ್ಲೇ ಮುಸ್ಲಿಮ್ ಪರಸ್ಪರ ಸಹಾಯ ಫಂಡೊಂದನ್ನು ಸ್ಥಾಪಿಸಿ, ಅದರ ಮೂಲಕ ಕೆಲವು ಯೋಗ್ಯರೂ, ವಿಶ್ವಸನೀಯರೂ ಆದ ಚಿಕ್ಕ ಮಟ್ಟಿನ ವ್ಯಾಪಾರಿಗಳಿಗೆ ಯಾ ವ್ಯಾಪಾರ ನಡಿಸಬಲ್ಲರೆಂದು ತೋರುವ ನಿರುದ್ಯೋಗಿಗಳಿಗೆ ವ್ಯಾಪಾರಕ್ಕಾಗಿ ಒಬ್ಬಿಬ್ಬರ ಶಿಫಾರಸಿನ ಮೇಲೆ, ಸುಲಭ ಕಂತಿನಲ್ಲಿ ವಾಪಾಸು ಕೊಡುವ ಶರ್ತದ ಮೇಲೆ ಮೊಬಲಗು ಕೊಟ್ಟು ಸಹಾಯಮಾಡಬಹುದು. ಅಂತೆಯೇ ಸುಲಭ ಕಂತಿನಲ್ಲಿ ವಾಪಾಸು ಕೊಡುವ ಶರ್ತದ ಮೇಲೆ ಧಾರ್ಮಿಕ, ಲೌಕಿಕ ಉಚ್ಚ ಶಿಕ್ಷಣಕ್ಕಾಗಿ ಹೋಗುವ ವಿದ್ಯಾರ್ಥಿಗಳಿಗೆ ಸ್ಕೋಲರ್‌ಶಿಪ್‌ಗಳನ್ನೂ ಕೊಡಬಹುದು. ಈ ತರ ಫಂಡಿನ ಸ್ಥಾಪನೆಯು ಸಮಾಜದ ಚಿಕ್ಕ ಚಿಕ್ಕ ವ್ಯಾಪಾರಿಗಳಿಗೆ ಭದ್ರತೆಯನ್ನು ಕೊಡುವುದರೊಂದಿಗೆ, ವಿದ್ಯಾಭ್ಯಾಸ ಮುಗಿದ ಕೂಡಲೇ 'ಕ್ಲಾರ್ಕ್' ಕೆಲಸಕ್ಕಾಗಿಯೇ ಸಾಗುತ್ತಿರುವ ಅನೇಕ ಮುಸ್ಲಿಮ್ ತರುಣರಿಗೆ ವ್ಯಾಪಾರೋದ್ಯಮವನ್ನು ಕೈಕೊಂಡು ತಮ್ಮ ಯೋಗ್ಯತಾರ್ಹತೆಗಳನ್ನು ಈ ರಂಗದಲ್ಲಿಯೂ ವಿನಿಯೋಗಿಸಲು ಪ್ರೇರಕವಾಗುವುದು. ವಿದ್ಯಾವಂತ ಸಮಾಜವು ವ್ಯಾಪಾರಕ್ಕೆ ಇಳಿದಾಗ ನಮ್ಮ ಆರ್ಥಿಕ ಪರಿಸ್ಥಿತಿಯು ಇಂದಿನಕ್ಕಿಂತಲೂ ಸುಧಾರಿಸುವುದು.

ಕೇಂದ್ರ ನಾಯಕತ್ವವು ಇಲ್ಲದಿರುವ ಪರಿಸ್ಥಿತಿಯಲ್ಲಿ ಅದರ ಒಂದು ಅಸ್ಥಿಪಂಜರವನ್ನಾದರೂ ನಾವು ಸೃಷ್ಟಿಸಿ ಅದು ಉದಯಿಸುವ ಕಾಲದ ವರೆಗೂ ಸಮಾಜಕ್ಕೆ ಮಾರ್ಗದರ್ಶನ ಕೊಡಬೇಕಾಗಿದೆ. ಈ ಕಾರ್ಯದಲ್ಲಿ ನಾವು ಮೊತ ಮೊದಲು ಪ್ರತಿಯೊಂದು ಮಸೀದಿಗೂ ಒಂದೊಂದು ಜಮಾತನ್ನು ಸಂಘಟಿಸಿ ಆಯಾ ಜಮಾತುಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಕೇಂದ್ರ ಮಂಡಳಿಯನ್ನು ಮುಸ್ಲಿಮ್ ಸಮಾಜದ ತಾತ್ಕಾಲಿಕ ಮೇಲ್ನೋಟಕ್ಕಾಗಿ ಚುನಾಯಿಸ

www.bearyinfo.com

ತಕ್ಕದ್ದು. ಸದ್ರಿ ಕೇಂದ್ರ ಸಮಿತಿಯು ಮುಸ್ಲಿಮ್ ಸಮಾಜದ ಸರ್ವತೋಮುಖ ಏಳಿಗೆಗಾಗಿ ದುಡಿಯಬೇಕು. ಇದು ಯಾವದೊಂದು ಪಕ್ಷಭಾವನೆಯನ್ನಿಟ್ಟು ಕೊಳ್ಳದೆ ಸಮಾಜದ ಎಲ್ಲಾ ಅಂಗಗಳನ್ನೂ ವಿವಿಧ ಪಂಗಡಗಳನ್ನೂ ಸಮಾನ ದೃಷ್ಟಿಯಿಂದ ನೋಡಿಕೊಂಡು ಎಲ್ಲರೊಡನೆಯೂ, ಮಮತೆಯಿಂದಲೂ, ಸಹಿಷ್ಣುತೆ ಯಿಂದಲೂ ನಡಿಸಿಕೊಂಡು ಬರಬೇಕು.

---

## ಜನಾಬ್ ಕೆ. ಹಸನಬ್ಬಾ ಸಾಹೇಬ್—ಕುದ್ರೋಳಿ.

['ಹಣ ಮೇಲೋ ಗುಣ ಮೇಲೋ' ಎಂದು ಕೇಳಿದರೆ ಗುಣವೇ ಮೇಲೆಂದು ಇಂದಿಗೂ ಅನೇಕರು ಹೇಳುವರು. ಆದರೆ ಹಣದ ಪ್ರಭಾವವು ತುಂಬಾ ಬೆಳೆದಿರುವ ಈ ಕಾಲದಲ್ಲಿ ಗುಣದ ಪ್ರಾಧಾನ್ಯತೆಯು ಕುರಿತು ಅಷ್ಟೊಂದು ಗಮನ ತೋರುವುದಿಲ್ಲ. ಆದರೂ ಕೇವಲ ಗುಣಸ್ವಭಾವಗಳ ಅಡಿಸ್ತಾನದ ಮೇಲೆ ಸಮಾಜದಲ್ಲಿ ಜನಪ್ರಿಯತೆಯನ್ನು ಗಳಿಸಿರುವ ಕೆಲವು ವ್ಯಕ್ತಿಗಳು ನಮ್ಮ ಸಮಾಜದಲ್ಲಿದ್ದಾರೆಂಬುದು ನಮಗೆ ಹೆಮ್ಮೆಯ ಮಾತು. ಜನಾಬ್ ಹಸನಬ್ಬಾರವರು ಈ ಪುಣ್ಯವಂತ ಸಾಲಿಗೆ ಸೇರಿದವರು. ಬಡಕುಟುಂಬದಲ್ಲಿ ಜನಿಸಿ ಉಚ್ಚ ಶಿಕ್ಷಣದ "ಸೌಭಾಗ್ಯ"ವು ಅವರಿಗೆ ಕೈಸೇರದೇ ಹೋದರೂ ಕೇವಲ ತಮ್ಮ ಗುಣಸ್ವಭಾವ ಗಳಿಂದ, ತಮ್ಮ ನಿಷ್ಕಳಂಕ ಸೇವಾಬುದ್ಧಿಯಿಂದ ಸಮಾಜದಲ್ಲೊಂದು ಸ್ಥಾನವನ್ನು ಗಳಿಸಿ ಕೊಂಡಿದ್ದಾರೆ. ಹೆಚ್ಚಿನ ಮಟ್ಟಿಗೆ ಕಲಿಯದಿದ್ದರೂ ಕಲಿತಷ್ಟನ್ನು ಪ್ರಯೋಗಕ್ಕೆ ತಂದು ಜನಸೇವೆಗೈಯುತ್ತಾರೆ. ಇದೇ ಇವರ ಜನಪ್ರಿಯತೆಯ ರಹಸ್ಯ.—ಸಂ.]

---

ನಮ್ಮ ಸಮಾಜದಲ್ಲಿ ಇಂದು ಬಹಿರಂಗವಾಗಿ ಎದ್ದು ಕಾಣುವ ಸ್ಥಂಬನಕ್ಕೆ ನನ್ನ ಮಟ್ಟಿಗೆ ಮೂಲಕಾರಣವೆಂದರೆ ನಮ್ಮ ಪ್ರಜ್ಞೆಶೂನ್ಯತೆ. ತಮ್ಮ ಸ್ಥಾನಮಾನ ಗಳ, ತಮ್ಮ ನೆಲೆ ಬೆಲೆಗಳ ಪರಿಚಯವು ಇನ್ನೂ ನಮ್ಮ ಮುಸ್ಲಿಮ್ ಸಮಾಜ ಬಂಧುಗಳಿಗೆ ಇರುವುದಿಲ್ಲ. ಇದನ್ನು ಸಮಾಜದಲ್ಲಿ ಸೃಷ್ಟಿಸುವುದು ಸುಲಭ ಕಾರ್ಯವೂ ಅಲ್ಲ. ಏಕೆಂದರೆ ಕೇವಲ ಪುಸ್ತಕ ಪ್ರಪಂಚದಲ್ಲಿ ಧಾರ್ಮಿಕ ವಿದ್ವಾಂಸರಿಂದಾಗಲೀ, ಧಾರ್ಮಿಕ ಅಡಿಸ್ತಾನವಿಲ್ಲದ ಲೌಕಿಕ ವಿದ್ಯಾರ್ಜಿತ ಧುರೀಣರಿಂದಾಗಲಿ ಈ ಪ್ರಶ್ನೆಯು ಬಗೆಹರಿಯಲಾರದು. ಧರ್ಮದ ಕುರಿತಾದ ನ್ಯಾಯವಾದ ವಿದ್ಯಾಜ್ಞಾನಗಳಿರುವುದರೊಂದಿಗೆ ಲೋಕದ ಆಗುಹೋಗುಗಳ ಮೇಲೂ ದೃಷ್ಟಿ ಇರುವ ವಿಧ್ವಾಂಸ ಮುಸ್ಲಿಮ್ ನಾಯಕರುಗಳಿಂದಲೇ ಇಂತಹ ಒಂದು ಯಥಾರ್ಥಬೋಧವನ್ನು ಸಮಾಜದಲ್ಲಿ ಸೃಷ್ಟಿಸಲು ಸಾಧ್ಯವಾಗಬಹುದು.

ಆದರೆ ಈ ಯೋಗ್ಯತಾರ್ಹತೆಗಳ ಪರಿಮಾಣದಿಂದ ನಮ್ಮ ಮಂಗಳೂರ ಮುಸ್ಲಿಮ್ ಸಮಾಜವನ್ನು ಅಳೆಯುವುದಾದರೆ ಧಾರ್ಮಿಕ ವಿದ್ಯಾಜ್ಞಾನಗಳ ಪರಿಜ್ಞಾನವಿರುವ ಯಥಾರ್ಥ ವಿದ್ವಾಂಸರುಗಳನ್ನು ಇದುವರೆಗೂ ನಮ್ಮ ಸಮಾಜವು ಸಿದ್ಧಪಡಿಸಿಲ್ಲವೆಂಬುದು ಒಂದೆಡೆ ಕಾಣುವಾಗ ಇನ್ನೊಂದೆಡೆ ಲೌಕಿಕ ದೃಷ್ಟಿ

www.bearyinfo.com

ಯಿಂದಲೂ ನಮ್ಮ ಸಮಾಜವು ಮುಂದಿನ ಸಾಲಿನಲ್ಲಿಲ್ಲವೆಂಬುದು ಕಣ್ಣಿಗೆ ಗೋಚರವಾಗುವುದು. ನಮ್ಮ ವಿದ್ಯಾವಂತರಿಂದು ಅಭಿಮಾನಪಡುವ ಜನ ಕೂಟವು ವ್ಯಾಪಾರ ವಾಣಿಜ್ಯಗಳಲ್ಲಿಳಿದು ಸ್ವತಂತ್ರ ಜೀವನವನ್ನು ಗಳಿಸಿಕೊಂಡು ಸ್ವತಂತ್ರಚಿತ್ತರಾಗಿ, ಸಮಾಜಸೇವೆಯಲ್ಲಿ ನಿರತರಾಗಿರುವುದು ಕಾಣಲು ದುರ್ಲಭ. ವಿದ್ಯಾವಂತ ತರುಣರ ಪೈಕಿ ಸೇಕಡಾ 99 ಯಾ ಅದಕ್ಕಿಂತಲೂ ಹೆಚ್ಚಿನವರು ಸರಕಾರಿ ಯಾ ಸಾಹುಕಾರಿ ಆಫೀಸುಗಳಲ್ಲಿ ಕೇವಲ ಕ್ಲಾರ್ಕುಗಳಾಗಿಯಾಗಲೀ ಅಥವಾ ಮಾಸ್ಟರುಗಳಾಗಿಯಾಗಲೀ ತಮ್ಮ ಜೀವನವನ್ನು ಕಳೆಯುತ್ತಿರುವ ದೃಶ್ಯ ವನ್ನು ಕಾಣಬಹುದು. ಇವರಿಗೆ ಸಮಾಜಸೇವೆಗೆ ಸಮಯ ಸಿಗುವುದಂತಿರಲಿ, ಸರಿ ಯಾಗಿ ಧಾರ್ಮಿಕ ಅನುಷ್ಠಾನಗಳನ್ನು ಕ್ರಮಪ್ರಕಾರವಾಗಿ ನೆರವೇರಿಸಲಿಕ್ಕೂ ಸಮಯ ಸಿಕ್ಕುವುದಿಲ್ಲ. ವಿದ್ಯಾವಂತ ವಿಭಾಗವು ಈ ತರ ಪ್ರಾಣಸಂಕಟದಲ್ಲಿ ಬಿದ್ದಿರುವಾಗ ಸಮಾಜದಲ್ಲಿ ಪುರೋಗತಿಯ ಭಾವನೆಯು ಕುಂಠಿತವಾಗಿ ಒಂದು ಭಯಂಕರವಾದ ಸ್ಥಂಬನವು ಸ್ಥಾಯೀಕರಿಸಿರುವುದರಲ್ಲಿ ಆಶ್ಚರ್ಯವಿಲ್ಲ.

ಈ ತೆರನಾದ ಸ್ಥಂಬನವನ್ನು ಮುರಿದು ಸಮಾಜವನ್ನು ಪ್ರಗತಿಯ ಹಾದಿ ಯಲ್ಲಿ ಹಾಕಬೇಕೆಂದಿದ್ದರೆ ಮೊತ್ತಮೊದಲು ನಮ್ಮ ಸಮಾಜದ ಯಥಾರ್ಥ ಹಿತೈಷಿ ಗಳ, ನಮ್ಮ ಸಮಾಜದ ಮೇಲೆ ಯಥಾರ್ಥ ಪ್ರೀತಿಯಿರುವ ಹಾಗೂ ನಮ್ಮ ಕೊರತೆಗಳ ಮೇಲೆ ಸರಿಯಾದ ದೃಷ್ಟಿಯಿರುವ ಹಿತಚಿಂತಕರು ಒಂದೆಡೆ ಸೇರಿ ನಮ್ಮ ಸಮಾಜದ ಇಂದಿನ ಸ್ಥಿತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನಮ್ಮಲ್ಲಿ ರೂಢ ಮೂಲವಾಗಿರುವ ಪ್ರತಿಯೊಂದು ಕೊರತೆಯನ್ನು ಹೋಗಲಾಡಿಸಲು ಧೈರ್ಯ ದಿಂದ ಹಾಗೂ ದೃಢಮನಸ್ಸಿನಿಂದ ಒಂದು ಕಾರ್ಯಕ್ರಮವನ್ನು ಕೈಕೊಳ್ಳತಕ್ಕದ್ದು. ಈ ಕಾರ್ಯಕ್ರಮದಲ್ಲಿ ನಮ್ಮ ಹಿಂದಿನ ಮತ್ತು ಇಂದಿನ ಜನಾಂಗಕ್ಕಿಂತಲೂ ಹೆಚ್ಚಿನ ಶ್ರದ್ಧೆಯನ್ನು ನಮ್ಮ ಮುಂದಿನ ಪೀಳಿಗೆಯನ್ನು ಸುಧಾರಿಸುವ ಕಡೆಗೆ ಕೊಡತಕ್ಕದ್ದು. ಒಂದೆಡೆ ಇಸ್ಲಾಮಿನ ದಿವ್ಯಜ್ಞಾನ ಸೂತ್ರಗಳನ್ನು ಅವರಿಗೆ ಕಲಿಸು ವಾಗ ಅದನ್ನು ಇಂದಿನ ಕಾಲದ ಭಾಷೆ ಹಾಗೂ ಶೈಲಿಯಲ್ಲಿ ಕಲಿಸುವುದಲ್ಲದೆ ಅವರು ಪ್ರಾಯೋಗಿಕ ಜೀವನದಲ್ಲಿ ಅವುಗಳನ್ನು ಬಳಸುವಂತೆ ನಾವು ಅವರಿಗೆ ಯೋಗ್ಯ ತರಬೇತಿ ಕೂಡಾ ಕೊಡತಕ್ಕದ್ದು. ಪಾಶ್ಚಾತ್ಯ ಹಾಗೂ ಅನಿಸ್ಲಾಮಿಕ ವಿಚಾರ—ಸಿದ್ಧಾಂತಗಳು ನಮ್ಮ ಸಮಾಜದ ಮೂಲ ವಿಚಾರ ಸಿದ್ಧಾಂತಗಳನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿರುವ ಈ ಭಯಂಕರ ಸನ್ನಿವೇಶದಲ್ಲಿ ನಮ್ಮ ಮುಂದಿನ ಪೀಳಿಗೆಗೆ ಕೇವಲ 'ವುಲೂ' ಮತ್ತು 'ಗುಸ್ಲ್' ಇತ್ಯಾದಿ 'ಫಿಖ್‌ಹ್ ಮಸಾಲೆ' ಗಳನ್ನು ಕಲಿಸಿಬಿಟ್ಟರೆ ಅದರಿಂದ ಪ್ರಯೋಜನವಾಗಲಾರದು. ಇಸ್ಲಾಮೀ ವಿಚಾರ ಸಿದ್ಧಾಂತಗಳಿಗೂ ಅನಿಸ್ಲಾಮಿಕ ವಿಚಾರ ಸಿದ್ಧಾಂತಗಳಿಗೂ ಇರುವ ಮೂಲಬೇಧ ಗಳನ್ನು ಅವರಿಗೆ ಸರಿಯಾಗಿ ಮುಂದಟ್ಟು ಮಾಡಿಇಸ್ಲಾಮೀ ಸಿದ್ಧಾಂತಗಳ ಉತ್ಕೃಷ್ಟತೆ ಹಾಗೂ ಉಪಯುಕ್ತತೆಯನ್ನು ಅವರ ಹೃದಯಗಳಲ್ಲಿ ಚಿತ್ರಿಸಿಬಿಡಬೇಕು. ಈ ರೀತಿ ಅವರಿಗೆ ಧಾರ್ಮಿಕ ಹಾಗೂ ಲೌಕಿಕ ವಿದ್ಯಾಜ್ಞಾನಗಳನ್ನು ಒಟ್ಟೊಟ್ಟಿಗೆ—

www.bearyinfo.com

ಲೌಕಿಕ ವಿದ್ಯಾರ್ಜನಗಳನ್ನು ಇಸ್ಲಾಮೀ ವಿದ್ಯಾರ್ಜನಗಳಿಗಧೀನವಾಗಿ—ಕೊಟ್ಟು ಅವರನ್ನು ಒಳ್ಳೆಯ ಮುಸ್ಲಿಮರಾಗಿಯೂ, ಉತ್ತಮ ನಾಗರಿಕರಾಗಿಯೂ ಬೆಳೆಸಲು ನಾವು ಏರ್ಪಾಡು ಮಾಡತಕ್ಕದ್ದು.

3. ಇನ್ನು ಕೇಂದ್ರನಾಯಕತ್ವದ ಅಭಾವದ ಕುರಿತು ಹೇಳಬೇಕಾಗಿದೆ. ಕೇಂದ್ರನಾಯಕತ್ವವು ನಮ್ಮ ಧಾರ್ಮಿಕ ದೃಷ್ಟಿಯಿಂದಲೂ ಲೌಕಿಕ ದೃಷ್ಟಿಯಿಂದಲೂ ಬಹಳ ಪ್ರಾಮುಖ್ಯ ಸಂಗತಿಯಾಗಿದೆ. ದುರಾದೃಷ್ಟದಿಂದ ನಮ್ಮ ಸಮಾಜದಲ್ಲಿ ಅದು ಇಂದು ಇಲ್ಲದಾಗಿದೆ. ಈ ಅವಸ್ಥೆಯಲ್ಲಿ ಸಮಾಜವನ್ನು ಐಕ್ಯ ಮತ್ತು ಶಿಸ್ತಿನ ಬಂಧನದೊಳಗಿರಿಸಲು ಮಾರ್ಗವೆಂದರೆ ಪ್ರತಿಯೊಂದು ಮುಹಲ್ಲದಲ್ಲಿ ಜನರಿಗೆ ವಿಶ್ವಾಸವಿರುವ ಜನರನ್ನು ಪ್ರತಿನಿಧಿಯಾಗಿ ಆರಿಸಿ ಕೇಂದ್ರ ಪ್ರತಿನಿಧಿಮಂಡಲ ಅಥವಾ ಬೋರ್ಡೊಂದನ್ನು ಸ್ಥಾಪಿಸಿ ಅದರ ಮೂಲಕ ಇಡೀ ಸಮಾಜಕ್ಕೆ ಮಾರ್ಗದರ್ಶನವೀಯಬಹುದು. ಸಮಾಜದ ಎಲ್ಲಾ ಪ್ರಶ್ನೆಗಳನ್ನೂ ಅದರಲ್ಲಿ ಚರ್ಚಿಸಿ ಪರಿಹಾರಮಾರ್ಗಗಳನ್ನು ಕಂಡುಹಿಡಿಯಬಹುದು. ಈ ಕೇಂದ್ರಮಂಡಳಿಗೆ ಒಂದು ಪ್ರಾಥಮಿಕ ಮಾದರಿಯಾಗಿ ಪ್ರಕೃತದ ವೆಲ್ಫೇರ್ ಕಮಿಟಿಯು ಕಾರ್ಯವೆಸಗುತ್ತಿದೆ. ಇದನ್ನು ಯಥಾರ್ಥ ಪ್ರತಿನಿಧಿಮಂಡಲ ಮಾಡಿ ಎಲ್ಲಾ ಮಸೀದಿ ಮದ್ರಸಗಳಿಗೂ,ಸಂಘ-ಸಂಸ್ಥೆಗಳಿಗೂ ಸಮಾನ ಪ್ರಾತಿನಿಧ್ಯವನ್ನು ಕೊಟ್ಟು ಇದನ್ನು ವಿಪುಲೀಕರಿಸಿ ಮುಸ್ಲಿಮ್ ಸಾರ್ವಜನಿಕರ ಒಂದು ಬೃಹತ್ ಸಭೆಯಲ್ಲಿ ಇದನ್ನು ಅಂಗೀಕರಿಸುವಂತೆ ಶ್ರಮಿಸಿದರೆ, ಇದೇ ಮುಂದಕ್ಕೆ ಒಂದು ಯಥಾರ್ಥ ಕೇಂದ್ರ ಸಮಿತಿಯಾಗುವುದರಲ್ಲಿ ಸಂಶಯವಿಲ್ಲ. ಕೇಂದ್ರ ನಾಯಕತ್ವವೂ ಇದರಿಂದಲೇ ಉದಯಿಸುವುದು.

ಅಂತು, ಅಲ್ಲಾಹನು ನಮ್ಮ ಸಮಾಜವನ್ನು ಇಂದಿನ ಅನಿಸ್ಲಾಮಿಕ ವಿಚಾರ ಸಿದ್ಧಾಂತಗಳ ಬಿರುಗಾಳಿಯಿಂದ ರಕ್ಷಿಸಿ, ನಾವು ಒಂದು ಸುಸಂಸ್ಕೃತ ಹಾಗೂ ಸುಶಿಕ್ಷಿತ, ಸಭ್ಯಸಮಾಜವಾಗಿ ಲೋಕದ ಮುಂದೆ ತಲೆಯೆತ್ತಿ ನಿಲ್ಲುವಂತೆ ನಮಗೆ 'ತೌಫೀಖ್' ದಯಪಾಲಿಸಲೆಂದು ನಾನು ಪ್ರಾರ್ಥಿಸುತ್ತೇನೆ.

www.bearyinfo.com

# ಜನಾಬ್ ಅಮೀರ್ ಹುಸೈನ್



[ಇವರಿಗೆ ಚಿಕ್ಕಪ್ರಾಯದಿಂದಲೇ ಸಮಾಜಸೇವೆಯ ಕಾರ್ಯದಲ್ಲಿ ತುಂಬಾ ಆಸಕ್ತಿ. ಹಲವಾರು ಸಂಘ-ಸಂಘಟನೆಗಳಲ್ಲಿ ಕೆಲಸ ಮಾಡಿದ್ದಾರೆ. ಸ್ಥಳೀಯ ಮುಸ್ಲಿಮ್ ಹೆಮ್ಮಕ್ಕಳ ಆರ್ಥಿಕ ಅಭಿವೃದ್ಧಿಗಾಗಿ ರೂಪುಗೊಂಡ ಕ್ರೆಸೆಂಟ್ ವೆಲ್ಫೇರ್ ಸೆಂಟರ್ ಎಂಬ ಸಂಸ್ಥೆಯ ಸಂಸ್ಥಾಪಕರಲ್ಲೊಬ್ಬರು. ಈಗ ಅದರ ಆಡಳ್ತಿ ಬೋರ್ಡಿನ ಕಾರ್ಯದರ್ಶಿ ಆಗಿ ಕೆಲಸ ನೋಡುತ್ತಿದ್ದಾರೆ. ಸಂ.]

---

ನಮ್ಮ ಸಮಾಜದಲ್ಲಿ ಸ್ಥಂಬನವುಂಟಾಗಿ ಈ ವರೆಗೂ ಮುಂದುವರಿಯಲು ಅನೇಕ ಕಾರಣಗಳಿವೆ. ಅದರಲ್ಲಿ ಕೆಲವು ಪ್ರಧಾನ ಕಾರಣಗಳನ್ನು ಮಾತ್ರ ಉದ್ಧರಿಸುತ್ತೇನೆ.

ಪ್ರತಿಯೊಂದು ಜನಾಂಗದ ಅಥವಾ ಸಮಾಜದ ಅಭಿವೃದ್ಧಿಯು ಸಾಧ್ಯವಾಗುವುದು ಅದರಲ್ಲಿನ ಧನಿಕರು ಮತ್ತು ವಿದ್ವಾಂಸರು ಸಜೀವರೂ, ಬುದ್ಧಿಶಾಲಿಗಳೂ ತ್ಯಾಗಿಗಳೂ ಆಗಿದ್ದರೆ ಮಾತ್ರ. ಸದ್ರಿ ಜನಕೂಟವು ನಿಷ್ಫಲರೂ, ಅವಿವೇಕಿಗಳೂ ಆಗಿದ್ದರೆ, ಆ ಸಮಾಜದಲ್ಲಿ ಸ್ಥಂಬನವು ನೆಲೆಯೂರುವುದರಲ್ಲಿ ಸಂಶಯವಿಲ್ಲ. ಇಂತಹ ಪರಿಸ್ಥಿತಿಯು ಮಂಗಳೂರ ಮುಸ್ಲಿಮ್ ಸಮಾಜದಲ್ಲಿ ಕಳೆದ 60 ವರ್ಷಗಳಿಂದ ಎಡೆಬಿಡದೆ ನಡೆಯುತ್ತಾ ಬಂದಿದೆ.

ನಮ್ಮ ಉಲೆಮಾಗಳು ನಮ್ಮ ಸ್ತ್ರೀ ಪುರುಷರ ವಿಚಾರಕೋನದಲ್ಲಿ ಎಂತಹ ಕೆಟ್ಟ ಪ್ರಭಾವವನ್ನು ಮೊಳಗಿಸಿರುತ್ತಾರೆಂಬುದು ನಮಗೆ ತಿಳಿದಿದೆ. ಸಮಾಜದ ಹಿತಾಭಿವೃದ್ಧಿಯ ಕಾರ್ಯದ ಕುರಿತು ನಮ್ಮ ಉಲೆಮಾಗಳು ಏನೊಂದು ಆಸಕ್ತಿ ತೋರಿಸುವುದಿಲ್ಲ. ಇದು ಬದಲಾವಣೆ ಹೊಂದಿ ನಮ್ಮ ಆಲಿಮರು ಸಮಾಜ ಸುಧಾರಣೆಯ ಕಾರ್ಯಕ್ಕೆ ಪ್ರೋತ್ಸಾಹ ಕೊಡಲು ತೊಡಗಿದರೆ ಸಮಾಜ ಬಾಂಧವರೂ ಈ ಕಡೆಗೆ ಒಲಿಸಲ್ಪಡುವರು.

ಎರಡನೆಯದಾಗಿ ನಮ್ಮ ಧನಿಕ ವರ್ಗವು ಹಣಸಂಪಾದಿಸುವ ಕಾರ್ಯದಲ್ಲಿ ಎಷ್ಟರ ಮಟ್ಟಿಗೆ ತಲ್ಲೀನರಾಗಿರುತ್ತಾರೆಂದರೆ ಸಮಾಜದ ಆವಶ್ಯಕತೆಗಳನ್ನೂ ಸಮಸ್ಯೆಗಳನ್ನೂ ತಿಳಿಯಲು ಬೇಕಾಗಿ ಸ್ವಲ್ಪ ಸಮಯವನ್ನು ಉಳಿಸಲಿಕ್ಕೂ, ತ್ಯಾಗಮಾಡಲಿಕ್ಕೂ ಅವರಿಗೆ ಸಾಧ್ಯವಿಲ್ಲದಾಗಿದೆ. ಸಮಾಜದಲ್ಲಿಂದು ಬಡತನ, ಅವಿದ್ಯೆ, ಆಹಾರದ ಕೊರತೆ, ಅಜ್ಞಾನ ಹಾಗೂ ರೋಗಾದಿಗಳು ತುಂಬಿವೆ. ಧನಿಕ ವರ್ಗವು ಈ ಸಮಸ್ಯೆಗಳ ಮೂಲವನ್ನು ಕಂಡು ಹಿಡಿದು ಅವುಗಳ ನಿವಾವರಣೆಗಾಗಿ ದುಡಿಯಬೇಕಿತ್ತು. ಆದರೆ ಅವರೂ ಈ ಕಡೆಗೆ ಲಕ್ಷ್ಯ ಕೊಡುವುದಿಲ್ಲ.

ಈ ತೆರನಾಗಿ ಈ ಎರಡು ವಿಭಾಗಗಳು–ವಿಧ್ವಾಂಸರು ಮತ್ತು ಧನಿಕರು–ನಮ್ಮ ಸಮಾಜದ ಹಿತಾಭಿವೃದ್ಧಿಯ ಕಡೆಗೆ ತೋರಿಸುವ ಅಸಡ್ಡೆಭಾವ

www.bearyinfo.com

ದಿಂದಾಗಿ ಸಮಾಜವು ದಿನೇ ದಿನೇ ಕ್ಷಯಿಸುತ್ತಿದೆ. ಇದರ ಪರಿಣಾಮವಾಗಿ ಸಮಾಜದಲ್ಲಿಂದು ಪಾರ್ಟಿಪಂಗಡಗಳಿವೆ. ಅನೈಕ್ಯತೆಯಿದೆ; ನಮ್ಮ ಜನರಲ್ಲಿ ಮಾನವೀಯತೆಯ ಅಭಾವವಿದೆ; ಅದರ ಫಲವಾಗಿ ನಿಸ್ಸಹಾಯಕತೆ, ನಾಯಕತ್ವದ ದಿವಾಳಿತನ, ಎಲ್ಲವೂ ಬಹಿರಂಗವಾಗುತ್ತಿದೆ.

ಇತರ ಸಮಾಜಗಳಂತೆ ನಮ್ಮ ಧನಿಕ ವರ್ಗವೆಂದು ಹೇಳಿಸಿಕೊಳ್ಳುವ ಜನಕೂಟವು ಇಲ್ಲಿ ನೆಲೆನಿಲ್ಲುವ ಯಾವದೊಂದು ಸ್ಥಾಪನೆಗಳನ್ನು—ಶಾಲೆಗಳು, ಯತೀಂಖಾನಗಳು, ಆಸ್ಪತ್ರೆಗಳು ಹಾಗೂ ಹಿತಚಿಂತನಾಕೇಂದ್ರಗಳು, ಯಾಂತ್ರಿಕ ಉದ್ದಿಮೆಗಳು ಇತ್ಯಾದಿ—ಸ್ಥಾಪಿಸಲು ಪ್ರಯತ್ನಿಸಲಿಲ್ಲವೆಂದು ಮಂಗಳೂರಿನ ಚರಿತ್ರೆಯಿಂದ ಖಚಿತವಾಗುತ್ತದೆ.

ನಮ್ಮ ಸಮಾಜದ ಸ್ತ್ರೀಯರು ಅಜ್ಞಾನಿಗಳಾಗಿದ್ದು, ತಮ್ಮ ಮಟ್ಟಿನ ಸೇವೆಯನ್ನು ಮಾಡಲಿಕ್ಕಾಗಲಿ, ತಮ್ಮ ಪುರುಷರನ್ನು, ತಮ್ಮ ಮಕ್ಕಳನ್ನು ಸಮಾಜ ಸೇವೆಗಾಗಿ ಹುರಿದುಂಬಿಸಲಿಕ್ಕಾಗಿ ಅವರಿಗೆ ಸಾಧ್ಯವಿಲ್ಲದಂತಾಗಿದೆ. ಈ ಜನಕೂಟವು ಪುರುಷರನ್ನೇ ಆಧರಿಸಿಕೊಂಡಿದ್ದು ಕುಟುಂಬದ ಒಳಿತಕ್ಕಾಗಿಯೂ ಏನೊಂದು ಕೆಲಸಮಾಡಲು ಇವರಿಂದ ಸಾಧ್ಯವಿಲ್ಲದಾಗಿದೆ.

ಸಮಾಜದಲ್ಲಿ ಇಂದು ಎದ್ದು ಕಾಣುವ ಎಲ್ಲಾ ಕೊರತೆಗಳನ್ನು ನಮ್ಮ ಜನರಿಗೆ ಮುಂದಟ್ಟು ಮಾಡಿ ಅವುಗಳನ್ನು ಹೋಗಲಾಡಿಸಲು ಬೇಕಾಗಿ ಅವರನ್ನು ಹುರಿದುಂಬಿಸಲು ಒಂದು ಪತ್ರಿಕೆಯಾಗಲಿ, ಪ್ರೆಸ್ಸಾಗಲಿ ಇರುವುದಿಲ್ಲ. ಸಮಾಜದಲ್ಲಿ ಅನೇಕ ಯೋಗ್ಯ ಯುವಕರಿದ್ದಾರೆ. ಅವರೆಲ್ಲರ ಯೋಗ್ಯತಾರ್ಹತೆಗಳನ್ನು ಸಮಾಜದ ಅಭ್ಯುದಯಕ್ಕಾಗಿ ಉಪಯೋಗಿಸುವ ಏರ್ಪಾಡಿಲ್ಲ.

ಈ ಎಲ್ಲಾ ಕೊರತೆಗಳಿಂದಾಗಿ ನಮ್ಮ ಸಮಾಜದಲ್ಲಿ ಒಂದು ತರ ಸ್ಥಂಬನವು ನೆಲೆಯೂರಿದೆ.

ಈ ಸ್ಥಂಬನವನ್ನು ದೂರೀಕರಿಸಿ ಸಮಾಜವನ್ನು ಪುರೋಗತಿಯ ಮಾರ್ಗಕ್ಕೆ ಹಾಕಬೇಕಾದರೆ ಮೊತ್ತಮೊದಲು ನಮ್ಮ ಸಮಾಜದಲ್ಲಿನ ಧಾರ್ಮಿಕ ವಿದ್ಯಾ ಸಂಸ್ಥೆಗಳಲ್ಲಿ ಒಂದು ಅಸಾಧಾರಣ ಕ್ರಾಂತಿಯನ್ನುಂಟುಮಾಡಬೇಕು. ಎಂದರೆ ಅವುಗಳಲ್ಲಿ ಕೇವಲ ಚಿಲ್ಲರೆ ಧಾರ್ಮಿಕ ವಿಷಯಗಳನ್ನು ಮಾತ್ರ ಕಲಿಸುವ ಕ್ರಮವನ್ನು ತ್ಯಜಿಸಿ, ಲೌಕಿಕ ಅತ್ಯಾವಶ್ಯಕ ವಿದ್ಯಾಜ್ಞಾನಗಳನ್ನೂ ಕಲಿಸುವ ಏರ್ಪಾಡು ಮಾಡತಕ್ಕದ್ದು. ನಮ್ಮ ಇಮಾಮುರುಗಳಿಗೆ, ಉಲೆಮಾಗಳಿಗೆ ಕೇವಲ ನಮಾಜು, ಉಪವಾಸ, ವಸೂ, ಗುಸ್ಲ್ ಮೊದಲಾದ ಮಸ್‌ಅಲಗಳು ಮಾತ್ರ ಗೊತ್ತಿದ್ದರೆ ಸಾಲದು; ನಮ್ಮ ಸಮಾಜವನ್ನು ಇಂದಿನ ಪರಿಸ್ಥಿತಿಯಲ್ಲಿ ಹೇಗೆ ಮಾರ್ಗದರ್ಶನಿವೀಯ ಬೇಕೆಂಬುದೂ ಅವರಿಗೆ ತಿಳಿಯುವಂತಾಗಬೇಕು.

2. ನಮ್ಮ ಸಮಾಜದಲ್ಲಿ ವಿಶೇಷವಾದ ಒಂದು ಆರ್ಥಿಕ ದುಃಸ್ಥಿತಿಯನ್ನು ಕಾಣುತ್ತೇವೆ. ನಮ್ಮ ಹೆಚ್ಚು ಮಂದಿ ಸ್ತ್ರೀ ಪುರುಷರು ನಿರುದ್ಯೋಗಿಗಳಾಗಿಯೂ ಇತರರ ಮೇಲೆ ಹೊರೆಯಾಗಿಯೂ ಜೀವನಗಳಿಸುತ್ತಿದ್ದಾರೆ. ಇದರ ನಿವಾರಣೆಗಾಗಿ

www.bearyinfo.com

ಗುಡಿಕೈಗಾರಿಕೆ ಇತ್ಯಾದಿಗಳನ್ನು ಸಂಘಟಿಸಿ ಸ್ತ್ರೀಯರಿಗೂ ಪುರುಷರಿಗೂ ಯೋಗ್ಯ ಸಂಪಾದನೆ ಸಿಗುವಂತೆ ಮಾಡುವುದು ಅವಶ್ಯ. ಬಡತನ ಮತ್ತು ನಿಸ್ಸಹಾಯಕತೆಯಿಂದಾಗಿ ನಮ್ಮ ಅನೇಕ ಯೋಗ್ಯವಂತ ತರುಣರು ಸಮಾಜದ ಒಳಿತಕ್ಕಾಗಿ ಮಾಡಬಹುದಾದ ಮಹಾಕಾರ್ಯಗಳನ್ನು ನೆರವೇರಿಸಲು ಸಾಧ್ಯವಿಲ್ಲದೆ ನಿಟ್ಟುಸಿರು ಬಿಡುತ್ತಿದ್ದಾರೆ.

ನಮ್ಮ ಬಡ ಕುಟುಂಬಗಳಿಗೆ ಆರ್ಥಿಕ ಬಲವನ್ನು ಸಂಪಾದಿಸಿಕೊಡಲು ಬೇಕಾಗಿ ವೆಲ್ಫೇರ್ ಸೆಂಟರ್‌ಗಳನ್ನು ಸ್ಥಾಪಿಸಿ ಅದರ ಮೂಲಕ ಹೊಲಿಗೆ, ಕಸೂತಿ ನೂಲುಮಾಡುವುದು ಇತ್ಯಾದಿ ಕಲೆಗಳನ್ನು ಕಲಿಸುವ ಏರ್ಪಾಡುಮಾಡಬೇಕು. ತರಬೇತಿ ಹೊಂದಿದ ಸ್ತ್ರೀಯರು ಮಾಡಿದ ಸಾಧನಗಳನ್ನು ಒಳ್ಳೆಯ ಬೆಲೆಗೆ ಮಾರಿ ಅವರಿಗೆ ಯೋಗ್ಯ ಪ್ರತಿಫಲ ಕೊಡಲು ಸಮಾಜದ ಧನಿಕ ವರ್ಗದ ಸಹಾಯದಿಂದ ವೆಲ್ಫೇರ್ ಸೆಂಟರು ದುಡಿಯಬಹುದು. ಈ ರೀತಿ ಪ್ರತಿಯೊಂದು ಬಡ ಕುಟುಂಬಕ್ಕೂ ಆರ್ಥಿಕ ಬಲವನ್ನೊದಗಿಸಿಕೊಡಬಹುದು.

ಸಮಾಜಸೇವಕರ ಒಂದು ತಂಡವನ್ನು ಸ್ಥಾಪಿಸಿ ಅವರು ಬಡ ಕುಟುಂಬಗಳು ನಿಬಿಡವಾಗಿರುವ ಪ್ರದೇಶಗಳಿಗೆ ಆಗಾಗ್ಗೆ ಭೇಟಿಯಿತ್ತು ಸಮಾಜದ ಬಡಜನರ ಆರೋಗ್ಯ, ವಿದ್ಯಾಭ್ಯಾಸ ಆರ್ಥಿಕ ಸಹಾಯ ಇತ್ಯಾದಿ ಸಮಸ್ಯೆಗಳನ್ನು ಬಗೆಹರಿಸಲು ಸಲುವಾಗಿ ಪ್ರಯತ್ನಿಸಬೇಕು. ಶಾಲಾ ಪ್ರಾಯದ ಮಕ್ಕಳೆಲ್ಲರೂ ಶಾಲೆಗೆ ಹೋಗುವಂತೆ ಅವರ ಹೆತ್ತವರನ್ನು ಕಂಡು ಅವರ ಸಂಕಷ್ಟಗಳನ್ನು ನಿವಾರಿಸಲು ಪ್ರಯತ್ನಿಸಬೇಕು.

ಸಮಾಜದ ಅಧ್ಯಾಪಕರು, ಮೌಲವಿಗಳು, ವಿಧ್ವಾಂಸರು, ಡಾಕ್ಟರುಗಳು ವಕೀಲರು, ಸಾಹಿತಿಗಳು, ಇತ್ಯಾದಿಗಳನ್ನು ಒಂದುಗೂಡಿಸಿ ಒಂದು ಸ್ಟಡಿ ಸರ್ಕಲ್ ಮೂಲಕ ಸಮಾಜದ ಎಲ್ಲ ಪ್ರಶ್ನೆಗಳ ಕುರಿತು ಆಗಾಗ್ಗೆ ಚರ್ಚಾಕೂಟವನ್ನು ಏರ್ಪಡಿಸಿ ಅವುಗಳ ನಿವಾರಣೆಗಾಗಿ ಉಪಾಯಗಳನ್ನು ಕಂಡು ಹಿಡಿಯಬೇಕು.

ನಮ್ಮ ತರುಣರು ತಮ್ಮ ಅಶ್ರದ್ಧೆಯನ್ನು ತೊಲಗಿ ಸಮಾಜದ ಸೇವೆಗಾಗಿ ಟೊಂಕಕಟ್ಟಿ ಇಳಿಯಬೇಕು. ತಮ್ಮಲ್ಲಿ ನಾಯಕತ್ವಕ್ಕೆ ಬೇಕಾದ ಗುಣಗಳನ್ನು ಸೃಷ್ಟಿಸಬೇಕು.

ಕೇಂದ್ರ ನಾಯಕತ್ವದ ಅಭಾವದಲ್ಲಿ ಮುಸ್ಲಿಮ್ ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ನಗರದ ಪ್ರತಿಯೊಂದು ಕಡೆಯಲ್ಲಿಯೂ ವೆಲ್ಫೇರ್ ಸೆಂಟರ್‌ಗಳನ್ನು ಸಂಸ್ಥಾಪಿಸಿ ಅಲ್ಲಿಯ ಜನರ ಸಹಾಯ-ಸಹಕಾರಗಳೊಂದಿಗೆ ಜನಸೇವೆಯನ್ನು ಕೈಕೊಂಡು ಸಮಾಜಕ್ಕೆ ಮಾರ್ಗದರ್ಶನ ನೀಡಬೇಕು. ಸಮಾಜ ಹಿತಾಭಿವೃದ್ಧಿಯ ವಿಶಾಲಕಾರ್ಯಕ್ರಮವೊಂದನ್ನು ದೃಷ್ಟಿಯ ಮುಂದೆ ಇಟ್ಟುಕೊಂಡು ಒಳ್ಳೆಯ ಮನಸ್ಸಿನಿಂದ ದುಡಿದರೆ ಸಮಾಜ ಬಾಂಧವರಲ್ಲಿ ಎಂದಿಲ್ಲದ ಒಂದು ಜಾಗೃತಿಯುಂಟಾಗಿ ಕೇಂದ್ರ ನಾಯಕತ್ವವು ತಾನಾಗಿ ಉದ್ಭವವಾಗುವುದೆಂದೇ ನನ್ನ ಅಭಿಪ್ರಾಯ.

www.bearyinfo.com

# ಡಾಕ್ಟರ್ ಎಂ. ಎಂ. ಹಸನ್ ಸಾಹೇಬ್,

**ಜಿ. ಸಿ. ಐ. ಎಂ.,**

## ಕುದ್ರೋಳಿ

[ಚಿಕ್ಕ ಪ್ರಾಯದಲ್ಲಿ ಡಾಕ್ಟರ್ ಹಸನ್ ಸಾಹೇಬರಷ್ಟು ಜನಪ್ರಿಯಗಳಿಸಿರುವ ತರುಣ ಧುರೀಣರು ನಮ್ಮ ಸಮಾಜದಲ್ಲಿ ವಿರಳ. ತನ್ನ ಗುಣ-ಸ್ವಭಾವಗಳಿಂದ ಇವರು ಜನರ ಹೃದಯಗಳನ್ನು ಸೂರೆಗೊಂಡಿದ್ದಾರೆ. ನಿಷ್ಕಳಂಕ ಸಮಾಜಸೇವೆಯಿಂದ ಈಗಾಗಲೇ ಇವರು ಜನಾದರಣೀಯರಾಗಿರುತ್ತಾರೆ. ಕುದ್ರೋಳಿಯ ಪ್ರಸಿದ್ಧ ಅಂಜುಮನ್ ಹಿದಾಯತುಲ್ ಇಸ್ಲಾಮ್ ಸಂಘದ ಕಾರ್ಯದರ್ಶಿಯಾಗಿರುವುದಲ್ಲದೆ, ಕೇಂದ್ರ ಸಮಿತಿ ವೆಲ್ಫೇರ್ ಕಮಿಟಿಯಲ್ಲಿಯೂ ಸದಸ್ಯರಾಗಿದ್ದಾರೆ. ಆಧುನಿಕ ವಿದ್ಯಾರ್ಜಿತರಾದರೂ, ಮತನಿಷ್ಠೆಯು ಇವರಲ್ಲಿ ಸಾಧಾರಣ ಮೌಲವಿಗಳಿಗಿಂತಲೂ ಹೆಚ್ಚಾಗಿರುವುದೆಂದು ಇವರ ಮಾತುಕ್ರಿಯೆಗಳಿಂದ ಬಹಿರಂಗವಾಗುತ್ತದೆ.—ಸಂ.]

---

ಮಂಗಳೂರ ಮುಸ್ಲಿಮರಾದ ನಾವು ಆರ್ಥಿಕ ದೃಷ್ಟಿಯಿಂದ ಹಿಂದುಳಿದವರಾಗಿಯೂ, ಶೈಕ್ಷಣಿಕವಾಗಿ ನಿಶ್ಚಲರಾಗಿಯೂ, ರಾಜಕೀಯವಾಗಿ ದಾರಿಗಾಣದೆ ಅಲೆಯುತ್ತಿರುವ ಸಮಾಜವಾಗಿ ಬಿಟ್ಟಿದ್ದೇವೆ. ಎತ್ತಲೂ ಪುರೋಗತಿಯನ್ನು ಈಕ್ಷಿಸುತ್ತಿರುವಾಗ ನಾವು ಮಾತ್ರ ಬಂಡೆಕಲ್ಲಿನಂತೆ ನಿಂತಲ್ಲೇ ನಿಂತಿರುವುದನ್ನು ನಾವು ಕಾಣುತ್ತಿದ್ದೇವೆ. ಇದು ಇಂದು ನಿನ್ನೆಯ ಸಂಗತಿಯಲ್ಲ. ಕಳೆದ ಹಲವಾರು ದಶಕಗಳಿಂದ ಹೀಗಾಗುತ್ತಾ ಬಂದಿದೆ. ನಾವು ಶೈಕ್ಷಣಿಕವಾಗಿ, ರಾಜಕೀಯವಾಗಿ ಅಥವಾ ಧಾರ್ಮಿಕವಾಗಿಯೇ ಆಗಲಿ, ಏಕೆ ಸುಧಾರಣೆ ಹೊಂದುತ್ತಿರುವುದಿಲ್ಲ? ನಮ್ಮ ಪ್ರಕೃತದ ಸ್ಥಿತಿಗತಿಗಳ ಕುರಿತು ಒಂದು ಪರಿಶೀಲನೆ ನಡಿಸಿ, ಇಂದಿನ ಸ್ಥಂಭನೆಗೆ ಕಾರಣಭೂತವಾದ ಸಂಗತಿಗಳ ವಿಶ್ಲೇಷಣೆ ಮಾಡಿ, ನಮ್ಮನ್ನು ಆವರಿಸಿರುವ ಸಂಕಷ್ಟಗಳಿಂದ ಹೇಗೆ ಪಾರು ಹೊಂದಬಹುದೆಂದು ಕಂಡುಹಿಡಿದು ಸಮಾಜದ ಪುರೋಗತಿಗೆ ಸಹಾಯಕವಾಗುವ ಪರಿಸ್ಥಿತಿಯನ್ನು ಸೃಷ್ಟಿಸಬೇಕಾದ ಸಮಯವು ಇದೀಗ ಸಮೀಪಿಸಿದೆ.

ಸ್ಥಂಭನೆಯೆಂದೇ ಹೇಳಬಹುದಾದ ನಮ್ಮ ಪ್ರಕೃತದ ಸಂಕಷ್ಟಗಳಿಗೂ ನಮ್ಮ ಸಮಾಜದಲ್ಲಿ ನೆಲೆಯೂರಿರುವ ನಾಲ್ಕು ಸಂಗತಿಗಳೇ ಕಾರಣವೆಂದು ನನಗನ್ನಿಸುತ್ತದೆ.

ಮೊದಲನೆಯದು ನಮ್ಮ ಶೈಕ್ಷಣಿಕ ಅಧೋಗತಿ; ಸಾಧಾರಣ 15,000 ಜನಸಂಖ್ಯೆಯಿರುವ ನಮ್ಮ ಸಮಾಜದಲ್ಲಿ ಕಮ್ಮಿಯೆಂದರೆ ಒಂದು ಡಜನ್ ಗ್ರೇಜ್ವೇಟರೂ ಇರುವುದಿಲ್ಲ. ನಮ್ಮಲ್ಲಿ ಅಧಿಕ ಸಂಖ್ಯೆಯಲ್ಲಿರುವ ಬಡವರಿಗಂತೂ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಆರ್ಥಿಕ ಕಾರಣಗಳಿಂದಾಗಿ ಸಾಧ್ಯವಾಗುವುದಿಲ್ಲ. ಧನಿಕರಲ್ಲಿ ಕೆಲವರು ತಮ್ಮ ಮಕ್ಕಳನ್ನು ಉಚ್ಚಶಿಕ್ಷಣಕ್ಕೆ

www.bearyinfo.com

ಕಳುಹಿಸುವ ಬದಲು ಹೈಸ್ಕೂಲು ಮುಗಿದ ನಂತರವೇ (ಹೆಚ್ಚಿನ ಮಟ್ಟಿಗೆ ಅದಕ್ಕೂ ಮುಂಚಿತವಾಗಿ) ಅವರನ್ನು ತಮಗೆ ಪಾರಂಪರ್ಯವಾಗಿ ಬಂದ ವ್ಯಾಪಾರ-ವಾಣಿಜ್ಯಕ್ಕೆ ಹಾಕಿಬಿಡುತ್ತಾರೆ. ಈ ರೀತಿ ಅವರ ಶಿಕ್ಷಣವು ಅರ್ಧ ದಲ್ಲೇ ಮುಗಿಯುತ್ತದೆ. ಕೆಲವರು ತಮ್ಮ ಐಶ್ವರ್ಯವನ್ನೇ ನಂಬಿ ಉಚ್ಛಶಿಕ್ಷಣ ವನ್ನು ದುರ್ವ್ಯಯವೆಂದು ಗಣಿಸುತ್ತ ಹಣ ಮತ್ತು ಇತರ ಸೌಕರ್ಯಾದಿಗಳಿದ್ದರೂ ಆ ಕಡೆಗೆ ಲಕ್ಷ್ಯಕೊಡುವುದಿಲ್ಲ.

ಎರಡನೆಯದು ನಮ್ಮ ಆರ್ಥಿಕಪತನ—ಕೈಗಾರಿಕೋದ್ಯಮಗಳಲ್ಲಿ ಅಲ್ಲದಿದ್ದರೂ ಚಿಕ್ಕ ಪುಟ್ಟ ಅಂಗಡಿ ವ್ಯಾಪಾರಗಳಲ್ಲಿಯಾದರೂ ನಮ್ಮ ಕೆಲವು ಬಂಧುಗಳು ದುಡಿಯುತ್ತಾರೆ. ಸ್ತ್ರೀಯರಿಗೆ ಏನೊಂದು ಉದ್ಯಮವಿಲ್ಲ. ಪುರುಷರೇ ಸಂಪಾದಿಸಬೇಕು. ನಮ್ಮಲ್ಲಿ ಏನೊಂದು ಕೈಗಾರಿಕೆಗಳಾಗಲೀ ಫೆಕ್ಟರಿಗಳಾಗಲೀ ಇಲ್ಲ. ನಮ್ಮ ಜೀವನಮಟ್ಟವು ದಿನೇ ದಿನೇ ಪತನಹೊಂದುತ್ತಿದೆ. ವಸತಿ ಸೌಕರ್ಯವು ಹೆಚ್ಚಿನಾಂಶ ಜನರಿಗೆ ಇಲ್ಲ. ಇರುವವರಿಗೆ ಅವುಗಳನ್ನು ದುರುಸ್ತಿಗೊಳಿಸಲು ಹಣವಿಲ್ಲ. ತಲೆಮಾರು ಉರುಳಿದಂತೆ ನಮ್ಮ ಸಮಸ್ಯೆಗಳು ಜಟಿಲವಾಗುತ್ತಾ ಹೋಗುತ್ತವೆ. ಸಂಪಾದನೆ ಹೆಚ್ಚಾಗದಿದ್ದರೂ ಜನಸಂಖ್ಯೆ ಮಾತ್ರ ಹೆಚ್ಚಾಗುತ್ತಾ ಹೋಗುತ್ತದೆ. ನಮ್ಮ ಕೆಲವು ಬಡಸ್ತ್ರೀಯರು ಚಾಪೆಗಳನ್ನು ಮಾಡಿಯಾಗಲೀ ಬೀಡಿಗಳನ್ನು ತಯಾರಿಸಿಯಾಗಲೀ ಕುಟುಂಬಕ್ಕೆ ಸಹಾಯ ಮಾಡಲು ಪ್ರಯತ್ನಿಸುವುದಾದರೂ ಅವರು ತಯಾರಿಸುವ ಸಾಧನಗಳನ್ನು ಒಳ್ಳೆಯ ಬೆಲೆಗೆ ವಿಕ್ರಯಿಸಲು ಸಹಾಯಮಾಡುವ ಮುಸ್ಲಿಮ್ ಸಂಘಟನೆ ಇಲ್ಲದ ಕಾರಣ ಅವರ ಸಂಪಾದನೆಯು ವರ್ಧಿಸುವುದಿಲ್ಲ.

ಮೂರನೆಯದಾಗಿ ನಮ್ಮ ಸಮಾಜ ಸುಧಾರಣೆಯ ಕುರಿತು ನಮ್ಮ ಜನರು ತಾಳಿರುವ ಅಸಡ್ಡೆ. ನಮ್ಮ ಧನಿಕರಿಗಂತೂ ತಮ್ಮ ಸಹಧರ್ಮಿಗಳ ಸುಧಾರಣೆಗಾಗಿ ಕೈಕೊಳ್ಳುವ ಸಾಮಾಜಿಕ ಚಟುವಟಿಕೆಗಳಲ್ಲಿ ಅಭಿರುಚಿಯಿಲ್ಲ. ಕಾಲ ಹೋದಂತೆ ನಮ್ಮ ಹಿರಿಯರು ತುಂಬಾ ಕಾಲದಿಂದ ಅನುಭವಿಸಿಕೊಂಡು ಬರುತ್ತಿದ್ದ ಅನೇಕಾನೇಕ ಹಕ್ಕುಸವಲತ್ತುಗಳು ಮಾಯವಾಗುತ್ತಾ ಬರುತ್ತವೆ. ಈ ಸಂಗತಿಗಳನ್ನು ಕಣ್ಣಾರೆಕಂಡು ಇವುಗಳಿಂದ ಕಣ್ಮುಚ್ಚಿ ನಡೆಯುವುದೇ ನಮ್ಮ ಐಶ್ವರ್ಯವಂತ ಜನಕೂಟವು ತಮಗಾಗಿ ಆರಿಸಿಕೊಂಡ ನೀತಿ. ನಮ್ಮ ನಡತೆಯು ದಿನಹೋದಂತೆ ನಮ್ಮ ಪವಿತ್ರ ಧರ್ಮದ ಹಿಡಿತದಿಂದ ಸಡಿಲಾಗುತ್ತಾ ಹೋಗುತ್ತದೆ. ಇಸ್ಲಾಮಿನ ಉದಾತ್ತ ಧ್ಯೇಯ-ಕ್ರಿಯಾದಿಗಳನ್ನು ಬದಿಗೊತ್ತಿ ಜನರು ಅನಿಸ್ಲಾಮಿಕ ಆಚಾರ ವಿಚಾರಗಳನ್ನು ಸ್ವೀಕರಿಸ ತೊಡಗಿರುತ್ತಾರೆ. ನಮ್ಮ ಮದುವೆ ಸಮಾರಂಭಗಳಲ್ಲಿ ನಡಿಯುವ ಅನಿಸ್ಲಾಮಿಕ ಆಚಾರವಾದ ವರದಕ್ಷಿಣೆಯನ್ನು ಇಲ್ಲಿ ಒಂದು ದೃಷ್ಟಾಂತವಾಗಿ ಹೇಳಬಹುದು. ಇಸ್ಲಾಮ್ ಧರ್ಮವು ನಮಗೆ ಕಲಿಸಿದುದು ನಾವು ಮದುವೆಯಾಗುವ ಹುಡುಗಿಗೆ ನಮ್ಮ ಆರ್ಥಿಕ



www.bearyinfo.com

ನೆಲೆಗನುಸರಿಸಿ 'ಮಹರ್'ಕೊಡಬೇಕೆಂದು. ಆದರೆ ನಾವು ಅದನ್ನು ಕೇವಲ 'ನಿಕಾಹ್' ಸಮಯದಲ್ಲಿ ಒಂದು 'ವಾಗ್ದಾನ'ವಾಗಿ ಉಪಯೋಗಿಸಿ, 'ತಲಾಖಿ'ನ ಸಂದರ್ಭಗಳಲ್ಲಿ ಅಲ್ಲದೆ ಅದನ್ನು ಹುಡುಗಿಗೆ ಕೊಡುವ ಗೋಜಿಗೆ ಹೋಗುವುದಿಲ್ಲ. ಅದಕ್ಕೆ ಬದಲಾಗಿ ನಮ್ಮವರು ಅನಿಸ್ಲಾಮಿಕ ಸಂಪ್ರದಾಯವಾದ"ಜೋಡಾ"ಅಥವಾ "ಕಾಶಿ" (ವರದಕ್ಷಿಣೆ) ಎಂಬ ಹೆಸರಲ್ಲಿ ಮದುಮಗಳ ಕಡೆಯವರಿಂದ ಸಾವಿರಾರು ರೂಪಾಯಿಗಳನ್ನು ಏನೊಂದು ಲಜ್ಜೆಯಿಲ್ಲದೆ ವಸೂಲುಮಾಡುತ್ತಾರೆ. ಈ ಮತ ನಿಷಿದ್ಧವಾದ ಆಚಾರವು ನಮ್ಮ ಸಮಾಜದೊಳಗೆ ಎಷ್ಟರ ಮಟ್ಟಿಗೆ ತನ್ನ ವಿಧ್ವಂಸಕ ಕಾರ್ಯವೆಸಗುತ್ತಿದೆಯೆಂದರೆ, ಇಂದು ಅನೇಕ ನಮ್ಮ ಬಡ ಕುಟುಂಬಗಳಿಗೆ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡುವುದು ಒಂದು ಸಮಸ್ಯೆಯೇ ಆಗಿಬಿಟ್ಟಿದೆ. ಈ ಅನಿಸ್ಲಾಮಿಕ ಆಚಾರದ ದುಷ್ಪರಿಣಾಮವು ನಮ್ಮ ಕಣ್ಣ ಮುಂದೆ ಗೋಚರವಾಗುತ್ತಿರುವುದಾದರೂ ಎಷ್ಟೋ ಮಂದಿ ವಿದ್ಯಾವಂತ ಸುಸಂಸ್ಕೃತರೆಂದು ಹೇಳಿಸಿಕೊಳ್ಳುವ ನಮ್ಮ ತರುಣರೂ ಈ ಲಜ್ಜಾಸ್ಪದ ಆಚಾರವನ್ನು ಮುಂದುವರಿಸಿಕೊಂಡು ಹೋಗುವುದನ್ನು ನೋಡುವಾಗ ಖೇದ ವೆನಿಸುತ್ತದೆ.

ಇಸ್ಲಾಮಿನ ಪವಿತ್ರನಾಮವನ್ನು ಉಚ್ಛರಿಸಿ ಕೊಂಡು, ಅದರ ಗುಣವಿಶೇಷ ಗಳನ್ನು ಜಪಿಸಿಕೊಂಡು, ನಾವು ಈ ತರ ಅನಿಸ್ಲಾಮಿಕ ಆಚಾರಗಳಿಗೆ ಕಟ್ಟು ಬೀಳುವುದಾದರೆ ನಮ್ಮನ್ನು ಲೋಕವು ಕಪಟವಿಶ್ವಾಸಿಗಳೆಂದೇ ಕರೆಯುವುದಲ್ಲದೆ, ದೇವರ ಮುಂದೆಯೂ, ಜನತೆಯ ಮುಂದೆಯೂ ನಾವು ದೊಡ್ಡ ತಪ್ಪುಗಾರರಾಗು ವುದರಲ್ಲಿ ಸಂಶಯವಿಲ್ಲ. ನಮ್ಮ ಪವಿತ್ರ ದೀನಿನ ಹೆಸರನ್ನು ನಾವು ಈ ರೀತಿ ಕಳಂಕ ಪಡಿಸಬಾರದು. ನಮಗೆ ಅದರ ಉಚ್ಛಧ್ಯೇಯ ನಿಬಂಧನೆಗಳಿಗನುಸಾರ ವಾಗಿ ನಡೆಯಲು ಮನಸ್ಸಿಲ್ಲವಾದರೆ ಅದನ್ನು ತೊರೆದು ನಮ್ಮ ಸ್ವೇಚ್ಛೆಗೆ ಒಪ್ಪುವ ಧರ್ಮವನ್ನು ಸ್ವೀಕರಿಸಿಕೊಳ್ಳಬೇಕಲ್ಲದೆ, ಅದನ್ನು ನಮ್ಮ ಸ್ವೇಚ್ಛಾ ವರ್ತನೆಗೆ ಆಧೀನ ಪಡಿಸಿಕೊಂಡು ಅದರ ರೂಪವನ್ನು ಕೆಡಿಸುವುದು ಸರಿಯಲ್ಲ. ಅಂತು, ಈತರ ಅನಿಸ್ಲಾಮಿಕ ಆಚಾರಗಳಿಗೆ ಶರಣು ಬಿದ್ದು ಮುಸ್ಲಿಮ್ ಸಮಾಜ ವೆಂಬ ನಮ್ಮ ಅನುಗ್ರಹಪೂರ್ವಕ ನೆಲೆಯನ್ನು ನಾವು ತೊರೆದಿರುತ್ತೇವೆ.

4) ಜುಮಾಮಸೀದಿಯ ಆಡಳ್ತೆ. ಮೂರು ನಾಲ್ಕು ತಲೆ ಮಾರುಗಳಿಗೆ ಮುಂಚಿತವಾಗಿ ಕೇಂದ್ರ ಜುಮಾ ಮಸೀದಿಯ ಆಡಳ್ತೆಯು ಸ್ಥಳೀಯ ಕೆಲವು ಐಶ್ವರ್ಯವಂತ ಜನಕೂಟದ ಕೈಯಲ್ಲಿತ್ತು. ಜನತೆಗೆ ಅದರ ಆಡಳ್ತೆಯಲ್ಲಿ ಏನೊಂದು ಅಧಿಕಾರವಿರಲಿಲ್ಲ. ಕಾಲ ಉರುಳಿದಂತೆ ಈ ಆಡಳ್ತೆಯು ಕೆಲವೇ ಕುಟುಂಬಗಳ ಸ್ವಾಧೀನವಿದ್ದು ಅವರಲ್ಲಿ ತಮ್ಮ ಕುಲ ಶ್ರೇಷ್ಟತೆಯ ಕುರಿತು ಒಂದು ವಿಶೇಷ ಭಾವನೆಯು ನೆಲೆಯೂರಿತ್ತು. ಸಾಮಾನ್ಯ ಜನರನ್ನು ಅವರು ತಿರಸ್ಕಾರಭಾವದಿಂದ ಕಾಣುತ್ತಲೂ, ಅವರಿಗೆ ಮಸೀದಿಯ ಆಡಳ್ತೆ ವಿಷಯಗಳಲ್ಲಿ

www.bearyinfo.com

ಏನೊಂದು ಅಧಿಕಾರ ಕೊಡಲು ನಿರಾಕರಿಸಿಯೂ, ನಮ್ಮ ಸಮಾಜವನ್ನು ಕುಲ ಶ್ರೇಷ್ಟರು, ಕುಲಹೀನರೆಂಬ ಅನಿಸ್ಲಾಮಿಕ ಅಡಿಸ್ತಾನದ ಎರಡು ಪಂಗಡಗಳಾಗಿ ಮಾರ್ಪಡಿಸಿದರು. ಈ ಭ್ರಮೆಯು ದಿನ ಹೋದಂತೆ ಮಾಯವಾಗುತ್ತಾ ಬರುತ್ತಿರುವುದಾದರೂ, ಕೆಲವು ಕಡೆಗಳಲ್ಲಿ ಇದರ ಅವಶೇಷಗಳನ್ನು ಈಗಲೂ ಕಾಣಬಹುದು.

ನಮ್ಮ ಸಮಾಜವು ಈ ಪರಿಸ್ಥಿತಿಯಲ್ಲಿ ನಿಂತಿದೆ. ಈ ಸನ್ನಿವೇಶದಲ್ಲಿ ಅದನ್ನು ಸುಧಾರಿಸಲು ಈ ಕೆಳಗಿನ ಕಾರ್ಯಕ್ರಮವು ಉಪಯುಕ್ತವಾಗಬಹುದೆಂದು ನನ್ನ ಅಭಿಮತ:

1) ಮೊದಲನೆಯದಾಗಿ ನಮ್ಮ ನಗರವನ್ನು ಆಯಾ ಮಸೀದಿಯ ಆಡಳ್ತಿಗೊಳಪಡಿಸಿ ವಿಂಗಡಿಸ ತಕ್ಕದ್ದು ಮತ್ತು ಆ ಪ್ರದೇಶಗಳಲ್ಲಿ ನಮ್ಮ ಸಮಾಜದ ಗಂಡು, ಹೆಣ್ಣು, ವಿದ್ಯಾವಂತ, ಅವಿದ್ಯಾವಂತ, ದುಡಿಯುವ, ದುಡಿಯದ, ವಯಸ್ಕರು, ಶಾಲಾ ಪ್ರಾಯದ ಮಕ್ಕಳು, ಅವರ ಪೈಕಿ ಶಾಲೆಗೆ ಹೋಗುವವರು, ಹೋಗದವರು ಎಂಬುದಾಗಿ ಒಂದು ಬೃಹತ್ ಖಾನೆಶುಮಾರಿ ತಯಾರಿಸಿಕೊಳ್ಳಬೇಕು. ನಮ್ಮ ಸಮಾಜದ ಅವಿದ್ಯಾವಂತರ ಯಥಾರ್ಥ ಅಂಕೆ-ಸಂಕೆಗಳು ನಮಗೆ ಈ ರೀತಿ ಸಿಗುವುವು. ಪ್ರತಿಯೊಂದು ವಿಭಾಗವು ಕೆಲವು ನಿರ್ದಿಷ್ಟ ಸಂಖ್ಯೆ ಸಮಾಜ ಬಂಧುಗಳಿಗೆ (ಸುಮಾರು 40% ದಂತೆ) ಸ್ಥಳೀಯ ಸಾರ್ವಜನಿಕ ಫಂಡೊಂದರ ಸಹಾಯದಿಂದ ವಿದ್ಯೆ ಕಲಿಸುವ ಏರ್ಪಾಡು ಮಾಡತಕ್ಕದ್ದು. ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಶಕ್ತಿವಂತರಾದ ನಮ್ಮ ಬಂಧುಗಳು ಕಮ್ಮಿಯೆಂದರೆ ಒಬ್ಬ ಹುಡುಗನಿಗಾದರೂ ತಮ್ಮ ಖರ್ಚಿನಿಂದ ವಿದ್ಯಾಬ್ಯಾಸ ಕೊಡಲು ಮುಂದೆ ಬರಬೇಕು. ಈ ರೀತಿ ವರ್ಷಂಪ್ರತಿ ಸಾಧಾರಣ 30 ವಿದ್ಯಾರ್ಥಿಗಳನ್ನು ಪ್ರಿ ಯುನಿವರ್ಸಿಟಿಗೆ ಯಾ ಟೆಕ್ನಿಕಲ್ ಕೋರ್ಸ್‌ಗಳಿಗೆ ಯಾ ಉಚ್ಚಶಿಕ್ಷಣಗಳಿಗೆ ಕಳುಹಿಸಲು ನಮಗೆ ಸಾಧ್ಯವಾಯಿತೆಂದರೆ ನಾವು ಸಮಾಜ ಸುಧಾರಣೆಯ ಕಾರ್ಯವನ್ನು ತೊಡಗಿರುತ್ತೇವೆ ಎಂದು ಅಭಿಮಾನ ಪೂರ್ವಕವಾಗಿ ಹೇಳ ಬಹುದು. ಈ ರೀತಿ ವಿದ್ಯಾಭ್ಯಾಸ ಹೊಂದಿದ ನಮ್ಮ ತರುಣರು, ಸಮಾಜವು ತಮಗೆ ಮಾಡಿದ ಸಹಾಯಕ್ಕಾಗಿ ತಮ್ಮ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ನೆರವೇರಿಸಿ, ದಿನವಹಿ ಒಂದೆರಡು ಗಂಟೆ ವ್ಯಯಿಸಿ ಸಮಾಜದ ಕೆಲವು ಜನರಿಗಾದರೂ ವಯಸ್ಕರ ಶಿಕ್ಷಣ ಮೂಲಕ ವಿದ್ಯಾಭ್ಯಾಸ ಕೊಡತಕ್ಕದ್ದು.

2) ಇನ್ನು, ಸಮಾಜದ ಆರ್ಥಿಕ ಸುಧಾರಣೆಗಾಗಿ ಚಿಕ್ಕಪುಟ್ಟ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸುವುದು ಅಗತ್ಯ. ಬೀಡಿಕಟ್ಟುವುದು, ಚಾಪೆ ಮತ್ತು ಹುರಿಹಗ್ಗ ತಯಾರಿಸುವುದು ಇತ್ಯಾದಿಗಳನ್ನು ನಡಿಸಿಕೊಂಡು ಸಮಾಜದಲ್ಲಿ ಹಲವರಿಗೆ ಸಂಪಾದನೆ ಕೊಡಬಹುದು. ಆದರೆ ಇದಕ್ಕೆ ನಮ್ಮ ವ್ಯಾಪಾರಿಗಳು ತಕ್ಕಷ್ಟು ಪ್ರೋತ್ಸಾಹ ಕೊಡಬೇಕು. ಅವರು ತಮ್ಮ ಕಾಲ ಮೇಲೆ ನಿಲ್ಲುವ ತನಕವೂ ಈ ಸಾಧನಗಳನ್ನು ಹೊರಗಿನಿಂದ ತರಿಸುವ ಹವ್ಯಾಸವನ್ನು ಬಿಟ್ಟು

www.bearyinfo.com

ಬಿಡಬೇಕು. ನಮ್ಮ ವಿದ್ಯಾವಂತ ತರುಣರಿಗೆ ನಮ್ಮ ವ್ಯಾಪಾರೋದ್ಯಮಗಳಲ್ಲಿ ಕೆಲಸಕೊಟ್ಟು ಅವರಿಗೆ ಯೋಗ್ಯತರಬೇತು ಕೊಡತಕ್ಕದ್ದು. ನಮ್ಮ ವ್ಯಾಪಾರಿಗಳು ಹೊಸ ಹೊಸ ಉದ್ಯಮಗಳನ್ನೂ ಫೆಕ್ಟರಿಗಳನ್ನೂ ಸ್ಥಾಪಿಸಿ ಸಮಾಜದ ಮಕ್ಕಳಿಗೆ ಅವುಗಳಲ್ಲಿ ಕೆಲಸ ಸಿಗುವಂತೆ ನೋಡಬೇಕು. ಸಮಾಜಕ್ಕಾಗಿ ಸ್ವಲ್ಪ ತ್ಯಾಗವನ್ನೂ ಮಾಡಬೇಕು.

3) ನಮ್ಮ ಜನಸಾಮಾನ್ಯರಿಗೆ ಆಗಾಗ್ಯೆ ಬುದ್ಧಿವಾದ ಹೇಳಿ ಅವರನ್ನು ವಿಚಾರವಂತರನ್ನಾಗಿಯೂ, ಮಿತವ್ಯಯದಿಂದಲೂ ನಮ್ಮ ಪವಿತ್ರ ಧರ್ಮದ ಅನುಷ್ಠಾನಕ್ಕೆ ಅಧೀನವಾಗಿ ನಡೆಯುವಂತೆ ಅವರನ್ನು ತರಬೇತಿಗೊಳಿಸತಕ್ಕದ್ದು. ಅವರು ಚಿಕ್ಕ ಪುಟ್ಟ ಅಭಿಪ್ರಾಯ ವ್ಯತ್ಯಾಸಗಳನ್ನು ಬದಿಗೊತ್ತಿ ಸಮಾಜದ ಜನಸಾಮಾನ್ಯರ ಹೃದಯದಲ್ಲಿ ನಮ್ಮ ಇಂದಿನಸ್ಥಿತಿಗತಿಗಳ ಕುರಿತು ಒಂದು ಖೇದವನ್ನು ಸೃಷ್ಟಿಸಿ, ಸಮಾಜ ಸುಧಾರಣೆಗಾಗಿ ತಮ್ಮನ್ನು ಸಿದ್ಧಪಡಿಸಲು ಅವರನ್ನು ಪ್ರೇರೇಪಿಸತಕ್ಕದ್ದು. ವಿಶೇಷವಾಗಿ ಪ್ರತಿ ಶುಕ್ರವಾರ ಜುಮಾ ನಮಾಜಿನ ನಂತರ ಜನರಿಗೆ ಒಳ್ಳೆಯ ನಡತೆಗಳ ಕುರಿತು ಎಡೆಬಿಡದೆ ಉಪದೇಶ ಕೊಡುತ್ತಾ ಇರತಕ್ಕದ್ದು. ನಮ್ಮ ಧರ್ಮದ ಮುಖ್ಯ ತತ್ವಗಳಾದ ಶುಚಿತ್ವ, ಆರೋಗ್ಯ, ಮಿತವ್ಯಯ, ತಮ್ಮ ಮಕ್ಕಳ ತರಬೇತಿಯಲ್ಲಿ ಹೆತ್ತವರ ಜವಾಬ್ದಾರಿ, ಗಂಡ-ಹೆಂಡತಿ, ತಂದೆ ಮಕ್ಕಳು ಇವರ ಹಕ್ಕು ಬಾಧ್ಯತೆಗಳು ಇತ್ಯಾದಿ ಅನುದಿನದ ಸಂಗತಿಗಳ ಕುರಿತು ಆಗಾಗ್ಗೆ ಜನರಿಗೆ ಬೋಧಿಸುತ್ತಾ ಇರಬೇಕು. ನಮ್ಮ ಧರ್ಮದ ಬೋಧನೆಗಳಿಗನುಸಾರವಾಗಿ ನಾವು ಎಂದು ಜೀವಿಸತೊಡಗುತ್ತೇವೋ ಅಂದಿಗೆ ನಮ್ಮ ಸಂಕಷ್ಟಗಳ ಅರ್ಧ ಪಾಲು ಮುಗಿಯುವುದೆಂದೇ ನನ್ನ ಅಭಿಮತ.

4) ಆದರೆ ಈ ಎಲ್ಲಾ ಸುಧಾರಣಾತ್ಮಕ ಚಟುವಟಿಕೆಗಳನ್ನು ಸಾಗಿಸುವಂತೆ ಮುಂದಾಳ್ತನ ನೀಡುವುದು ಯಾರಿಂದು ವಾಚಕರು ಕೇಳಬಹುದು. ನಮ್ಮಲ್ಲಿ ಕೇಂದ್ರ ನಾಯಕತ್ವವಿಲ್ಲ. ಕೆಲವರು ತಮ್ಮ ಕುಟುಂಬದಲ್ಲಿ ನಾಯಕತ್ವವು ನಡಿಯುತ್ತಾ ಬಂದಿದೆಯೆಂದೂ ಅದು ತಮಗೇ ಸಿಗಬೇಕೆಂದು ಈಗ ವಾದಿಸಬಹುದಾದರೆ, ಕೆಲವರು ತಮ್ಮ ಬಳಿ ಐಶ್ವರ್ಯವಿದೆಯೆಂದೂ ಲೀಡರರಾಗಲು ಹವಣಿಸಬಹುದು. ನಾವು ಈ ರೀತಿ ಸಂಕುಚಿತ ಭಾವನೆಗಳನ್ನು ತೊರೆದು ಎಲ್ಲರಿಗೂ ಸಮಾನವಾಗಿ ಸಮ್ಮತವಾಗುವಂತೆ ನಾನು ಮೇಲೆ ಹೇಳಿದಂತೆ ನಗರದ ವಿವಿಧ ಮಸೀದಿ ಜಮಾತುಗಳಿಂದ ನೇರವಾಗಿ ಚುನಾವಣೆಗೊಂಡ ಪ್ರತಿನಿಧಿಗಳನ್ನು ಒಟ್ಟುಗೂಡಿಸಿ ಒಂದು ಕೇಂದ್ರ ಸಮಿತಿಯನ್ನು ಸ್ಥಾಪಿಸಬಹುದು. ಈ ಸಮಿತಿಯು ಸಮಾಜದ ಎಲ್ಲ ವಿಭಾಗಗಳನ್ನೂ ಪಂಗಡಗಳನ್ನೂ ಪ್ರದೇಶಗಳನ್ನೂ ಪ್ರತಿನಿಧೀಕರಿಸಬಹುದಾದುದರಿಂದ ಸಮಾಜದ ಕೇಂದ್ರ ನಾಯಕತ್ವವನ್ನು ವಹಿಸಲು ಯೋಗ್ಯ ಸಂಘಟನೆಯಾಗುವುದು. ಈ ರೀತಿ ನಮ್ಮ ಅನೇಕ ಸಂಕಷ್ಟಗಳು ದೂರವಾಗಬಹುದು.

ನಮ್ಮ ನಗರದಲ್ಲಿ ಈಗೀಗ ಈ ವಿಚಾರಕೋನವು ನೆಲೆಯೂರಿ ಸಮಾಜ ಬಂಧುಗಳು ಈ ಕಡೆಗೆ ಚಲಿಸತೊಡಗಿರುವುದನ್ನು ಕಾಣಲು ಸಂತೋಷವೆನಿಸುತ್ತದೆ.

www.bearyinfo.com

# ಜನಾಬ್ ಎಂ. ಏ. ಖಾದರ್, ಕೆಂಡತ್ಪಳ್ಳಿ



[ನಮ್ಮ ಸಮಾಜಕ್ಕೆ ಜನಾಬ್ ಎಂ. ಏ. ಖಾದರ್‌ರವರ ಯೋಗ್ಯತಾರ್ಹತೆಗಳ ಹಾಗೂ ಸೇವಾಬುದ್ಧಿಯ ಅರಿವಾದುದು ಅವರು ಮುನಿಸಿಪಲ್ ಕೌನ್ಸಿಲರಾಗಿ ಚುನಾಯಿತರಾದಮೇಲೆ. ಅನಂತರ ಹಲವಾರು ಸಂಘ-ಸಂಸ್ಥೆಗಳಲ್ಲಿ ದುಡಿದು ಸಮಾಜ ಬಾಂಧವರಿಗೆ ಪರಿಚಿತರಾಗಿದ್ದಾರೆ. ಇವರ ಸಮಾಜ ಸೇವೆಯ ಹುರುಪನ್ನು ಕಂಡೇ ಯೂತ್ ಕೊಂಗ್ರೆಸ್ಸಿನವರು ಇವರನ್ನು ಕಾರ್ಯದರ್ಶಿಯಾಗಿ ಚುನಾಯಿಸಿದ್ದಿರಬಹುದು. ಅಚ್ಚ ಕಾಂಗ್ರೆಸ್‌ವಾದಿಗಳಾಗಿದ್ದರೂ ಸಮಾಜದ ನಿಸ್ವಾರ್ಥಿ ಹಿತಚಿಂತಕರಲ್ಲೊಬ್ಬರೂ, ಅದರ ಒಳಿತಕ್ಕಾಗಿ ತಮ್ಮಿಂದಾದಷ್ಟು ಪರಿಶ್ರಮಿಸುವವರೂ ಆಗಿರುತ್ತಾರೆ. ಆದ್ದರಿಂದಲೇ ಕೇಂದ್ರ ಸಂಸ್ಥೆ ವೆಲ್ಪೇರ್ ಕಮಿಟಿಯ ಆಡಳಿತೆ ಮಂಡಳಿಯಲ್ಲಿಯೂ ಸದಸ್ಯರಾಗಿರುತ್ತಾರೆ. ಸಂ.]

---

ನಮ್ಮ ಸಮಾಜದಲ್ಲಿ ನೆಲೆಯೂರಿರುವ ಸ್ಥಂಬನಕ್ಕೆ ಮೂಲಕಾರಣವು ನಮ್ಮಲ್ಲಿರುವ ಅನೈಕ್ಯತೆ, ಸ್ವಾರ್ಥಬುದ್ಧಿ, ಸಂಕುಚಿತ ಮನೋವೃತ್ತಿ ಹಾಗೂ ಸಮಾಜದ ಜನಸಾಮಾನ್ಯರ ಕ್ಷೇಮಾಭಿವೃದ್ಧಿಯ ಕುರಿತು ನಮ್ಮ ಧನಿಕವರ್ಗವು ತಾಳಿರುವ ಅಲಕ್ಷ್ಯಭಾವವೆಂದೇ ನನ್ನ ಅಭಿಪ್ರಾಯ. ಮಲೆಬಾರಿನಲ್ಲಾಗಲೀ, ಬೆಂಗಳೂರು ಮೈಸೂರುಗಳಲ್ಲಾಗಲಿ ಇರುವ ಮುಸ್ಲಿಮ್ ಧನಿಕರಲ್ಲನೇಕರು ವಿದ್ಯಾವಂತರೂ, ಉದಾರಿಗಳೂ, ಸಮಾಜದ ಅಭ್ಯುದಯಕ್ಕಾಗಿ ತಮ್ಮ ಐಶ್ವರ್ಯವನ್ನು ವಿನಿಯೋಗಿಸುವವರೂ ಆಗಿರುವದರಿಂದಲೇ ಆ ಕಡೆಗಳಲ್ಲಿ ಸ್ವಲ್ಪ ಮಟ್ಟಿನ ಪುರೋಗಮನವನ್ನು ನಾವು ಕಾಣುತ್ತಿದ್ದೇವೆ. ಆದರೆ ನಮ್ಮ ನಾಡಿನ ಅವಸ್ಥೆಯು ಹಾಗಿಲ್ಲ. ನಮ್ಮ ಜನರಲ್ಲಿ ಹೆಚ್ಚಿನಾಂಶಕ್ಕೆ ಲೌಕಿಕ ವಿದ್ಯಾಭ್ಯಾಸದ ಗಂಧವೂ ತಾಗಿಲ್ಲ. ಲೋಕವು ಎತ್ತಲಾಗೆ ಸಾಗುತ್ತಿದೆ, ನಮ್ಮ ಸಮಾಜವು ಇಂದಿನ ಹೊಸ ಸನ್ನಿವೇಶದಲ್ಲಿ ಹೇಗೆ ಮುಂದರಿಯಬೇಕು ಎಂಬಿವುಗಳ ಕುರಿತು ಅವರಿಗೆ ಏನೊಂದು ಚಿಂತೆಯಿರುವುದಾಗಿ ಕಂಡು ಬರುವುದಿಲ್ಲ. ಆಲಿಮ್‌ಗಳಂತೂ ಮತಗ್ರಂಥಗಳ ಚತುರ್ಗೋಡೆಗಳ ಒಳಗೆ ಅಡಗಿ ಕೂತುಕೊಂಡಿದ್ದಾರೆಂಬುದು

www.bearyinfo:com

ಎಲ್ಲರಿಗೂ ತಿಳಿದ ಸಂಗತಿ. ಅವರು ಸಮಾಜಸೇವೆಗಾಗಿ ಒಂದು ವೇಳೆ ಪ್ರಯತ್ನಿ ಸುತ್ತಿರುವುದಾದರೆ ಅದು ಸಮಾಜದ ವಿವಿಧ ಅಂಗಗಳನ್ನು ಇಸ್ಲಾಮಿನ ಸರ್ವ ಸೋದರತ್ವದ ಉಚ್ಛತತ್ವದ ಬುನಾದಿಯ ಮೇಲೆ ಒಂದುಗೂಡಿಸುವುದಕ್ಕಾಗಿ ಅಲ್ಲ, ತಮ್ಮ ಅಭಿಪ್ರಾಯಗಳಿಗೆದುರಾದ ವ್ಯಕ್ತಿಗಳನ್ನು ಮತಭ್ರಷ್ಟರೆಂದು ಸಾರಿ ಅವರ ವಿರುದ್ಧ ಸಮಾಜದಲ್ಲೊಂದು ಉದ್ರಿಕ್ತ ವಾತಾವರಣವನ್ನುಂಟು ಮಾಡಲಿಕ್ಕಾಗಿ ಮಾತ್ರ. ಆದರೆ ಇದರಿಂದ ನಮ್ಮ ಸಮಾಜಕ್ಕೇ ನಷ್ಟ, ಹೊರತು ಅವರಿಗೆ ಲಾಭವೇ ಲಾಭ. ನಮ್ಮ ಉಲೆಮಾಗಳಲ್ಲಿ ಹೆಚ್ಚಿನವರು ಪರವೂರಿನಿಂದ ಬಂದವರು. ಒಂದು ವೇಳೆ ತಮ್ಮ ಬೇಳೆ ಇಲ್ಲಿ ಬೇಯುವಂತೆ ಕಾಣದಿದ್ದರೆ ಕೂಡಲೇ ರಾಜಿನಾಮೆ ಕೊಟ್ಟು ತಮ್ಮ ಊರಿಗೆ ಪಲಾಯನ ಗೈಯುತ್ತಾರೆ. ಅವರು ಸೃಷ್ಟಿಸಿದ ಅನೈಕ್ಯ ವಾತಾವರಣದ ಕಹಿ ಪರಿಣಾಮವನ್ನು ಮಾತ್ರ ನಮ್ಮ ಜನರು ವರ್ಷಗಟ್ಟಲೆ ಮೂಕಪ್ರಾಣಿಯಂತೆ ಸಹಿಸ ಬೇಕಾಗುತ್ತದೆ.

ಈತರ ಪರಿಸ್ಥಿತಿಯು ನಮ್ಮ ಸಮಾಜದಲ್ಲಿ ಏನೊಂದು ಕ್ರಿಯಾತ್ಮಕ ಚಟುವಟಿಕೆಯನ್ನೂ ತೊಡಗಲು ಬಿಡುವುದಿಲ್ಲ. ಹೊರಗಿನಿಂದ ಬರುವ ಮೌಲವಿಗಳು ನಮ್ಮೊಳಗಿನ ಕೆಲವು ಐಶ್ವರ್ಯವಂತರ ಸಹಾಯವನ್ನೂ ಪಡಕೊಂಡು, ನಮ್ಮ ಸಮಾಜದ ಜನಸಾಮಾನ್ಯರ ಮೇಲೆ ತುಂಬಾ ಪ್ರಭಾವವನ್ನು ಕರಸ್ಥ ಮಾಡಿಕೊಳ್ಳುತ್ತಾರೆ. ಅನಂತರ ಮತದ ಹೆಸರಲ್ಲಿ ನಮ್ಮೊಳಗೆ ಅನೈಕ್ಯವನ್ನುಂಟುಮಾಡಿ ವಾಳ್ ಪ್ರಸಂಗಗಳ ಮುಖಾಂತರವೂ ಇತರ ಕಾರ್ಯಕ್ರಮಗಳಿಂದಲೂ ತುಂಬಾ ಹಣ ಶೇಖರಿಸಿ, ತಮ್ಮ ನೆಲೆಯನ್ನು ಭದ್ರಪಡಿಸಿಕೊಳ್ಳುತ್ತಾರೆ. ಕೇವಲ ಒಂದೆರಡು ವಾರಗಳ ಅಥವಾ ಒಂದು ತಿಂಗಳು ವರೆಗೆ ರಾತ್ರೆ 9 ಗಂಟೆಯಿಂದ 11-12 ಗಂಟೆಯ ತನಕ ಎಂದರೆ ದಿನವಹಿ 2, 3 ಗಂಟೆ ಭಾಷಣ ಮಾಡಿ ಈ ಮಲಬಾರ್ ಮೌಲವಿಗಳು ಪ್ರತಿ ವರ್ಷವೂ ನಮ್ಮ ಬಡ ಸಮಾಜದಿಂದ ಸುಲಿಯುವ ಹಣದ ಲೆಖ್ಖವನ್ನು ಯಾರಾದರೂ ಬರೆದಿಟ್ಟಿದ್ಧರೆ ನಮ್ಮ ಜನರ ಕಣ್ಣು ತೆರೆಯುತ್ತಿತ್ತು. ಈ ಎಲ್ಲಾ ಹಣವು ನಮ್ಮ ಸಮಾಜದ ಏಳಿಗೆಗಾಗಿ ನಮ್ಮ ಮಕ್ಕಳ ಶಿಕ್ಷಣಕ್ಕಾಗಿ ನಮ್ಮ ಜನಸಾಮಾನ್ಯರ ಆರ್ಥಿಕ ಸಹಾಯಕ್ಕಾಗಿ ವಿನಿಯೋಗಿಸಲ್ಪಡ ಬೇಕಾಗಿದ್ದುದಲ್ಲವೇ? ಈ ಕುರಿತು ಸಮಾಜಬಾಂಧವರು ತಾಳ್ಮೆಯಿಂದ ಆಲೋಚಿಸ ಬೇಕಾಗಿದೆ. ಮತಪ್ರಸಂಗಗಳು ಬೇಡವೆಂದು ನನಗೆ ಅಭಿಪ್ರಾಯವಿಲ್ಲ. ಆದರೆ ಮತಪ್ರಸಂಗಗಳ ಮೂಲಕ ಸಮಾಜದ ಬಡಜನರ ಜೇಬನ್ನು ಕತ್ತರಿಸುವ ಈ ಪದ್ಧತಿ ಮಾತ್ರ ಇನ್ನಾದರೂ ನಿಲ್ಲುವಂತಾಗಬೇಕು. ಒಬ್ಬ ಮೌಲವಿಯ ಆರ್ಥಿಕ ನೆಲೆಯನ್ನು ಸುಧಾರಿಸಲು ಇಡೀ ಸಮಾಜದ ಬಡ ಕುಟುಂಬಗಳ ಆರ್ಥಿಕ ನೆಲೆಯನ್ನು ಬಲಿಕೊಡುವುದು ನ್ಯಾಯವಾಗಲಾರದು. ಆ ಹಣವನ್ನು ಮಲಬಾರಿಗೆ ಕೊಂಡೊಯ್ಯುವ ಬದಲು, ನಮ್ಮ ಸಮಾಜದ ಹಿತಾಭಿವೃದ್ಧಿಗಳಿಗಾಗಿ ಉಪಯೋಗಿಸುವಂತಾಗಬೇಕು.

www.bearyinfo.com

ಈ ತರ 'ವಾಳ್' ಪ್ರಸಂಗಗಳಿಂದ ನೇರವಾಗಿಯೂ ಸಮಾಜಕ್ಕೆ ಗುಣವಿದೆ ಎಂದು ನಮ್ಮ ಜನರು ತಿಳಿಯುವುದಾದರೆ, ಅವುಗಳನ್ನು ನಮ್ಮದೇ ಖತೀಬ್ ಮುಕ್ರಿಗಳಿಂದ ಮಾಡಿಸಿ, ಆ ಶೇಖರಿಸಿದ ಹಣವನ್ನು ಅಲ್ಪ ಸಂಬಳದಲ್ಲಿ ಕೆಲಸ ಮಾಡುವ ಆ ಪುಣ್ಯವಂತರಿಗೇ 'ವಾರ್ಷಿಕ ಬೋನಸ್' ರೂಪದಲ್ಲಿ ಯಾಕೆ ಕೊಡ ಬಾರದು ಎಂದು ನಾವು ಆಲೋಚಿಸಬೇಕಾಗಿದೆ.

ಅಂತು, ಈ ತೆರನಾಗಿ ನಮ್ಮ ಸಮಾಜದ ಕಡಿವಾಣವನ್ನು ನಾವೇ ಹಿಡ ಕೊಳ್ಳುವ ಬದಲು ಪರವೂರ ಮೌಲವಿಗಳ ಸ್ವಾಧೀನ ಬಿಟ್ಟು ಕೊಟ್ಟರೆ ಸಮಾಜದ ಭವಿಷ್ಯದ ಕುರಿತು ನಾವು ಆಲೋಚಿಸುವ ಆವಶ್ಯಕತೆಯೇ ಉಳಿಯಲಾರದು. ನಾವು ಎಷ್ಟೇ ಪ್ರಯತ್ನಪಟ್ಟು ಸಮಾಜದಲ್ಲಿ ಐಕ್ಯತೆಯನ್ನು ಮೊಳಗಿಸಿದರೂ, ಈ ಜನಕೂಟವು ಕೇವಲ ಒಂದು ಘಂಟೆಯ ತಮ್ಮ ಉದ್ರೇಕಕಾರಕ 'ವಾಳ್' ಮೂಲಕ ನಮ್ಮ ಎಲ್ಲಾ ಪರಿಶ್ರಮವನ್ನೂ ಮಣ್ಣುಗೂಡಿಸಿ ಬಿಡಬಹುದು. ಆದ್ದ ರಿಂದ ನಮ್ಮ ಸಮಾಜದ ವಿವಿಧ ಜಮಾತುಗಳಲ್ಲಿ ದುಡಿಯುವ ಮೌಲವಿಗಳಿಗೆ ಹೊರತು, ಹೊರಗಿನವರಿಗೆ ತಮ್ಮ ಬೇಳೆ ಬೇಯಿಸಲು ಇಲ್ಲಿ ಅವಕಾಶಕೊಡದಿರು ವುದೇ ಲೇಸು. ಅಂತು ಈ ತರ ನಿರಾಶಾಜನಕ ಅವಸ್ಥೆಗೆ ನಮ್ಮ ವಿದ್ಯಾವಂತ ಜನಕೂಟದ ಹೇಡಿತನವೇ ಮೂಲಕಾರಣವೆಂದು ನನಗನ್ನಿಸುತ್ತದೆ. ಮಿಸ್ಟರ್ ರಹೀಮರ ಧುರೀಣತ್ವ ಕಾಲದಲ್ಲಿ ವಿದ್ಯಾವಂತ ಕೂಟವೇ ಸಮಾಜಕ್ಕೆ ಮಾರ್ಗ ದರ್ಶನವೀಯುತ್ತಿದ್ದು ಸಮಾಜದಲ್ಲಿ ಈ ರೀತಿಯ ಅರಾಜಕತೆ ಹಾಗೂ ಪರಸ್ಪರ ದ್ವೇಷಭಾವನೆಯು ಇರಲಿಲ್ಲವೆಂದು ಕೇಳುತ್ತೇನೆ.

ಇಂದು ನಮ್ಮ ವಿದ್ಯಾವಂತ ಜನಕೂಟವು ಮುಂದೆ ಬಂದು ಸಮಾಜದ ನಾಯಕತ್ವವನ್ನು ವಹಿಸಿಕೊಂಡು ಅದಕ್ಕೆ ಸರಿಯಾದ ಮಾರ್ಗದರ್ಶನವಿತ್ತರೆ ಮಾತ್ರ, ಈ ಸ್ಥಂಬನಾಪರಿಸ್ಥಿತಿಯನ್ನು ಹೋಗಲಾಡಿಸಿ ಸಮಾಜವನ್ನು ಪುರೋ ಗತಿಯ ಮಾರ್ಗದಲ್ಲಿ ಹಾಕಬಹುದೆಂದು ನನ್ನ ಅಭಿಪ್ರಾಯ.

ಇನ್ನೊಂದು ಸಂಗತಿ ಕೂಡಾ ಇದೆ. ಅದೇನೆಂದರೆ ನಮ್ಮ ಜನರು ರಾಷ್ಟ್ರೀಯ ವಿಷಯಗಳಲ್ಲಿ ಏನೊಂದು ಅಭಿರುಚಿಯನ್ನು ವ್ಯಕ್ತಪಡಿಸುವುದಿಲ್ಲ. ಇಂದು ಲೋಕದಲ್ಲಿ ನಿಶ್ಚಲವಾಗಿರುವ, ಸಂಘಟನೆಯಿಲ್ಲದಿರುವ, ಕುರಿಮಂದೆಯಂತೆ ದಿನದೂಡುವ ಜನಕೂಟಕ್ಕೆ ಎಲ್ಲಿಯೂ ಮರ್ಯಾದೆ ಸಿಗಲಾರದು. ರಾಷ್ಟ್ರದ ಏಳಿಗೆಗಾಗಿ ಇತರ ಸಮಾಜಗಳೊಡನೆ ಭುಜಕ್ಕೆ ಭುಜಕೊಟ್ಟು ನಾವೂ ನಮ್ಮ ಯೋಗ್ಯತಾರ್ಹತೆಗಳನ್ನು ಸಮರ್ಪಿಸಬೇಕಾಗಿದೆ. ಅವರಂತೆ ನಾವೂ ತ್ಯಾಗ ಮಾಡಬೇಕಾಗಿದೆ. ಸರಕಾರದ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ನಾವು ಸಹಕರಿಸ ಬೇಕಾಗಿದೆ. ಅದರ ಲೋಕೋಪಯೋಗಿ ಕಾರ್ಯಗಳಿಂದ ಇತರರಂತೆ ನಾವೂ ಫಲಹೊಂದಬೇಕಾಗಿದೆ. 'ಬೆಕ್ಕಿನ ಬಿಡಾರ ಬೇರೆ'ಯೆಂಬ ನಮ್ಮ ಸಂಕುಚಿತ

www.bearyinfo.com

ಮನೋಭಾವವು ಇನ್ನಾದರೂ ದೂರವಾಗಿ ನಮಗೂ ರಾಷ್ಟ್ರೀಯ ಕಾರ್ಯಗಳಲ್ಲಿ ಇತರರಷ್ಟೆ ಹಕ್ಕುಬಾಧ್ಯತೆಗಳಿವೆ; ಇತರರಂತೆ ದೇಶದ, ಜನತೆಯ ಉದ್ಧಾರಕ್ಕಾಗಿ ನಮ್ಮ ಮಟ್ಟಿನ ಅಳಿಲುಸೇವೆಯನ್ನು ನಾವು ಮಾಡಬೇಕಾಗಿದೆಯೆಂಬ ಅಭಿಪ್ರಾಯವು ನಮ್ಮಲ್ಲಿ ಮೂಡಬೇಕು. ಮಗು ಕೂಗದೆ ತಾಯಿ ಮೊಲೆ ಹಾಲು ಕೂಡಾ ಕೊಡುವುದಿಲ್ಲವೆಂಬ ನಾಣ್ಣುಡಿಯಿದೆಯಲ್ಲವೆ? ಅದರಂತೆ ನಮ್ಮ ಆವಶ್ಯಕತೆಗಳ ಕುರಿತು ಸರಕಾರಕ್ಕೆ ನಾವು ಸಕಾಲವಾಗಿ ತಿಳಿಸದಿದ್ದರೆ ಇತರ ಸಮಾಜಗಳಿಗಿಂತ ಎಲ್ಲಾ ವಿಷಯಗಳಲ್ಲಿಯೂ ಹಿಂದೆ ಬೀಳುವಾಗ ಯಾರನ್ನೂ ದೂರಿ ಫಲವಿಲ್ಲ. ಆದ್ದರಿಂದ ನಮ್ಮಲ್ಲಿ ಬೆಳೆದುಬಂದಿರುವ "ನಾವು ಬೇರೆ" ಎಂಬ ಮನೋವೃತ್ತಿಯು ದೂರವಾಗಿ "ಎಲ್ಲರಂತೆ ನಮಗೂ ಹಕ್ಕಿದೆ" ಎಂಬ ಮನೋಭಾವವು ಉಂಟಾಗಬೇಕು.

ವಿದ್ಯೆಯ, ವ್ಯಾಪಾರಾಭಿವೃದ್ಧಿಯ, ಸಾಮಾಜಿಕ ಸುಧಾರಣೆಯ ವಿಷಯಗಳಿಗೆ ನಾವು ಹೆಚ್ಚಿನ ಗಮನಕೊಟ್ಟು, ಅವುಗಳನ್ನು ನಿಸ್ವಾರ್ಥಬುದ್ಧಿಯಿಂದ ನೆರವೇರಿಸಬೇಕು. ಹಾಗಾದರೆ ಮಾತ್ರ ಸಮಾಜವನ್ನು ಪುರೋಗತಿಯ ಮಾರ್ಗದಲ್ಲಿ ಹಾಕಬಹುದು.

ಇನ್ನು ಕೇಂದ್ರ ನಾಯಕತ್ವದ ಕುರಿತು ಹೇಳುವುದಾದರೆ ಅದು ನಮ್ಮಂತಹ ಅನಿಯಂತ್ರಿತ ಸಮಾಜಕ್ಕೆ ಅತ್ಯಾವಶ್ಯಕ. ನಮ್ಮ ಸಮಾಜದ ಪತನಕ್ಕೆ ಲೀಡರ್‌ಶಿಪ್ಪಿನ ಕೊರತೆಯೆ ಕಾರಣವೆಂದು ನಗರ ಸಭಾಧಿಪತಿಗಳಾಗಿದ್ದ ಶ್ರೀ ಅಡಿಗರು ಒಮ್ಮೆ ಬದ್ರಿಯಾ ಶಾಲೆಯ ಒಂದು ಸಭೆಯಲ್ಲಿ ಹೇಳಿದ್ದರು. ನಮ್ಮ ಸಮಾಜವನ್ನು ಅವರು 'ಡಚ್ ಸೇನೆ'ಗೆ ಹೋಲಿಸಿದ್ದರು. ಇದು ಯಥಾರ್ಥ ಸಂಗತಿ ಎಂದು ಹೇಳದೆ ಉಪಾಯವಿಲ್ಲ. ಈ ನಾಯಕತ್ವದ ಕೊರತೆಯನ್ನು ನೀಗಿಸದೆ ಯಾವ ಸುಧಾರಣಾ ಕಾರ್ಯವೂ ಮುಂದೆ ಸಾಗುವಂತಿಲ್ಲ. ಕೇಂದ್ರ ನಾಯಕತ್ವದ ಅಭಾವದಲ್ಲಿ ನಗರದ ವಿವಿಧ ಸಂಘ ಸಂಘಟನೆಗಳಿಂದ ಪ್ರತಿನಿಧಿಗಳನ್ನಾಯ್ದು ಒಂದು ತಾತ್ಕಾಲಿಕ ಕೇಂದ್ರ ಸಮಿತಿಯನ್ನು ರಚಿಸಬೇಕಾಗುವುದು. ಇಂದಿನ ಮುಸ್ಲಿಮ್ ವೆಲ್ಫೇರ್ ಕಮಿಟಿಯಿಂದ ಕೇಂದ್ರ ನಾಯಕತ್ವದ ಉದಯಕಾಲದವರೆಗೂ ಕೆಲಸ ಸಾಧಿಸಬಹುದೆಂದು ನನ್ನ ಅಭಿಪ್ರಾಯ.

---

www.bearyinfo.com

# ಜನಾಬ್ ಕೆ. ಮೈೊದಿನ್ ಬಾವಾ, ಕಂದಕ



[ನಮ್ಮ ಸಮಾಜದ ವರ್ತಕ ಪ್ರಮುಖರಲ್ಲೊಬ್ಬರಾದ ಮೊೖದಿನ್ ಬಾವಾ ಸಾಹೇಬರು ತನ್ನ ಪಿತ್ರವರ್ಯರಂತೆ ಸಮಾಜಪ್ರೇಮಿಗಳೂ ಉದಾರಿಗಳೂ ಆಗಿರುತ್ತಾರೆ. ಸ್ಥಳೀಯ ಮುಸ್ಲಿಮ್ ಎಜ್ಯುಕೇಶನಲ್ ಅಸೋಸಿಯೇಶನಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಅದರಲ್ಲಿ ಪ್ರಗತಿಪರ ಕಾರ್ಯಕ್ರಮಗಳನ್ನು ಜ್ಯಾರಿಗೊಳಿಸಲು ಶ್ರಮಿಸುತ್ತಾರೆ. ಮೊನ್ನೆಯಂತೆ ತನ್ನ ಯುರೋಪ್, ಮಧ್ಯಪೂರ್ವ ಪ್ರದೇಶಗಳ ಸಂಚಾರ ಮುಗಿಸಿ ಹಿಂತಿರುಗಿದ ಇವರು ಸಮಾಜದಲ್ಲಿ ಕೈಗಾರಿಕೆಯ ಅಭಾವವನ್ನು ಕಂಡು ಬೇಸರಗೊಂಡು ಅದರ ಪೂರೈಕೆಗಾಗಿ ಪ್ರಯತ್ನಿಸುತ್ತಿರುವರಾಗಿ ಕೇಳುತ್ತೇವೆ. ಇವರಿಂದ ನಮ್ಮ ಸಮಾಜಕ್ಕೆ ತುಂಬಾ ಕ್ರಿಯಾತ್ಮಕ ಸೇವೆಯು ನೆರವೇರುವುದೆಂದು ಆಶಿಸುತ್ತೇವೆ.— ಸಂ.]

---

ನಮ್ಮ ಸಮಾಜದಲ್ಲಿ ಇಂದು ಕಾಣುವ ಸ್ಥಂಬನಕ್ಕೆ ಮೂಲಕಾರಣವು ನಮ್ಮಲ್ಲಿರುವ ಅನೈಕ್ಯತೆಯೆಂದೇ ನನ್ನ ಅಂದಾಜು. ತುಂಬಾ ಕಾಲದಿಂದಲೂ ನಾವು ಬಜಾರಿನವರು, ಕಂದಕದವರೆಂದು ಎರಡು ಪಂಗಡಗಳಾಗಿಯೂ, ದಖ್ನಿಗಳು, ಬ್ಯಾರಿಗಳೆಂಬ ಎರಡು ಕೂಟಗಳಾಗಿಯೂ ಒಬ್ಬರನ್ನೊಬ್ಬರು ಪರಸ್ಪರ ತಿರಸ್ಕಾರ ಭಾವದಿಂದ ಕಾಣುತ್ತಾ ಬಂದಿದ್ದೇವೆ. ಈ ಭೇದವು ಈಗೀಗ ಮಾಯವಾಗುತ್ತಾ ಬರುತ್ತಿರುವುದಾದರೂ ಕೆಲವು ಕಡೆಗಳಲ್ಲಿ ಈಗಲೂ ಇದರ ಕುರುಹುಗಳು ಕಾಣದೆ ಇಲ್ಲ. ಇದು ಶುದ್ಧ ತಪ್ಪು. ಮುಸ್ಲಿಮರಾಗಿರುವ ಅವಸ್ಥೆಯಲ್ಲಿ ನಾವೆಲ್ಲರೂ ಒಂದೇ ಸಮಾಜದ ಅಂಗಗಳೇ ಆಗಿರುತ್ತೇವೆ; ಮಾತ್ರವಲ್ಲ, ನಮ್ಮಲ್ಲಿ ಧನಿಕ ಬಡವ ಎಂಬ ಭೇದಭಾವವೂ ಸಲ್ಲದು. ಸಮಾಜದಲ್ಲಿ ಎಲ್ಲರಿಗೂ ಸಮಾನವಾದ ಹಕ್ಕಿದೆ. ಬಡವನೊಬ್ಬನ ಒಳ್ಳೆಯ ಅಭಿಪ್ರಾಯವನ್ನು ಅವನು ಬಡವನೆಂಬ ಕಾರಣದಿಂದ ಅಲ್ಲಗಳೆಯುವುದಾಗಲಿ, ಧನಿಕನೊಬ್ಬನ ಕೆಟ್ಟ ಮಾತನ್ನು ಅವನು ಧನಿಕನೆಂದು ಹೇಳಿ ಒಪ್ಪಿಕೊಳ್ಳುವುದಾಗಲಿ ಸರಿಯಲ್ಲ. ಈ ರೀತಿ ನಡೆಯುತ್ತಾ ಬರುವುದರಿಂದ ಬಹುಸಂಖ್ಯಾಕರಾಗಿರುವ ನಮ್ಮ ಬಡಸಹೋದರರಿಗೆ ಸಮಾಜ ಸುಧಾರಣೆಯ ವಿಷಯದಲ್ಲಿ ಏನೊಂದು ಆಸಕ್ತಿ ಉಳಿಯದಾಗಿ ಬಿಟ್ಟಿದೆ.

ಇನ್ನೊಂದು ಕಾರಣವೆಂದರೆ ನಮ್ಮ ಜನರಲ್ಲಿರುವ ಶಿಕ್ಷಣದ ಅಭಾವ; ಸಭ್ಯತೆಯ ಕೊರತೆ. ನಮ್ಮ ಸಾಮಾಜಿಕ ಆಚಾರಗಳಲ್ಲಿ ಹಲವು ಪುರಾತನ

www.bearyinfo.com

ಕಾಲದ ಅವಶೇಷಗಳಾಗಿವೆ. ವಿದ್ಯಾಭ್ಯಾಸದ ಸಂಗತಿಯಲ್ಲೂ ಇಂದು ಹೊಸ ಹೊಸ ರೀತಿಕ್ರಮಗಳು ಬಳಕೆಗೆ ಬಂದಿರುವಾಗ ನಾವು ಹಳೆಯ ಪಾರಂಪರ್ಯ ವನ್ನೇ ಮುಂದರಿಸಿಕೊಂಡು ನಮ್ಮ ಜನಾಂಗದ ಮಕ್ಕಳ ಆಯುಷ್ಯವನ್ನೇ ಹಾಳುಮಾಡುತ್ತಿದ್ದೇವೆ. ಧಾರ್ಮಿಕ ವಿದ್ಯಾಭ್ಯಾಸವು ಅಗತ್ಯವಿಲ್ಲವೆಂದು ನನಗೆ ಅಭಿಪ್ರಾಯವಿಲ್ಲ. ಆದರೆ ಅದು ನಮ್ಮ ಪ್ರಾಯೋಗಿಕ ಜೀವನದಲ್ಲಿ ಬಳಸಲು ಯೋಗ್ಯವಾಗುವಷ್ಟರ ಮಟ್ಟಿಗೆ ಆಧುನಿಕ ಭಾಷೆಯಲ್ಲಿ ಕೊಡಲ್ಪಡಬೇಕು. ಮಾತ್ರವಲ್ಲ, ಅದರ ಸಂಗಡವೇ ಲೌಕಿಕ ವಿದ್ಯಾಭ್ಯಾಸ ವಿಶೇಷವಾಗಿ ಟೆಕ್ನಿಕಲ್ ವಿದ್ಯಾಭ್ಯಾಸವು ಅತ್ಯಗತ್ಯ; ಅದಕ್ಕಾಗಿ ವಿದ್ಯಾಸಂಸ್ಥೆಗಳು, ಸ್ಕೋಲರ್ ಶಿಫ್ ಫಂಡುಗಳು, ಹೊಸ್ಟೆಲುಗಳು ಇತ್ಯಾದಿ ಅತ್ಯವಶ್ಯ.

ಇನ್ನೊಂದು ಕಾರಣ ನಮ್ಮ ಆರ್ಥಿಕ ದುಃಸ್ಥಿತಿ; ನಮ್ಮ ವಿದ್ಯಾವಂತ ಬಂಧುಗಳಲ್ಲನೇಕರು ಹಣದ ಅಭಾವದಿಂದಾಗಿ ಕ್ಲಾರ್ಕುಗಳಾಗಿ ಸರಕಾರಿ ಆಫೀಸುಗಳಲ್ಲಿಯೂ ಖಾಸಗಿ ಆಫೀಸುಗಳಲ್ಲಿಯೂ ದುಡಿಯುತ್ತಾರೆ. ವ್ಯಾಪಾ ರೋದ್ಯಮಃಕ್ಕೆ ಇಳಿದು ತಮ್ಮ ಭವಿಷ್ಯದೊಂದಿಗೆ ಸಮಾಜದ ಆರ್ಥಿಕ ನೆಲೆ ಯನ್ನೂ ಭದ್ರಪಡಿಸಬೇಕೆಂಬ ಹಂಬಲವಾಗಲಿ, ಎದೆಗಾರಿಕೆಯಾಗಲಿ ಅವರಲ್ಲಿಲ್ಲ. ಮಾತ್ರವಲ್ಲ, ಅವರಿಂದ ವ್ಯಾಪಾರದ ಅಭಿರುಚಿಯಿರುವ ಯೋಗ್ಯ ಜನರನ್ನು ಹೆಕ್ಕಿತೆಗೆದು ಆವಶ್ಯಕ ಧನಸಹಾಯ ಮಾಡಿ ಅವರನ್ನು ವ್ಯಾಪಾರೋದ್ಯಮಕ್ಕೆ ಇಳಿಸುವ ಮುಸ್ಲಿಮ್ ಸಂಘಟನೆಯಾಗಲೀ, ಧನಿಕರಾಗಲೀ ನಮ್ಮ ಸಮಾಜದಲ್ಲಿ ಇರುವುದಿಲ್ಲ. ಕ್ಲಾರ್ಕುಗಳಾಗಿ ಕೆಲಸ ಮಾಡುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯವಲ್ಲ. ಆದರೂ ಹೈಸ್ಕೂಲ್ ಪಾಸಾಗಿ ಪ್ರತಿಯೊಬ್ಬರೂ ಕುರಿಮಂದೆ ಯಂತೆ ಒಂದೇ ದಾರಿ ಹಿಡಿದು ಕ್ಲಾರ್ಕಿನ ಕೆಲಸಕ್ಕೆ ಸೇರಿದರೆ ಸಮಾಜ ಸುಧಾರಣೆಯ ಕಾರ್ಯದಲ್ಲಿ ಅವರಿಂದ ಸಹಾಯಸಿಗುವುದು ಕಷ್ಟ. ಆದ್ದರಿಂದ ಕೆಲವು ಯೋಗ್ಯರನ್ನು ಆರಿಸಿಯಾದರೂ ವ್ಯಾಪಾರದಲ್ಲಿ ಹಾಕಲು ನಮ್ಮ ಸಮಾಜದ ಕೆಲವು ಧರ್ಮಾಭಿಮಾನಿಗಳು ಸೇರಿ ಒಂದು ಸಂಘಟನೆಯನ್ನು ಮಾಡಬೇಕು.

ಇನ್ನು ನಮ್ಮ ಸಮಾಜದಲ್ಲಿ ಬಡತನವು ಕಠಿಣತರದ್ದಾಗಿರುತ್ತದೆ. ಇದನ್ನು ನಿವಾರಿಸುವುದರಲ್ಲಿ ನಮ್ಮ ಧರ್ಮನಿಯಮಿತವಾದ ಜಕಾತ್ ಮೂಲಕ— ಅದನ್ನು ನ್ಯಾಯವಾದ ಮಾರ್ಗದಲ್ಲಿ ಉಪಯೋಗಿಸಿ—ತುಂಬಾ ಸಹಾಯಪಡೆಯ ಬಹುದು. ಈಗಿನ ಜಕಾತ್ ವಿತರಣೆಯ ಕ್ರಮದಿಂದ ಇಸ್ಲಾಮಿನ ಹೆಸರಿಗೂ ನಮ್ಮ ಜನರ ಸ್ವಾಭಿಮಾನಕ್ಕೂ ತುಂಬಾ ಧಕ್ಕೆತಗಲುತ್ತದೆಯೆಂದರೆ ಅತಿ ಶಯೋಕ್ತಿಯಾಗಲಾರದು. ಜಕಾತನ್ನು ಕ್ರಮಪ್ರಕಾರ ವಸೂಲು ಮಾಡಿ ಸಂಘ ಟಿತವಾಗಿ ಅದನ್ನು ಕ್ರಮಪ್ರಕಾರ ವಿನಿಯೋಗಿಸುವ ಏರ್ಪಾಡು ಅಗತ್ಯ. ಈಗ

www.bearyinfo.com

ನಮ್ಮ ಜಕಾತಿನ ಅಧಿಕಾಂಶವು ಮಲಬಾರಿನಿಂದ ಬರುವ ಜನರಿಗೆ ವಿತರಣೆ ಯಾಗುತ್ತದೆ. ನಮ್ಮ ಸಮಾಜದ ನಿರ್ಗತಿಕರೂ ಜಕಾತ್ ಯೋಗ್ಯರೂ ಆದ ಜನರ ಖಾನೆಶುಮಾರಿ ಸಿಕ್ಕಿದಲ್ಲಿ ಅದನ್ನು ನಗರದೊಳಗೇ ನಮ್ಮ ಸಮಾಜ ಬಾಂಧವರೊಳಗೇ ವಿನಿಯೋಗಿಸುವ ಏರ್ಪಾಡು ಸಾಧ್ಯವಾಗಬಹುದು. ಮಾತ್ರ ವಲ್ಲ, ಜಕಾತಿನ ಒಂದು ಅಂಶವನ್ನು ಸಮಾಜದ ಸಾಮಾನ್ಯ ಹಿತಕ್ಕಾಗಿ ವಿನಿಯೋ ಗಿಸಲೋಸುಗ ಒಂದು ಕೈಗಾರಿಕೆಯಲ್ಲಿಯೂ ಉಪಯೋಗಿಸಬಹುದು. ಆದರೆ ಈ ಕುರಿತು ನಮ್ಮ ಧರ್ಮದ ಬೋಧನೆಗಳೇನೆಂದು ತಿಳಿಯುವುದಕ್ಕಾಗಿ ಆಲಿ ಮರ ಕೂಡೆ ವಿಚಾರವಿನಿಮಯ ಅಗತ್ಯ. ನಮ್ಮ ಸಮಾಜದಲ್ಲಿ ಕೆಲವು ಕೈಗಾ ರಿಕೆಗಳು ಸ್ಥಾಪಿತವಾದರೆ ನಿರುದ್ಯೋಗವನ್ನು ಕೆಲಮಟ್ಟಿಗಾದರೂ ಹತೋಟಿ ಯಲ್ಲಿ ತರಬಹುದು. ನಮ್ಮ ಜನರನ್ನು ಮನೆಬಾಗಿಲುಗಳಿಗೆ ಬೇಡಲು ಕಳುಹಿಸು ವುದು ನಮ್ಮ ಸ್ವಾಭಿಮಾನಕ್ಕೆ ಕುಂದುತರುವ ಪರಿಸ್ಥಿತಿ.

ಕೈಗಾರಿಕೆಗಳಲ್ಲಿ ಸ್ತ್ರೀಯರೂ ಭಾಗವಹಿಸುವಂತೆ ಸಾಧ್ಯವಾಗಲು ಕೆಲವನ್ನು ಆರಿಸುವುದು ಉತ್ತಮ. ವಿಶೇಷವಾಗಿ ಹುರಿಹಗ್ಗದ ಕೈಗಾರಿಕೆಗಳಿಂದ ಈ ಕೆಲಸವು ಸಾಧ್ಯವಾಗಬಹುದು. ಅದಕ್ಕೆ ಬೇಕಾದ ಕಚ್ಚಾಮಾಲು ತಯಾರಿಸಲು ನಮ್ಮ ಸ್ತ್ರೀಯರನ್ನು ಕೆಲಸಕ್ಕೆ ಹಾಕಿ ಅವರಿಗೂ ಸ್ವಲ್ಪ ಮಟ್ಟಿನ ಸಂಪಾದನೆ ಕೈಸೇರುವಂತೆ ಮಾಡಬಹುದು. ಇನ್ನು ನೇಯ್ಗೆ, ಚರ್ಕ, ಅಂಬರ್ ಚರ್ಕ, ನೂಲು ತಯಾರಿಸುವುದು, ವಸ್ತ್ರನೇಯ್ಗೆ ಕೆಲಸ ಇತ್ಯಾದಿ ಕೈಗಾರಿಕೆಗಳಿಂದ ಸ್ತ್ರೀಯರಿಗೂ ಪುರುಷರಿಗೂ ಎರಡೂ ಜನಕೂಟಕ್ಕೆ ಕೆಲಸ ಸಿಗುವಂತೆ ಮಾಡ ಬಹುದು. ಮಾತ್ರವಲ್ಲ, ನಮ್ಮ ಧರ್ಮದ ಆಜ್ಞೆಯಂತೆ ಸ್ತ್ರೀಯರು ಮನೆಯಲ್ಲೇ ಕುಳಿತು ಈ ಕೆಲಸಗಳನ್ನು ಮಾಡಿ ಸಂಪಾದನೆ ಮಾಡಲು ಇದರಿಂದ ಸಾಧ್ಯ ವಾಗುವುದು. ಇನ್ನು ಇದಕ್ಕೆಲ್ಲಾ ಮಾರ್ಗದರ್ಶನವೀಯಲು ಒಂದು ಕೇಂದ್ರ ಧುರೀಣತ್ವವು ಬೇಕೆಂಬುದರಲ್ಲಿ ಎರಡಭಿಪ್ರಾಯವಿಲ್ಲ. ಯೋಗ್ಯ ಅಧಿಕೃತ ಕೇಂದ್ರ ನಾಯಕತ್ವದ ಅಭಾವವು ನಮ್ಮ ಸಮಾಜವನ್ನು ಅಂತಃಕಲಹದ ದಡಕ್ಕೆ ತಂದು ನಿಲ್ಲಿಸಿದೆ; ನಾಯಕರನ್ನು ಚುನಾಯಿಸುವಾಗ ಪುರಾತನ ಕಾಲದ ಸಂಕುಚಿತ ಅಭಿಪ್ರಾಯಗಳನ್ನೆಲ್ಲಾ ಬದಿಗೊತ್ತಿ ಸಾರ್ವಜನಿಕರಿಗೆಲ್ಲರಿಗೂ ಚುನಾವಣೆಯ ಸಮಾನ ಹಕ್ಕನ್ನು ಕೊಡಬೇಕಾಗಿದೆ. ಇದರಲ್ಲಿ ಅಧಿಕ ಮತಗಳಿಂದ ಚುನಾವಣೆ ಹೊಂದಿದವರಿಗೆ ಸಮಾಜ ಧುರೀಣತ್ವದ ಜವಾಬ್ದಾರಿಯನ್ನು ಕೊಡತಕ್ಕದ್ದು. ಮಾತ್ರವಲ್ಲ, ಈ ರೀತಿ ಚುನಾವಣೆ ಹೊಂದಿ ನಾಯಕತ್ವದ ಪೀಠವನ್ನು ಅಲಂಕರಿ ಸುವವರು ಸಮಾಜದ ಸರ್ವಪಂಗಡ ಕೂಟಗಳೊಡನೆ ಸಮಾನ ರೀತಿಯಲ್ಲಿ ಸಲಿಗೆಯಿಂದಲೂ ಸಹನೆಯಿಂದಲೂ ಸಂಪರ್ಕವಿಟ್ಟುಕೊಂಡು ಸಮಾಜವನ್ನು ಪ್ರಗತಿಪಥದಲ್ಲಿ ಹಾಕಲು ಶ್ರಮಿಸಬೇಕು; ಜನತೆಯೂ ಅವರಿಗೆ ತಮ್ಮ ಸಂಪೂರ್ಣ ಸಹಕಾರವನ್ನು ಕೊಡತಕ್ಕದ್ದು.

---

www.bearyinfo.com

# ಜನಾಬ್ ಎಂ. ಹಸನ್ ಸಾಹೇಬ್,

ಬಿ.ಎ., ಬಿ.ಟಿ.,

## ಡೊಂಗರಕೇರಿ.

[ಜನಾಬ್ ಹಸನ್ ಸಾಹೇಬರು ನಮ್ಮ ಸಮಾಜದ ನಿಸ್ವಾರ್ಥಿ ಹಿತಾಕಾಂಕ್ಷಿ ವಿಧ್ವಾಂಸರಲ್ಲೊಬ್ಬರು. ವಿದ್ಯಾ ಇಲಾಖೆಯಲ್ಲಿ ದುಡಿಯುವ ಈ ಮಹಾನುಭಾವರು ಸಮಾಜದಲ್ಲಿ ವಿದ್ಯಾ ಪ್ರಸಾರಕ್ಕಾಗಿ ತುಂಬಾ ಶ್ರಮಿಸುತ್ತಿದ್ದಾರೆ. ಧಾರ್ಮಿಕ ಮನೋಭಾವವು ಇವರಿಗೆ ಪರಂಪರಾಗತವಾಗಿ ಸಿಕ್ಕಿದೆ. ತಮ್ಮ ನಿಸ್ವಾರ್ಥ ಸಮಾಜ ಸೇವೆಯಿಂದಾಗಿ, ತಮ್ಮ ಗುಣ—ಸ್ವಭಾವಗಳಿಂದಾಗಿ ನಮ್ಮ ಸಮಾಜದಲ್ಲಿ ತುಂಬಾ ಜನಾದರಣೀಯರಾಗಿದ್ದಾರೆ—ಸಂ.]

---

ಒಂದಾನೊಂದು ಕಾಲದಲ್ಲಿ ಮುಸಲ್ಮಾನರು ಭೂಲೋಕದ ಹೆಚ್ಚುಕಡಿಮೆ ಮೂರನೇ ಒಂದು ಭಾಗದಲ್ಲಿ ಹರಡಿಕೊಂಡಿದ್ದು ಅಲ್ಲಿ ರಾಜ್ಯಭಾರ ಮಾಡಿದ್ದಲ್ಲದೆ ಒಂದು ಅತ್ಯುತ್ಕೃಷ್ಟ ಸಂಸ್ಕೃತಿಯ ಹೊಸ ಬೆಳಕನ್ನೂ ಪ್ರಪಂಚದಲ್ಲಿ ಬೀರಿದರು. ಅವರ ಪರಾಕ್ರಮ, ಉದಾತ್ತ ಭಾವನೆಗಳು, ಗುಣಶೀಲಗಳು, ಗಣಿತ, ವಿಜ್ಞಾನ, ಖಗೋಲ ಶಾಸ್ತ್ರ, ಔಷಧಿ ಇತ್ಯಾದಿ ರಂಗಗಳಲ್ಲಿ ಅವರು ಮಾಡಿರುವ ಸಂಶೋಧನೆಗಳು—ಇವುಗಳ ಸವಿವರ ವರದಿಗಳು ಇಂದಿಗೂ ಚರಿತ್ರೆಯ ಪುಟಗಳಲ್ಲಿ ಪ್ರಜ್ವಲಿತವಾಗಿವೆ. ಅದು ಅಂದಿನ ವಿಚಾರ; ಇಂದಿನ ವಿಚಾರವೆಂದರೆ ನಮ್ಮಲ್ಲಿ ಆ ಗುಣಶೀಲಗಳೂ ಇಲ್ಲ, ಆ ಸಾಹಸ ಪರಾಕ್ರಮಗಳೂ ಇಲ್ಲ. ನಮ್ಮ ಹಿರಿಯರ ಹಿರಿಮೆಯ ಹೆಮ್ಮೆ ಮಾತ್ರ ನಮ್ಮಲ್ಲಿ ಉಳಿದಿದೆ. ಅದನ್ನು ಆಲಂಗಿಸಿ ನಾವು ಸಂತುಷ್ಟರಾಗಿದ್ದೇವೆ; ಇದೇ ನಮ್ಮ ಅವನತಿಗೆ ಕಾರಣ. ನಮ್ಮ ಹಿರಿಯರು ಹೇಗೆ ಇದ್ದರೆನ್ನುವುದು ನಮ್ಮ ಪ್ರಶ್ನೆಯಲ್ಲ; ನಾವು ಹೇಗೆ ಉನ್ನತಿಯನ್ನು ಪಡೆಯಬಹುದು ಎನ್ನುವುದೇ ನಮ್ಮ ಸಮಸ್ಯೆ. ಪ್ರಪಂಚದ ಇತರ ಭಾಗಗಳ ಮುಸ್ಲಿಮರ ವಿಚಾರವಂತೂ ಇರಲಿ; ನಮ್ಮ ಮಂಗಳೂರಿನ ಮುಸ್ಲಿಮ್ ಸಮಾಜದ ವಿಚಾರವನ್ನು ತೆಗೆದುಕೊಳ್ಳೋಣ.

ನಾವು ಇಸ್ಲಾಮ್ ಧರ್ಮದಲ್ಲಿ ಸಾರಿರುವ ಬೋಧನೆಗಳಿಗನುಸಾರವಾಗಿಯಾಗಲಿ, ಅಥವಾ ನಮ್ಮ ಪೈಗಂಬರರು ಬಿಟ್ಟಿರುವ ನಿದರ್ಶನಗಳಿಗನುಸಾರವಾಗಿಯಾಗಲಿ ನಮ್ಮ ಜೀವನ ಕ್ರಮವನ್ನು ಹೊಂದಿಸಿಕೊಂಡಿಲ್ಲ. ಉತ್ಕೃಷ್ಟ ಧ್ಯೇಯಗಳು, ಉದಾತ್ತ ಭಾವನೆಗಳು, ಸಮಾಜದಲ್ಲಿ ವಾತ್ಸಲ್ಯ, ದೇವರಲ್ಲಿ ಪ್ರೀತಿ ಇವನ್ನೆಲ್ಲ ನಾವು ತೊಲಗಿ ಬಿಟ್ಟಿದ್ದೇವೆ. ಸಮಾಜದಲ್ಲಿ ಅತಿ ಕೀಳ್ಮಟ್ಟದಲ್ಲಿದ್ದೇವೆ; ಆರ್ಥಿಕ ಸಂಪತ್ತು ನಮ್ಮನ್ನು ಈ ಮೊದಲೇ ಕೈಬಿಟ್ಟಿದೆ; ವಿದ್ಯೆಯ ಗಂಧಗಾಳಿಯು ನಮ್ಮಲ್ಲಿ ಹೆಚ್ಚಿನವರಿಗೆ ಸೋಂಕಿಲ್ಲ. ಎಲ್ಲಕ್ಕಿಂತಲೂ ವ್ಯಸನಕರವಾದುದೆಂದರೆ ಇವುಗಳ ಜೊತೆಗೆ ನಮ್ಮ ನೈತಿಕ ಬಲವೂ ನಮ್ಮ ಕೈಬಿಡುತ್ತಿದೆ. ಬಡತನದಲ್ಲಿ, ಅಜ್ಞಾನದಲ್ಲಿ, ರೋಗಪೀಡಿತರಾಗಿ ನಾವು ಬಳಲುತ್ತಿದ್ದೇವೆ.

www.bearyinfo.com

ಇದಕ್ಕೆ ಕಾರಣವೇನು? ಮುಖ್ಯವಾಗಿ ನಮ್ಮಲ್ಲಿ ನಮ್ಮ ಜನಸಾಮಾನ್ಯರನ್ನು ಒಲಿಸಿಕೊಂಡು, ವಿವೇಕ ಮತ್ತು ದೂರ ದೃಷ್ಟಿಯನ್ನುಪಯೋಗಿಸಿ ಸರಿಯಾದ ಮಾರ್ಗದರ್ಶನ ಮಾಡಬಲ್ಲ ನಾಯಕರಿಲ್ಲ. ಜನರು ಅವರಷ್ಟಕ್ಕೆ ಅವರಿದ್ದಾರೆ. ತಮ್ಮ ಮನೆ, ತಮ್ಮ ಹೆಂಡತಿ ಮಕ್ಕಳು, ತಮ್ಮ ಹೊಟ್ಟೆಯ ಪಾಡು— ಇಷ್ಟರಲ್ಲೇ ನಮ್ಮ ಹೆಚ್ಚಿನ ಜನರು ನಿರತರಾಗಿದ್ದಾರೆ. ಸಮಾಜದ ಮುಂದೆ ಈ ಹೊತ್ತು ನಿಂತಿರುವ ಸಮಸ್ಯೆಗಳು ಯಾವುದೆಂದು ಅವರಿಗೆ ಗೊತ್ತಿಲ್ಲ—ಗೊತ್ತಿದ್ದರೂ ಅವುಗಳ ವಿಷಯದಲ್ಲಿ ವಿಮರ್ಶೆಮಾಡಿ ಅವರು ಮಾಡತಕ್ಕ ಕೆಲಸವನ್ನು ನಿರ್ಧರಿಸಿ ಕೊಳ್ಳುವಷ್ಟು ಅರಿವು ಮತ್ತು ಶಕ್ತಿ ಅವರಲ್ಲಿಲ್ಲ. ಅವರಿಗೆ ಯೋಗ್ಯ ಮುಂದಾಳು ತನಬೇಕಾಗಿದೆ. ಸರಕಾರದಲ್ಲಿ ಅವರ ಸುಖದುಃಖಗಳನ್ನು ನಿವೇದಿಸಿಕೊಳ್ಳುವು ದಕ್ಕಾಗಲಿ, ಅವರ ಹಿತಾಹಿತಗಳನ್ನು ಸಮೀಕ್ಷಿಸಿ ಅವರನ್ನು ಸರಿದಾರಿಯಲ್ಲಿ ಒಯ್ಯುವುದಕ್ಕಾಗಲಿ ಅವರ ವಿಶ್ವಾಸಕ್ಕೆ ಪಾತ್ರರಾದ ಮುಂದಾಳುಗಳು ಬೇಕು. ಹಿಂದಿನಕಾಲದಲ್ಲಿ ಒಬ್ಬೊಬ್ಬರೇ ಮುಂದೆ ಬಂದು ಈ ಹೊಣೆಯನ್ನು ಸಂಪೂರ್ಣ ಹೊರುತ್ತಿದ್ದರು; ಜನರಿಗೆ ಅವರಲ್ಲಿ ವಿಶ್ವಾಸವಿರುತ್ತಿತ್ತು. ಆದರೆ ಇಂದಿನ ಗಣ ತಂತ್ರ ಕಾಲದಲ್ಲಿ ಅದು ಸಾಧ್ಯವೂ ಇಲ್ಲ, ವಿಹಿತವೂ ಅಲ್ಲ. ಒಬ್ಬ ವ್ಯಕ್ತಿಯಲ್ಲಿ ಹೆಚ್ಚಿನವರಿಗೆ ವಿಶ್ವಾಸವಿರಲಿಕ್ಕಿಲ್ಲ. ಆದರೆ ಕೆಲವು ಆಢ್ಯವ್ಯಕ್ತಿಗಳನ್ನೊಳಗೊಂಡ ಒಂದು ಸಂಘ ಅಥವಾ ಸಂಸ್ಥೆಯನ್ನು ಮಾಡಿಕೊಂಡು ಅದಕ್ಕೆ ಮುಂದಾಳು ತನದ ಹೊಣೆಯನ್ನು ಒಪ್ಪಿಸಿದರೆ ಅದು ಹೆಚ್ಚಿನ ಮಟ್ಟಿಗೆ ಯಶಸ್ವಿಯಾದೀತೆಂದು ನನ್ನ ನಂಬಿಕೆ.

ಈ ಸಂಘವು ಸಮಾಜದಲ್ಲಿ ರಚನಾತ್ಮಕ ಕೆಲಸಗಳನ್ನು ಕೈಗೊಳ್ಳುವುದಲ್ಲದೆ ಸರಕಾರದ ಎಲ್ಲ ಇಲಾಖೆಗಳೊಡನೆ ಸಂಪರ್ಕವನ್ನು ಇಟ್ಟುಕೊಂಡು ಆಗಿಂದಾಗ ಸರಕಾರವು ಬೇರೆ ಬೇರೆ ಇಲಾಖೆಗಳ ಮೂಲಕ ಜನರಿಗೆ ಕೊಡುವ ಸಹಾಯ ಸಹಕಾರಗಳನ್ನು ತಿಳಿದುಕೊಂಡು ನಮ್ಮ ಸಮಾಜಕ್ಕೆ ಅದರ ಸಂಪೂರ್ಣ ಫಲವು ಸಿಕ್ಕುವಂತೆ ಮಾಡಬಹುದು. ಮಾತ್ರವಲ್ಲದೆ, ಇದರ ಆಶ್ರಯದಲ್ಲಿ ಒಂದು ಹೈಸ್ಕೂಲ್, ಒಂದು ಮುದ್ರಣಾಲಯ, ಒಂದು ವೃತ್ತಾಂತ ಪತ್ರಿಕೆ, ಒಂದು ವಾಚನಾಲಯ ಮತ್ತು ಒಂದು ಬೇಂಕ್ ಇತ್ಯಾದಿಗಳನ್ನು ನಡಿಸಿಕೊಂಡು ಇವುಗಳ ಮೂಲಕ ಸಮಾಜದ ಅಭಿವೃದ್ಧಿಯನ್ನು ಬಹುಮಟ್ಟಿಗೆ ಸಾಧಿಸಬಹುದು.

ಹೈಸ್ಕೂಲಿನಲ್ಲಿ ಸರಕಾರದ ಪಠ್ಯವಸ್ತುವನ್ನೇ ಅನುಸರಿಸುವುದಾದರೂ ಯೋಗ್ಯ ಮುಸ್ಲಿಮ್ ಅಧ್ಯಾಪಕರಿದ್ದರೆ, ಅವರ ನಿದರ್ಶನಗಳಿಂದಾಗಿ ಸರಕಾರದ ನಿಯಮಗಳನ್ನುಲ್ಲಂಘಿಸದೆ ಮಕ್ಕಳನ್ನು ಪ್ರಗತಿಪರ ಮುಸಲ್ಮಾನರನ್ನಾಗಿ ಮಾಡ ಲಿಕ್ಕೆ ಸಾಧ್ಯವಿದೆ. ವೃತ್ತಾಂತ ಪತ್ರಿಕೆಯಲ್ಲಿ ವಿಮರ್ಶಾತ್ಮಕ ಲೇಖನಗಳ ಮೂಲಕ ಸಮಾಜಕ್ಕೆ ಸೂಕ್ತ ಸಲಹೆಗಳನ್ನು ಕೊಟ್ಟು ಮಾರ್ಗದರ್ಶನ ಮಾಡಲಿಕ್ಕೆ ಎಡೆಯಿದೆ. ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲಿಕ್ಕೆ ಬೇಂಕು ಅಗತ್ಯ.

www.bearyinfo.com

ನಮ್ಮಲ್ಲಿ ಹೆಚ್ಚಿನವರು ಬಡ ವ್ಯಾಪಾರಿಗಳಾಗಿರುವುದರಿಂದ ಅವರಿಗೆ ಆಗಾಗ ಧನಸಹಾಯವು ಬೇಕಾಗುತ್ತದೆ. ಸುಲಭದರದಲ್ಲಿ ಅನುಕೂಲವಾದ ಸಾಲಗಳನ್ನು ಕೊಟ್ಟು ಅಂತಹವರನ್ನು ಎತ್ತಲಿಕ್ಕೆ ಬೇಂಕುಗಳು ಬೇಕು. ಇನ್ನು ಇಂತಹ ಅನೇಕ ಹಿತಸಾಧಕ ಸಂಸ್ಥೆಗಳನ್ನು ನಡಿಸಬಹುದು.

ಇದಕ್ಕೆಲ್ಲ ನಮ್ಮಲ್ಲಿ ಸಂಘಟನೆಯು ಅಗತ್ಯ. ಅದು ನಮ್ಮಲ್ಲಿಲ್ಲವೆಂದು ನಾನು ನಂಬಲಾರೆ. ಇತ್ತೀಚೆಗೆ ನಮ್ಮ ಸಮಾಜವನ್ನು ಎದುರಿಸಿದ ಒಂದೆರಡು ಸಮಸ್ಯೆಗಳಲ್ಲಿ ನಾವು ತೋರಿಸಿಕೊಂಡ ಐಕ್ಯಮತ್ಯವು ಪ್ರಶಂಸನೀಯವಾಗಿದೆ. ನಮಗೆ ಬೇಕಾದಾಗ ಅಥವಾ ನಮಗೆ ಯೋಗ್ಯ ಮುಂದಾಳುಗಳು ಸಿಕ್ಕಿದರೆ ನಮ್ಮಲ್ಲಿ ಸಂಘಟನೆಯು ತಾನಾಗಿಯೇ ಬರುತ್ತದೆ. ಅದನ್ನು ಯೋಗ್ಯರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂದು ನಮ್ಮ ಮುಂದಾಳುಗಳಲ್ಲಿ ನನ್ನ ವಿನಂತಿ.

---


SHABAN ABDURAHIMAN

VESSEL-CONTRACTORS

BOMBAY-3.

DR. M. A. ALKHAZI

REGD. MED. PRACTITIONER.

HOMOEO-UNANI DAWAKHANA,

MANGALORE.

*Consulting Offices at*

Juma Masjid Road & Vybert Road, Jeppoo.

SPECIALIST IN

All Chronic Ailments.

www.bearyinfo.com

## Bibliography

[ಈ ಪುಸ್ತಕವನ್ನು ರಚಿಸಲು ಈ ಕೆಳಗಿನ ಗ್ರಂಥಗಳಿಂದ ವಿಶೇಷ ಸಹಾಯಪಡೆದಿರುತ್ತೇವೆ.—ಸಂ.]

ಅರಬಿ: – 'ರಿಹ್ಲ' ಇಬ್ನ್ ಬತೂತ

ಅರಬಿ-ವುಲೆಯಾಳ: —ಜೈನುದ್ದೀನ್ ವುಕ್ದೂವ್‌ರವರ "ತುಹ್ಫತುಲ್ ವುುಜಾಹಿದೀನ್—ಚರಿತ್ರೆ ಗ್ರಂಥದ ಅನುವಾದ.

ತುಳು—'ಪಾಡ್ದನೋಳು'—ಎ. ವೇನ್ನರ್ ವಿರಚಿತ ಪಾಡ್ದೊನ ಸಂಗ್ರಹ.

ವುಲೆಯಾಳ: —"ಚೇರವಾನ್ ಪೆರುವಾಳ್—ಕೆ. ಕೆ. ಅಬ್ದುಲ್‌ಕರೀಂ.

'ಕೇರಳದ ಒಂದು ವುುಸ್ಲಿಂ ರಾಜವಂಶ'—ಪಿ. ಎ. ಸಯ್ಯಿದ್ ವುುಹವ್ಮದ್ (ಲೇಖನ)

ಉರ್ದು: –ಅರಬೊ-ಹಿಂದ್‌ಕೆ ತಅಲ್ಲುಖಾತ್-ಸಯ್ಯಿದ್ ಸುಲೈವಾನ ನದ್ವೀ

ಅರಬೋಂಕಿ ಜಹಾಜ್‌ರಾನಿ ,,

ಸಹೀಫ-ಎ-ಟೀಪೂ ಸುಲ್ತಾನ್ 2 ಭಾಗಗಳು ವುಹ್ಮೂದ್‌ಖಾನ್ ಬೆಂಗ್ಲೂರೀ

ಸಲ್ತನತೆ ಖುದಾದಾದ್ ,,

ತಾರೀಖೆ-ಜನೂಬೀ ಹಿಂದ್ ,,

ಕನ್ನಡ: —

ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ-ಗಣಪತಿ ರಾವ್ ಐಗಳ್

ಪ್ರಾಚೀನ ತುಳುನಾಡು-ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ

ದಕ್ಷಿಣ ಕನ್ನಡದ ಇತಿಹಾಸ-(ತುಳುವ ಚರಿತ್ರೆ) ಕೇಶವ ಕುಡ್ವ, ಕಾರ್ಕಳ

ಕನ್ನಡ ನಾಡಿನ ಚರಿತ್ರೆ-ವೊದಲನೆ ಮತ್ತು ಎರಡನೆ ಭಾಗಗಳು ಶ್ರೀ ಬಿ. ಎಂ. ಶ್ರೀ ಕಂಠಯ್ಯ.

ಇಂಗ್ಲಿಷ್: —

The Road to Mecca-by Asad-Weiss.

Preaching of Islam by Prof. Arnold.

Influence of Islam on Indian Culture—Dr. Tara chand.

Ancient Karnataka part I by Prof. B. A. Salathur.

A journey from Madras thro' the countries of Mysore, Canara, & Malabar—Vol. III by Buchanan.

South Canara Vol. I (Madras Dt. Manual) by J. Sturrock.

Do Vol. II ( Do ) by H. A. Stuart.

Castes & Tribes of Southern India—Thurston Vol. V

Mangalore by S. Silva, Ankole.

Mangalore Souvenir of the canara Industrial & Banking Syndicate, Mangalore.

,, of the Mysore State Lawyers' Conference, Mangalore, etc. etc.

www.bearyinfo.com

*VISIT*

**New Star Electricals**

*Jumma Musjid Road*

**MANGALORE-1.**

ಎಲ್ಲಾ ತರದ ಇಲೆಕ್ಟ್ರಿಕ್ ಸಾಮಾಗ್ರಿಗಳು ಅತಿ ಕಡಿಮೆ ದರದಲ್ಲಿ ನಮ್ಮಲ್ಲಿ ದೊರೆಯುತ್ತವೆ. ಅಲ್ಲದೆ, ಮದುವೆ, ಸಾರ್ವಜನಿಕ ಸಭೆ-ಸಂಭ್ರಮಗಳಿಗೆ ಬೇಕಾಗುವ

ಮೈಕ್ ಸೆಟ್, ಪೆಟ್ರೋಮೆಕ್ಸ್, ಡೆಕೊರೇಶನ್ ಬಲ್ಬುಗಳು, ಟ್ಯೂಬ್ ಗಳು ಇತ್ಯಾದಿ ಬಾಡಿಗೆಗೆ ದೊರೆಯುತ್ತವೆ.

ಬೆಟ್ರಿ ಬಾಡಿಗೆಗೆ ಕೊಡುವುದಲ್ಲದೆ ಚಾರ್ಜು ಮಾಡಿಯೂ ಕೊಡಲ್ಪಡುತ್ತದೆ.

*Proprietor:*

**K. MOIDEEN AHMAD.**

**KHATRI DYEING & PRINTING WORKS**

**J. M. ROAD,**

**MANGALORE-1.**

Guaranteed Dying of Cotton, Wollen and Silk Clothes.

*Visit Once and be Satisfied.*

*Sole Prop:*

**K. Abdul Sathar Ayub.**

*Smoke & Enjoy*

**LIBERTY BEEDIES**

**SURATKAL.**

ನಿಮ್ಮ ಅಚ್ಚುಮೆಚ್ಚಿನ

ಲಿಬರ್ಟಿ ಬೀಡಿಗಳನ್ನೇ

ಸೇವಿಸಿ ಆಹ್ಲಾದ ಪಡೆಯಿರಿ.

ಲಿಬರ್ಟಿ ಬೀಡಿಗಳು,

ಸುರತ್ಕಲ್.

**MANGALORE**

**BAHADUR BEEDIES**

**KULOOR.**

ನಿತ್ಯ ಸೇವನೆಗೆ

ಮಂಗಳೂರು

ಬಹದ್ದೂರ್ ಬೀಡಿ

ಕೂಳೂರು.

www.bearyinfo.com